Sanctioning of Old-age Pension.

*Q.—261. Sri S. RUDRAPPA (Kalgi).—

Will the Minister for Finance be pleased to state :—

(a) the number of applications sanctioned under the Old-age Pension Scheme since January 1965 in the State ;

(b) what is the amount allotted in the budget for the year 1965-66 under the said scheme ?

A.—Sri RAMAKRISHNA HEGDE (Minister for Finance).—

(a) 1,314 (up to 8th November 1966).

(b) Rs. 35 lakhs was provided in the Budget Estimates for 1965-66. But in the revised Estimates for 1965-66, Rs. 1 lakh was provided.

Eradication of Corruption in administration.

*Q.—230. Sri R. N. LAKSHMIPATHI (Gauribidanur).—

Will the Chief Minister be pleased to state :—

what are the steps Government have taken to eradicate corruption in the administration ?

A.—Sri S. NIJALINGAPPA (Chief Minister).—

As per the recommendations in the Santhanam Committee Report, this State has set up a Vigilance Commission.

MOTION OF NO-CONFIDENCE IN THE COUNCIL OF MINISTERS.

Mr. SPEAKER.—The Leader of the Opposition will now move the motion.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ನಾನು ಈ ಸಭೆಯ ಮುಂದೆ ಈ ಕೆಳಗಿನ ನಿರ್ಣಯವನ್ನು ಮಂಡನೆ ಮಾಡುತ್ತೇನೆ :

"ಮಂತ್ರಿಮಂಡಲದಲ್ಲಿ ಈ ಸಭೆಗೆ ವಿಶ್ವಾಸವಿಲ್ಲ."

Mr. SPEAKER.—Motion moved :

"ಮಂತ್ರಿಮಂಡಲದಲ್ಲಿ ಈ ಸಭೆಗೆ ವಿಶ್ವಾಸವಿಲ್ಲ."

† ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಈ ಸಭೆಗೆ ಮಂತ್ರಿಮಂಡಲದಲ್ಲಿ ವಿಶ್ವಾಸವಿಲ್ಲವೆಂಬ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಲಾಗಿದೆ. ಕೆಲವು ಕಾರಣಗಳಿಗಾಗಿ ನಾನು ಈ ಮಂತ್ರಿಮಂಡಲದಲ್ಲಿ ವಿಶ್ವಾಸವಿಲ್ಲವೆನ್ನುವ ನಿರ್ಣಯವನ್ನು ಮಂಡನೆ ಮಾಡಿದ್ದೇನೆ.

† Indicates that the remarks or speeches have not been revised by the member concerned.

(ಶ್ರೀ ಎಸ್. ಶಿವಪ್ಪ)

ಸಭಾಪತಿಯವರೇ, ಈ ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂದದ್ದು 1962 ನೇ ಮಾರ್ಚ್ ತಿಂಗಳಲ್ಲಿ. ಅಂದಿನಿಂದೀಚೆಗೆ ಸುಮಾರು 7 ತಿಂಗಳುಗಳ ಕಾಲ ಬೇರೊಂದು ಮಂತ್ರಿಮಂಡಲ ಅಸ್ತಿತ್ವಕ್ಕೆ ಬಂತು. ಈ ನಾಲ್ಕೂವರೆ ವರ್ಷಗಳ ಕಾಲದಲ್ಲಿ ನಮ್ಮ ದೇಶದಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳು ಆಗಿವೆ, ಎಷ್ಟು ಹಣವನ್ನು ಅದಕ್ಕಾಗಿ ಸರ್ಕಾರದವರು ಖರ್ಚುಮಾಡಿದ್ದಾರೆ, ಎಷ್ಟು ತೆರಿಗೆ ಈ ಸರ್ಕಾರದ ಖಜಾನೆಗೆ ಈ ದೇಶದ ಜನತೆ ಕೊಟ್ಟಿದೆ, ಇದಕ್ಕೆ ಪ್ರತಿಯಾಗಿ ಇವರು ಈ ದೇಶಕ್ಕೆ ಉಪಕಾರವಾಗಿ ಕೊಟ್ಟಂಥ ವರಪ್ರಸಾದವೇನು ಎನ್ನುವುದನ್ನು ಈ ಸರ್ಕಾರದ ಬಗ್ಗೆ ಈ ನಾಲ್ಕುವರೆ ವರ್ಷಗಳಿಂದಲೂ ಈ ಶಾಸನ ಸಭೆಯಲ್ಲಿ ಏಕಪ್ರಕಾರವಾಗಿ ಹೇಳುತ್ತಾ ಬಂದಿದ್ದೇವೆ. ಈ ಸರ್ಕಾರದ ಲೋಪದೋಷಗಳನ್ನು ಈ ದೇಶದ ಮುಖಂಡರಿಗೆ ಹಾಗೂ ದೇಶದ ಜನತೆಗೆ ತಿಳಿಸಲು ನಿರ್ದಿಷ್ಟವಾಗಿ ಈ ಸಭೆಯ ಮುಂದೆ ಮೂರು ಸಾರಿ ಅವಿಶ್ವಾಸ ನಿರ್ಣಯವನ್ನು ಮಂಡಿಸುವುದರ ಮೂಲಕ ಈ ಸಭೆಯ ಗಮನಕ್ಕೆ ತಂದಿದ್ದೇವೆ. ಮಂತ್ರಿಮಂಡಲದ ಲೋಪದೋಷಗಳ ಕಡೆ ನಾವು ಕೈ ತೋರಿಸಿದ್ದೇವೆ. ಪುನಃ ಅವಿಶ್ವಾಸ ನಿರ್ಣಯವನ್ನು ನಾಲ್ಕನೆಯ ಸಾರಿ ಇವತ್ತು ಇಲ್ಲಿ ಮಂಡಿಸುತ್ತಿದ್ದೇನೆ. ನಿಜವಾಗಿಯೂ ಈ ಕಾಂಗ್ರೆಸ್ಸಿನ ಕಡೆ ಸುಮಾರು ಮೂರನೆಯ ಎರಡು ಭಾಗದಷ್ಟು ಮೆಜಾರಿಟಿ ಇದ್ದರೂ ಅವಿಶ್ವಾಸ ನಿರ್ಣಯ ಮುಂದೆ ಏನಾಗುತ್ತದೋ ಎಂಬ ಭಯ ಅವರಿಗೆ ಇದೆ. ಅತ್ತ ಕಡೆ ಇರುವ ಸದಸ್ಯರ ದೇಶಾಭಿಮಾನದಿಂದ ಇದು ಕೊನೆಗೆ ಏನಾಗುತ್ತದೋ ಎಂದು ನಾವು ಇವತ್ತು ಹೇಳಲಾರೆವು. ಈ ಮಂತ್ರಿಮಂಡಲ ನಾಲ್ಕೂವರೆ ವರ್ಷಗಳಿಂದ ಮಾಡಿರತಕ್ಕ ವಿಫಲವಾದ ಕಾರ್ಯಗಳನ್ನು ತಿಳಿಸಲು ಈ ಸಭೆಯ ಮುಂದೆ ಕೆಲವು ಕಾಲದಲ್ಲಿ ಅವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನಾನು ಇಡಬೇಕೆಂದಿದ್ದೇನೆ. 1962-63 ರಿಂದ 1966-67ರ ವರೆಗೆ ಈ ದೇಶಕ್ಕೆ ನಮ್ಮ ಮೈಸೂರಿನ ಜನ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತೆರಿಗೆ ಮುಖಾಂತರ 300 ಕೋಟಿ ರೂಪಾಯಿಗಳನ್ನೂ ತೆರಿಗೆಯಲ್ಲದೆ ಬೇರೆ ರೂಪದಲ್ಲಿ 300 ಕೋಟಿ ರೂಪಾಯಿಗಳನ್ನು ಅಂದರೆ, ಸುಮಾರು 600 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಜೊತೆಗೆ 250 ಕೋಟಿ ಚಿಲ್ಲರೆ ರೂಪಾಯಿಗಳನ್ನು ಪ್ಲಾನಿಂಗ್ ಕಮಿಷನ್ನಿನವರು ಕೊಟ್ಟಿದ್ದಾರೆ. ಹೀಗೆ ಸುಮಾರು 850-900 ಕೋಟಿ ರೂಪಾಯಿಗಳನ್ನು ಈ ದೇಶದಲ್ಲಿ ಐದು ವರ್ಷಗಳಲ್ಲಿ ಇವರು ಖರ್ಚುಮಾಡಿದ್ದಾರೆ. ಈ ಖರ್ಚಿನಲ್ಲಿ ಈ ದೇಶದಲ್ಲಿ ಆಗಿರತಕ್ಕ ಅಭಿವೃದ್ಧಿ ಕಾರ್ಯಗಳು ಏನೆಂಬುದನ್ನು ನಾವು ನೋಡಬೇಕಾಗಿದೆ. ಅದರ ಜೊತೆಗೆ ಸುಮಾರು 300 ಕೋಟಿ ರೂಪಾಯಿಗಳಷ್ಟು ಪಬ್ಲಿಕ್ ಡೆಟ್ ನಮ್ಮಲ್ಲಿದೆ. ಇದರಿಂದ ವರ್ಷಂಪ್ರತಿ ಸುಮಾರು 7 ರಿಂದ 10 ಕೋಟಿ ರೂಪಾಯಿಗಳಷ್ಟು ಬಡ್ಡಿ ಕೊಡುವ ಪರಿಸ್ಥಿತಿ ಬಂದಿದೆ. ಇದಾದ ಮೇಲೆ ಈ ದೇಶದಲ್ಲಿ ಎಷ್ಟರ ಮಟ್ಟಿಗೆ ಆ ಹಣ ಖರ್ಚಾಯಿತು, ಯಾವ್ಯಾವ ಬಾಬಿನಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳು ಆಗಿವೆ, ಈ ದೇಶದಲ್ಲಿ ಏನೇನು ಉಪಯೋಗವಾಗಿವೆ ಎನ್ನುವುದು ಬಹಳ ಪ್ರಾಮುಖ್ಯವಾದ ವಿಚಾರ. ಇವತ್ತು ಮೈಸೂರಿನಲ್ಲಿನ ನೀರಾವರಿ ಯೋಜನೆಗಳ ವಿಷಯ ತೆಗೆದುಕೊಂಡರೆ, ಅದು ಇಡೀ ಭಾರತದಲ್ಲಿ ಕನಿಷ್ಠಪಕ್ಷ ಶೇಕಡ 22 ರಷ್ಟಿದ್ದರೆ, ಇಲ್ಲಿ ನೀರಾವರಿ ಯೋಜನೆ ಅಭಿವೃದ್ಧಿಯಾಗಿರುವುದು ಶೇಕಡ 8 ರಷ್ಟು ಮಾತ್ರ. ಇರತಕ್ಕ 80 ಲಕ್ಷ ಎಕರೆಯಷ್ಟು ಜಮೀನಿನಲ್ಲಿ ನೀರಾವರಿ ಸಾಗುವಳಿ ಮಾಡಬೇಕೆಂಬ ಯೋಜನೆ ಇದೆ; ನಿಜ. ಅದರೆ ಇದುವರೆಗೂ ಆಗಿರತಕ್ಕದ್ದು ನಮ್ಮ ದೇಶದಲ್ಲಿ 22 ಲಕ್ಷ ಎಕರೆ ನೀರಾವರಿ. ಆಲ್ ಇಂಡಿಯಾ ಆವರೇಜ್ ತೆಗೆದುಕೊಂಡರೆ, ಭಾರತ ದೇಶದಲ್ಲಿ ಸರಾಸರಿ ಶೇಕಡ 22ರಷ್ಟು ನೀರಾವರಿಯಾಗಿದ್ದರೆ ನಮ್ಮ ದೇಶದಲ್ಲಿ ಸರಾಸರಿ ಶೇಕಡ 8 ರಷ್ಟು ಆಗಿದೆ. ನೇರವಾಗಿ ಈ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಈ ನೀರಾವರಿ ಯೋಜನೆಗಳ ಬಗ್ಗೆ ತಮ್ಮ ಅಧಿಕಾರದ ಅವಧಿಯಲ್ಲಿ ಯಾವುದಾದರೂ ಒಂದು ದೊಡ್ಡ ನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರೈಸಿದ್ದು ಒಂದೇನಾದರೂ ಇವೆಯೇ? ಹೇಮಾವತಿಯಾಗಲಿ, ಅಥವಾ ಹಾರಂಗಿಯಾಗಲೀ—ಈ ನೀರಾವರಿ ಯೋಜನೆಗಳು ಈ ಮಂತ್ರಿ ಮಂಡಲ ಅಸ್ತಿತ್ವಕ್ಕೆ ಬಂದಮೇಲಿನಿಂದಲೂ ಹಾಗೆಯೇ ಇವೆ. ಕಳೆದ ಐದು ವರ್ಷಗಳಿಂದಲೂ ಅವರು ಪೂರೈಸಿದ ಒಂದು ದೊಡ್ಡ ನೀರಾವರಿ ಯೋಜನೆ ಯಾವುದಾದರೂ ಒಂದು ಇದ್ದರೆ ದಯಮಾಡಿಟ್ಟು ಹೇಳಲಿ. ನೀರಾವರಿಯ ಹಕ್ಕು ಭಾದ್ಯತೆಗಳನ್ನು ಸಾಧನೆ ಮಾಡುವುದರಲ್ಲಿ ಇವರು ವಿಫಲರಾಗಿದ್ದಾರೆ. ಕೃಷ್ಣಾ ಮತ್ತು ಗೋದಾವರಿ ನೀರಿನ ಹಂಚಿಕೆಯಲ್ಲಿ ಏನು ಘೋರವಾದ ಅಪರಾಧವನ್ನು ಎಸಗಿದ್ದಾರೆಂದರೆ, ಈ ದೇಶಕ್ಕೆ ನ್ಯಾಯವಾಗಿ ಬರುವ ನೀರಿನ ಹಂಚಿಕೆಯಲ್ಲಿ ನಮ್ಮ ಹಕ್ಕನ್ನು ರಕ್ಷಿಸಲು ಇವತ್ತು ವಿಫಲರಾಗಿದ್ದಾರೆ. ಕಾವೇರಿ ನದಿಯ ನೀರಿನಿಂದ ಇವರು ಇದುವರೆಗೆ ಏನೂ ಪ್ರಯೋಜನವನ್ನುಂಟುಮಾಡಲಿಲ್ಲ. ಇತ್ತೀಚೆಗೆ ಈಗ ತಮ್ಮ ಕೊನೆಯ ಅವಧಿಯಲ್ಲಿ ಈ ಮಂತ್ರಿಮಂಡಲ ಇನ್ನು ಕೇವಲ ಮೂರು ತಿಂಗಳಲ್ಲಿ ಮುಕ್ತಾಯವಾಗಬೇಕೆನ್ನುವಾಗ ಕಾವೇರಿ ಬೇಸಿನ್ನಿನಲ್ಲಿರತಕ್ಕ ಯೋಜನೆಗಳ ಬಗ್ಗೆ ನಾವು ಟೆಂಡರ್ ಕರೆದಿದ್ದೇವೆ, ಅದಕ್ಕೆ ಇಷ್ಟು ಹಣ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಇದು ಕೇವಲ

ಮುಂದೆ ಬರತಕ್ಕ ಒಂದು ಚುನಾವಣೆಗೋಸ್ಕರ ಮಾಡಿರತಕ್ಕ ಒಂದು ಘೋಷಣೆಯೇ ಹೊರತು ಮತ್ತೇನೂ ಇಲ್ಲ. ಇವತ್ತು ಮೈಸೂರು ದೇಶದಲ್ಲಿ ನೀರಾವರಿ ಯೋಜನೆಗಳಿಗಾಗಿ ಸರ್ಕಾರದವರು ಸರಾಸರಿ ನೀರಾವರಿಯನ್ನು ಕಳೆದ ಐದು ವರ್ಷಗಳಲ್ಲಿ ಎಷ್ಟರಮಟ್ಟಿಗೆ ಹೆಚ್ಚು ಮಾಡಿದ್ದಾರೆಂದು ನೋಡಿದರೆ ನಿಜವಾಗಿಯೂ ಬಹಳ ಅತ್ಯಲ್ಪವಾಗಿದೆ.

ನೀರಿನ ಹಂಚಿಕೆಯ ವಿಚಾರದಲ್ಲಿ, ಕೃಷ್ಣ ಗೋದಾವರಿ ಮತ್ತು ಕಾವೇರಿ ನದಿ ನೀರಿನ ಹಂಚಿಕೆಯನ್ನು ಬಗೆಹರಿಸುವುದರಲ್ಲಿ ಈ ಸರ್ಕಾರ ವಿಫಲವಾಗಿದೆ. ನಮ್ಮ ನೆರೆಯ ರಾಜ್ಯಗಳು ನಮ್ಮ ನೀರನ್ನು ಉಪಯೋಗಮಾಡಿವೆ. ನಮ್ಮ ಸರ್ಕಾರದವರು ಕಾವೇರಿ ನದಿಯ ಯೋಜನೆಯನ್ನು ಪೂರ್ಣವಾಗಿ ಕಾರ್ಯಗತಮಾಡುವುವಕ್ಕೆ ಹಿಂದೆ ಮುಂದೆ ನೋಡತಕ್ಕ ಕಾಲದಲ್ಲಿ ಮದ್ರಾಸು ಮತ್ತು ಆಂಧ್ರ ಪ್ರಾಂತಗಳವರು 19—20 ಲಕ್ಷ ಎಕರೆ ನೀರಾವರಿಯಾಗತಕ್ಕ ಅಣೆಕಟ್ಟುಗಳನ್ನು ಕಟ್ಟಿಕೊಂಡು ನಮಗೆ ಯಾವುದಾದರೂ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಮಂಜೂರಾತಿಯನ್ನು ಕೊಟ್ಟಾಗ ಆ ಯೋಜನೆಗಳಿಗೆ ಮಂಜೂರಾತಿಯನ್ನ ಕೊಡಬೇಡಿ ಎಂದು ಸೆಂಟ್ರಲ್ ವಾಟರ್ ಬೋರ್ಡಿನವರಿಗೆ ತಿಳಿಸುತ್ತಾರೆ. ನಮ್ಮ ಸರ್ಕಾರದವರು ಈ ವಿಷಯದಲ್ಲಿ ನಿದ್ರಾವಸ್ಥೆಯಲ್ಲಿದ್ದಾರೆ. ನಮ್ಮ ಅಣೆಕಟ್ಟುಗಳ ಫಲ ಏನಾಗುತ್ತದೆ ಎಂಬುದನ್ನು ನಾವು ನೋಡದೆ ಇರುವವರಾಗಿದ್ದೇವೆ. ಶತಮಾನಗಟ್ಟಲೆ ಆದರೂ ಈ ನೀರಿನ ಹಂಚಿಕೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಈ ಸರ್ಕಾರಕ್ಕೆ ಸಾಮರ್ಥ್ಯವಿಲ್ಲ. ಕೃಷ್ಣ, ಗೋದಾವರಿ ಮತ್ತು ಕಾವೇರಿ ನದಿಗಳ ನೀರಿನ ಹಂಚಿಕೆಯಲ್ಲಿ ನಮಗೆ ಇರತಕ್ಕ ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಇದರಿಂದ ಇವರು ಈ ಪೀಳಿಗೆಗೆ ಮಾತ್ರವಲ್ಲ ಮುಂದಿನ ಪೀಳಿಗೆಗೂ ಕೂಡ ಜವಾಬ್ದಾರರಾಗಬೇಕಾಗುತ್ತದೆ. ಆಂಧ್ರದವರು ನಾಗಾರ್ಜುನ ಸಾಗರ ಮತ್ತು ಶ್ರೀ ಶೈಲ ಪ್ರಾಜೆಕ್ಟುಗಳನ್ನು ಕಟ್ಟಿಕೊಂಡು ತಮ್ಮ ಕೃಷ್ಣಾನದಿಯ ನೀರಿನ ಹಕ್ಕನ್ನು ಸಾಧನೆ ಮಾಡಿಕೊಂಡಿದ್ದಾರೆ. ಮದ್ರಾಸ್ ರಾಜ್ಯದವರು ಕಾವೇರಿ ನದಿಯ ನೀರಿನ ಹಕ್ಕನ್ನು ಸಾಧನೆ ಮಾಡಿಕೊಂಡು ನಮಗೆ ಬರತಕ್ಕ ನೀರಿನ ಹಕ್ಕಿನ ಸಂಬಂಧದಲ್ಲಿ ಬಹಳ ದೊಡ್ಡ ಅಪಾಯವನ್ನು ಸರ್ಕಾರ ಎದುರಿಸತಕ್ಕ ಪರಿಸ್ಥಿತಿಗೆ ತಂದೊಡ್ಡಿದ್ದಾರೆ. ಇದರಿಂದಾಗಿ ಈ ಸರ್ಕಾರ ಮೈಸೂರು ಜನತೆಯ ವಿಶ್ವಾಸವನ್ನು ಕಳೆದುಕೊಂಡಿದೆ ಎಂದು ನಾನು ಹೇಳಬೇಕಾಗಿದೆ.

ಇನ್ನು ನಮ್ಮ ದೇಶದಲ್ಲಿ ಕೈಗಾರಿಕೆಯ ಅಭಿವೃದ್ಧಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದರ ಕಡೆಗೆ ಹೋಗೋಣ. ಕೈಗಾರಿಕೆಗಳ ಅಭಿವೃದ್ಧಿ ವಿಚಾರದಲ್ಲಿ ನಮ್ಮ ದೇಶದಲ್ಲಿ ಈ ಯೋಜನೆಗಳಿಗೆ ಆಧಾರ ಸ್ತಂಭವಾಗಿರತಕ್ಕ ಸರ್. ಎಂ. ವಿಶ್ವೇಶ್ವರಯ್ಯನವರು ಅನೇಕ ಯೋಜನೆಗಳನ್ನು ತಯಾರು ಮಾಡಿ ಇಟ್ಟಿದ್ದಾರೆ. ಆದ್ದರಿಂದ ಈ ಯೋಜನೆಗಳು ಮೈಸೂರು ದೇಶಕ್ಕೆ ಹೊಸದೇನು ಅಲ್ಲ. ಪಂಡಿತ್ ಜವಾಹರ್‌ಲಾಲ್ ನೆಹರೂ ಅವರು ಪ್ಲಾನಿಂಗ್ ಕಮಿಷನ್‌ನವರನ್ನು ನೇಮಕಮಾಡಿ ಯೋಜನೆಗಳನ್ನು ತಯಾರು ಮಾಡುವುದಕ್ಕಿಂತ ಮುಂಚಿತವಾಗಿಯೇ ಮೈಸೂರು ದೇಶದಲ್ಲಿ ಯೋಜನೆಗಳು ರೂಪಿತವಾಗಿದ್ದವು. ವೃದ್ಧಪಿತಾಮಹ ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರು ಕೈಗಾರಿಕಾ ಅಭಿವೃದ್ಧಿ ಎಷ್ಟರ ಮಟ್ಟಿಗೆ ಆಗಬೇಕು, ನೀರಾವರಿ ಯೋಜನೆಗಳು ಎಲ್ಲೆಲ್ಲಿ ಸ್ಥಾಪನೆಯಾಗಬೇಕು ಎಂಬುದನ್ನು ಸೂಚಿಸಿ ಈಗ್ಗೆ 30 ವರ್ಷಗಳ ಹಿಂದೆಯೇ ಯೋಜನೆಗಳನ್ನು ತಯಾರು ಮಾಡಿ ಇಟ್ಟಿದ್ದರು. ಈ ಸರ್ಕಾರ ಯಾವ ಕೆಲಸವನ್ನೂ ಮಾಡಿಲ್ಲ. ಸರ್. ಎಂ. ವಿಶ್ವೇಶ್ವರಯ್ಯನವರು ಮಾಡಿದಂತಹ ಯೋಜನೆಗಳನ್ನೇ ಕಾರ್ಯಗತ ಮಾಡುವುದರಲ್ಲಿ ನೀವು ವಿಫಲರಾಗಿದ್ದೀರಿ. ಇಂಥಾ ಮಹಾವ್ಯಕ್ತಿ ಈ ದೇಶದಲ್ಲಿ ಕೈಗಾರಿಕಾ ಪುರೋಭಿವೃದ್ಧಿಯ ವಿಚಾರದಲ್ಲಿ ಮಾಡಿದಂತಹ ಎಷ್ಟು ಯೋಜನೆಗಳನ್ನು ಕಾರ್ಯಗತ ಮಾಡಿದ್ದಾರೆ ಎಂದು ನಾನು ಸರ್ಕಾರವನ್ನು ಕೇಳುತ್ತೇನೆ. ಮೈಸೂರು ದೇಶ ಕೈಗಾರಿಕೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿತ್ತು, ನೀವು ಅಧಿಕಾರಕ್ಕೆ ಬಂದ ಮೇಲೆ ಈ 10-15 ವರ್ಷಗಳ ಕಾಲದಲ್ಲಿ 10ನೇ ಸ್ಥಾನಕ್ಕೆ ಇಳಿದಿದೆ. ನಾಚಿಕೆಯಿಂದ ಹೇಳಿಕೊಳ್ಳುವಂತಹ ಪರಿಸ್ಥಿತಿ ಒದಗಿದೆ. ಇವೊತ್ತು ಮೈಸೂರು ದೇಶದಲ್ಲಿ ಉಕ್ಕಿನ ಕಾರ್ಖಾನೆ, ಅಲ್ಯೂಮಿನಿಯಂ ಕಾರ್ಖಾನೆ ಮತ್ತು ಮಂಗಳೂರಿನಲ್ಲಿ ಆಯಿಲ್ ರಿಫೈನರಿ, ಗೊಬ್ಬರದ ಕಾರ್ಖಾನೆ ಇನ್ನೂ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮೈಸೂರು ದೇಶದಲ್ಲಿ ಸ್ಥಾಪನೆ ಮಾಡತಕ್ಕಂಥ ವಿಚಾರದಲ್ಲಿ ಈ ಮೈಸೂರು ಸರ್ಕಾರ ಏನು ಸಾಧನೆ ಮಾಡಿದೆ? ಹೊಸಪೇಟೆಯಲ್ಲಿ ಉಕ್ಕಿನಕಾರ್ಖಾನೆಯನ್ನು ಸ್ಥಾಪನೆಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಹೇಳತಕ್ಕಂಥ ಧೈರ್ಯ, ಛಾತಿ ಈ ಮೈಸೂರು ಸರ್ಕಾರಕ್ಕಿಲ್ಲ. ಇವೊತ್ತಿನ ದಿವಸ ಇವರು ಕೇಂದ್ರದಲ್ಲಿ ದರ್ಪಹೀನರಾಗಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಒಂದು ಪ್ರಭಾವವನ್ನು ಬೀರತಕ್ಕ ವ್ಯಕ್ತಿತ್ವ ನಿಮ್ಮಲ್ಲಿ ಕಾಣದಾಗಿದೆ. ಮೈಸೂರಿಗೆ ಬರತಕ್ಕಂಥ ಉಕ್ಕಿನ ಕಾರ್ಖಾನೆಯಾಗಲೀ ಇನ್ನೂ ಬೇರೆ ಬೇರೆ ದೊಡ್ಡ ದೊಡ್ಡ ಕಾರ್ಖಾನೆಗಳಾಗಲೀ ಅವುಗಳೆಲ್ಲಾ ಕನಸಾಗಿಯೇ ಉಳಿದಿವೆ. ಮುಖ್ಯ ಮಂತ್ರಿಗಳು ಡಿಲ್ಲಿಗೆ ಹೋದಾಗ ಅಲ್ಲಿ ನಮಗೆ ಉಕ್ಕಿನ ಕಾರ್ಖಾನೆಯನ್ನು ಕೊಡಿ ಎಂದು ಹೇಳತಕ್ಕಂಥ ಧೈರ್ಯ ಎದೆ ಮೆಟ್ಟಿ ಹೇಳತಕ್ಕಂತ ಧೈರ್ಯ ಇವರಿಗೆ ಇಲ್ಲ. ಶ್ರೀಮಾನ್ ಕಾಮರಾಜನಾಡರನ್ನೂ ಮತ್ತು ಶ್ರೀಮಾನ್ ಸಂಜೀವರೆಡ್ಡಿಯವರನ್ನೂ ಪ್ರೀತಿ

(ಶ್ರೀ ಎಸ್. ಶಿವಪ್ಪ)

ಯಿಂದ ನಮ್ಮ ಮೈಸೂರಿಗೆ, ಹೊಸಪೇಟೆಗೆ ಒಂದು ಸಣ್ಣ ಕಾರ್ಖಾನೆಯನ್ನು ಕೊಡಿ ಎಂದು ಕೇಳಿದ್ದಾರೆ. ಐದನೆಯ ಉಕ್ಕಿನಕಾರ್ಖಾನೆ ವಿಶಾಖ ಪಟ್ಟಣದಲ್ಲಿ ಸ್ಥಾಪನೆಯಾಗುತ್ತದೆಯೋ ಅಥವಾ ಸೇಲಂನಲ್ಲಿ ಸ್ಥಾಪನೆಯಾಗುತ್ತದೆಯೋ ಎನ್ನುವ ಒಂದು ಅನುಮಾನಕ್ಕೆ ಕಾರಣವಾಗಿದೆ. 5ನೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುತ್ತಾರೆಯೋ ಅಥವಾ ಇಲ್ಲವೋ ಎನ್ನುವ ಒಂದು ಅನುಮಾನ ಬಂದಿದೆ. ಮೈಸೂರು ದೇಶದ ಒಂದು ವೈಶಿಷ್ಟ್ಯದ ಮೇಲೆ ನಮಗೆ ಒಂದು ಕಾರ್ಖಾನೆಯನ್ನು ಕೊಡಿ ಎನ್ನುವ ಒಂದು ನಿರ್ದಿಷ್ಟವಾದವನ್ನು ಇಡುವುದಕ್ಕೆ ಬದಲು ನಮಗೆ ಒಂದು ಸಣ್ಣ ಕಾರ್ಖಾನೆಯನ್ನು ಕೊಡಿ ಒಂದು ಊದು ಕೊಳವೆಯ ಕಾರ್ಖಾನೆಯನ್ನು ಕೊಡಿ, ಒಂದು ಸಣ್ಣ ಕಾರಿನ ಕಾರ್ಖಾನೆಯನ್ನು ಕೊಡಿ ಎಂದು ಕೇಂದ್ರ ಸರ್ಕಾರವನ್ನು ಕೇಳತಕ್ಕ ಒಂದು ಸಣ್ಣ ಮನೋಭಾವ ನಮ್ಮವರಲ್ಲಿ ಬೆಳೆದಿದೆ. ನಮ್ಮ ಸರ್ಕಾರದವರಿಗೆ ಈ ಸಣ್ಣತನ ಹೋಗಬೇಕು. ಧೈರ್ಯವಾಗಿ ಮೈಸೂರು ದೇಶದಲ್ಲಿ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಹೇಳಬೇಕು. ಯಾವ ಪ್ರದೇಶನಲ್ಲಿಯೂ ಇಲ್ಲದೇ ಇರತಕ್ಕಂಥ ಒಂದು ಹೆಚ್ಚಿನ ಅಂಶವನ್ನು ಹೊಂದಿರತಕ್ಕ ಕಬ್ಬಿಣದ ಅದುರು ಹೇರಳವಾಗಿ ಹೊಸಪೇಟೆಯಲ್ಲಿ ಸಿಕ್ಕುತ್ತದೆ. ಬಿಜಾಪುರದಲ್ಲಿ ಬೇಕಾದಷ್ಟು ಸುಣ್ಣದ ಕಲ್ಲು ಮತ್ತು ರಾಮೆಟೀರಿಯಲ್ಸ್ ಕೂಡ ಇದೆ. ಇದರ ಜೊತೆಗೆ ಶರಾವತಿಯಲ್ಲಿ ಉತ್ಪಾದನೆಯಾಗತಕ್ಕಂಥ ಹೇರಳವಾದ ವಿದ್ಯುಚ್ಛಕ್ತಿ ನಮ್ಮಲ್ಲಿದೆ. ಇಷ್ಟೆಲ್ಲಾ ಸೌಕರ್ಯಗಳು ನಮ್ಮಲ್ಲಿದ್ದು ನಮ್ಮ ದೇಶದಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡತಕ್ಕ ವಿಚಾರವನ್ನು ಕೇಂದ್ರ ಸರ್ಕಾರದವರೊಡನೆ ಧೈರ್ಯವಾಗಿ ಮಾತನಾಡಿ ಅದನ್ನು ದೊರಕಿಸಿಕೊಳ್ಳತಕ್ಕ ಬಗ್ಗೆ ನಮ್ಮ ಸರ್ಕಾರ ಏನು ಧೋರಣೆಯ ತಳೆದಿದೆಯೋ ಅದರಿಂದ ಈ ಮಂತ್ರಿಮಂಡಲ ಮೈಸೂರಿಗೆ ಒಂದು ದೊಡ್ಡ ಅಪರಾಧವನ್ನು ಮಾಡಿದೆ ಎಂದು ನಾನು ಹೇಳುತ್ತೇನೆ. ಆಂಧ್ರದೇಶದ ಜನ ತಮ್ಮ ಹಕ್ಕನ್ನು ಸಾಧನೆ ಮಾಡಿಕೊಳ್ಳಲು ವಿಶಾಖಪಟ್ಟಣದಲ್ಲಿಯೇ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ಧೀರ ಹೋರಾಟವನ್ನು ಮಾಡುತ್ತಿದ್ದಾರೆ. ಶ್ರೀಮಾನ್ ಸಂಜೀವರೆಡ್ಡಿಯವರು ವಿಶಾಖಪಟ್ಟಣದಲ್ಲಿ ಉಕ್ಕಿನಕಾರ್ಖಾನೆಯನ್ನು ಸ್ಥಾಪನೆ ಮಾಡದಿದ್ದರೆ ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಅದೇ ಧೋರಣೆಯನ್ನು ತಾಳಿ ನಮ್ಮ ದೇಶಕ್ಕೆ ಬರತಕ್ಕಂಥ ಉಕ್ಕಿನ ಕಾರ್ಖಾನೆಯ ವಿಷಯದಲ್ಲಿ ಹೋರಾಟವನ್ನು ಮಾಡಿದ್ದಾರೆಯೇ ? ಇವರಿಗೆ ಕೇಂದ್ರ ಸರಕಾರದವರಲ್ಲಿ ಅದೇನು ದಾಕ್ಷಿಣ್ಯವೋ ಗೊತ್ತಿಲ್ಲ. ಧೈರ್ಯವಾಗಿ ಉಕ್ಕಿನ ಕಾರ್ಖಾನೆ ಮೈಸೂರಿನಲ್ಲಿ ಸ್ಥಾಪನೆಯಾಗಬೇಕು, ಅದಕ್ಕೆ ಯೋಗ್ಯವಾದ ಸ್ಥಳ ಹೊಸಪೇಟೆ ಒಂದೇ ಒಂದು ಎಂದು ಹೇಳತಕ್ಕ ಒಂದು ಧೋರಣೆ, ಧೀರೋದಾತ್ತವಾದ ಒಂದು ವಾದವನ್ನು ಇವೊತ್ತಿನ ದಿವಸ ಕೇಂದ್ರದವರ ಮುಂದೆ ಇಟ್ಟು ನಿಮ್ಮ ದರ್ಪದಿಂದ ಅವರ ಗಮನವನ್ನು ಸೆಳೆಯತಕ್ಕ ಕಾರ್ಯದಲ್ಲಿ ವಿಫಲರಾಗಿದ್ದೀರಿ ಎಂದು ನಾನು ಹೇಳಬೇಕಾಗಿದೆ. ನೀವೂ ಕೂಡ ಕೇಂದ್ರದವರನ್ನು ಉಕ್ಕಿನ ಕಾರ್ಖಾನೆಯನ್ನು ನಮಗೆ ಕೊಡಿ ಎಂದು ಕೇಳಿರಬಹುದು. ಆದರೆ ಆ ಕೇಳಿಕೆಯ ಹಿಂದೆ ಏನು ದರ್ಪ ಇರಬೇಕೊ, ಏನು ಒಂದು ನಿರ್ದಿಷ್ಟ ನಿಲುವು ಇರಬೇಕೊ, ಏನು ಧೈರ್ಯ ಭೌತಿ ಇರಬೇಕೋ ಅದು ಈ ಮಂತ್ರಿಮಂಡಲದಲ್ಲಿ ಇಲ್ಲ. ಇದರಿಂದ ನೀವು ನಮ್ಮ ದೇಶದ ಜನತೆಯ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ ಎಂದು ನಾನು ಇವತ್ತಿನ ದಿವಸ ಖಡಾಖಂಡಿತವಾಗಿ ಹೇಳಬೇಕಾಗಿದೆ. ಇದೇ ರೀತಿ ಅಲ್ಯೂಮಿನಿಯಂ ಕಾರ್ಖಾನೆ ಗೊಬ್ಬರದ ಕಾರ್ಖಾನೆ ಯಾವಾಗ ಸ್ಥಾಪನೆಯಾಗುತ್ತದೆ ಎಂಬುದು ಗೊತ್ತಿಲ್ಲ. ಮಂಗಳೂರಿನಲ್ಲಿ ಗೊಬ್ಬರದ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಕ್ಕೆ ಭೂಮಿಯನ್ನು ಕೂಡ ಸ್ವಾಧೀನ ಮಾಡಿಕೊಂಡು ಕಾದಿರಿಸಿಕೊಂಡಿದ್ದಾರೆ. ಆದರೆ ಗೊಬ್ಬರದ ಕಾರ್ಖಾನೆ ನಿರ್ದಿಷ್ಟವಾಗಿ ಯಾವಾಗ ಸ್ಥಾಪನೆಯಾಗುತ್ತದೆ ಎಂಬುದು ಗೊತ್ತಿಲ್ಲ. ಇದನ್ನು ನೋಡಿದರೆ "ನಾಳೆ ಬಾ" ಎಂದು ದೆವ್ವಕ್ಕೆ ಬಾಗಿಲಿನ ಮೇಲೆ ಬರೆದು ಹೇಳಿದಂತೆ ಈ ಕಾರ್ಖಾನೆಗಳನ್ನು "ನಾಳೆ ಸ್ಥಾಪನೆ" ಮಾಡುತ್ತೇವೆ ಎಂದು ಬರೆದಿಡಬೇಕಾದ ಪರಿಸ್ಥಿತಿ ಬಂದಿದೆ. ಇದೇ ರೀತಿ ಉಕ್ಕಿನ ಕಾರ್ಖಾನೆಯ ಸ್ಥಾಪನೆಯ ವಿಷಯವೂ ನಾಳೆ ಮಾಡುತ್ತೇವೆ. ಎಂದು ಹೇಳಿದ ಹಾಗೆ ಇದೆ. ಇದರಿಂದ ನಿಜವಾಗಿ ನಾಚಿಕೆಯಾಗುತ್ತದೆ. ಇದು ನಮ್ಮ ದೇಶದ ದುರದೃಷ್ಟಕರವಾದ ಪರಿಸ್ಥಿತಿ ಎಂದು ನಾನು ಹೇಳಬೇಕಾಗಿದೆ.

ಇನ್ನು ನಮ್ಮ ದೇಶದಲ್ಲಿ ಅಹಾರದ ಉತ್ಪತ್ತಿಯ ವಿಷಯದಲ್ಲಿ ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದಾರೆ ಎಂಬುದನ್ನು ಇವರು ಎದೆಮುಟ್ಟಿ ಹೇಳಿಕೊಳ್ಳಬೇಕಾದರೆ ನಮ್ಮ ದೇಶದಲ್ಲಿ ಹೇರಳವಾದ ಹಣವನ್ನು ಖರ್ಚುಮಾಡಿದ್ದಾರೆ. ರೈತರಿಗೆ ಗೊಬ್ಬರವನ್ನು ಕೊಟ್ಟಿದ್ದೇವೆ, ಬೀಜವನ್ನು ಹಂಚಿದ್ದೇವೆ, ಸಕಾಲದಲ್ಲಿ ರೈತರಿಗೆ ಸೌಲಭ್ಯಗಳನ್ನು ಕೊಟ್ಟಿದ್ದೇವೆ, ಆಹಾರದ ಉತ್ಪತ್ತಿ ಜಾಸ್ತಿಯಾಗಿದೆ ಎಂಬ ಏಕಪ್ರಕಾರವಾಗಿ ಈಗ 5—6 ವರ್ಷಗಳಿಂದ ಒಂದೇ ಸಮನಾಗಿ ಹೇಳುತ್ತಿದ್ದಾರೆ. ಆದರೆ ಇದರ

ಪರಿಣಾಮ, ಇದರ ಫಲಿತಾಂಶ ಏನಾಗಿದೆ ಎಂದರೆ, ಇವರು ಅಧಿಕಾರಕ್ಕೆ ಬಂದಾಗ ಒಂದು ಕೆ. ಜಿ. ಅಕ್ಕಿಗೆ 50 ಪೈಸೆ ಇತ್ತು. ಇವತ್ತು 1966ನೇ ಇಸವಿಯಲ್ಲಿ ಏನಿದೆ? ಒಂದು ಕೆ. ಜಿ. ಅಕ್ಕಿಗೆ ಒಂದು ರೂಪಾಯಿ 50 ಪೈಸಾ 60 ಪೈಸಾ ಇದೆ. ಒಂದಕ್ಕೆ 3ರಷ್ಟು ಧಾರಣೆಯನ್ನು ಏರಿಸಿದ್ದಾರೆ. ಈ ದೇಶದಲ್ಲಿ ಏನು ಸಂಪತ್ತನ್ನು ಅಭಿವೃದ್ಧಿ ಮಾಡಬಹುದಾಗಿತ್ತೋ ಅಂಥಾ ಕಡೆ ಸ್ಕೇರ್ಸಿಟಿಯನ್ನು ಕ್ರಿಯೇಟ್ ಮಾಡಿದ್ದಾರೆ. ಒಂದು ಕೆ. ಜಿ. ಅಕ್ಕಿಗೆ 1-50 ಪೈಸಾ ಬಂತು, ಒಂದು ಕೆ. ಜಿ. ರಾಗಿಗೆ ಒಂದು ರೂಪಾಯಿ ಆಯಿತು. ಇಷ್ಟು ಹೇರಳವಾಗಿ ಹಣವನ್ನು ಖರ್ಚುಮಾಡಿದ್ದರೂ ಕೂಡ ಈ ದೇಶದಲ್ಲಿ ಏನು ಸಂಪತ್ತನ್ನು ಅಭಿವೃದ್ಧಿ ಮಾಡಿದ್ದಾರೆ ಎಂಬುದನ್ನು ನೋಡಿದರೆ ಇವೊತ್ತು ಈ ಸರ್ಕಾರದವರು ತಂದಿಟ್ಟಿರತಕ್ಕದ್ದು ಒಂದು ಕೆ. ಜಿ. ಅಕ್ಕಿಗೆ ಒಂದು ರೂಪಾಯಿ 50 ಪೈಸಾ, ಒಂದು ಕೆ. ಜಿ. ರಾಗಿಗೆ 1 ರೂಪಾಯಿ. ಇದರಲ್ಲಿ ಇವೊತ್ತು ನೂರಕ್ಕೆ ಐವತ್ತರಷ್ಟು ಗೋವುಗಳು ಸಂಪೂರ್ಣವಾಗಿ ನಾಶವಾದವು. ತಾವು ಏನು ಮಾಡುತ್ತಾ ಹೋದಿರಿ ಎಂದರೆ, ದನಗಳಿಗೆ ಬೇಕಾದ ಮೇವನ್ನು ಕೆಲವು ಹಳ್ಳಿಗಳಿಗೆ ಮಾತ್ರ ದೊಡ್ಡ ದೊಡ್ಡ ಪಟ್ಟಣಗಳಿಂದ ತರಿಸಿ ಹಂಚಿ ಕೊಟ್ಟಿರಿ ಮತ್ತು ದನಗಳಿಗೆ ಸರಿಯಾಗಿ ಕುಡಿಯುವ ನೀರು ಸಿಗದೆ ಎಷ್ಟೋ ಕಡೆಗಳಲ್ಲಿ ದನಗಳು ಸತ್ತುಹೋದವು. ಸಕಾಲದಲ್ಲಿ ಈ ದನಗಳಿಗೆ ಮೇವು ಹಾಗೂ ನೀರನ್ನು ಒದಗಿಸಿಕೊಟ್ಟಿದ್ದೇ ಆದರೆ ಸುಮಾರು ಲಕ್ಷಾಂತರ ದನಗಳು ಬದುಕುವಂತೆ ಮಾಡಬಹುದಾಗಿತ್ತು. ಅಂತಹ ಒಂದು ಕಾರ್ಯವನ್ನು ಈ ಸರಕಾರ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ತಮ್ಮ ಚುನಾವಣೆಯ ಚಿಹ್ನೆಯೇನೋ ಬಸವಣ್ಣ ಎಂದು ಇದೆ. ಆದರೆ ಆ ಬಸವಣ್ಣನ ಕಡೆಗೆ ತಮ್ಮ ಭಕ್ತಿ ಇಲ್ಲ. ತಮಗೆ ಬಸವಣ್ಣನ ಶಾಪ ಬರಲೆಂದು ಕಾಯುತ್ತಿದ್ದೀರಿ. ಬಸವಣ್ಣನಿಗೆ ಮೋಸ ಮಾಡುತ್ತಿದ್ದೀರಿ. ಬಸವಣ್ಣನಿಗೆ ನಿಮ್ಮ ಭಕ್ತಿಯನ್ನು ತೋರದೆ ಅವನಿಗೆ ಮೋಸ ಮಾಡತ್ತಿರುವುದರಿಂದ ಮುಂದೆ ಇದೇ ಬಸವಣ್ಣ ಏನು ಮಾಡುತ್ತಾನೆ ಎನ್ನುವುದನ್ನು ಕಾದು ನೋಡಬೇಕಾಗಿದೆ. ಈ ಒಂದು ಆಹಾರದ ಪರಿಸ್ಥಿತಿಯಲ್ಲಿ ಒಂದು ವರ್ಷದಲ್ಲಿ ಬಂದಿದ್ದಂತಹ ಕ್ಷಾಮವನ್ನು ನಿಮಗೆ ಎದುರಿಸುವುದಕ್ಕೆ ಸಾಧ್ಯವಾಗಲಿಲ್ಲ. ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಮ್ಮಲ್ಲಿ ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಬೇಕಾದಷ್ಟು ಕಾರ್ಯಗಳನ್ನು ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಕಳೆದ ಹತ್ತೊಂಬತ್ತು ವರ್ಷಗಳ ಆಡಳಿತದ ಕೊನೆಯಲ್ಲೂ ಕೂಡ ಈ ದೇಶದಲ್ಲಿ ಆಹಾರದ ಅಭಾವದ ಪರಿಸ್ಥಿತಿಯನ್ನು ಸುಧಾರಿಸಲು ಏನು ಸಾಧನೆ ಮಾಡಿದ್ದೀರಿ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ನಿಮಗೆ ರೂಢಿ ಬಂದಿರುವುದು ಭಿಕ್ಷೆ ಬೇಡುವುದು. ಈ ಭಿಕ್ಷೆಯನ್ನು ಬೇಡಲು ಎರಡು ಕೈಗಳನ್ನೂ ಚಾಚಿ ಭಿಕ್ಷಾಂದೇಹಿ ಎಂದು ಎಲ್ಲರಲ್ಲೂ ಭಿಕ್ಷೆ ಬೇಡುವ ಪದ್ಧತಿಯನ್ನು ಚೆನ್ನಾಗಿ ಬೆಳಸಿಕೊಂಡು ಬಂದಿದ್ದೀರಿ. ನಮ್ಮ ಆಹಾರ ಮಂತ್ರಿಗಳು ಈ ರೀತಿ ದೊಡ್ಡದಾಗಿ ಭಿಕ್ಷಾಪಾತ್ರೆಗಳನ್ನು ಹಿಡಿದುಕೊಂಡು ಹೋಗುತ್ತಿದ್ದಾರೆ ಮತ್ತು ನಮ್ಮ ಹಣಕಾಸಿನ ಮಂತ್ರಿಗಳು ಎಷ್ಟೋ ಹಣ ಕೊಟ್ಟು ಪರದೇಶಗಳಿಂದ ಆಹಾರವನ್ನು ತರಿಸಿ ಹಂಚುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ; ಮತ್ತು ನಮ್ಮ ಹಣಕಾಸಿನ ಸಚಿವರು ನಮ್ಮ ದೇಶದಲ್ಲಿರುವ overdraft ಹಣ ಇತ್ಯಾದಿಗಳನ್ನು ಯೋಜನೆಗಳಿಗಾಗಿ ಉಪಯೋಗಿಸಬೇಕೆಂದು ಹೇಳುತ್ತಾ ಕೇಂದ್ರಕ್ಕೆ ಭಿಕ್ಷಾಪಾತ್ರೆ ಹಿಡಿದುಕೊಂಡು ಹೋಗುತ್ತಿದ್ದಾರೆ ಮತ್ತು ಪಬ್ಲಿಕ್ ಡೆಟ್ ಎಷ್ಟು ಬಂದಿದೆ ಎಂದರೆ ಇಲ್ಲಿ ಸಾಲಗಳನ್ನು ತೆಗೆದುಕೊಂಡು ದೇಶದ ಹೊರೆಯನ್ನು ಹೆಚ್ಚಿಸಿಕೊಂಡು ಹೋಗುತ್ತಿದ್ದಾರೆ. ಈ ಸಾಲದ ಹೊರೆಯನ್ನು ನಮ್ಮ ಮಕ್ಕಳು ಹಾಗೂ ಮರಿ ಮಕ್ಕಳು ಕೂಡ ನಮ್ಮಂತೆಯೇ ಸಾಲಗಾರರಾಗುವಂತೆ ಮಾಡಿದ್ದಾರೆ. ನಮ್ಮ ಸರಕಾರ ಸುಮಾರು ಮುನ್ನೂರು ಕೋಟಿಯಷ್ಟು ಸಾಲ ಮಾಡಿದ್ದಾರೆ. ಇದರ ಮೇಲೆ ಕೇಂದ್ರ ಸರಕಾರದವರು ಅಮೆರಿಕಾ ದೇಶದಿಂದ ಸುಮಾರು ನಾಲ್ಕೂವರೆ ಕೋಟಿಯಷ್ಟು ಹಣವನ್ನು ಸಾಲ ಮಾಡಿದ್ದಾರೆ. ಹೀಗೆ ಸಾಲದ ಹೊರೆಯನ್ನು ಜನತೆಯ ಮೇಲೆ ಹೆಚ್ಚಿಸುತ್ತಿರುವುದರಿಂದ ಹಾಗೂ ಆಹಾರದ ಪರಿಸ್ಥಿತಿಯನ್ನು ಉತ್ತಮಗೊಳಿಸದೆ ಆಹಾರದ ಅಭಾವವನ್ನು ಹೆಚ್ಚಿಸುತ್ತ ಇರುವುದರಿಂದ ನಿಮ್ಮ ಕಾರ್ಯದಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಹಾಗೂ ಜನತೆಯ ವಿಶ್ವಾಸವನ್ನು ನೂರಕ್ಕೆ ನೂರರಷ್ಟು ಕಳೆದುಕೊಂಡಿದ್ದೀರಿ ಹಾಗೂ ಜನರ ನಂಬಿಕೆಯನ್ನೂ ಕಳೆದುಕೊಂಡಿದ್ದೀರಿ. ಆದುದರಿಂದ ಇವೊತ್ತಿನ ದಿವಸ ಈ ಸರಕಾರದಲ್ಲಿದ್ದು ಅಧಿಕಾರ ಮಾಡಲು ಅರ್ಹರಲ್ಲ ಮತ್ತು ಇನ್ನೊಂದು ನಿಮಿಷಕಾಲವೂ ಅಧಿಕಾರದಲ್ಲಿರಬಾರದು. ಆಹಾರದ ವಿಚಾರದಲ್ಲಿ ಬೇಜವಾಬ್ದಾರಿಯುತರಾಗಿದ್ದೀರಿ. ಆಹಾರಶಾಖೆಯ ಕೆಲಸ ಮಾಡುತ್ತಿರುವ ನಿಮ್ಮ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆ. ಅಲ್ಲದೆ ಆಹಾರವನ್ನು ಪರದೇಶಗಳಿಂದ ಎಂದರೆ, ಅಮೆರಿಕಾ ದೇಶದಿಂದ ಗೋಧಿಯನ್ನು ತಂದು ಹಂಚಿದ್ದೇವೆ ಎಂದು ಹೇಳುತ್ತಾರೆ. ಅಲ್ಲದೆ ಈ ಆಹಾರದ ಹಂಚಿಕೆಯ ವ್ಯವಸ್ಥೆಯನ್ನು ಸರಕಾರ ತೆಗೆದುಕೊಂಡು ಯಾವರೀತಿ ಮಾಡುತ್ತಿದ್ದಾರೆ ಎಂದರೆ, ತಮ್ಮದೇ ಆದಂತಹ ಕೆಲವು ಸೊಸೈಟಿಗಳನ್ನು ಮಾಡಿಕೊಂಡು ಅವರಲ್ಲಿರುವ ಕೆಲವು ವ್ಯಕ್ತಿಗಳ ಅನುಕೂಲಕ್ಕಾಗಿ ಇದನ್ನು ಮಾಡಿಕೊಂಡು ಆಹಾರದ ಹಂಚಿಕೆಯನ್ನು ಮಾಡುತ್ತಿದ್ದಾರೆ. ನಾನು ಇವೊತ್ತು ಸರಕಾರ

(ಶ್ರೀ ಎಸ್. ಶಿವಪ್ಪ)

ದಲ್ಲಿ ಹೇಳುತ್ತೇನೆ, ಆಹಾರದ ಹಂಚಿಕೆ ಈ ದೇಶದಲ್ಲಿ ಯಾವರೀತಿಯಾಗಿ ಆಗಬೇಕಾಗಿತ್ತೋ ಆ ರೀತಿ ಈ ಆಹಾರದ ಇಲಾಖೆಯಿಂದ ಆಗಲಿಲ್ಲ. ಎಷ್ಟೋ ಕಡೆ ಆಹಾರ ಸಿಗದೆ ಜನ ವಿಷ ತೆಗೆದುಕೊಂಡು ಪ್ರಾಣ ಬಿಟ್ಟಿದ್ದಾರೆ. ಅನ್ನಕ್ಕಾಗಿ ಜನ ಹಾತೊರೆದು ಕೆಲವು ಕಡೆಗಳಲ್ಲಿ ಅವರ ಹೆಂಡತಿಯ ಅಮೂಲ್ಯ ವಾದ ತಾಳಿಗಳನ್ನು ಮಾರಿ ಆಹಾರದ ದವಸವನ್ನು ತಂದು ಜೀವನ ಮಾಡುತ್ತಿದ್ದಾರೆ. ಎಷ್ಟೋ ಕಡೆಗಳಲ್ಲಿ ಅನ್ನ ಸಿಗಲಿಲ್ಲ ಎಂದು ತಮ್ಮ ಮನೆಗಳಲ್ಲಿ ಇದ್ದ ಬಟ್ಟೆಬರೆಗಳನ್ನು ಮಾರಿಕೊಂಡು ದವಸ ವನ್ನು ತಂದು ಮಕ್ಕಳಿಗೆ ಅನ್ನ ಹಾಕಲು ಕಷ್ಟಪಟ್ಟಿದ್ದಾರೆ. ಕೆಲವು ಕಡೆ ದವಸ ಸಿಗಲಿಲ್ಲ ಎಂದು ಫಾಲಿಡಾಲ್‌ನ್ನು ತೆಗೆದುಕೊಂಡು ಸತ್ತಿದ್ದಾರೆ. ಬಡತನದ ಬೇಗೆಯಿಂದ ಇಂದು ಅನ್ನಾಹಾರಗಳಿ ಲ್ಲದೆ ಎಷ್ಟೋಕಡೆಗಳಲ್ಲಿ ಜನ ಸತ್ತಿದ್ದಾರೆ. ನಿಮಗೆ ಹೆಚ್ಚು ಜನ ಸಾಯಲಿಲ್ಲ ಎಂದು ಇರಬಹುದು; ಸುಮಾರು 30-40 ಲಕ್ಷ ಜನ ಸಾಯಬೇಕಾಗಿತ್ತು ಈ ಸ್ಟೇಟಿನಲ್ಲಿ ಎಂದು ಇರಬಹುದು. ಆದರೆ ಅಷ್ಟು ಹೆಚ್ಚು ಸಂಖ್ಯೆಯಲ್ಲಿ ಜನ ಸತ್ತಿಲ್ಲ. ಆದರೆ ಆಹಾರದ ಹಂಚಿಕೆ ಸರಿಯಾಗಿ ಆಗಲಿಲ್ಲ. ಆಹಾರ ವನ್ನು ಹಂಚತಕ್ಕ ಕೋ-ಆಪರೇಟೀವ್ ಸೊಸೈಟಿಗಳು ಹೇಗೆ ಕೆಲಸ ಮಾಡುತ್ತಿವೆ ಎಂದರೆ, ಅಲ್ಲಿ ತಮಗೆ ಬೇಕಾದ ವ್ಯಕ್ತಿಗಳನ್ನು ಇಟ್ಟುಕೊಂಡು ಬಡಜನಗಳಿಗೆ ಬೇಕಾದ ಆಹಾರವನ್ನು ಬೇರೆ ಕಡೆ ಹಂಚುವ ವ್ಯವಸ್ಥೆ ಮಾಡುತ್ತಿದ್ದಾರೆ. ಸೊಸೈಟಿಗಳಲ್ಲಿರುವವರು ತಮಗೆ ಬೇಕಾದವರಿಗೆ ಮೂಟೆ ಗಟ್ಟಲೆ ದವಸವನ್ನು ಕೊಟ್ಟು ಬಡ ಜನರಿಗೆ ಒಂದು ಕೆ. ಜಿ. ದವಸವೂ ಸಿಗದಂತೆ ಮಾಡಿದರು. ಇವರು ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಹೋಗಿ ದವಸನ್ನು ತೆಗೆದುಕೊಳ್ಳಬೇಕಾಗಿ ಬಂತು. ಸೊಸೈಟಿಗಳಲ್ಲಿ ಯಾವ ರೀತಿಯಾಗಿ ಮೂಟೆಗಟ್ಟಲೆ ದವಸ ಹೋಗುತ್ತಿದೆ ಎನ್ನುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ, ನೋಡಿದ್ದೇನೆ. ಹೀಗೆ ದುರುಪಯೋಗ ಮಾಡುವ ಅಧಿಕಾರಿಗಳನ್ನು ತಕ್ಷಣ ಪತ್ತೆ ಮಾಡಿ ಅವರನ್ನು ಶಿಕ್ಷಿಸುವ ಸಾಮರ್ಥ್ಯ ಈ ಸರಕಾರಕ್ಕೆ ಇಲ್ಲ. ಆಹಾರದ ದವಸದ ಮಾರಾಟದ ವಿಷಯದಲ್ಲಿ ತಮಗೆ ಬೇಕಾದ ಕೆಲವು ಪ್ರಮುಖರಿಗೆ ದೊಡ್ಡ ದೊಡ್ಡ ಲೈಸನ್ಸ್‌ಗಳನ್ನು ಕೊಟ್ಟಿರುವ ವರ್ತಕರು ನಮ್ಮ ಬೆಂಗಳೂರು ನಗರದಲ್ಲಿದ್ದಾರೆ. ದುರ್‌ವ್ಯಾಪಾರ ಮಾಡುವಂತಹ ವರ್ತಕರು ನಮಲ್ಲಿದ್ದರೆ ಅವರನ್ನು ನಿರ್ಮೂಲ ಮಾಡುತ್ತೇವೆ. ಎಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಕಡೆ ಭಾಷಣ ಮಾಡುತ್ತಾ ಹೇಳಿದರು. ಆದರೆ ನಮ್ಮ ಬೆಂಗಳೂರು ನಗರದಲ್ಲೇ ಸುಮಾರು 5,000-6,000 ಟನ್ನು ಗಳಷ್ಟು ದವಸವನ್ನು ತೆಗೆದುಕೊಂಡು ಕಮಿಷನ್ನು ಮೇಲೆ ಮಾರಾಟ ಮಾಡುತ್ತಿರುವವರನ್ನು ಕಂಡು ಹಿಡಿದು ಅವರನ್ನು ಶಿಕ್ಷೆ ಮಾಡುವ ಸಾಮರ್ಥ್ಯ ಇವರಿಗೆ ಇಲ್ಲ. ಇಂತಹ ಅನೀತಿಯುತವಾದ ದುರ್ ವ್ಯಾಪಾರ ಮಾಡುವ ವರ್ತಕರುಗಳನ್ನು ನಿರ್ಮೂಲ ಮಾಡಲು, ಇಂಥವರು ಕೇವಲ ಹತ್ತು, ಹನ್ನೆ ರಡು ಇದ್ದರೂ ಇವರನ್ನು ನಿರ್ಮೂಲ ಮಾಡಲಿಕ್ಕೆ ಆಗಲಿಲ್ಲ. ಕೆಲವು ಸೊಸೈಟಿಗಳಲ್ಲಿ ಇಂತಹವರು ಸೇರಿಕೊಂಡು ಜನಗಳಿಗೆ ತೊಂದರೆ ಕೊಡುತ್ತಿದ್ದಾರೆ. ಇಂತಹವರನ್ನು ಸರಕಾರ ಕಂಡುಹಿಡಿದು ಅವರಿಗೆ ತಕ್ಕ ಶಿಕ್ಷೆ ಕೊಡಲು ಪ್ರಯತ್ನ ಮಾಡಲಿಲ್ಲ. ಸುಮ್ಮನೆ ಬರೀ ಬಾಯಲ್ಲಿ ದುರ್ವ್ಯಾಪಾರ ಮಾಡುವವರನ್ನು ನಿರ್ಮೂಲ ಮಾಡುತ್ತೇವೆ ಎಂದು ಮಾತನಾಡುತ್ತಿದ್ದಾರೆ. ಆಹಾರದ ಹಂಚಿಕೆ ವಿಚಾರದಲ್ಲಿ ಜನಗಳಿಗೆ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಜನತೆಗೆ ಆಹಾರದ ಹಂಚಿಕೆಯಲ್ಲಿ ಮೋಸ ಮಾಡುವುದು ಬಹಳ ದೊಡ್ಡ ಅಪರಾಧ. ಇದರಿಂದ ಜನತೆಯ ವಿಶ್ವಾಸವನ್ನು ಈ ಸರಕಾರ ಸಂಪೂರ್ಣವಾಗಿ ಕಳೆದುಕೊಂಡಿದೆ ಮತ್ತು ಇದರ ಫಲವನ್ನು ಮುಂದೆ ಸರಕಾರ ಅನುಭವಿಸ ಬೇಕಾಗಿ ಬರುತ್ತದೆ.

ಇನ್ನು ಕೋ-ಆಪರೇಷನ್ ವಿಚಾರವಾಗಿ ಈಗಾಗಲೇ ಅನೇಕ ದೊಡ್ಡ ದೊಡ್ಡ ಆಪಾದನೆಗಳು ಈ ಶಾಸನ ಸಭೆಯಲ್ಲಿ ಬಂದಿವೆ. ಅಲ್ಲದೆ ಈಗತಾನೇ ನಮ್ಮ ಶಾಸನ ಸಭೆಯಲ್ಲಿ ಮಂಡಿಸಿರುವ ಪಬ್ಲಿಕ್ ಅಕೌಂಟ್ಸು ಕಮಿಟಿಯ ವರದಿಯಲ್ಲೂ ಹೇಳಿದ್ದಾರೆ. ನಮ್ಮ ಮೈಸೂರು ದೇಶದಲ್ಲಿ ಸೊಸೈ ಟಿಗಳಿಗಾಗಿ ಸುಮಾರು 8-10 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿದ್ದಾರೆ. ಇದರಲ್ಲಿ ಸರಕಾರ ಸುಮಾರು 8 ಕೋಟಿಯಷ್ಟು ಹಣವನ್ನು ನೆರವಿನ ರೂಪದಲ್ಲಿ ಕೊಟ್ಟಿದೆ. ಇಷ್ಟೊಂದು ಹಣ ವನ್ನು ಸೊಸೈಟಿಗಳಿಗೆ ಕೊಟ್ಟು ಅಲ್ಲಿ ಹಣದ ದುರುಪಯೋಗವಾಗುತ್ತಿದ್ದರೂ ಅವರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ನೀವು ಶಕ್ತಿಯನ್ನು ಹೊಂದಿದ್ದೀರಾ ಎಂದು ಕೇಳಬೇಕಾಗಿದೆ. ಗೊಬ್ಬರದ ವಿಚಾರ ತೆಗೆದುಕೊಂಡರೆ, ಸುಮಾರು ಐದೂವರೆ ಲಕ್ಷ ರೂಪಾಯಿಗಳ ಗೊಬ್ಬರದ ಲೆಕ್ಕ ವೇ ಇಲ್ಲ ಮತ್ತು ಸುಮಾರು ಏಳು ಲಕ್ಷ ರೂಪಾಯಿಗಳ ಗೊಬ್ಬರ ಎಲ್ಲಿ ಹೋಯಿತು ಎನ್ನುವುದು ಪತ್ತೆಯೇ ಆಗಲಿಲ್ಲ. ಈ ಸೊಸೈಟಿಗಳನ್ನು ಹತೋಟಿ ಮಾಡತಕ್ಕಂತಹವರು ಕಮಿಟಿಯ ಮುಂದೆ ಬಂದಾಗ ಅವರನ್ನು ಕೇಳಿದುದಕ್ಕೆ ಸರಿಯಾದ ವಿವರಗಳನ್ನು ಕೊಡಲಿಲ್ಲ. ಅಲ್ಲದೆ ಸೊಸೈಟಿಗಳಿಗೆ ಕೆಲವು ಕಡೆಗಳಲ್ಲಿ ಹೋಲ್‌ಸೇಲ್ ಲೈಸನ್ಸ್‌ನ್ನು ಕೊಡಲಾಗಿದೆ, ಕೆಲವು ಕಡೆಗಳಲ್ಲಿ ರೀಟೇಲ್ ವ್ಯಾಪಾರ ಮಾಡಲೂ ಲೈಸನ್ಸನ್ನು ಕೊಡಲಾಗಿದೆ. ಇಂತಹ ಸೊಸೈಟಿಗಳಲ್ಲಿ ಬ್ಲ್ಯಾಕ್ ಮಾರ್ಕೆಟ್ ವ್ಯಾಪಾರಿ

ಗಳಾಗಿ ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿದೆ. ಬೆಂಗಳೂರಿನಲ್ಲಿ ಸ್ವೀಟ್ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಯು ಒಬ್ಬ ದೊಡ್ಡ ವ್ಯಕ್ತಿಯ ಕೈಯಲ್ಲಿದೆ. ಅವರು ಎಷ್ಟೊಂದು ಹಣವನ್ನು ದುರುಪಯೋಗಪಡಿಸಿದ್ದಾರೆ ಎನ್ನುವ ವಿಚಾರದಲ್ಲಿ ಸರಕಾರ ಇದುವರೆಗೂ ತನಿಖೆ ಮಾಡಿ ವಿಚಾರ ಮಾಡಿಲ್ಲ. ಅವರು ಹಿಂದೆ ಜೀವನ ಯಾವ ರೀತಿ ಮಾಡುತ್ತಿದ್ದರು. ಈಗ್ಗೆ ಹತ್ತಾರು ವರ್ಷಗಳಿಂದೀಚೆಗೆ ಯಾವ ರೀತಿಯಾದ ವೈಭವೋಪೇತ ಜೀವನವನ್ನು ನಡೆಸುತ್ತಿದ್ದಾರೆ? ಇಷ್ಟೊಂದು ಹಣ ಅವರಿಗೆಲ್ಲಿಂದ ಬಂತು ? ಇದನ್ನು ವಿಚಾರ ಮಾಡುವ ಧೈರ್ಯ ನಮ್ಮ ಸರಕಾರಕ್ಕೆ ಇದ್ದಿದ್ದರೆ ನಾನು ಈ ಸರಕಾರವನ್ನು ಶ್ಲಾಘನೆ ಮಾಡುತ್ತಿದ್ದೆ. ಇವೊತ್ತು ಅನೇಕ ದೊಡ್ಡ ದೊಡ್ಡ ವ್ಯಕ್ತಿಗಳು ದೊಡ್ಡ ದೊಡ್ಡ ಸಹಕಾರ ಸಂಘಗಳ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. ಅಂತಹವರು ದುರುಪಯೋಗ ಮಾಡುತ್ತಿರುವುದರ ಬಗ್ಗೆ ಅವರ ಮೇಲೆ ಚಾರ್ಜುಷೀಟುಗಳನ್ನು ಹಾಕಿ ಅವರ ಮೇಲೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ಎಂದು ನಾನು ಇಲ್ಲಿ ಕೇಳುತ್ತೇನೆ.

ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಚಿಕ್ಕಮಗಳೂರಿಗೆ ಪ್ರವಾಸ ಬಂದಿದ್ದಾಗ ಒಂದು ಕಡೆಯಲ್ಲಿ ಭಾಷಣ ಮಾಡುತ್ತಾ ನಮ್ಮ ಕಾಂಗ್ರೆಸ್ಸು ಪಕ್ಷದಲ್ಲಿದ್ದಂತಹವರು ಕೆಲವರು ಆಸ್ತಿಪಾಸ್ತಿಗಳನ್ನು ಮಾಡಿಕೊಂಡು ಇವೊತ್ತು ಹೊರಗೆ ಹೋಗಿದ್ದಾರೆ. ಇನ್ನು ಕೆಲವರು ನಮ್ಮ ಪಕ್ಷದೊಳಗೇ ಇದ್ದು ಕೊಂಡು ಆಸ್ತಿಪಾಸ್ತಿಗಳನ್ನು ಬೆಳೆಸಿಕೊಂಡು ಬರುತ್ತಿದ್ದಾರೆ ಇನ್ನು ಕೆಲವರು ದುಡ್ಡು ಮಾಡುತ್ತಿದ್ದಾರೆ ಎನ್ನುವ ಅರ್ಥ ಬರುವ ಹಾಗೆ ನಮ್ಮ ಈ ದೇಶದ ಮುಖ್ಯ ಮಂತ್ರಿಗಳು ಒಂದು ಘೋಷಣೆ ಮಾಡಿದ್ದಾರೆ. ನಾನು ಅವರನ್ನೇ ಕೇಳುತ್ತೇನೆ. ಇಷ್ಟು ವರ್ಷಗಳು ಅವರೆಲ್ಲಾ ಕಾಂಗ್ರೆಸ್ಸಿನವರಾಗಿದ್ದು ದುಡ್ಡನ್ನು ಮಾಡಿಕೊಂಡು ಆಸ್ತಿಪಾಸ್ತಿಗಳನ್ನು ಮಾಡಿಕೊಂಡರು ಎಂದು ನಿಮಗೆ ಗೊತ್ತಿದ್ದರೆ ಅವರ ಮೇಲೆ ಏಕೆ ಯಾವ ಶಿಕ್ಷಾ ಕ್ರಮವನ್ನೂ ಇದುವರೆಗೆ ತೆಗೆದುಕೊಳ್ಳಲಿಲ್ಲ? ಅವರು ಈಗ ಕಾಂಗ್ರೆಸ್ಸು ಪಕ್ಷ ಬಿಟ್ಟ ಮೇಲೆ ನಿಮ್ಮ ಕಣ್ಣು ತೆರೆಯುತ್ತಿದೆಯೇ. ದೊಡ್ಡ ಆಸ್ತಿಗಳನ್ನು ಮಾಡಿಕೊಂಡು ಇವೊತ್ತು ಹೊರಗಡೆ ಹೋಗಿದ್ದರೆ ಅಂತಹವರ ಮೇಲೆ ತಕ್ಕ ವಿಚಾರಣೆಯನ್ನು ಏತಕ್ಕೆ ಕೈಗೊಳ್ಳಬಾರದು ? ಇದರಿಂದ ನಮ್ಮ ಮುಖ್ಯ ಮಂತ್ರಿಗಳ ದೌರ್ಬಲ್ಯ ಚೆನ್ನಾಗಿ ಗೊತ್ತಾಗುತ್ತದೆ. ಸರಕಾರದ ಹಣವನ್ನು ದುರುಪಯೋಗಮಾಡುವ ವ್ಯಕ್ತಿ ಎಂತಹವರೇ ಆಗಿರಲಿ ಅವರನ್ನು ಶಿಕ್ಷೆಗೆ ಗುರಿಪಡಿಸಬೇಕಾದುದು ಅಗತ್ಯ. ಕಳೆದ ಐದು ವರ್ಷಗಳ ಅವಧಿಯಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಎಷ್ಟು ಜನರನ್ನು ವಿಚಾರಣೆಗೆ ಗುರಿಪಡಿಸಿದ್ದಾರೆ ಎಂದು ಇಲ್ಲಿ ನಾನು ಸವಾಲು ಹಾಕುತ್ತೇನೆ. ಇಂತಹವರು ಈಗಲೂ ಇದ್ದಾರೆಂದು ಅವರಿಗನಿಸಿದ್ದರೆ ಅವರನ್ನು ಕೂಡಲೇ ವಿಚಾರಣೆಗೆ ಗುರಿಪಡಿಸಬೇಕು. ಅವರು ಕಾಂಗ್ರೆಸ್ಸು ಪಕ್ಷದವರೇ ಆಗಿರಲಿ ಇತರ ಪಕ್ಷದವರೇ ಆಗಿರಲಿ ಸರಕಾರಕ್ಕೆ ನಷ್ಟ ಮಾಡಿದ್ದರೆ ಅಂತಹವರನ್ನು ವಿಚಾರಣೆ ಮಾಡಬೇಕು.

1-30 P.M.

1947ನೇ ಇಸವಿಯಲ್ಲಿ ಯಾವ ಕಾಂಗ್ರೆಸ್ಸಿಗನೇ ಆಗಿರಲಿ, ಆತನಿಗೆ ಆಸ್ತಿಪಾಸ್ತಿಗಳು ಎಷ್ಟು ಇತ್ತು, ಇವೊತ್ತು 1966ನೇ ಇಸವಿಯಲ್ಲಿ ಅವನ ಆಸ್ತಿಪಾಸ್ತಿ ಎಷ್ಟು ಇದೆ ಎಂದು ವಿಚಾರವನ್ನು ಮಾಡಿದ್ದರೆ ಆಗ ಸರ್ಕಾರಕ್ಕೆ ಅಭಿನಂದನೆ ಕೊಡುತ್ತಿದ್ದೆ. ಈಗಲೂ ಕೂಡ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ, ಈ ಸವಾಲನ್ನು ಅಂಗೀಕರಿಸಬೇಕು ಎಂದು. ಈಗ ನಿಮ್ಮ ಅಭ್ಯರ್ಥಿಗಳು ತಮ್ಮ ತಮ್ಮ ಟಿಕೆಟ್ಟುಗಳನ್ನು ಪಡೆಯುವುದಕ್ಕೋಸ್ಕರ ಒಬ್ಬ ಅಭ್ಯರ್ಥಿ, ಮತ್ತೊಬ್ಬ ಅಭ್ಯರ್ಥಿಯ ಮೇಲೆ ಆಪಾದನೆ ಮಾಡಿ ಆತನು ಏನೇನು ಮೋಸ ಮಾಡಿದ್ದಾನೆ, ಲೋಪದೋಷ ಮಾಡಿದ್ದಾನೆ, ಏನೇನು ದುರ್ವ್ಯವಹಾರದಲ್ಲಿ ಕೈಹಾಕಿದ್ದಾನೆ ಎಂದು ವಿವರಗಳು ನಿಮಗೂ ಬಂದಿವೆ, ನಮಗೂ ಬಂದಿವೆ. ಇದನ್ನು ವಿಚಾರಣೆ ಮಾಡಿದ್ದೀರಾ : ಶ್ರೀ ವೀರೇಂದ್ರಪಾಟೀಲರು ಮತ್ತು ಹಣಕಾಸಿನ ಸಚಿವರು ಎಲೆಕ್ಷನ್ ಕಮಿಟಿಯಲ್ಲಿ ಇದ್ದಾರೆ. ಬಳ್ಳಾರಿಯಲ್ಲಿ ಒಬ್ಬನು ಸಹಕಾರ ಸಂಘದಲ್ಲಿ ಗೊಬ್ಬರ ಹಂಚಿಕೆ ಸಂಬಂಧವಾಗಿ ಏನು ಮಾಡಿದ್ದಾರೆ ಎಂದು ನಿಮಗೆ ನಮ್ಮವರಿಂದಲೇ ಬಂದಿರತಕ್ಕ ಆಪಾದನೆಗಳನ್ನು ದಯಮಾಡಿ ವಿಚಾರ ಮಾಡಿ. ಅವರು ಯಾರೇ ಆಗಿರಲಿ ಅವರಿಗೆ ತಕ್ಕ ಶಿಕ್ಷೆಯನ್ನು ಕೊಡತಕ್ಕ ದೊಡ್ಡ ಜವಾಬ್ದಾರಿಯನ್ನು ತೆಗೆದುಕೊಂಡರೆ, ಯಾರೇ ಆಗಿರಲಿ ತಪ್ಪು ಮಾಡತಕ್ಕಂಥವನು ದುರ್ವ್ಯಾಪಾರದಲ್ಲಿ ಹಣ ಗಳಿಸಿದವನು ಎಚ್ಚರಿಕೆಯಿಂದ ಇರುತ್ತಾನೆ.

ಸ್ವಾಮಿ, ಈ ದೇಶದಲ್ಲಿ ಇತ್ತೀಚೆಗೆ ಜರುಗಿದ ಒಂದು ದೊಡ್ಡ ಘಟನೆ ಎಂದರೆ, ಮೈಸೂರು ದೇಶದ ಗಡಿಯ ವಿಚಾರ. ಮೈಸೂರು-ಮಹಾರಾಷ್ಟ್ರ ಮತ್ತು ಮೈಸೂರು-ಕೇರಳ ಈ ಗಡಿಯ ವಿಚಾರದ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಏಕ ಸದಸ್ಯ ಆಯೋಗ ರಚನೆ ಮಾಡಿದ್ದಾರೆ. ಶಾಸನ ಸಭೆಯಲ್ಲಿ ಜುಲೈ ತಿಂಗಳಿನಲ್ಲಿ ಈ ವಿಷಯ 4 ದಿವಸ ಕಾಲ ದೀರ್ಘ ಚರ್ಚೆಯಾಯಿತು. ಮತ್ತು ಅದಕ್ಕಿಂತ ಹಿಂದೆ ಏಕ ಸದಸ್ಯ ಆಯೋಗ ರಚನೆ ಮಾಡುತ್ತಾರೆ ಎನ್ನುವ ಸುದ್ದಿ ಕೇಳಿದ ಕೂಡಲೆ ಇಡೀ

(ಶ್ರೀ ಎಸ್. ಶಿವಪ್ಪ)

ಉತ್ತರ ಕರ್ನಾಟಕದ 4 ಜಿಲ್ಲೆಗಳಲ್ಲಿ ಎಲ್ಲಾ ಜನ ತಮ್ಮ ಪ್ರತಿಕ್ರಿಯೆಯನ್ನು ತಿಳಿಸಿದ್ದಾರೆ. ಈ ಶಾಸನಸಭೆಯ 47 ಜನ ಸದಸ್ಯರು ತಮ್ಮ ರಾಜೀನಾಮೆ ಪತ್ರವನ್ನು ಕಾಂಗ್ರೆಸ್ ಅಧ್ಯಕ್ಷರಿಗೋ ಅಥವಾ ಯಾರಿಗೋ ಸಲ್ಲಿಸಿದರು. ಮತ್ತು ಮಂತ್ರಿಮಂಡಲದಲ್ಲಿ 3 ಜನ ಮಂತ್ರಿಗಳು ಕೂಡ ಏಕ ಸದಸ್ಯ ಆಯೋಗದಿಂದ ದೇಶದ ಹಿತಕ್ಕೆ ಧಕ್ಕೆ ಆಗುತ್ತದೆ ಎಂದು ರಾಜೀನಾಮೆ ಪತ್ರವನ್ನು ಸಲ್ಲಿಸಿದರು. ಶಾಸನ ಸಭೆಯಲ್ಲಿ ಈ ವಿಚಾರ ಗಭೀರವಾಗಿ 3 ದಿವಸ ಕಾಲ ಚರ್ಚೆ ಆದ ನಂತರ 4ನೇ ದಿವಸ ದೇಶದ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಉತ್ತರ ಕೊಡತಕ್ಕಂಥ ಕಾಲದಲ್ಲಿ ಈ ಏಕ ಸದಸ್ಯ ಆಯೋಗ ನೇಮಕ ಮಾಡುವಾಗ ಟರ್ಮ್ಸ್ ಆಫ್ ರೆಫರೆನ್ಸ್ ಚರ್ಚೆ ಆಗದೆ, ಅದಕ್ಕೆ ನಮ್ಮ ಒಪ್ಪಿಗೆಯನ್ನು ಪಡೆಯದೆ ಆ ಕಮೀಷನ್ನನ್ನು ಮಾಡಿದ್ದೇ ಆದರೆ, ನಾವು ಅದಕ್ಕೆ ಪ್ರತಿಭಟನೆಯನ್ನು ಸೂಚಿಸುತ್ತೇನೆ ಎಂದು ಹೇಳಿದರು: ಅವರೇ ಆ ಸಮಯದಲ್ಲಿ ಹೀಗೆ ಹೇಳಿದರು : "It can have no direction and positiveness nnless the terms of reference were decided upon before the Commission can be appointed or comes into operation." ಪುನಃ ಅದೇ ಮುಖ್ಯಮಂತ್ರಿಗಳು ಹೇಳಿದರು ; "Unless the terms of reference are agreed to or decided or known, it would not be correct to appoint either one man commission or three man commission or any commission at all." ಹಾಗೆ ಹೇಳಿದಂಥ ಶ್ರೀಮಾನ್ ನಿಜಲಿಂಗಪ್ಪನವರು ಇವೊತ್ತಿನ ದಿವಸ ಏನು ಒಂದು ಟರ್ಮ್ಸ್ ಆಫ್ ರೆಫರೆನ್ಸ್ ಇಲ್ಲದೆ ಯಾವ ರೀತಿ ಈ ಏಕ ಸದಸ್ಯ ಆಯೋಗಕ್ಕೆ ಒಪ್ಪಿಕೊಂಡರು ? ಅವರು ಈ ಸಭೆಗೆ ಜವಾಬ್ದಾರರಾಗಿದ್ದಾರೆ, ಆದ್ದರಿಂದ ಈ ಸಭೆಗೆ ಕಾರಣ ಹೇಳಬೇಕು. ಮುಂದುವರಿಯುತ್ತಾ ಮೈಸೂರು ಮಂತ್ರಿಮಂಡಲ ಏನು ನಿರ್ಧಾರ ಮಾಡಿದೆ ಎಂದು ಹೇಳಿದರು. "The Government of Mysore take strong exception to the proposal now before the Government of India for appointing a one man commission to deal with the issues relating to the inter-State boundaries between Mysore, Maharashtra and Kerala. The reopening of settled issues instead of examining minor adjustments which can be mutually beneficial is bound to arouse passions and release forces which will have to be reckoned with in the context of the General Elections due to be held in February 1967, as could be seen from the strong reactions in all parts of the State against this proposal. While disapproving of the tactics employed by the Maharashtra State to bring pressure to bear upon the Government of India to appoint this Commission, the Government of Mysore desire to make it clear beyond all doubt that the people of this State do not agree to the reopening of these issues in the present context and will resolutely oppose all claims by whomsoever made upon the territories which by right belong to Karnataka. The Government of Mysore would request Government of India in all seriousness to desist from taking any hasty step in the matter of setting up a one-man commission." ಹೀಗೆ ತಮ್ಮ ಮಂತ್ರಿಮಂಡಲದಲ್ಲಿ ಆದ ತೀರ್ಮಾನವನ್ನು ಸಭೆಗೆ ತಿಳಿಸಿದರು. ಅವರು ದೇಶದ ಗಡಿ ವಿಚಾರದಲ್ಲಿ ಏನೊಂದು ಅಭಿಪ್ರಾಯವನ್ನು ಹೊಂದಿದ್ದಾರೆ ಮತ್ತು ಅವರು ಏನು ಸೂಚನೆ ಮಾಡುತ್ತಾರೆ ಎಂದು ಈ ಸಭೆಯಲ್ಲಿ ಹೇಳಿದರು. ಶಾಸನ ಸಭೆಗೆ ಒಂದು ಆಶ್ವಾಸನೆ ಕೊಟ್ಟರು. ಅದು ಏನೆಂದರೆ ಟರ್ಮ್ಸ್ ಆಫ್ ರೆಫರೆನ್ಸ್ ಇಲ್ಲದೇ ಆಯೋಗವನ್ನು ಒಪ್ಪಿಕೊಳ್ಳುವುದಿಲ್ಲ ಎಂದು. ಇವೊತ್ತು ತಾವು ಟರ್ಮ್ಸ್ ಆಫ್ ರೆಫರೆನ್ಸ್‌ಗೆ ಒಪ್ಪದೆ ಈ ಏಕ ಸದಸ್ಯ ಆಯೋಗವನ್ನು ಒಪ್ಪಿಕೊಂಡು ಬಂದಿದ್ದೀರಿ. ಹಾಗೆ ಮಾಡಿ ಈ ಸಭೆಯ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ. ಈ ಸಭೆ ನಿಮ್ಮಲ್ಲಿ ವಿಶ್ವಾಸವನ್ನು ಹೊಂದಿಲ್ಲ. ಅದಕ್ಕೆ ತಕ್ಕ ಪ್ರಾಯಶ್ಚಿತ್ತವಾಗಿ, ಮುಖ್ಯಮಂತ್ರಿ ಪದವಿಯ ತ್ಯಾಜ್ಯ ಮಾಡಿ ವಾಪಸ್ಸು ಆಗಬೇಕು, ಇಲ್ಲವೇ ಹೋದರೆ ಶಾಸನ ಸಭೆಗೆ ಬರುವುದಕ್ಕೆ ಹಕ್ಕು ಇಲ್ಲ ಎಂದು ಸಭಾಪತಿಗಳೇ, ನಿಮ್ಮ ಮೂಲಕ ಹೇಳುತ್ತೇನೆ. ಇದು ರಾಷ್ಟ್ರದ ಗಡಿ ವಿಚಾರ. 2 ಕೋಟಿ 40 ಲಕ್ಷ ಕನ್ನಡಿಗರ ಆಶೆ ಆಕಾಂಕ್ಷೆಗಳನ್ನು ರಕ್ಷಣೆ ಮಾಡಬೇಕಾದ ಈ ಸರ್ಕಾರ ಗಡೀ ರಕ್ಷಣೆ ಬಗ್ಗೆ ಇಂತಹ ಒಂದು ಅನ್ಯಾಯವನ್ನು ಮಾಡಿ ಶಾಸನ ಸಭೆಗೆ ಕೊಟ್ಟ ಆಶ್ವಾಸನೆಯನ್ನು, ಭರವಸೆಯನ್ನು ಇವೊತ್ತಿನ ದಿವಸ

ಡಿಲ್ಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಒತ್ತಾಯಕ್ಕೋ ಪ್ರಧಾನ ಮಂತ್ರಿಗಳ ಒತ್ತಾಯಕ್ಕೋ ಒಳಗಾಗಿ ದೇಶದ ಹಿತವನ್ನು ಸಾಧನೆ ಮಾಡುವುದರಲ್ಲಿ ನೀವು ವಿಫಲರಾಗಿದ್ದೀರಿ. ತಾವು 2 ಕೋಟಿ 40 ಲಕ್ಷ ಜನ ಕನ್ನಡಿಗರ ವಿಶ್ವಾಸ ಕಳೆದುಕೊಂಡಿದ್ದೀರಿ. ಆದ್ದರಿಂದ ರಾಜಿನಾಮೆ ಕೊಡಲೇಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಮಹಾರಾಷ್ಟ್ರದಲ್ಲಿ ಎಂತಹ ಒತ್ತಾಯವೇ ಬರಲಿ, ಆ ಜನ, ಸರ್ಕಾರ ಎಷ್ಟು ಗಟ್ಟಿಮುಟ್ಟಾಗಿ ನಿಂತಿದ್ದಾರೆ ನೋಡಿ. ಅಲ್ಲಿ ಶಾಸಕರು ಸರ್ಕಾರದ ಹಿಂದೆಯೇ ನಿಂತಿದ್ದಾರೆ. ಈ ವಿಚಾರದಲ್ಲಿ ಅಲ್ಲಿಯ ಶಾಸನಸಭೆ ಮಂಡಿಸಿದ ನಿರ್ಣಯವನ್ನು ಹೊತ್ತು ಮಹಾರಾಷ್ಟ್ರ ನಾಯಕರು ಡಿಲ್ಲಿಗೆ ತೆರಳಿದರು. ಈ ಶಾಸನ ಸಭೆಯಲ್ಲಿ ಈ ವಿಚಾರವಾಗಿ ಒಂದು ನಿರ್ಣಯ ಮಾಡಬೇಕು, ಆ ನಿರ್ಣಯಕ್ಕೆ ನೀವು ಬದ್ಧರಾಗಿರಬೇಕು, ಆ ನಿರ್ಣಯವನ್ನು ನೀವು ಹೊತ್ತು ಕೊಂಡು ಹೋಗಬೇಕು ಎಂದು ಹೇಳಿದಾಗ, ಶ್ರೀಮಾನ್ ನಿಜಲಿಂಗಪ್ಪನವರು ಎಲ್ಲವನ್ನೂ ನನಗೆ ಬಿಡಿ, ನನ್ನನ್ನು ನಂಬಿ, ನಾನು ಸಮರ್ಥನೆ ಮಾಡುತ್ತೇನೆ, ಏಕ ಸದಸ್ಯ ಆಯೋಗಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಇಲ್ಲದೆ ಒಪ್ಪುವುದಿಲ್ಲ ಎಂದು ಆಶ್ವಾಸನೆ ಕೊಟ್ಟರು. ಆದರೆ ಅವರು ಇವೊತ್ತಿನ ದಿವಸ ಹಿಂದುಗಡೆಯಿಂದ ಬಾಕು ಹಾಕಿದರೆ ಎಂತಹ ಘೋರ ಅಪರಾಧ ಮಾಡಿದಂತಾಯಿತು ? 47 ಜನ ಸದಸ್ಯರು ಈ ಸಂಬಂಧದಲ್ಲಿ ರಾಜೀನಾಮೆ ಸಲ್ಲಿಸಿದರು. ಏಕ ಸದಸ್ಯ ಆಯೋಗವನ್ನು ರಚನೆ ಮಾಡಿ ಏನು ಮಹಾರಾಷ್ಟ್ರ ಮತ್ತು ಮೈಸೂರು ಗಡಿ ಸಮಸ್ಯೆಯು 10 ವರ್ಷದ ಹಿಂದೆ ತೀರ್ಮಾನ ಆಯಿತೋ ಅದನ್ನು ಪುನಃ ಯೋಚನೆ ಮಾಡುವುದಕ್ಕೆ ಅಥವಾ ಪುನಃ ವಿಮರ್ಶೆ ಮಾಡುವುದಕ್ಕೆ ಏನೇನೂ ಸಾಧ್ಯವಿಲ್ಲ ಎಂದು ತಾವು 47 ಜನ ಕೂಡ ಏಕಕಂಠದಿಂದ ಘೋಷಣೆ ಮಾಡಿದಿರಿ. ಸರ್ಕಾರದವರನ್ನು ನಾನು ಕೇಳುತ್ತೇನೆ, ನಿಮ್ಮ ಆತ್ಮ ಮುಟ್ಟಿ ಹೇಳಿ, ಇವೊತ್ತಿನ ದಿವಸ ನೀವು ಜವಾಬ್ದಾರಿಯನ್ನು ಹೇಗೆ ನಿರ್ವಹಿಸುತ್ತೀರಿ ?

ಶ್ರೀ ಎ. ಜೆ. ದೊಡ್ಡಮೇಟಿ.—ರಾಜೀನಾಮೆ ಕೊಟ್ಟವರ ಪೈಕಿ ನಾನೂ ಒಬ್ಬ. ರಾಜೀನಾಮೆ ಕೊಟ್ಟಿದ್ದು ಏಕ ಸದಸ್ಯ ಆಯೋಗದ ನೇಮಕಕ್ಕೆ ವಿರುದ್ಧವಾಗಿ ಅಲ್ಲ. ಟರ್ಮ್ಸ್ ಆಫ್ ರೆಫರೆನ್ಸ್‌ಗೆ ವಿರುದ್ಧವಾಗಿ ಕೊಟ್ಟಿದ್ದು. ಟರ್ಮ್ಸ್ ಆಫ್ ರೆಫರೆನ್ಸ್ ಎಸ್.ಆರ್.ಸಿ. ರಿಪೋರ್ಟ್ ಬೇಸಿಸ್ ಮೇಲೆ ಎಂದು ಹೇಳಿರುವುದರಿಂದ ನನ್ನ ರಾಜೀನಾಮೆ ವಾಪಸ್ಸು ಬಂತೇ ಹೊರತು, ಎಸ್.ಆರ್.ಸಿ. ರಿಪೋರ್ಟ್ ಒಪ್ಪದೇ ಇದ್ದರೆ, ಖಂಡಿತ 47 ಮಂದಿಯೂ ರಾಜೀನಾಮೆ ಕೊಟ್ಟು ಹೊರಗೆ ಹೋಗುತ್ತಿದ್ದರು.

ಶ್ರೀ ಎಸ್. ಶಿವಪ್ಪ.—ನಮ್ಮ ಮಾನ್ಯ ಮಿತ್ರರಾದಂತಹ ದೊಡ್ಡಮೇಟಿಯವರು ಹೇಳುತ್ತಿದ್ದಾರೆ, ಏಕಸದಸ್ಯ ಆಯೋಗ ರಚನೆಮಾಡುವುದು ಮತ್ತು ಅದಕ್ಕೆ ಟರ್ಮ್ಸ್ ಆಫ್ ರೆಫರೆನ್ಸ್ ಯಾರೂ ಕೊಟ್ಟಿಲ್ಲ ಎಂದು. ಟರ್ಮ್ಸ್ ಆಫ್ ರೆಫರೆನ್ಸ್ ಅವರೇ ಮಾಡಬೇಕೆಂದು ನಿರ್ದಿಷ್ಟವಾದ ಆದೇಶ ಕೊಟ್ಟಿದ್ದಾರೆ. ಈ ರೀತಿ ಹೇಳಿ ಜನತೆಯನ್ನು ಮೋಸ ಮಾಡಬೇಡಿ. ಇವತ್ತಿನ ದಿವಸ ದೊಡ್ಡಮೇಟಿಯವರು ವಚನ ಪರಿಪಾಲನೆ ಮಾಡುವುದಾದರೆ ರಾಜಿನಾಮೆ ಕೊಡಲಿ.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ನನ್ನ ವಚನವನ್ನು ಪೂರ್ತಿಯಾಗಿ ಪರಿಪಾಲನೆ ಮಾಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಕಮಿಷನಿಗೆ ಟರ್ಮ್ಸ್ ಆಫ್ ರೆಫರೆನ್ಸ್ ಇಂತದ್ದೇ ಎಂದು ನಿರ್ದಿಷ್ಟವಾಗಿ ಹೇಳಿದ್ದು ಸತ್ಯದ ವಿಷಯ. ಇನ್ನು ಮೇಲೆ ಶ್ರೀ ದೊಡ್ಡಮೇಟಿಯವರು ಏನು ಮಾಡುತ್ತಾರೆಂಬುದನ್ನು ಅವರಿಗೆ ಬಿಟ್ಟಿದ್ದೇನೆ. ಶ್ರೀ ದೊಡ್ಡಮೇಟಿಯವರಿಗೆ ಕನ್ನಡ ಜನಗಳ ಮೇಲೆ ಅಭಿಮಾನ ಇದೆ. ಆದರೆ ಅದು ಕಾರ್ಯರೂಪವನ್ನು ತಾಳಬೇಕು. ಏನೋ ಬಹುಶಃ ಆ ವಿಚಾರದಲ್ಲಿ ಬಹಿರಂಗವಾಗಿ ಪ್ರತಿಭಟನೆ ಮಾಡಿದರೆ, ಅವರ ಮಿತ್ರರ ಮನಸ್ಸಿಗೆ ನೋವಾಗಬಹುದು ಎಂದಿರಲೂ ಬಹುದು. ಏಕೆಂದರೆ, ಚುನಾವಣೆ ಹತ್ತಿರದಲ್ಲೇ ಬಂತು. ಅದಕ್ಕೆ ನಾನು ಜವಾಬ್ದಾರನಲ್ಲ.

ಸಭಾಪತಿಯವರೇ, ದೇಶದ ಮುಖ್ಯಮಂತ್ರಿಯವರು ಈ ಸಭೆಯಲ್ಲಿ ಜುಲೈ 28 ನೇ ತಾರೀಖಿನ ದಿವಸ ಉತ್ತರ ಕೊಡುತ್ತಾ ಈ ಸಭೆಗೆ ಏನೊಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆಂದರೆ, ಟರ್ಮ್ಸ್ ಆಫ್ ರೆಫರೆನ್ಸ್ ಇಲ್ಲದೆ ಹೋದರೆ ನಾವು ಏಕಸದಸ್ಯ ಆಯೋಗವನ್ನು ಒಪ್ಪುವುದಿಲ್ಲ ಎಂದು. ಅಂತಹ ಮಾತನ್ನು ಅವರು ಪರಿಪಾಲಿಸದೆ, ಈ ಮಂತ್ರಿಮಂಡಲದ ವಿಶ್ವಾಸವನ್ನು ಈ ಸಭೆಯ ವಿಶ್ವಾಸವನ್ನು ಹಾಗೂ ಮೈಸೂರು ದೇಶದ ಜನತೆಯ ವಿಶ್ವಾಸವನ್ನು ಕಳಕೊಂಡಿದ್ದಾರೆಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಸ್ವಾಮಿ ಸಭಾಪತಿಯವರೇ, ಮೈಸೂರು ದೇಶದಲ್ಲಿ ಜೀವ ಎಷ್ಟು ಪವಿತ್ರವೋ, ಅಷ್ಟೇ ನಮ್ಮ ಕನ್ನಡ ಪ್ರದೇಶಗಳನ್ನು ನಾವು ರಕ್ಷಿಸಬೇಕಾದುದು ಪವಿತ್ರವಾಗಿದೆ. ಇದರಲ್ಲಿ ಸರ್ಕಾರ 100 ಕ್ಕೆ 100 ರಷ್ಟು ವಿಫಲವಾಗಿದೆ. ಇವತ್ತಿನ ದಿವಸ ಮೈಸೂರು ದೇಶದ ಜನತೆಯ ಪ್ರೀತಿಯನ್ನು ಕಳೆದುಕೊಂಡಿದೆ. ಈ ಮೈಸೂರು ಸರ್ಕಾರ 1962 ನೇ

(ಶ್ರೀ ಎಸ್. ಶಿವಪ್ಪ)

ಇಸವಿಯಿಂದೀಚೆಗೆ, ಅಧಿಕಾರಾರೂಢರಾಗಿ ಆಳತಕ್ಕ ಸಮಯದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಅನ್ಯಾಯ ಮಾಡಿದ್ದಾರೆ, ನೀರಾವರಿ ಕ್ಷೇತ್ರದಲ್ಲಿ ಅನ್ಯಾಯ ಮಾಡಿದ್ದಾರೆ, ಆಹಾರವನ್ನು ಅಭಿವೃದ್ಧಿ ಮಾಡತಕ್ಕ ಕ್ಷೇತ್ರದಲ್ಲಿ ಅನ್ಯಾಯ ಮಾಡಿದ್ದಾರೆ ಮತ್ತು ದೇಶದ ಗಡಿಯನ್ನು ರಕ್ಷಣೆ ಮಾಡತಕ್ಕ ಬಗ್ಗೆ ದ್ರೋಹವನ್ನು ಮಾಡಿದ್ದಾರೆ. ಯಾವ ಒಂದು ದೃಷ್ಟಿಕೋನದಿಂದ ನೋಡಿದರೂ ಕೂಡ ಮೈಸೂರು ದೇಶದ ಜನತೆಯ ವಿಶ್ವಾಸವನ್ನು ಇವರು ಕಳೆದುಕೊಳ್ಳತಕ್ಕ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಹೋದ ಎರಡು ವರ್ಷಗಳ ಕೆಳಗೆ ಈ ಸರ್ಕಾರದ ಮೇಲೆ ನಾವು ಚಾರ್ಜ್ ಶೀಟ್ ಹಾಕಿದ್ದೆವು. ಲೋಕೋಪಯೋಗಿ ಇಲಾಖೆಯ ಮೇಲೆ, ಖಾದಿ ಬೋರ್ಡು ಇಲಾಖೆಯ ಮೇಲೆ ಸುಮಾರು 16 ಆಪಾದನೆಗಳನ್ನು ಕೊಟ್ಟಿದ್ದೆವು. ಆದರೆ ಅದು ವಿಚಾರಣೆಯಾಗಲಿಲ್ಲ. ಈ ಒಂದು ವಿಚಾರಣೆ ಮಾಡಿದ್ದಾದರೆ ದೇಶದಲ್ಲಿರತಕ್ಕ ಯೋಜನೆಯನ್ನಾಗಲೀ, ದೇಶದಲ್ಲಿ ಆಗುವಂತಹ ಹಣದ ದುರುಪಯೋಗವನ್ನಾಗಲೀ ತಡೆಗಟ್ಟಬಹುದಾಗಿತ್ತು. ಆದರೆ ಅದನ್ನು ಅಲ್ಲಗಳೆದು ಹಾಗೇ ಇಟ್ಟುಕೊಂಡಿರುವುದರಿಂದ ದೇಶದಲ್ಲಿ ಯಾರು, ಏನು ಬೇಕಾದರೂ ಮಾಡಬಾರದುದನ್ನು ಮಾಡಿ ಜಯಿಸಬಹುದು ಎಂಬುದನ್ನು ಮಾಡಿ ತೋರಿಸಿಕೊಟ್ಟಿದ್ದಾರೆ. ಇವತ್ತಿನ ದಿವಸ ಜನರಿಗೆ ದೇಶದಲ್ಲಿ ಏನು ಬೇಕಾದರೂ ಮಾಡಬಹುದು ಎಂಬ ಮನೋವೃತ್ತಿಯನ್ನು ರಕ್ಷಣೆ ಮಾಡಿಕೊಂಡು ಬಂದಿದ್ದೀರಿ. ಇಂದು ದೇಶದಲ್ಲಿ ಲಂಚದ ದೇವತೆ ಬೆಳೆದು ನಿಂತು ಬಸವನಾಗಿ ಊರನ್ನೆಲ್ಲಾ ತಿಂದು, ನಮ್ಮ ಊರಿನವರ ಹೊಲವನ್ನೆಲ್ಲಾ ತಿಂದು ಬಿಟ್ಟು ಇವತ್ತು ನಿಮ್ಮ ಹೊಲಕ್ಕೇನೇ ನುಗ್ಗಲು ಪ್ರಾರಂಭಿಸಿದೆ. ಅದಕ್ಕೆ ಮೂಗಿನ ಧಾರವನ್ನು ಹಾಕಲು ನೋಡಿದರೆ, ಅದು ನಿಮ್ಮನ್ನೇ ತಿವಿಯುತ್ತಿದೆ. ಅದನ್ನು ನೀವು ಚೆನ್ನಾಗಿ ಪೋಷಿಸಿಕೊಂಡು ಬಂದಿದ್ದೀರಿ. ನೀವು ರಾಜ್ಯಲಕ್ಷ್ಮಿಯನ್ನು ಆಳುವ ಶಕ್ತಿಯನ್ನು ಕಳೆದುಕೊಂಡಿದ್ದೀರಿ. ನೀವೆಲ್ಲಾ ಮುದುಕರಾಗಿದ್ದೀರಿ. ಇವತ್ತಿನ ದಿವಸ ಈ ಆಡಳಿತದ ರಥವನ್ನು ಎಳೆಯತಕ್ಕ ಶಕ್ತಿ ಇಲ್ಲ. ಶ್ರೀಮಾನ್ ನಿಜಲಿಂಗಪ್ಪನವರೂ ಮುದುಕರಾಗಿದ್ದಾರೆ. ಅವರು ಹೇಳುತ್ತಾರೆ, ನಾವು ಮುದುಕರಾದರೆ ನಾವು ಕರುಗಳನ್ನು ಕಟ್ಟಿದ್ದೇವೆಂದು. ನಾನಾದರೂ ಹೇಳುತ್ತೇನೆ, ಈ ಕರುಗಳ ಕೈಯಲ್ಲಿ ಕೊಡಬೇಡಿ ಎಂದು. ಒಂದು ಐದು ವರ್ಷದ ರಜಾ ತೆಗೆದುಕೊಳ್ಳಿ. ಆಗ ಒಳ್ಳೆಯ ಬಲವಾದ ಎತ್ತುಗಳಿಂದ ಶುದ್ಧವಾಗಿ ಈ ರಾಜ್ಯದ ಲಕ್ಷ್ಮಿಯ ರಥವನ್ನು ಎಳೆಯಬಹುದು. ಇವತ್ತಿನ ದಿವಸ ಅದನ್ನು ಮಾಡಲಿಕ್ಕೆ ಮೈಸೂರಿನ ಜನ ತಯಾರಾಗಿದ್ದಾರೆ. ಇವತ್ತಿನ ದಿವಸ ನಿಮ್ಮ ಅನ್ಯಾಯವನ್ನು ನೋಡಿ ಜನರು ಬೇಸತ್ತಿದ್ದಾರೆ. ಇವತ್ತು ದೇಶದಲ್ಲಿ ಸತ್ಯವಂತನಿಗೆ ಬಾಳತಕ್ಕ ದಾರಿಯಿಲ್ಲ. ವ್ಯಾಪಾರಸ್ಥನಾಗಲೀ ಅಧಿಕಾರಿಯಾಗಲೀ, ರಾಜಕೀಯ ವ್ಯಕ್ತಿಯಾಗಲೀ, ಅವನು ಸತ್ಯವಂತನಾಗಿ ಬಾಳತಕ್ಕ ಸಂದರ್ಭವಿಲ್ಲ. ಅವನು ಇವತ್ತು ಮಾಡಬಾರದುದನ್ನು ಮಾಡಬೇಕಾಗುತ್ತದೆ, ಜೂಜುಗಾರನಾಗಿ ಇರಬೇಕಾಗುತ್ತದೆ. ಅಂಥವನಿಗೆ, ಅಂಥ ವ್ಯಕ್ತಿಗೆ ದೇಶದಲ್ಲಿ ಮಹತ್ವವಿದೆ. ಅಂಥವನನ್ನು ಸರ್ಕಾರ ಮತ್ತೂ ಪ್ರೋತ್ಸಾಹಿಸಿಕೊಂಡು ಬರುತ್ತಿದೆ. ಸತ್ಯ ಮಾಯವಾಗಿದೆ, ಧರ್ಮ ಮಾಯವಾಗಿದೆ. ನಿಷ್ಪಕ್ಷಪಾತದ ವ್ಯಕ್ತಿಗೆ ಸಮಾಜದಲ್ಲಿ ಜಾಗವಿಲ್ಲ. ವಿದ್ಯಾರ್ಥಿಗಳು ಇವತ್ತಿನ ದಿವಸ ಬೀದಿ ಬೀದಿ ಅಲೆಯುತ್ತಿದ್ದಾರೆ. ವಿದ್ಯಾರ್ಥಿ ತನ್ನ ಭವಿಷ್ಯವನ್ನು ಕಾಣಲಾರದವನಾಗಿದ್ದಾನೆ. ನಿಮ್ಮ ಕೈಕೆಳಗೆ ಇರತಕ್ಕ ಎನ್. ಜಿ. ಒ. ಗಳ ಹೊಟ್ಟೆಪಾಡನ್ನು ಸರಿಮಾಡತಕ್ಕ ಶಕ್ತಿ ಈ ಸರ್ಕಾರಕ್ಕೆ ಇಲ್ಲ. ಅವರು ಇವತ್ತಿನ ದಿವಸ ಸರ್ಕಾರದವರಲ್ಲಿ ಮೊರೆ ಇಡುತ್ತಿದ್ದಾರೆ; ಆದರೆ, ಸರ್ಕಾರ ಅದನ್ನು ತಡೆಗಟ್ಟುತ್ತೇವೆಂದು ಹೇಳುತ್ತಿದ್ದಾರೆ. ಅಂತೆಯೇ ಅನೇಕ ಅಧಿಕಾರವರ್ಗದವರು—ಅದರಲ್ಲೂ ಮೊನ್ನೆ ಜೂನಿಯರ್ ಇಂಜಿನಿಯರುಗಳು ತಮ್ಮ ಹೊಟ್ಟೆಪಾಡಿಗೋಸ್ಕರ ರಾಜಿನಾಮೆ ಕೊಟ್ಟಿದ್ದಾರೆ. ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ತರೆ ಅಲ್ಲಾಡಿಸುತ್ತಿದ್ದಾರೆ. ಈ ರೀತಿಯಾಗಿ ಸರ್ಕಾರದವರು ಅನೇಕ ವಿಚಾರದಲ್ಲಿ ಜನತೆಯ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ನೀವು ಹೇಳುತ್ತಿದ್ದೀರಿ, ಸಮಾಜವಾದವನ್ನು ಸ್ಥಾಪಿಸುತ್ತೇವೆ, ಸುಖೀರಾಜ್ಯವನ್ನು ಸ್ಥಾಪನೆ ಮಾಡುತ್ತೇವೆ ಎಂದು. ಆದರೆ ನಾನಾದರೂ ಕೇಳುತ್ತೇನೆ—ನೀವು ಎಷ್ಟು ಮಟ್ಟಿನ ಸಮಾಜವಾದವನ್ನು, ಸುಖೀ ರಾಜ್ಯವನ್ನು ಸ್ಥಾಪನೆ ಮಾಡಿಕೊಂಡು ಬಂದಿದ್ದೀರಿ? ಇವತ್ತಿನ ದಿವಸ ಸಮಾಜವಾದದ ಹೆಸರಿನಲ್ಲಿ 10 ವರ್ಷಗಳ ಹಿಂದೆ ಯಾವ ದೊಡ್ಡ ಕೈಗಾರಿಕೋದ್ಯಮಿ, ಬಂಡವಾಳಶಾಹಿ ಇದ್ದನೋ, ಅವನ ಐಶ್ವರ್ಯ, ಅವನ ಸಂಪತ್ತು ಜಾಸ್ತಿಯಾಗಿ ಅಂಥವರ ಸಂಖ್ಯೆ ಬೆಳೆಯುತ್ತಾ ಬಂದಿದೆ. ಆದರೆ ಇವತ್ತಿನ ದಿವಸ ಅರ್ಧ ಹೊಟ್ಟೆಯಿಂದ, ಹಸಿವಿನಿಂದ ಸಾಯುತಕ್ಕ ಜನರ ಸಂಖ್ಯೆ ದೇಶದಲ್ಲಿ ಏರುತ್ತಾ ಹೋಗುತ್ತಿದೆ. ಇದನ್ನು ನಾವು ಕಂಡು ಕಂಡೂ ಸುಮ್ಮನಿದ್ದೇವೆ. ಇದಕ್ಕೆಲ್ಲಾ ನೀವು ಪ್ರೋತ್ಸಾಹ ಕೊಟ್ಟುಕೊಂಡು ಬರುತ್ತಿದ್ದೀರಿ. ಇದಕ್ಕೆಲ್ಲಾ ನೀವು ಹೊಣೆ. ಇವತ್ತಿನ ದಿವಸ ಮೈಸೂರಿನ ಜನತೆ, ಈ ಐದು ವರ್ಷದ ಅಂಧಕಾರದ ಆಡಳಿತದಲ್ಲಿ ಪಡಬಾರದ ಕಷ್ಟದ ಹೊಣೆ ನಿಮ್ಮ ಮೇಲೆ ಬಿದ್ದಿದೆ. ಈ ಅಂಧಕಾರದಿಂದ ಜನತೆಯು ನಿಮ್ಮಲ್ಲಿ ವಿಶ್ವಾಸವನ್ನು ಕಳೆದುಕೊಂಡಿದೆ. ನಾಳೆ ಮಹಾ

ಚುನಾವಣೆ ಹತ್ತಿರ ಬರುತ್ತಿದೆ. ಈ ದೇಶದ ಮುಖಂಡರು ಮಾಡುತ್ತಿರುವ ದುರ್ಗತಿಯನ್ನು ಬದಲು ಮಾಡಲು ದೇಶದ ಜನ 20 ವರ್ಷದಿಂದ ಏಕಪ್ರಕಾರವಾಗಿ ಅಧಿಕಾರವನ್ನು ನಡೆಸಿ ದೇಶವನ್ನು ದಿವಾಳಿತನದ ಕಡೆಗೆ ಒಯ್ದಿರುವವರನ್ನು ಕೆಲವೇ ತಿಂಗಳಲ್ಲಿ ಕೆಳಗಿಳಿಸಿ ಮೈಸೂರು ದೇಶದ ಆಡಳಿತವನ್ನು ಬದಲಾವಣೆ ಮಾಡಿದರೆ ಸರ್ಕಾರದಲ್ಲಿ ನಂಬಿಕೆ ಬರುತ್ತದೆ. ಅಂಥ ಕಾಲದಲ್ಲಿ ಇಂದು ಆಳುವ ಪಕ್ಷದವರಾದ ನೀವು ವಿರೋಧ ಪಕ್ಷದವರಾಗಿ ಬಂದಾಗ್ಗೆ—ಈಗಲೇ ಒಂದು ಆಶ್ವಾಸನೆ ನಾನು ಕೊಡುತ್ತೇನೆ—ನಾವು ನಿಮ್ಮನ್ನು ಬಹು ಚೆನ್ನಾಗಿ ನೋಡಿಕೊಳ್ಳುತ್ತೇವೆ. ಆಗಿನ ನಿಮ್ಮನ್ನೊಳಗೊಂಡಿರುವ ವಿರೋಧ ಪಕ್ಷಕ್ಕೆ ಸೂಕ್ತ ಗೌರವ ಸಲ್ಲಿಸುತ್ತೇವೆ ಎಂದು ಹೇಳುತ್ತೇನೆ. ಕೊನೆಯದಾಗಿ ಹೇಳುವುದೇನೆಂದರೆ, ಈ ಸರಕಾರ ಈ ಮಂತ್ರಿಮಂಡಳ ಈ ಸಭೆಯ ವಿಶ್ವಾಸಕ್ಕೆ ಯೋಗ್ಯವಾಗಿಲ್ಲ ಆದುದರಿಂದ ಮಂತ್ರಿಮಂಡಳ ರಾಜೀನಾಮೆ ಕೊಡಬೇಕು ಎಂದು ಹೇಳುತ್ತೇನೆ. ಸರಕಾರ ಹಾಗೆ ಮಾಡುತ್ತದೆ ಮತ್ತು ಈ ಅವಿಶ್ವಾಸ ನಿರ್ಣಯವನ್ನು ಮನ್ನಣೆ ಮಾಡುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಸ್ವಾಮಿ, ಈಗ ಸಭೆಯ ಮುಂದೆ ಮಂಡಿಸಲ್ಪಟ್ಟಿರುವ ಈ ನಿರ್ಣಯವನ್ನು ಅನುಮೋದಿಸುತ್ತಾ ಎರಡು ಮಾತು ಹೇಳಲು ಬಯಸುತ್ತೇನೆ. ಮೊದಲು ನಮ್ಮ ಕನ್ನಡ ರಾಜರಾಜೇಶ್ವರಿಗೆ ವಂದಿಸುತ್ತೇನೆ. ಕನ್ನಡ ಜನತೆಯ ಹೆಸರಿನಲ್ಲಿ ರಾಜ್ಯಭಾರ ನಡೆಸತಕ್ಕಂಥ ನಮ್ಮ ಸ್ನೇಹಿತರಿಗೆ ಒಂದು ಕಿವಿ ಮಾತು ಹೇಳುತ್ತೇನೆ. ಈ ದಿವಸ ಈ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ ಸಂದರ್ಭದಲ್ಲಿ ನಿಮ್ಮಲ್ಲಿ ವಿಶ್ವಾಸ ಇದೆಯೋ, ಅವಿಶ್ವಾಸ ಇದೆಯೋ ಇಲ್ಲವೇ ಎಂಬುದನ್ನು ಯೋಚನೆ ಮಾಡುವುದು ಬೇಡ. ಈ ನಿರ್ಣಯ ವೋಟಿಗೆ ಹಾಕಿದಾಗ ಇದು ಯಾವ ರೀತಿ ತೀರ್ಮಾನವಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳಲು ಬಯಸುತ್ತೇನೆ. ಕನ್ನಡ ನಾಡಿನ ದೇವಿಯ ಪ್ರಸಾದದಿಂದ ಕನ್ನಡ ನಾಡು, ಕನ್ನಡ ಜನತೆಯು ಯಾವ ಒಂದು ವಿಶ್ವಾಸವನ್ನು ನಿಮ್ಮಲ್ಲಿ ಇಟ್ಟಿದ್ದರೋ ಅದು ಇಂದು ಹೇಗೆ ಹೋಯಿತು ? ಯಾವಾಗ ವಿಶ್ವಾಸ ಹೋಯಿತು ?

(*Interruptions*)

Mr. SPEAKER.—Order, order.

(*Interruptions*)

Mr. SPEAKER.—Order, order.

ಶ್ರೀ ಜಿ. ದುಗ್ಗಪ್ಪ.—ಸ್ವಾಮಿ, ಈ ಒಂದು ಗೊಂದಲದ ಪ್ರಸಂಗದಲ್ಲಿ ಒಂದು ಕಥೆ ನೆನಪಿಗೆ ಬರುತ್ತಿದೆ. ಇರತಕ್ಕ ಸಂಗತಿಯನ್ನು ಸತ್ಯವನ್ನು ಹೇಳುವ ಒಬ್ಬ ಚಿಕ್ಕ ಮಗು ಇಂದು ಅವಶ್ಯವಾಗಿ ಬೇಕಾಗಿದೆ. ಕಥೆಯಲ್ಲಿರುವ ಹಾಗೆ ರಾಜನ ಬಟ್ಟೆ ರಾಜನ ಪೋಷಾಕು ಬಹಳ ಚೆನ್ನಾಗಿದೆ ಎಂದು ಹೇಳತಕ್ಕ ನಿಮ್ಮಂಥ ಜನ ಇಂದು ಬೇಕಾಗಿಲ್ಲ. ನಿಜವಾಗಿಯೂ ದೊರೆಯ ಮೈಮೇಲೆ ಬಟ್ಟೆ ಇಲ್ಲ ದೊರೆ ಬೆತ್ತಲೆ ಇದ್ದಾನೆ ಎಂದು ಹೇಳತಕ್ಕ ಸತ್ಯವನ್ನು ನುಡಿಯತಕ್ಕ ಚಿಕ್ಕ ಬಾಲಕ ಇಂದು ಬೇಕು.

ಒಬ್ಬ ಮಾನ್ಯ ಸದಸ್ಯರು.—ಆ ಮಗು ದುಗ್ಗಪ್ಪನವರು.

ಶ್ರೀ ಜಿ. ದುಗ್ಗಪ್ಪ.—ಇದನ್ನು ನಾನು ಅಹಂಭಾವದಿಂದ ಹೇಳುವುದಿಲ್ಲ, ಜಂಭದಿಂದ ಹೇಳುವುದಿಲ್ಲ. ನನ್ನ ಕರ್ತವ್ಯದ ದೃಷ್ಟಿಯಿಂದ ಹೇಳುತ್ತೇನೆ. ಸತ್ಯವಾದುದು ಹೇಳುತ್ತೇನೆ. ಕನ್ನಡ ದೇವಿಯಲ್ಲಿ ನನಗೆ ವಿಶ್ವಾಸ ಇದೆ. ಕನ್ನಡ ಜನತೆಯಲ್ಲಿ ನನಗೆ ವಿಶ್ವಾಸ ಇದೆ. ನಿಮ್ಮಲ್ಲಿ ಜನತೆಯ ವಿಶ್ವಾಸ ಎಂದು ಹೋಯಿತು ? ಕನ್ನಡ ನಾಡಿನ ಗಡಿ ಪ್ರಶ್ನೆ ವಿಚಾರದಲ್ಲಿ ಯುವಕರು ಮುಂದೆ ಬಂದು ಹುಚ್ಚೆದ್ದು ಹೋದರೆ, ಮುದುಕರು ಯೋಚನೆ ಮಾಡಿದರು. ಶ್ರೀಮಾನ್ ದೊಡ್ಡಮೇಟಿಯವರು ಕನ್ನಡ ರಾಜರಾಜೇಶ್ವರಿಯ ಭಕ್ತರು. ಅವರು ನನಗೆ ಒಂದು ಮಾತು ಹೇಳಿದರು. ಎಸ್. ಆರ್. ಸಿ. ಆಧಾರದ ಮೇಲೆ ಏಕಸದಸ್ಯ ಆಯೋಗ ನೇಮಕ ಮಾಡುತ್ತೇವೆಂದು ಹೇಳಿದ್ದಾರೆ ಎಂದು. ಇದು ಯಾವ ನೀತಿ ? ಇದರಿಂದ ಹೇಗೆ ಸಮಾಧಾನವಾಗುತ್ತದೆ ? ಎಸ್. ಆರ್. ಸಿ. ಆಕ್ಟಿನಲ್ಲಿ ಗಡಿ ಹೊಂದಾಣಿಕೆಯ ಬಗ್ಗೆ ಸಂಬಂಧಪಟ್ಟ ರಾಜ್ಯಗಳು ತಮ್ಮ ತಮ್ಮಲ್ಲಿ ಇದನ್ನು ಬಗೆಹರಿಸಿಕೊಳ್ಳಬೇಕು ಎಂಬ ಅಂಶ ಇಲ್ಲವೇ ? ಹೀಗಿದ್ದರೂ, ಏಕಸದಸ್ಯ ಆಯೋಗದ ನೇಮಕ ಏಕೆ ? ನನ್ನ ವಿರೋಧಪಕ್ಷದ ಸ್ನೇಹಿತರು ಯೋಚನೆ ಮಾಡಿ ಪ್ರತ್ಯುತ್ತರ ಕೊಡತಕ್ಕಂಥ ಕಾಲದಲ್ಲಿ ಉತ್ತರ ಕೊಡಲಿ. ಇಂಥ ಒಂದು ಅವಕಾಶ ಎಸ್. ಆರ್. ಸಿ. ಆಕ್ಟಿನಲ್ಲಿ ಇದ್ದರೂ ಸಹ ನಮ್ಮ ನಾಯಕರಾದವರ ಮಾತು ಏನಾಯಿತು ? ಯಾರ ಮಾತಿಗೆ ಇಂದು ಬೆಲೆ ಇದೆ ? ನಮ್ಮ ದೇಶದಲ್ಲಿ ಶಕ್ತಿಗೆ ಮಾತ್ರ ಮನ್ನಣೆ ಇದೆ, ಅಲ್ಲವೆ ಇತ್ತೀಚೆಗೆ ನಡೆದ ಗಡಿ ಘಟನೆಗಳು ಇದನ್ನು ಎತ್ತಿ ತೋರಿಸುತ್ತವೆ ಕನ್ನಡ

(ಶ್ರೀ ಜಿ. ದುಗ್ಗಪ್ಪ)

ಜನ ನಿಮ್ಮಲ್ಲಿ ಇಟ್ಟಿದ್ದ ವಿಶ್ವಾಸವನ್ನು ಕಳೆದುಕೊಂಡಿದೆ ಎಂದಲ್ಲವೆ ? ಈಗಿನ ನಮ್ಮ ಸಭಾ ನಾಯಕರು ಮುಖ್ಯ ಮಂತ್ರಿಗಳಾದವರು ಎಷ್ಟೋ ವರ್ಷದಿಂದ ಏನೇನು ಭಾಷಣ ಮಾಡಿದ್ದಾರೆ, ಏನೇನು ಆಶ್ವಾಸನೆ ಕೊಟ್ಟಿದ್ದಾರೆ ? ನಮ್ಮ ದೇಶದ, ಕನ್ನಡ ನಾಡಿನ ನಿಸರ್ಗ ಸಂಪತ್ತನ್ನು ಉಪಯೋಗ ಮಾಡುತ್ತೇವೆ, ನಾಡಿನ ನದಿ ನೀರನ್ನು ಉಪಯೋಗ ಮಾಡುತ್ತೇವೆ, ನಾಡಿನ ಎಲ್ಲಾ ಭಾಗದ ಗಡಿ ರಕ್ಷಣೆ ಮಾಡುತ್ತೇವೆ, ಗೋವಾ ನಮ್ಮದನ್ನಾಗಿ ಮಾಡುತ್ತೇವೆ, ದೇಶವ ಕೈಗಾರಿಕೆ ಅಭಿವೃದ್ಧಿಗೊಳಿಸುತ್ತೇವೆ, ಆಡಳಿತವನ್ನು ಚೊಕ್ಕಟವಾಗಿ ಮಾಡುತ್ತೇವೆ, ಎಲ್ಲದಕ್ಕಿಂತ ಹೆಚ್ಚಾಗಿ ಕೊನೆಯದಾಗಿ ಹರಿಜನರ ಅಭಿವೃದ್ಧಿ ಕಾರ್ಯ ಮಾಡುತ್ತೇವೆ ಎಂದು ಆಶ್ವಾಸನೆಗಳನ್ನು ಕೊಟ್ಟಿರುವ ರೀತಿ ನೀತಿ ಏನಾಯಿತು ! ಸರಕಾರ ಈ ದಿಶೆಯಲ್ಲಿ ಏನು ಮಾಡಿದೆ ? ಯಾವ ಪುರುಷಾರ್ಥ ಸಾಧಿಸಿದೆ? ನದಿ ನೀರಿನ ಮಾತು ಏನಾಯಿತು ? ಕಾವೇರಿ ನದಿ ನೀರು, ಕೃಷ್ಣಾ ನದಿ ನೀರು ಉಪಯೋಗಿಸುವುದು ಏನಾಯಿತು ! ಕೃಷ್ಣಾ ನದಿ ನೀರಿನ ಬಗ್ಗೆ ಬರಗಾಲದಿಂದ ಕಂಗಾಲಾದ ವಿಜಾಪೂರ ಜಿಲ್ಲೆಯ ಸ್ನೇಹಿತರು ಏನಾದರೂ ಹೇಳುವುದಕ್ಕೆ ಧೈರ್ಯವಿದೆಯೇ ! ಬಳ್ಳಾರಿ ಜಿಲ್ಲೆಯ ಸ್ನೇಹಿತರು ಬೇಕಾದರೆ ಹೇಳಲಿ. ಇದು ಏನಾಯಿತು ? ಈ ಪ್ರಶ್ನೆ ಬಗ್ಗೆ ಬರಿ ಮಾತು ಪ್ರಯೋಜನವಿಲ್ಲ. ಎದೆ ಮುಟ್ಟಿ ನೋಡಿ ಏನು ನಡೆಯುತ್ತಿದೆ, ಏನು ಮಾಡುತ್ತಿದ್ದಾರೆ, ಎಂಬುದನ್ನು ಹೇಳಲಿ. ಬರಿ ಮಾತಿನಲ್ಲಿ ಉತ್ತರ ಕೊಡುವ ಹವ್ಯಾಸ ಬಿಟ್ಟು ಕೇಂದ್ರದಲ್ಲಿ ಶಕ್ತಿ ಇದೆಯೇ ಎಂಬುದನ್ನು ತೋರಿಸುವ ಕಾಲ ಬಂದಿದೆ.

2-00 P.M.

ಸ್ವಾಮಿ, ಈಗ ಸ್ಥಾಪಿಸಿರತಕ್ಕ ಸರ್ಕಾರ ಪಾಪ್ಯುಲರ್ ಗವರ್ನಮೆಂಟ್, ಪ್ರಜಾ ಸರ್ಕಾರ, ಪ್ರಜಾನುರಾಗಿ ಸರ್ಕಾರ. ದೇಶದಲ್ಲಿನ ಜನತೆಯನ್ನು ಕೇಳಿ; ಜನತೆಯ ಪ್ರತಿನಿಧಿಗಳಾದ ನಾವು ಸತ್ಯ ಹೇಳಲಿಕ್ಕೆ ಹಿಂಜರಿಯಬಹುದು. ಅದಕ್ಕೆ ನಾನಾ ಕಾರಣಗಳಿವೆ. ಜನತೆ ಏನು ಹೇಳುತ್ತದೆ ಎಂದು ಕೇಳಿ. ಇವೊತ್ತು ದೇಶದ ಪ್ರಜೆಯ ಒಂದು ಭಾಗ ನಮ್ಮ ಸರ್ಕಾರ ಎಂದು ಹೇಳುತ್ತದೆ. ಒಂದು ಸಣ್ಣ ಸಂಕುಚಿತ ಮಟ್ಟಕ್ಕೆ ಇಳಿದಿದೆ ನಮ್ಮ ಸರ್ಕಾರದ ಪ್ರಜಾನುರಾಗ. ಬನ್ನಿ ಚಿತ್ರದುರ್ಗಕ್ಕೆ. ನಾನು ಭಾಷಣದಿಂದ ಹೇಳಿ ಸಂತೃಪ್ತಿಗೊಳ್ಳುವವನಲ್ಲ. ನಿದರ್ಶನಗಳನ್ನು ಕೊಟ್ಟು ನಿಮ್ಮ ಮುಂದೆ ಹೇಳುತ್ತಿದ್ದೇನೆ. ಈ ದಿವಸ ದೇಶದ ಹೆಸರಿನಲ್ಲಿ, ಕನ್ನಡ ನಾಡಿನ ಹೆಸರಿನಲ್ಲಿ, ಕರ್ಣಾಟಕದ ಹೆಸರಿನಲ್ಲಿ, ಚಿತ್ರದುರ್ಗದ ಹೆಸರಿನಲ್ಲಿ ಎಷ್ಟು ಸಂಘಸಂಸ್ಥೆಗಳು ಅಲ್ಲಿವೆ, 10—15 ವರ್ಷಗಳ ಹಿಂದೆ ಅವು ಏನಿದ್ದವು, ಇವತ್ತು ಅವು ಏನಾಗಿವೆ. ಎಷ್ಟು ಲಕ್ಷ ರೂಪಾಯಿಗಳನ್ನು ಗಳಿಸಿವೆ, ಎಷ್ಟು ಕೋಟಿ ರೂಪಾಯಿಗಳನ್ನು ಗಳಿಸಿವೆ ಯಾವ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿವೆ, ಹೇಗೆ ನಿರ್ವಹಿಸುತ್ತಿವೆ ಎನ್ನುವುದನ್ನು ನೋಡಿ ಬನ್ನಿ ಮಹಾಜನರೇ. ನಾನು ಹೇಳತಕ್ಕದ್ದು ಒಂದು ಸವಾಲು. ಜನತೆ ಅದನ್ನು ನೋಡಲಿ.

ಇವತ್ತು ಯಾವ ಜನ, ಇದು ನನ್ನ ಸರ್ಕಾರ, ನನ್ನ ಸರ್ಕಾರ ಎಂದು ಹೇಳುತ್ತಾರೆ. ಇವತ್ತು ಕನ್ನಡ ನಾಡಿನ ಪ್ರತಿಯೊಂದು ಕೂಸು, ಕೂಸು ತಲೆ ಎತ್ತಿ ಹೇಳಬೇಕು ಇದು ನನ್ನ ಕನ್ನಡನಾಡು ಎಂದು. ಅಂಥ ಸುಮಧುರ ವಾತಾವರಣ ದೇಶದಲ್ಲಿಲ್ಲ. ಇವತ್ತು ನಮ್ಮ ಪಕ್ಕದ ಮನೆ ಹುಡುಗ ನನ್ನ ಸರ್ಕಾರ ಎಂದರೆ ನನ್ನ ಮಗ ನನ್ನ ಸರ್ಕಾರ ಎಂದು ತಲೆ ಎತ್ತಿ ಹೇಳುತ್ತಿಲ್ಲ. ಆ ಒಂದು ಬೆಳವಣಿಗೆ ಬೆಳೆದು ಬಂದಿದೆ, ಆ ಭಾವನೆ ಬೆಳೆದು ಬಂದಿದೆ. ಇದು ಚಿತ್ರದುರ್ಗದಲ್ಲಿ ಎದ್ದು ಕಾಣುತ್ತಿದೆ. ಬೇರೆ ಜಿಲ್ಲೆಗಳಲ್ಲಿ ಎದ್ದು ಕಾಣುತ್ತಿಲ್ಲ ಎಂದು ಯಾರೋ ಹೇಳುತ್ತಾರೆ. ಕನ್ನಡದ ಹೆಸರಿನಲ್ಲಿ ಒಂದು ಸಂಸ್ಥೆ ಇದೆ. ಆ ಸಂಸ್ಥೆಯ ಚಾಲಕರು ಒಬ್ಬರು ಮರಾಮತ್ತು ಇಲಾಖೆಯ ಕಂಟ್ರಾಕ್ಟ್ ದಾರರಾಗಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯ ಒಬ್ಬ ಅಸಿಸ್ಟೆಂಟ್ ಇಂಜಿನಿಯರು ಯಾವ ಒಬ್ಬ ವ್ಯಕ್ತಿಯನ್ನು, ಆ ವ್ಯಕ್ತಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಯಾವ ಕೆಲಸವನ್ನೂ ತೆಗೆದುಕೊಳ್ಳಲು ಅನರ್ಹ. ಇಡೀ ಮೈಸೂರು ರಾಜ್ಯದಲ್ಲಿ ಕೆಲಸ ಮಾಡಲು ಅನರ್ಹ ಎಂದು ಯಾರನ್ನು ಬ್ಲಾಕ್‌ಲಿಸ್ಟ್ ಮಾಡಿದ್ದರೋ ಅದೇ ಅಸಿಸ್ಟೆಂಟ್ ಇಂಜಿನಿಯರ್ ಇವತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್, ಅದೇ ವ್ಯಕ್ತಿ ಲಕ್ಷಾಧೀಶ್ವರನಾದ ಕಂಟ್ರಾಕ್ಟುದಾರ. ದೇಶದ ಹೆಸರಿನಲ್ಲಿ, ನಾಯಕರ ಹೆಸರಿನಲ್ಲಿ, ನಾಯಕರ ನೆರಳಿನಲ್ಲಿ, ನಾಯಕರ ಮುಂದೆ, ನಾಯಕರ ಹಿಂದೆ—ನನಗೆ ಮುಖ್ಯ ಮಂತ್ರಿಗಳ ಬಗ್ಗೆ ನಿಜವಾಗಿ ಆರೋಪಣೆ ಇಲ್ಲ—ನಮ್ಮ ಜಿಲ್ಲೆಯ ಸೂಪರ್ ಚೀಫ್ ಮಿನಿಸ್ಟರ್, ಲೋಕಲ್ ಚೀಫ್ ಮಿನಿಸ್ಟರ್, ಅವರ ವರ್ತನೆ ಹೇಗಿದೆ ಎಂದು ಕೇಳಿ. ಅತ ಒಬ್ಬ ಪ್ರೈವೇಟ್ ಬಸ್ ಅಪರೇಟರ್. ನನಗೆ ಬೇಕಾದ ಅಧಿಕಾರಿ ಇಲ್ಲ, ನನಗೆ ಇಂಥ ಅಧಿಕಾರಿ ಬೇಕು, ನನಗೆ ಬೇಕಾದ ಬಸ್ ರೂಟ್

ಕೊಡಬೇಕು. ಫೋನ್ ಮಾಡಿ. ಆರ್. ಟಿ. ಎ. ಮೀಟಿಂಗ್ ನಡೆಯುವಾಗ ಒಬ್ಬ ಅರ್ಜಿದಾರ ಅಲ್ಲಿ ಹೋಗಿದ್ದಾನೆ. ನಿನ್ನ ಹೆಸರು ಏನು, ಎಲ್ಲಿ ರೂಟ್‌ಗೆ ಹಾಕಿಸ್ತೀರಿ ಎಂದರೆ ಜೋಗ್‌ಫಾಲ್ಸ್-ಶಿವಮೊಗ್ಗ-ಗುಂತಕಲ್ ರೂಟ್ ನನ್ನದು ಎಂದರೆ ಸ್ಯಾಂಕ್ಷನ್ಡ್. ಇನ್ನೊಂದು ವಾರ ನೊ ಆರ್ಗ್ಯುಮೆಂಟ್. ಮುಂದಿನ ವಾರ ಆರ್.ಟಿ.ಎ. ಮೀಟಿಂಗ್. ಅವೇ ಅರ್ಜಿದಾರ. ನಮ್ಮದು ಚಿತ್ರದುರ್ಗ. ಶ್ರೀಶೈಲ ರೂಟ್. ಸಾಂಕ್ಷನ್ಡ್, ಹೋಗು. ಮುಂದಿನ ವಾರ ನನ್ನದು ಒಂದು ಅರ್ಜಿ ಇದೆ ಚಿತ್ರದುರ್ಗದಿಂದ ಧರ್ಮಸ್ಥಳಕ್ಕೆ, ಸಾಂಕ್ಷನ್ ಆಗಿದೆ ಹೋಗು. These are the wordings of the Deputy Commissioner, presiding over the regional transport authority meetings. ಇನ್ನೂ ಒಂದು ತಿಂಗಳಾದ ಮೇಲೆ ಇನ್ನೂ ಒಂದು ಬಸ್ ಪರ್ಮಿಟ್. ಅರ್ಜಿದಾರ ಒಬ್ಬನೇ. ಮೊದಲೇ ಅರ್ಜಿ ಹಾಕಿದ್ದೇನೆ, ಇದು ನನ್ನದು ರೂಟ್ ಇತ್ತೆ ಸ್ವಾಮಿ. ಅರ್ಜಿ ಏನು ? ಚಿತ್ರದುರ್ಗದಿಂದ ತಿರುಪತಿಗೆ ರೂಟ್. ಸಾಂಕ್ಷನ್ ಆಗಿದೆ ಹೋಗು (ನಗು), ಇದು ನಮಗೂ ನಾಯಕರಿಗೂ ಇರತಕ್ಕ ಸಂಬಂಧದ ದುರುಪಯೋಗದ ಚಿಹ್ನೆಯಲ್ಲದೆ ಮತ್ತೆ ಇನ್ನೇನು ? ಇಷ್ಟೇ ಅಲ್ಲ, ಈಗ ಹಿರಿಯೂರಿನಿಂದ ಕೊಯಮತ್ತೂರಿಗೆ ಒಂದು ಬಸ್ ಲೈನ್‌ಗೆ ಅರ್ಜಿ ಹಾಕುತ್ತಿದ್ದಾರೆ.

Mr. SPEAKER.—The hon'ble member will remember that the time allotted to him is over. I would like the whip to note it and adjust the timings.

ಶ್ರೀ ಜಿ. ದುಗ್ಗಪ್ಪ.—ಸ್ವಾಮಿ, ನಮ್ಮ ದೇಶದಲ್ಲಿ ಹಿಂದೆ, ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಸೈನಿಕರಿಗೆ ರಾಜಕಾರಣ ಕೂಡದು. ಎಂದು ಹಿಂದೂಸ್ಥಾನದಲ್ಲಿ ಸೈನಿಕರಿಗೆ ರಾಜಕಾರಣ ಗೊತ್ತಾಯಿತೋ ಅವತ್ತು ಬ್ರಿಟಿಷರು ನಮ್ಮ ದೇಶದಿಂದ ಕಾಲು ತೆಗೆಯಬೇಕು ಎನ್ನುವ ಪ್ರತೀತಿ ಇತ್ತು. ಇದನ್ನು ನಾವು ಓದಿ ತಿಳಿದಿದ್ದೇವೆ. ಇವತ್ತು ಆ ದುರ್ದೈವ ನಮ್ಮ ಸ್ನೇಹಿತರಿಗೆ ಬಂದಿದೆ. ಇವತ್ತು ಆಡಳಿತ ನಿರ್ವಹಣೆಗೆ ಪೋಲೀಸಿನವರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಯಾವ ಅಧಿಕಾರಿಯನ್ನು ದುರುಪಯೋಗ ಮಾಡಿದಾಗ್ಯೂ ನಮಗೆ ವ್ಯಥೆ ಇಲ್ಲ, ಪೋಲೀಸ್ ಇಲಾಖೆಯನ್ನು ತಮ್ಮ ಸ್ವಂತ ಹಿತಕ್ಕಾಗಿ, ತಮಗೆ ಯಾರು ವಿರೋಧವಿದ್ದಾರೆ ಅವರ ಮೇಲೆ ಸೇಡು ತೀರಿಸಲಿಕ್ಕೆ ಬಳಸತಕ್ಕದ್ದನ್ನು ಈ ಸಭೆ ಗಮನಿಸಬೇಕು. (ಕೆಲವು ಸದಸ್ಯರು—ನಾಚಿಕೆಗೇಡು.)

ಸಿರಿಗೆರೆಯಲ್ಲಿ ಸುಮಾರು 20 ವರ್ಷಗಳಿಂದಲೂ ಕೆಲಸ ಮಾಡುತ್ತಿದ್ದೇನೆ. 1946ನೇ ಇಸವಿಯಿಂದಲೂ ಕೆಲಸ ಮಾಡುತ್ತಿದ್ದೇನೆ. ಅದು ಮಾನ್ಯ ಸ್ನೇಹಿತರಿಗೆಲ್ಲ ಗೊತ್ತು. ಈ ದಿವಸ ಅಲ್ಲಿ ಸ್ಪೆಷಲ್ ಪೋಲೀಸನ್ನು ಇಟ್ಟಿದ್ದಾರೆ. ಯಾವ ಸಾರ್ವಜನಿಕ ಸ್ವತ್ತಿಗೆ ತೊಂದರೆ ಬಂದಿದೆ, ಯಾವ ಸಾರ್ವಜನಿಕ ಕಟ್ಟಡಗಳಿಗೆ ಅಲ್ಲಿ ಜಖಂ ಆಗಿದೆ, ಯಾವ ಸಾರ್ವಜನಿಕ ಸಂಸ್ಥೆಗೆ ನಷ್ಟ ಮಾಡಿದ್ದಾರೆ, ಯಾವ ಸಾರ್ವಜನಿಕ ಸಂಸ್ಥೆಯನ್ನು ಹಾಳು ಮಾಡಿದ್ದಾರೆ, ಯಾವ ಸಾರ್ವಜನಿಕ ಸ್ವತ್ತಿಗೆ ಏನು ಧಕ್ಕೆ ಬಂದಿದೆ, ಯಾವ ಕಾರಣಕ್ಕೋಸ್ಕರ ಅಲ್ಲಿ ಇವತ್ತಿನ ದಿವಸ ಸ್ಪೆಷಲ್ ಪೋಲೀಸ್ ಸಿಬ್ಬಂದಿಯನ್ನು ಇಟ್ಟಿದ್ದಾರೆ ಎಂದು ನಾನು ಕೇಳುತ್ತೇನೆ. ನಿಮ್ಮ ಮನಸ್ಸಿಗೆ ಶಾಂತಿ ಇಲ್ಲದೆ ಇದ್ದರೆ ದೇಶದಲ್ಲಿ ಶಾಂತಿ ಇಲ್ಲವೇ ? ಏನು ಇದರ ಅರ್ಥ ? ಕನ್ನಡ ದೇವಿಯ ಹೆಸರಿನಲ್ಲಿ ಎಲ್ಲ ನಡೆಯುತ್ತಿದೆ. ಯಾವ ಕಾರಣಕ್ಕಾಗಿ ಸಿರಿಗೆರೆಯಲ್ಲಿ ಸ್ಪೆಷಲ್ ಪೋಲೀಸ್ ಇಟ್ಟಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ (ವಸತಿ ಮತ್ತು ಸಹಕಾರ ಶಾಖೆಗಳ ಮಂತ್ರಿಗಳು).—ನಿಮ್ಮ ರಕ್ಷಣೆಗೆ ಇರಬಹುದು.

ಶ್ರೀ ಜಿ. ದುಗ್ಗಪ್ಪ.—ಯಾರು ರಕ್ಷಣೆ ಕೇಳಿದ್ದಾರೆ? ಯಾರ ರಕ್ಷಣೆಗೋಸ್ಕರ ಪೋಲೀಸ್ ಇಟ್ಟಿದ್ದಾರೆ, ಯಾರು ಕೇಳಿದರು ? ಇವತ್ತು ಯಃಕಶ್ಚಿತ್ ಅಧಿಕಾರಿ ಒಬ್ಬರು ಅಲ್ಲಿದ್ದಾರೆ. ಅವರ ಮೇಲೆ 27 ಚಾರ್ಜಸ್ ಇವೆ. ಐ.ಜಿ.ಪಿ.ಯವರು ಡಿವಿಜನಲ್ ಕಮಿಷನರಿಗೆ......

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರು ಅವರ ಉದ್ವೇಗ ಪೂರಿತವಾದ ಭಾಷಣದಲ್ಲಿ ಯಃಕಶ್ಚಿತ್ ಪೋಲೀಸ್ ಅಧಿಕಾರಿಯೊಬ್ಬರು ಎಂದು ಉಪಯೋಗಿಸಿದರು. ಅದು ಈ ಸಭೆಯ ಗೌರವಕ್ಕೆ ಧಕ್ಕೆ ತರತಕ್ಕ ಮಾತು. ಆ ಪದ ಪಾರ್ಲಿಮೆಂಟರಿಯೇ ?

ಶ್ರೀ ಎಸ್. ಗೋಪಾಲ ಗೌಡ.—ಯಃಕಶ್ಚಿತ್ ಮಂತ್ರಿಗಳು ಎಂದು ಹೇಳುವುದಿಲ್ಲವೇ ಸ್ವಾಮಿ !

Mr. SPEAKER.—Order, order.

ಶ್ರೀ ಕೆ. ಪುಟ್ಟಸ್ವಾಮಿ.—'ಯಃಕಶ್ಚಿತ್'' ಎನ್ನುವ ಪದ ಪ್ರಯೋಗ ಪಾರ್ಲಿಮೆಂಟರಿ ಪ್ರಯೋಗ ವಲ್ಲ. ಅದು ತುಂಬ ಅಗೌರವಸೂಚಕವಾದ ಪದ. ಆದುದರಿಂದ ಮಾನ್ಯ ಸದಸ್ಯರು ಆ ಪದವನ್ನು ಉಪಯೋಗಿಸಿದ್ದು ಸರಿಯಲ್ಲ. ಆ ವಿಚಾರದಲ್ಲಿ ತಮ್ಮ ತೀರ್ಪನ್ನು ಕೊಡಬೇಕು.

Mr. SPEAKER.—The Chair will give a ruling later.

ಶ್ರೀ ಜಿ. ದುಗ್ಗಪ್ಪ.—ಒಬ್ಬ ಪೋಲೀಸ್ ಅಧಿಕಾರಿ ಮೇಲೆ 27 ಚಾರ್ಜ್‌ಗಳಿವೆ. ಆ ಅಧಿಕಾರಿಯ ಬಗ್ಗೆ ಐ.ಜಿ.ಪಿ. ಅವರು ಡಿವಿಜನಲ್ ಕಮೀಷನರಿಗೆ ಫೋನ್ ಮಾಡಿದರು. Please look here; there are so many charges. You are holding enquiry. In order to enable the enquiry you please see that the concerned officer is kept under suspension. The Divisional Commissioner has to take further action. But there comes a phone call saying "well don't keep him under suspension; see that that man is transferred. It is in the interest of both." I am sorry to say this.

ಇವತ್ತು ನಾನು ಹೇಳುವುದನ್ನು ಬೇಕಾದರೆ ಗೃಹ ಸಚಿವರು ವೆರಿಫೈ ಮಾಡಲಿ. Let the Home Minister verify whether it is true or not and that statement should be placed before the House or if that is not placed, may I request you to keep it on the Table of the House?

ಆಮೇಲೆ ನಮ್ಮ ಜಿಲ್ಲೆಯ ದೌರ್ಭಾಗ್ಯವೋ ಏನೋ, ಅಲ್ಲಿಗೆ ಒಬ್ಬ ದಕ್ಷ ಅಧಿಕಾರಿಗಳು ಡೆಪ್ಯುಟಿ ಕಮಿಷನರಾಗಿ ಬಂದರು, ಅಲ್ಲಿ ಯೋಗ್ಯರಾದವರಿಗೆ ಸ್ಥಳವಿಲ್ಲ. ದಾವಣಗೆರೆಯಲ್ಲಿ ಒಂದು ರಸ್ತೆ ಕ್ಲೋಸ್ ಮಾಡಿದರು. ಅಲ್ಲಿಗೆ ಡೆಪ್ಯುಟಿ ಕಮಿಷನರ ಸಿಬ್ಬಂದಿ ಸಮೇತ ಹೋಗಿ ದಾರಿ ಬಿಡಿ, ರಸ್ತೆ ಕ್ಲೋಸ್ ಮಾಡಬೇಡಿ ಎಂದು ಹೇಳಿದರು. ಆದರೆ ಹಾಗೆ ಹೇಳಿದ ಮೂರೂಮುಕ್ಕಾಲು ಗಂಟೆಯೊಳಗಾಗಿ ಆ ಡೆಪ್ಯುಟಿ ಕಮಿಷನರಿಗೆ ವರ್ಗವಾಯಿತು. ನಮ್ಮ ಒಬ್ಬ ಮುಖಂಡ ರಿಲೀಫ್ ಕೆಲಸ ಮಾಡಿಸಿದ, ಅದಕ್ಕೆ ಸಂಬಂಧಪಟ್ಟ ಬಿಲ್ಲನ್ನು ಈಗಲೇ ಕೊಡುತ್ತೀರಾ ಎಂದು ಕೇಳಿದ. The D.C. said that he would send the S.D.O. to verify whether the work was done properly and then pass the bill. The S.D.O. who was a very efficient officer went to the spot and found that no work had been turned out. ಅಲ್ಲಿ ನೋಡಿದರೆ ಕೆಲಸವೇನೂ ಆಗಿರಲಿಲ್ಲ. ಅದರಂತೆ ರಿಮಾರ್ಕ್ಸ್ ಬರೆದರು. The D.C. said that the bill could not be passed because the S.D.O. had reported that no work was turned out. After that, the Deputy Commissioner received a phone and he was asked to pass the bill. The D.C. said: Sir, here is the report of the S.D.O. and he says that no work is turned out. How can the bill be passed when no work is done. "You please contact the S.D.O."

Then, the S.D.O. was contacted. He said: Sir, I have visited the spot and seen it myself; no work has been turned out."

"Some how see that the bill is paid" was the instruction. The officer said, if Government issues such orders, the amount may be paid. ಆದರೆ ಇಂಥ ದಕ್ಷ ಅಧಿಕಾರಿಯನ್ನು ಜಿಲ್ಲಾ ಕಛೇರಿ ಎದುರಿನಲ್ಲಿ ಬೇವಿನ ಮರದ ಕೆಳಗೆ ಕೇವಲ ಮೂರೂಮುಕ್ಕಾಲು ಗಂಟೆಯೊಳಗೆ ವರ್ಗಮಾಡಿಸುವುದಾಗಿ ಹೇಳಿ ಒಂದು ತಿಂಗಳಿನೊಳಗೆ ವರ್ಗ ಮಾಡಿಸಿದರು. ಆಡಳಿತ ಎಷ್ಟು ಶಿಥಿಲವಾಗಿದೆಯೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದು. ಅಧಿಕಾರಿಗಳು ಯಾರಾದರೂ ತಮಗೆ ಬೇಕಾದವರಾಗಿದ್ದರೆ ಅವರು ಸೀನಿಯರ್ ಆಗಿರಲಿ ಅಥವಾ ಜೂನಿಯರ್ ಆಗಿರಲಿ, ಯಾರೇ ಆಗಲಿ ಅವರಿಗೆ ಬೇಕಾದ ಅನುಕೂಲ ಮಾಡಿಕೊಡುತ್ತಾರೆ. ಮೊನ್ನೆ ತಾನೆ 10-11-66 ರಲ್ಲಿ ಕೈಗಾರಿಕಾ ಇಲಾಖೆಯಲ್ಲಿ ಒಂದು ಆರ್ಡರಾಗಿದೆ. Planning-cum-some officer, has now been taken to the Cadre of Industries and Commerce. In 1956 he was only a first division clerk. All of a sudden in 1966 November 10, he becomes a Deputy Director in the Industries Department, overlooking the seniority of so many other people.

Frustration has crept in the administration on account of this. Who is responsible for this? I am sure, officers are not responsible for this; it is the fault of that individual who takes such wise decisions,— the minister in charge of the portfolio. Another reason is harbouring the corrupt officers. I cannot give a better example of the corruptness of the officers than the R.T.O. against whom a series of allegations have been made. ಚಿತ್ರದುರ್ಗ ಜಿಲ್ಲೆಯಲ್ಲಿ ಒಬ್ಬ ಅಧಿಕಾರಿಯಿಂದ ಅನ್ಯಾಯವಾಗಿದೆ, ಎಂದು ನನ್ನ ಮಿತ್ರರಾದ ಅರಸ್‌ರವರಿಗೆ ಹೇಳಿದೆ, ಅವರು ವಿಚಾರಿಸುತ್ತೇನೆಂದು ಹೇಳಿದರು. What is the outcome of that? I phone to the Chief Secretary. I told him that the Vigilance Commissioner had come there and enquired and serious allegations have been made. He asked me whether I was a lawyer. I said I was only a public man. He said that he will pass on the papers to the Home Secretary. He took action and passed on the papers. What is the outcome of it? One fine morning I see in the papers that the person has been posted to Gulbarga as R,T.O. My goodness!

ಸ್ವಾಮಿ, ಹರಿಜನರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ಪ್ರಗತಿ ಬಹಳ ಚೆನ್ನಾಗಿ ಸುಧಾರಿಸುತ್ತಿದೆ. ನಮ್ಮ ಹಣಕಾಸಿನ ಮಂತ್ರಿಗಳು ಇಲ್ಲೇ ಇದ್ದಾರೆ, ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು ಅವರಿಗೆ ಅಭಿನಂದನೆ ಮಾಡುತ್ತೇನೆ. ಅವರು ಅದಕ್ಕೆ ಅರ್ಹರು. ಮೂರೂವರೆ ಕೋಟಿ ರೂಪಾಯಿಗಳನ್ನೇನೋ ಕೊಟ್ಟಿದ್ದಾರೆ. ಆದರೆ ಅದು ಖರ್ಚಾಗುತ್ತಿದೆಯೇ? ಏನು ಮಾಡುತ್ತಿದ್ದೀರಿ? ಹತ್ತು ಜನರು ಸೇರಿ ಒಂದು ಸೊಸೈಟಿ ಮಾಡಿಕೊಂಡು ಅವರವರೇ ಪ್ರೆಸಿಡೆಂಟರನ್ನು ಆರಿಸಿಕೊಳ್ಳುತ್ತಾರೆ. ಆದರೆ ಹರಿಜನರ ಸೊಸೈಟಿಗೆ ಅಧ್ಯಕ್ಷರನ್ನು ಆರಿಸುವ ಅಧಿಕಾರವಿಲ್ಲ, ಹೀಗಿದೆ ಕಾನೂನು. ಹೀಗಾಗಿ ಈ ಹಣ ಇನ್ನೂ ಖರ್ಚಾಗಿಲ್ಲ. 17 ಜನ ಗೆಜೆಟೆಡ್ ಅಧಿಕಾರಿಗಳನ್ನು ಏನೋ ಒಂದು ನೆಪ ಮಾಡಿಕೊಂಡು ಮನೆಗೆ ಕಳಿಸಿದರು. ಆದರೆ ಇನ್ನ್ಯಾವ ಕೋಮಿನ ಅಧಿಕಾರಿಗಳಿಗೂ ಹೀಗೆ ಮಾಡಿಲ್ಲ. ಅವರಿಗೆ ಎಂದಿಗೂ ಮನೆಗೆ ಕಳಿಸಲು ಅವಕಾಶ ಕೊಡುತ್ತಿರಲಿಲ್ಲ. ನಾವು ನಿರ್ವೀರ್ಯರಾಗಿ ವಿಷಣ್ಣವದನರಾಗಿ ಕಣ್ಣುಕಣ್ಣು ಬಿಟ್ಟುಕೊಂಡು ಆ 17 ಜನರನ್ನು ಮನೆಗೆ ಕಳಿಸಬಾರದು ಎಂದು ಬೇಡಿಕೊಂಡಿದ್ದರೂ ಏನೂ ಆಗಲಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಅಡ್ವೈಸರಿ ಕಮಿಟಿ ರಚನೆಯಾಗಿದೆ. ಇದರಲ್ಲಿ ಒಂದು ಬುದ್ಧಿವಂತಿಕೆ ನಡೆದಿದೆ. ಅದರಲ್ಲಿ ಹಿಂದುಳಿದ ವರ್ಗದ ಒಂದು ಕೋಮಿನವರು ಇಲ್ಲವೇ ಇಲ್ಲ, ಉದ್ದೇಶಪೂರ್ವಕವಾಗಿ ಹೀಗೆ ಆಗಲು ಅವಕಾಶಮಾಡಿದ್ದಾರೆ. ಅಕಸ್ಮಾತ್ ನಾವು ಕೆಲವರು ಇಲ್ಲಿ ಸದಸ್ಯರಾಗಿದ್ದೇವೆ, ಆದರಿಂದ ಸ್ವಲ್ಪ ಅವಕಾಶವಾಗಿದೆ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸಂಬಂಧಪಟ್ಟ ಸಮಿತಿಯ ಸಭೆ ಪ್ರಾರಂಭಿಸಬೇಕೆಂದು ಮುಖ್ಯ ಮಂತ್ರಿಗಳು ಬಂದರು, ಅಲ್ಲಿ ನಾನು ಇತರ ಸದಸ್ಯರು, ಉಪಾಧ್ಯಕ್ಷರು, ಅರಣ್ಯ ಖಾತೆ ಸಚಿವರು ಕುಳಿತಿದ್ದೆವು. ಮುಖ್ಯ ಮಂತ್ರಿಗಳು ಅಲ್ಲಿಗೆ ಬರುತ್ತಾರೆಂದು ಸಂಬಂಧಪಟ್ಟ ಸೆಕ್ರೆಟರಿಗಳು ಬಹಳ ಸಿಸ್ತಾಗಿ ಬಂದಿದ್ದರು. ಅಜೆಂಡಾ ತಯಾರಾಗಿತ್ತು. ಆದರೆ, "ಅದೆಲ್ಲಾ ಏಕೆ, ನಿಮ್ಮ ತೊಂದರೆಯೇನಿದೆ, ಏನಾಗಬೇಕು ಹೇಳಿ, ಎಲ್ಲಾ ಮಾಡೋಣ", ಎಂದು ಮುಖ್ಯ ಮಂತ್ರಿಗಳು ಹೇಳಿದರು. The Secretary was perplexed and said, 'Sir, there is an Agenda.' The Chief Minister: "Nothing doing." Then, speeches were started and went on for two days. ಆಮೇಲೆ, "ಮಹಾಸ್ವಾಮಿ, ತಾವು ಅಭಿನವ ಬಸವಣ್ಣನವರು, ನಮ್ಮನ್ನು ಉದ್ಧಾರ ಮಾಡಬೇಕು" ಎಂದು ಮುಂತಾಗಿ ಭಾಷಣ ಮಾಡಲು ಪ್ರಾರಂಭವಾಯಿತು. ಒಂದು ದಿವಸ ಪೂರ್ತಿಯಾಗಿ ಭಾಷಣವಾಯಿತು. ಎರಡನೆಯ ದಿವಸವೂ ಇದೇ ರೀತಿ ಆಯಿತು. ಇದರಿಂದ ನನಗೆ ಒಂದು ರೀತಿಯ ಭಾವನೆ ಬಂತು.

Then, I came to the conclusion that there was no use of sitting in that meeting because there was no chance to discuss things and come to conclusions and send recommendations to the Government for the upliftment of S.C. and S.T. I came away.

ಇನ್ನು ನಾನು ಕಾಂಗ್ರೆಸ್ ಸದಸ್ಯರಲ್ಲಿರುವ ಹರಿಜನ ಗಿರಿಜನ ಸದಸ್ಯರು ಹೇಗಿದ್ದಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾವು ಗೊಬ್ಬರ ಇದ್ದಹಾಗೆ. ಈ ಸಂದರ್ಭದಲ್ಲಿ ಪುಟ್ಟಪ್ಪ

(ಶ್ರೀ ಜಿ. ದುಗ್ಗಪ್ಪ)

ನವರ ಕ್ಷಮೆ ಕೇಳಿ ಒಂದು ಕವನವನ್ನು ಹೇಳಲಿಚ್ಛಿಸುತ್ತೇನೆ. ಗೊಬ್ಬರದ ಮೇಲೆ ಬರೆವುದೇ ತಬ್ಬಮರಿ ಕಲಿಕಾಲಕ್ಕೇನೇನು ಬಂದಪುದೊ, ಹರಿಜನಂ ಶೂದ್ರಂ ಶಾರದೆಯ ವೀಣೆಯಂ ಪಿಡಿಯಬಲ್ಲರೇ, ಅಬ್ಬಾ ಕಲಿಕಾಲಕ್ಕೇನೇನು ಬಂದಪುದೋ, ಶೂದ್ರಂ ಮಂತ್ರಿಯಮೇಲೆ ಮುಖ್ಯಮಂತ್ರಿಯ ಮೇಲೆ ಟೀಕೆಯಂ ಮಾಡಲರ್ಹನೇ, ಅಬ್ಬಾ ಕಲಿಕಾಲದಲಿ ಏನೇನು ಬಂದಪುದೋ. ಕಾಂಗ್ರೆಸ್ ಒಂದು ಮರ, ಮಂತ್ರಿಮಂಡಲ ಅದರ ಒಂದು ಹೂವು, ಗೊಬ್ಬರದ ಸಾರಮನೆ ಹೀರಿ ನಲ್‍ಗಬ್ಬದೋಳ್ ಅಡುತ್ತಿರುವ ಮಂತ್ರಿಮಂಡಲವೆಂಬ ಹೂವೇ, ನೀಂ, ಬಿದ್ದು ಗೊಬ್ಬರದೋಳ್ ಒಂದಾಗುವ ದಿನ ಇಂದು ಬಂದಿಹುದು.

ಕೆಲವು ಸದಸ್ಯರು.—ಅಹುದಹುದು ;

[*Laughter*]

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಅಧ್ಯಕ್ಷರೇ, ಈಗಿನ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ಏಕೆ ಬಂದಿದೆ? ಹಿಂದೆ ಎಲ್ಲಾ ಬಂದಿದ್ದಕ್ಕೂ ಇದಕ್ಕೂ ವೈಶಿಷ್ಟ್ಯ ಏನು? ಈ ಅವಿಶ್ವಾಸ ನಿರ್ಣಯ ವನ್ನು ತಂದಿರುವುದರ ಗುರಿ ಏನು? ಇದು ಯಾವ ಗುರಿಯನ್ನು ಮುಟ್ಟುತ್ತದೆ ಎಂಬ ಈ ಅಂಶಗಳ ನ್ನೆಲ್ಲಾ ಗದ್ಯಕಾವ್ಯದ ಧಾಟಿಯಲ್ಲಿ ನಿರೂಪಿಸುವುದಕ್ಕೆ ಬಯಸುತ್ತೇನೆ. ಒಟ್ಟಿನಲ್ಲಿ ಜನರಿಗೆ ಸುಖ ವಾಗಬೇಕೆನ್ನುವುದಾದರೆ ಕಾಂಗ್ರೆಸ್ ಸರ್ಕಾರ ಹೋಗಿ ರೈತ, ಕೂಲಿಗಾರರ ಸರ್ಕಾರ ಬರಬೇಕಾ ಗಿದೆ. ಆದ್ದರಿಂದ ಈ ಅವಿಶ್ವಾಸ ನಿರ್ಣಯ ಬಂದಿದೆ. ಈ ಅವಿಶ್ವಾಸ ನಿರ್ಣಯ ಬರುವುದಕ್ಕೆ ಮುಖ್ಯ ಕಾರಣವೇನೆಂದರೆ, ತಮ್ಮ ಮುಖಾಂತರ ಈ ಸರ್ಕಾರದವರಿಗೆ ಇಷ್ಟು ಮಾತ್ರ ಹೇಳುತ್ತೇನೆ. ಇದಕ್ಕೆಲ್ಲಾ ರಾಜ್ಯ ಸರ್ಕಾರದ ಧೋರಣೆಯೇ ಪ್ರಬಲವಾದ ಕಾರಣವಾಗಿದೆ, ಸಾಮಾನ್ಯ ಜನರನ್ನು ಕಂಡರೆ ಅವರಿಗೆ ಬೆಲೆಯೇ ಇಲ್ಲ, ಅಂತಹ ಜನರು ಅವರಾಗಿದ್ದಾರೆ. ಸಾಮಾನ್ಯ ಜನ ಎಂದರೆ 'ಸೊನ್ನೆ' ಆಗಿದ್ದಾರೆ. ನೀವು ಬಂದ ಮೇಲೆ ನಿಮ್ಮ ಗುರಿ ಏನಿತ್ತು?

1 ಹಳ್ಳಿಗೊಂದು ಕೆರೆಯ ಕಟ್ಟಿ
ಮಳೆಯ ನದಿಯ ನೀರ ತುಂಬಿ
ದಿಕ್ಕಿಗೊಂದು ಭಾವಿ ತೋಡಿ
ತಂತಿ ಶಕ್ತಿ ಯಂತ್ರ ಬಳಸಿ
ಧರೆಯ ಬೆಳೆಗೆ ನೀರನೆರೆದು
ತುಂಬ ಬೆಳೆಯ ಬೆಳೆಯಿರೆಂದು
ನಕ್ಷೆಯಿಂದದಿ
ಹುಯ್ಯಿರೋ ಡಂಗುರವಾ
ಹುಯ್ಯಿರೋ ಡಂಗುರವಾ

ನಾನೇನೋ ಈಗಾಗಲೇ ನನಗೆ ಬೇಕಾಗುವಷ್ಟು ನೀರಾವರಿ ಸೌಕರ್ಯವನ್ನು ಮಾಡಿಕೊಂಡಿದ್ದೇನೆ. ಆದರೆ ನನ್ನ ಸಹೋದ್ಯೋಗಿಗಳಿಗೆ ಇದು ಯಾವುದೂ ಆಗಿಲ್ಲ.

2 ನೀರ ಹಾಯ್ಸಿ ಹುಲ್ಲ ಬೆಳೆದು
ಜಾನುವಾರು ಥಳಿಯ ಸಾಕಿ
ಧರೆಗೆ ಎಲ್ಲ ಹಾಲ ಹರಿಸಿ
ಧೀರರಾಗಿ ಬದುಕಿರೆಂದು
ಹುಯ್ಯಿರೋ ಡಂಗುರವಾ............

3 ಹಳ್ಳಿಗೆಲ್ಲ ಯಂತ್ರ ತಂದು
ಸಾಗಿಗೆಲ್ಲ ಕಸವ ಹೊದಿಸಿ
ಗೊಬ್ಬರ ಉಕ್ಕೆ ಹಸನು ಮಾಡಿ
ಥಳಿಯ ಬೀಜ ಬಿತ್ತಿಕೊಂಡು
ತೀವಿ ಬೆಳೆಯ ಬೆಳೆವುದೆಂದು
ಹುಯ್ಯಿರೋ ಡಂಗುರವಾ...........

4 ಶಾಲೆ ಕಟ್ಟಿ ವಿದ್ಯೆ ಕಲಿತು
ರೈತತನವ ಕಲಿತುಕೊಂಡು
ಯಂತ್ರಗಳನು ಮಾಡಿಕೊಂಡು
ಬಳಕೆಯನ್ನು ತಿದ್ದಿಕೊಂಡು
ಕೆಲಸ ಹಿತವ ಮಾಡಿರೆಂದು
ಹುಯ್ಯಿರೋ ಡಂಗುರವಾ............

5 ಜಾನುವಾರು ಹಕ್ಕಿ ಪಕ್ಷಿ
ಉರಗ, ವ್ಯಾಘ್ರ, ಕೀಟ ನೋಣದ
ವನದ ಬಲದ ಜೀವರಾಶಿ
ಜಾಡು ಬಲ್ಲ ಜಾಡು ಕಲಿತು
ಹಾಲು-ಜೇನು ಹಣ್ಣು—ಧಾನ್ಯ
ಕಾಯಿ-ಸಿರಿಯ ಪಡೆಯಿರೆಂದು
ಹುಯ್ಯಿರೋ ಡಂಗುರವಾ............

6 ರೆಟ್ಟೆ ಶಕ್ತಿ ಮಿತದಿ ಬಳಸಿ
ನರದ ಶಕ್ತಿ ಮಿಗಿಲು ಬಳಸಿ
ಬುದ್ಧಿಮತೆಯ ಚುರುಕುಗೊಳಿಸಿ
ಬದುಕನೆಲ್ಲ ಬೆಳಗಿರೆಂದು
ಹುಯ್ಯಿರೋ ಡಂಗುರವಾ............

7 ಸಿರಿಯ ಗಳಿಸು ಕೆಲಸದಿಂದ
ಕೆಲಸವಿಲ್ದೆ ಸರಿಯು ಇಲ್ಲ
ಸಿರಿಯ ಮೂಲ ಕೆಲಸವಿಹುದು
ಯಂತ್ರ ಕೆಲಸ ಮಾಡಿರೆಂದು
ಹುಯ್ಯಿರೋ ಡಂಗುರವಾ............

8 ರಾಜಕೀಯ ಪ್ರಶ್ನೆಯಲ್ಲ
ನೀತಿಪಾಠ ಪ್ರಶ್ನೆಯಲ್ಲ
ಮಾನುಜ ಕೂಟ ರೀತಿಯಲ್ಲ
ಬಾಳ ಬೇರು ಇಹುದು ಎಂದು
ಹುಯ್ಯಿರೋ ಡಂಗುರವಾ............

9 ಅಣ್ಣ ತಮ್ಮ ಭಾವದೆದೆಗೆ
ಮಾನಸ ಸತ್ವ ಬೆಸೆಯಲಾಗ
ಬುದ್ಧಿ ಶಕ್ತಿ ಬೆಳೆವುದೆಂದು
ಬದುಕ ಬೆಳಕಿಗೆ
ಹುಯ್ಯಿರೋ ಡಂಗುರವಾ........ ...

10 ಸುಲಿಗೆಯಲ್ಲ ಪಾಪವಿಹುದು
ದುರಾಸೆ ಹಿಂದೆ ಹಿಂಸೆ ಇಹುದು
ಹಮ್ಮು ಬಿಮ್ಮು ಇವರ ಚಾಳಿ
ಹೇಡಿತನವು ಇವರ ಕೂಸು
ಹುಯ್ಯಿರೋ ಡಂಗುರವಾ............

11 ಜನರ ಹಿತದಿ ತನ್ನ ಹಿತವ
ಅರಿಯಬಲ್ಲ ವಿದ್ಯದಿಂದ
ಹೃದಯ ಬುದ್ಧಿ ಬೆಸುಗೆ ಮಾಡಿ
ಪಾಪ ಸುಲಿಗೆಗಳನು ನೋಡಿ
ಉರಿದು ತರಿವ ಜನರು ಎಲ್ಲ
ಬದುಕ ಬಾಳ ಬೆಳಗಿರೆಂದು
ಹುಯ್ಯಿರೋ ಡಂಗುರವಾ............

(ಶ್ರೀ ಎಂ. ವಿ. ದೇವ್)

12 ಸುಲಿಗೆಯುವರು ಅಲ್ಪ ಮಂದಿ
ಇವರ ರಾಜ್ಯ ಜನಕೆ ಮುಳಿವು
ಬೆಲೆಯು ಇಲ್ಲ ಜನರು ನಾವು
ಸೊನ್ನೆಯಾಗಿ ಇದ್ದೆವಲ್ತೆ
ತೊತ್ತನಂದದಿ
ಹುಯ್ಯಿರೋ ಡಂಗುರವಾ...........

13 ಮನುಜನಲ್ಲಿ ಗುಣವ ಕಂಡು
ಗುಣಕೆ ದಾರಿ ಮಾಡಿಕೊಟ್ಟು
ಸುಲಿಗೆಯುವರ ದೂರವಿಟ್ಟು
ಪಾಪಗಳನು ಹತ್ತಿ ಇಕ್ಕಿ
ಕೆಡಕಿಗೆಲ್ಲ ಬುದ್ಧಿ ಕಲಿಸಿ
ನಮಗೆ ನಾವೆ ಮತವಹಾಕಿ
ರೈತ-ಕೆಲಸಗಾರ ರಾಜ್ಯ
ಗಳಿಸಿ ಬಾಳ ಬೆಳಗಿರೆಂದು
ಹುಯ್ಯಿರೋ ಡಂಗುರವಾ...........

14 ಇವರ ರೀತಿ ನೀತಿಯುಲ್ಲ
ಸುಲಿಗೆ ಮೋಸ ಇವರ ಜಾಡು
ಇವರ ತೊಡಕ ಕಿತ್ತು ಬಿಸುಟು
ತೊತ್ತು ತನವ ಕಿತ್ತು ಒಗೆದು
ಸಂಪ್ರದಾಯ ತೊಡಕ ತೊರೆದು
ಅಣ್ಣತಮ್ಮ ತನದ ಪಾಯ
ತೋಡಿ ನಾವು ಹದಿಯ ಕಟ್ಟಿ
ಹೊಸತು ಜನರ ರಾಜ್ಯ ಕಟ್ಟಿ
ಸೊನ್ನೆ ಆಗಿ ಇದ್ದ ನಾವು
ಎಲ್ಲ ನಾವೆ ಆಗ್ತಿವೆಂದು
ಹುಯ್ಯಿರೋ ಡಂಗುರವಾ...........

ಇನ್ನು ನಾವು ಎಂಥವರು ಎಂದರೆ :—

2-30 P.M.

ಮುಗಿಲು ಮರೆಯ ಮಿಂಚುವೇಗ
ಆಳತೆ ತೆಗೆದ ಜನರು ನಾವು
ಮಿಂಚಶಕ್ತಿ ಯಂತ್ರ ಕೂಡಿ
ತಂತ್ರದಿಂದ ಅದನು ಬಳಸಿ
ಏನು ಬೇಕು ? ಎಷ್ಟು ಬೇಕು ?
ಎಲ್ಲ ತೆಗೆದ ಜನರು ನಾವು—ಹುಯ್ಯಿರೋ ಡಂಗುರವಾ......

ಇದು ಏನೆಂದರೆ : —ನಾವು ನಮ್ಮ ಶಕ್ತಿಯನ್ನೆಲ್ಲಾ ಕ್ರೋಢೀಕರಿಸಿ ಹೊಸ ಜಗತ್ತನ್ನು ಸೃಷ್ಟಿ ಮಾಡಿ ದೇಶದ ಜನರೆಲ್ಲರಿಗೂ ಅನುಕೂಲ ಮಾಡತಕ್ಕ ಜನರು ನಾವು. ನಿಮ್ಮ ಹಾಗೆ ನೀವೊಬ್ಬರೇ ತಿಂದು ತೇಗಬೇಕೆಂಬ ಜನರು ನಾವಲ್ಲ. ಇನ್ನೂ ಮುಂದಕ್ಕೆ ನೋಡಿ ಹೇಳುತ್ತೇನೆ :—

ಸೃಷ್ಟಿಯಲ್ಲಿ ಮಿಗಿಲು ನಾವು
ಎಲ್ಲ ಬೇಕು ನಮಗೆ ಎಂದು
ಎಲ್ಲ ಮಾಡಬೇಕು ಎಂದು
ಸರ್ವ ಜನಕ್ಕೆ ಮುಟ್ಟಲೆಂದು
ಎಲ್ಲ ನಾವೇ ಆಗ್ತಿವೆಂದು—ಹುಯ್ಯಿರೋ ಡಂಗುರವಾ... ..

ಇಂಥ ಒಂದು ಹೊಸ ತಳಪಾಯದ ಮೇಲೆ ರಾಜ್ಯವನ್ನು ಕಟ್ಟಬೇಕೆಂದಿರತಕ್ಕವರು ನಾವು. ಇನ್ನು ನಾನೀಗ ಹೇಳಬೇಕೆಂದಿರತಕ್ಕದ್ದು ಬಹಳ ಪ್ರಾಮುಖ್ಯವಾದ ವಿಷಯ—ದಯವಿಟ್ಟು ಎಲ್ಲರೂ ಕೇಳಬೇಕು :—

ಸಂಪ್ರದಾಯದ ತೊಡರು ಇನ್ನಿಲ್ಲ
ತೊತ್ತುಗಳ ಹಂಗು ಇನ್ನಿಲ್ಲ
ಹೊಸತುಪಾಯದ ಮೇಲೆ ಏಳ್ವುದು
ಜಗದ ನಿರ್ಮಾಣ
ಸೊನ್ನೆಯಾಗಿದ್ದ ನಾವು ಎಲ್ಲರು
ಎಲ್ಲ ನಾವು ನಾವೇ ಆಗ್ತಿವಿ—ಹುಯ್ಯಿರೋ ಡಂಗುರವಾ......

ಆದರೆ ನಾನಾಗಲೇ ಹೇಳಿದಹಾಗೆ ಯೋಗ್ಯರು ಈ ಕಡೆಯಲ್ಲೂ ಇದ್ದಾರೆ—ಆ ಕಡೆಯಲ್ಲೂ ಇದ್ದಾರೆ. ಅಯೋಗ್ಯರು ಇತ್ತ ಕಡೆಯೂ ಇದ್ದಾರೆ—ಅತ್ತ ಕಡೆಯೂ ಇದ್ದಾರೆ. ಈಗಾಗಲೇ ಬಂಗಾಳದಲ್ಲಿ ಆ ಪಾರ್ಟಿ, ಈ ಪಾರ್ಟಿ ಅನ್ನುವುದು ಹೋಗಿ ಯೋಗ್ಯ ಜನರು ಇರತಕ್ಕ ಒಂದೇ ಪಾರ್ಟಿ ಪ್ರಾರಂಭ ವಾಗುತ್ತಾ ಇದೆ. ಜನರ ಬಾಳನ್ನು ಬೆಳಗಿಸತಕ್ಕ, ಹಸನು ಮಾಡತಕ್ಕ ಪಾರ್ಟಿ ಬರಬೇಕಾಗಿದೆ. ಜನರಿಗೆ ಗುಣವಿದೆಯೇ ಹೊರತು ಪಾರ್ಟಿಗಳಿಗೆ ಗುಣವಿಲ್ಲ. ಯಾವ ಪಾರ್ಟಿಯೆಂದರೇನು ಅದರಲ್ಲಿ ಮುಖ್ಯವಾಗಿ ಗುಣವಂತರಿರಬೇಕೆಂಬುದು ಪ್ರಾಮುಖ್ಯವಾದದ್ದು. ಜನರ ಬಾಳನ್ನು ಹುರುಪಿನಿಂದ ಹಸನು ಮಾಡತಕ್ಕ ಹೊಸ ಜನರು ನಿಷ್ಕಾಮವಂತರಾದ ಜನರು ಆಳುವ ಪಕ್ಷದಲ್ಲಿ ಇರುವಂತಾಗಬೇಕು. ಅಂಥ ಒಂದು ಪಕ್ಷ ಈಗ ಬಂಗಾಳದಲ್ಲಿ ಜನ್ಮತಾಳುತ್ತಿದೆ. ಅಂಥ ಪಕ್ಷ ಇಲ್ಲಿಯೂ ಸಧ್ಯದಲ್ಲೇ ಪ್ರಾರಂಭವಾಗಲಿದೆ. ಆದುದರಿಂದ ನಾನು ಆಳುವ ಪಕ್ಷಕ್ಕೆ ತಿಳಿಸುವುದೇನೆಂದರೆ ಜನರನ್ನು ನಾಳೆ ಆರಿಸುವಾಗ ಯೋಗ್ಯರನ್ನು ನೋಡಿ ಆರಿಸಬೇಕೆಂದು ಹೇಳುತ್ತಿದ್ದೇನೆ. ಹಾಗಿಲ್ಲದೆ ನೀವು ಜನರನ್ನು ಆರಿಸುವುದಾದರೆ ಅವರು ನಾಳೆ ಕೊಡಲಿಯ ಪೆಟ್ಟನ್ನು ತಿನ್ನಬೇಕಾಗುವುದು. ನಿಮ್ಮ ಪಾರ್ಟಿ ಸರ್ಕಸ್ಸಿನಲ್ಲಿ ಮಣ್ಣು ಮುಕ್ಕುತ್ತದೆ. ಆದುದರಿಂದ ಜನರನ್ನು ಯೋಗ್ಯರನ್ನು ನೀವು ಆರಿಸಬೇಕಾದ್ದು ಪಾರ್ಟಿಯ ಅಳಿವು ಉಳಿವಿನ ಪ್ರಶ್ನೆ ಎಂಬುದನ್ನು ನೀವು ಮರೆಯಬಾರದು. ಸಣ್ಣ ಕೋಮಿನವರೆಂದು ಅವರನ್ನು ತಾತ್ಸಾರ ಮಾಡಿದರೆ ನಾಳೆ ಅವರೂ ನಿಮ್ಮನ್ನು ಬೈಯ್ಯುತ್ತಾರೆ. ಹೀಗಾಗೇ ನಮ್ಮ ಸಚಿವ ಮಂಡಲಿಯಲ್ಲೊಬ್ಬರು ಹಿಂದಿನ ಚುನಾವಣೆಯಲ್ಲಿ ಎರಡು ಮೂರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು ಅವರು ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗಲಿಲ್ಲ. ಲಕ್ಷಾಂತರ ರೂಪಾಯಿಗಳನ್ನು ವೃಥಾ ಕಳೆದುಕೊಂಡರು. ಆದುದರಿಂದ ಅಭ್ಯರ್ಥಿಗಳನ್ನು ಆರಿಸುವ ವೇಳೆಯಲ್ಲಿ ಉತ್ತಮರನ್ನು ನೋಡಿ ಆರಿಸಬೇಕೆಂದು ಹೇಳುತ್ತಿದ್ದೇನೆ. ನಾವು ನಾಳೆ ಇಲ್ಲಿಗೇ ಬರಲಿ ಅಥವಾ ಪಾರ್ಲಿಯಮೆಂಟಿಗೇ ಹೋಗಲಿ ನೀವು ಅಲ್ಲಿಗೇ ಹೋದರೆ ನಾನೂ ಪಾರ್ಲಿಯಮೆಂಟಿಗೇ ಬರುತ್ತೇನೆ. ಇಲ್ಲಿ ನಾನು ಮೆಂಬರಾಗುತ್ತೇನೆ ಮುಕ್ಕಣ್ಣಪ್ಪ ಮೆಂಬರಾಗುತ್ತಾನೆ ಅನ್ನುವುದು ಪ್ರಾಮುಖ್ಯವಲ್ಲ. ಒಟ್ಟಿನಲ್ಲಿ ಈಗಿರತಕ್ಕ ಕಾಂಗ್ರೆಸ್ ಪಕ್ಷ ಹೋಗಬೇಕು. ಇಲ್ಲಿ ಅನ್ಯಾಯಗಳನ್ನು ಮಾಡತಕ್ಕ ಶಾಸನ ಸಭಾ ಸದಸ್ಯರು ತೊಲಗಿ ಯೋಗ್ಯತೆಯುಳ್ಳ ಸದಸ್ಯರು ಬರಬೇಕು. ಮುಂದೆ ಈ ಅವಿಶ್ವಾಸ ನಿರ್ಣಯವನ್ನು ಓಟಿಗೆ ಹಾಕತಕ್ಕ ಕಾಲದಲ್ಲಿ ಇದು ಆಡಳಿತ ಪಕ್ಷ, ಇದು ವಿರೋಧ ಪಕ್ಷ ಎಂಬ ತಾರತಮ್ಯ ಮಾಡದೆ ಈ ಸಭೆಯಲ್ಲಿರತಕ್ಕ ಉಭಯ ಪಕ್ಷಗಳವರೂ ಅದಕ್ಕೆ ಓಟು ಮಾಡತಕ್ಕ ಒಳ್ಳೆಯ ಬುದ್ಧಿಯನ್ನು ದೇವರು ತಮಗೆಲ್ಲರಿಗೂ ಕೊಡಲೆಂದು ಹಾರೈಸಿಸುವ ಮುನ್ನ ತಾವೆಲ್ಲರೂ ಯೋಗ್ಯ ಜನರಿರತಕ್ಕ ಸರ್ಕಾರವನ್ನು ರಚಿಸಲು ಸಹಕಾರ ಮಾಡಬೇಕೆಂದು ಕೇಳಿಕೊಂಡು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಕರಿಯಪ್ಪ (ಕನಕಪುರ).—ಮಾನ್ಯ ಅಧ್ಯಕ್ಷರೇ, ಈ ಕೆಲವಾರು ವರ್ಷಗಳ ಆಡಳಿತ ದಲ್ಲಿ ಕಾಂಗ್ರೆಸ್ ಸರ್ಕಾರ ಜನತೆಗೆ ಏನನ್ನು ತಂದು ಕೊಟ್ಟಿತು ಎಂದರೆ, ಬಡತನ, ಆಹಾರದ ಕೊರತೆ ದಾರಿದ್ರ್ಯ, ಸ್ವಜನ ಪಕ್ಷಪಾತ, ದೇಶವನ್ನು ಪರ ರಾಜ್ಯದವರಿಗೊಪ್ಪಿಸಿದ್ದು ಮತ್ತು ಸ್ಪಿರ್ ಓವರ್‌ವರ್ಕ್ಸ್ ಇಷ್ಟು ಮಾತ್ರ. ಮೊನ್ನೆ ಒಂದಾವರ್ತಿ ಮಾನ್ಯ ಮುಖ್ಯ ಮಂತ್ರಿಗಳು ಪಂಚವಾರ್ಷಿಕ ಯೋಜನೆಗಳ ವಿಚಾರವನ್ನು ಪ್ರಸ್ತಾಪಿಸುತ್ತಾ: ಪಂಚವಾರ್ಷಿಕ ಯೋಜನೆಯೆಂದರೆ ಸ್ಪಿರ್‌ಓವರ್ ವರ್ಕ್ಸ್ ತೆಗೆದುಕೊಳ್ಳುವುದು ಮತ್ತು ಪ್ಲಾನುಗಳನ್ನು ವ್ಯತ್ಯಾಸ ಮಾಡುವುದು ಎಂಬುದಾಗಿ ಹೇಳಿದರು—ರಾಜ್ಯಕ್ಕೆ ಇಂಥ ಅನಾಹುತ ಅನ್ಯಾಯಗಳನ್ನು ಮಾಡಿರತಕ್ಕ ಸರ್ಕಾರವನ್ನು ಯಾವ ಬಾಯಿನಿಂದ ಹೇಗೆ ಪ್ರಶಂಸೆ ಮಾಡುವುದು, ಇದಕ್ಕೆ ಬೆಂಬಲವನ್ನು ಕೊಡುವುದಾದರೂ ಹೇಗೆ!

ಕೆಲವು ನೀರಾವರೀ ಕಾಂಗಾರಿಗಳನ್ನು ಕೈಗೊಂಡು ದೇಶದಲ್ಲಿರತಕ್ಕ ಆಹಾರ ಸಮಸ್ಯೆಯನ್ನು ಪರಿಹರಿಸುತ್ತೇವೆಂದು ಹೇಳುತ್ತಾ ಕಾಂಗಾರಿಗಳನ್ನೇನೋ ಕೈಗೊಂಡರು. ಆದರೆ ಅವುಗಳಲ್ಲಿ ಪಿ.ಡಬ್ಲ್ಯು.ಡಿ. ಒಂದನ್ನೂ ಸರಿಯಾಗಿ ನೆರವೇರಿಸದಿರುವುದು ರೈತರಿಗೆ ತುಂಬ ನಿರಾಸೆಯನ್ನುಂಟು ಮಾಡಿದೆ. ಆದರೆ ನನಗೆ ಆಳುವ ಪಕ್ಷದಮೇಲೇನೂ ಆಗ್ರಹವಿಲ್ಲ. ಅವರು ದೇಶದಲ್ಲಿ ಹೀಗೆ ಅನೇಕ

(ಶ್ರೀ ಎಸ್. ಕರಿಯಪ್ಪ)

ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಒಂದನ್ನೂ ಸರಿಯಾಗಿ ಪೂರ್ತಿಮಾಡಿರುವುದಿಲ್ಲ. ಕೆರೆಗಳನ್ನು ಕಟ್ಟಿದ್ದರೆ–ನಾಲೆಗಳನ್ನು ಮಾಡಿಲ್ಲ; ನಾಲೆಗಳನ್ನು ಮಾಡಿದ್ದರೆ ತೂಬುಗಳನ್ನಿಟ್ಟಿಲ್ಲ, ಹೀಗೆ ಇಲ್ಲಿಯವರೆಗೂ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಮಾಡಿದ ಕೆಲಸಗಳೊಂದೂ ನೇರವಾಗಿ ಪ್ರತಿಫಲವನ್ನು ಕೊಡತಕ್ಕ ಮಟ್ಟವನ್ನು ಮುಟ್ಟಲಿಲ್ಲ. ಇವುಗಳಿಂದ ಜನತೆಗೇನು ಪ್ರಯೋಜನವಾಗುತ್ತಿಲ್ಲ. ಇದೇನೇನು ಸರ್ಕಾರದ ನೀತಿ? ಇತ್ತೀಚೆಗೆ ಕೆಲವು ಹೊಸ ನೀರಾವರಿ ಕಾಂಗಾರಿಗಳು ನಡೆದಿದ್ದರೂ ಅವು ಈಗಾಗಲೇ ಒಡೆದು ಹೋಗಿವೆ. ಆ ವಿಚಾರವನ್ನು ಸರ್ಕಾರದವರ ಗಮನಕ್ಕೆ ತಂದರೆ ಸತ್ಯವಾದ ವಿಚಾರವನ್ನು ಅವರು ಅಂತ ನಂಬುತ್ತಿಲ್ಲ—ಅದಕ್ಕೆ ಕಾರಣ ನಂಬಿದರೆ ನಾಳೆ ಜನರು ನಮ್ಮ ಮುಖಕ್ಕೆ ಸಗಣಿ ಹಾಕಬಹುದು, ಭೀತಿಯಿಂದ ಸಹ ಮಾಡಿದ ತಪ್ಪನ್ನು ಒಪ್ಪತಕ್ಕ ಮನೋಭಾವ ಇವರಲ್ಲಿ ಇಲ್ಲ. ನಾವು ಕೇಳತಕ್ಕ ಪ್ರಶ್ನೆಗಳಿಗೆ ಅಸಂಬದ್ಧವಾದ ಸುಳ್ಳು ಉತ್ತರಗಳನ್ನು ಕೊಡುತ್ತಿದ್ದಾರೆ. ಒಂದು ನೀರಾವರಿ ಪ್ರಾಜೆಕ್ಟ್ ಹೊಸದಾಗಿ ನಿರ್ಮಾಣವಾಗಿ ಆರೇ ತಿಂಗಳಾಯಿತ್ತು ಈಗ ಅದು ಒಡೆದುಹೋಗಿ ಸರ್ಕಾರಕ್ಕೆ ಒಂದು ಲಕ್ಷ 65 ಸಾವಿರ ರೂಪಾಯಿಗಳ ಲುಕ್ಸಾನಾಗಿದೆ. ಆ ದುಡ್ಡೆಲ್ಲಾ ಹೊಳೆಯಲ್ಲಿ ಕೊಚ್ಚಿಹೋಯಿತು. ಆದಾಗ್ಯೂ ಆ ಕೆರೆಯು ಒಡದೇ ಇಲ್ಲ ಎಂದು ಸಾಧಿಸುತ್ತಿದ್ದಾರೆ. ಹೀಗೆ ಮರಳವಾಡಿ ಹತ್ತಿರ ಹೊಸದಾಗಿ ಒಂದು ಸೇತುವೆಯನ್ನು ಕಟ್ಟಿದರು ಅದರ ಪ್ಲಾನು ಮತ್ತು ಡಿಜೈನುಗಳು ಸರಿಯಿಲ್ಲದೆ ಅದೂ ಕೂಡ ಕಿತ್ತುಹೋಗಿದೆ. ನಾನು ಮೂರು ವರ್ಷದಿಂದ ನೋಡುತ್ತಿದ್ದೇನೆ. ಪ್ರತಿ ವರ್ಷವೂ ಆ ಸೇತುವೆ ಒಡೆದು ಹೋಗುತ್ತಿದೆ. ಅದನ್ನು ಕಟ್ಟುವ ಕಂಟ್ರಾಕ್ಟರೆ ಸರ್ಕಾರದವರಿಗೆ ಬೇಕಾದವರು. ಅವರು ಮಂಡಲ ಸಮಿತಿಯ ಅಧ್ಯಕ್ಷರು. ಡಿ.ಸಿ.ಸಿ. ಮೆಂಬರ್. ವರ್ಷ ವರ್ಷವೂ ಕೆಲಸ ಸಿಗಲಿ ಎಂಬ ಆಲೋಚನೆಯಿಂದ ಪ್ರತಿ ವರ್ಷ ಒಡೆದು ಹೋಗುವಂತೆ ಕಟ್ಟಿಸುತ್ತಿರಬಹುದು. ಪ್ರತಿ ವರ್ಷವೂ ಎಸ್ಟಿಮೇಟ್ ಮಾಡುತ್ತಿರಬಹುದು ಎಂಬ ಸಂಶಯ ಬಂದಿದೆ, ಇಷ್ಟೇ ಅಲ್ಲ, ಕೆಲವು ಕೆರೆಗಳಲ್ಲಿ ನೀರೇ ಇರುವುದಿಲ್ಲ. ನೀರನ್ನು ಜಮೀನುಗಳಿಗೆ ಬಿಡುವ ಹತೋಟಿ ಸರಿಯಾಗಿರುವುದಿಲ್ಲ. ಐರನ್ ಗೇಟ್ಸ್ ಹಾಕಿ ಎಂದು ಹತ್ತಾರು ವರ್ಷಗಳಿಂದಲೂ ಹೇಳಿದರೂ ಹಾಕಲಿಲ್ಲ. ಮೊನ್ನೆ ಮಾನ್ಯ ನೀರಾವರಿ ಉಪಸಚಿವರು ಐರನ್ ಗೇಟ್ಸ್ ಹಾಕಿದ್ದೇವೆಂದು ಹೇಳಿದರು. ನಾನು ಅಲ್ಲಿ ಹೋಗಿ ನೋಡಿದಾಗ ಹಾಕಿರಲಿಲ್ಲ. ಸುಳ್ಳು ಹೇಳಿ ಗೋಪುರ ಕಟ್ಟುತ್ತಿದ್ದಾರೆ. ಸುಳ್ಳೇ ತಮ್ಮ ಮನದೇವರನ್ನಾಗಿ ಮಾಡಿಕೊಂಡಿದ್ದಾರೆ. ಇಂತಹವರಿಗೆ ಯಾವ ರೀತಿ ಬೆಂಬಲ ನೀಡೋಣ. ಆಹಾರವನ್ನು ಹೆಚ್ಚು ಬೆಳೆಯಬೇಕು. ಅದರ ಬಗ್ಗೆ ಆಗತಕ್ಕಂಥ ಭಾಷಣಗಳನ್ನು ನೋಡಿದರೆ ಆಬಬ್ಬಾ ಎನಿಸುತ್ತದೆ. ಹೆಚ್ಚು ಆಹಾರ ಬೆಳೆಯುವುದಕ್ಕೆ ಕೊಡಬೇಕಾದ ಸೌಲಭ್ಯವನ್ನು ಕೊಡುತ್ತಿದ್ದಾರೆಯೇ? ಬಿತ್ತನೆ ಬೀಜ ದೊರೆಯುವುದು ಕಷ್ಟ. ಕೊಟ್ಟ ಬೀಜಗಳಲ್ಲಿ ಸರಿಯಾಗಿ ಬೆಳೆಯಾಗುವುದಿಲ್ಲ. ಗೊಬ್ಬರ ಕೊಡಿ ಎಂದರೆ ಸಕಾಲದಲ್ಲಿ ಗೊಬ್ಬರ ಕೊಡುವುದಿಲ್ಲ. ಕೆಲವು ಸಾರಿ ನೀರಿನ ಹತೋಟಿ ಸರಿಯಾಗಿಲ್ಲದೆ ಬೆಳೆ ಕೆಡುತ್ತದೆ. ಸಕಾಲದಲ್ಲಿ ಗೊಬ್ಬರ, ಬಿತ್ತನೆ ಬೀಜ ಸಿಗದೆ ಬೆಳೆ ಹಾಳಾಗುತ್ತದೆ. ಇದು ಸರ್ಕಾರದವರು ಹೆಚ್ಚು ಬೆಳೆ ಬೆಳೆಯುವುದಕ್ಕೆ ಹಾಕಿಕೊಂಡಿರುವ ನೀತಿಯೇನು? ನಮ್ಮ ತಾಲ್ಲೂಕಿನಲ್ಲಿ ಇನೂ ಹಲವಾರು ಅಣೆಕಟ್ಟುಗಳು ಆಗಿವೆ. ಕೆಲವು ಅಣೆಕಟ್ಟುಗಳಲ್ಲಿ ಸರಿಯಾಗಿ ನೀರೇ ಬರುವುದಿಲ್ಲ. ಕೆಲವು ಅಣೆಕಟ್ಟುಗಳಲ್ಲಿ ವರ್ಷದಲ್ಲಿ ಒಂದು ತಿಂಗಳೂ ಸರಿಯಾಗಿ ನೀರು ಬರುವುದಿಲ್ಲ. ಈ ರೀತಿಯೆಲ್ಲಾ ಆಗುವುದಕ್ಕೆ ಕಾರಣವೇನು ಎಂದು ಕೇಳಿದರೆ ಅಣೆಕಟ್ಟಿನ ಕೆಲಸ ಇನ್ನೂ ಪೂರ್ತಿಯಾಗಿಲ್ಲವೆಂದು ಉತ್ತರ ಹೇಳುತ್ತಾರೆ. ಚನ್ನಪಟ್ಟಣದಲ್ಲಿ ಈಗಿರುವ ಚೀಫ್-ಇಂಜನೀಯರ್ ಎಗ್ಜಿಕ್ಯೂಟಿವ್ ಇಂಜನಿಯರ್ ಆಗಿದ್ದ ಕಾಲದಲ್ಲಿ ಕೆಲವು ಅಣೆಕಟ್ಟುಗಳು ಆಗಿವೆ. ಯಾವುದರಲ್ಲೂ ಸರಿಯಾದ ವ್ಯವಸ್ಥೆಯಿಲ್ಲ. ಕಂಟ್ರಾಕ್ಟರ್‌ಗಳಿಗೆ ಪ್ರತಿ ವರ್ಷ ಕೆಲಸ ಕೊಡಬೇಕೆನ್ನುವ ಉದ್ದೇಶದಿಂದಲೋ ಅಥವಾ ಸಂಬಂಧಪಟ್ಟ ಇಲಾಖೆಯವರು ಪ್ರತಿ ತಿಂಗಳು, ಪ್ರತಿ ವರ್ಷ ಇಷ್ಟು ಕೆಲಸ ತೋರಿಸದಿದ್ದರೆ ಆಕ್ಷೇಪಣೆ ಬರುತ್ತದೆ ಎಂಬ ಉದ್ದೇಶದಿದಲೋ, ಈ ರೀತಿ ಅಣೆಕಟ್ಟುಗಳನ್ನು ಕಟ್ಟುತ್ತಿರಬಹುದು. ಈ ವಿಚಾರವನ್ನು ಆಲೋಚನೆ ಮಾಡುವುದಾದರೆ ಈ ಸರ್ಕಾರದಲ್ಲಿ ಲವಲೇಶವೂ ನಂಬಿಕೆ ಹುಟ್ಟುವುದಿಲ್ಲ. ಅರ್ಜುನನು ಯುದ್ಧರಂಗದಲ್ಲಿ ಪಾಂಡವರನ್ನು ಕೌರವರನ್ನು ನೋಡಿ ಎಲ್ಲರೂ ನಮ್ಮವರೆ, ಇವರ ಮೇಲೆ ಯಾವ ರೀತಿ ಯುದ್ಧ ಮಾಡುವುದು ಎಂದು ಶ್ರೀ ಕೃಷ್ಣನನ್ನು ಕೇಳಿದನಂತೆ, ಅದೇ ರೀತಿ ಕಾಂಗ್ರೆಸ್‌ನವರು ನಾವು ಮೊದಲು ಒಟ್ಟಾಗಿ ಕೆಲಸ ಮಾಡಿದವರು, ಇವರ ಮೇಲೆ ಈ ರೀತಿ ಆಘಾದನೆ ಮಾಡುವುದಕ್ಕೂ ಮನಸ್ಸು ಬರುವುದಿಲ್ಲ. ಯಮರ್‌ಸನ್ ಎಂಬ ಒಬ್ಬ ವೇಧಾಂತಿ ಹೇಳಿದ್ದಾರೆ, ಎಲ್ಲಾ ಮನುಷ್ಯರೂ ಒಳ್ಳೆಯವರೇ, ಅವರಲ್ಲಿ ಒಂದು ದೆವ್ವ ಸೇರಿಕೊಂಡು ಏನೇನೋ ಚೇಷ್ಟೆ ಮಾಡಿಸುತ್ತದೆ ಎಂದು. ಅದೇ ರೀತಿ ಇವರ ಭೂತಚೇಷ್ಟೆಯ ಕೆಲಸಗಳನ್ನು ಅಗ್ರಹ ಪೂರ್ವಕವಾಗಿ ಖಂಡನೆ ಮಾಡಬೇಕಾಗುತ್ತದೆ. ಕೆಲವು ಅಣೆಕಟ್ಟುಗಳನ್ನು ಕಟ್ಟುವಾಗ, ಕೆಲವು ಜಮೀನುಗಳು ಮುಳುಗಡೆಯಾಗಿವೆ. ಆ

ರೀತಿ ಜಮೀನು ಮುಳುಗಡೆಯಾದವರಿಗೆ 3 ವರ್ಷದಿಂದ ಯಾವ ರೀತಿಯ ಪರಿಹಾರವನ್ನು ಕೊಟ್ಟಿಲ್ಲ. ನಮ್ಮಲ್ಲಿ ಸೀತಲವಾಡಿ ಅಣೆಕಟ್ಟು ಇದೆ. ಇದರ ಕಥೆ ಬಹಳ ಚೆನ್ನಾಗಿದೆ. ಈ ಭಾಗದಲ್ಲಿ ಅಣೆಕಟ್ಟು ಕಟ್ಟಿದ್ದರಿಂದ ಸೋಮಲನಾಯಕ ಎಂಬುವನ ಜಮೀನು ಮುಳುಗಡೆಯಾಯಿತು. ಅವನಿಗೆ ಬೇರೆ ಕಡೆ ಇನ್ನೂ ಜಮೀನು ಕೊಟ್ಟಿಲ್ಲ. ಇದು ಯಾವ ನೀತಿ? ಕೇಳಿದರೆ ಸುಳ್ಳೋ ಪಳ್ಳೋ ಉತ್ತರ ಹೇಳುತ್ತಾರೆ. ಈ ವಿಚಾರವನ್ನು ವಿಷಾದದಿಂದ ಹೇಳಬೇಕಾಗಿದೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಆ ಇಲಾಖೆಯ ಶ್ರೀ ಕಂಠಿಯವರು ಬಂದಿದ್ದಾರೆ. ಸೆಕೆಂಡರಿ ವಿದ್ಯಾಭ್ಯಾಸವನ್ನು ಫ್ರೀ ಮಾಡಿದ್ದೇವೆಂದು ಹೇಳಿದ್ದಾರೆ. ಇವರು ಬೆಟರ್‌ಮೆಂಟ್ ಫೀ ತೆಗೆದುಕೊಳ್ಳುವುದನ್ನು ನೋಡಿದರೆ ಅದು ಮೊದಲನಷ್ಟೇ ಫೀ ಆಗುತ್ತದೆ. ಒಂದು ಕೈಯಲ್ಲಿ ಕೊಡುವುದು, ಮತ್ತೊಂದು ಕೈಯಲ್ಲಿ ಕಿತ್ತುಕೊಳ್ಳುವುದು ಯಾವ ನ್ಯಾಯವೆಂದು ವಿದ್ಯಾಮಂತ್ರಿಗಳನ್ನು ಕೇಳುತ್ತೇನೆ. ಇಲಾಖೆಗಳಿಗೆ ಹೋದ ಕಾಗದ ಪತ್ರಗಳು ಎಲ್ಲಿ ಹೋದವು ಎಂಬುದು ಗೊತ್ತಾಗುವುದಿಲ್ಲ. ಚಿತ್ರದುರ್ಗದಿಂದ ಒಬ್ಬರು ಮಹಿಳೆ ಬಂದು ಹೇಳಿದರು, ನಾನು ಅನೇಕ ಕಾಗದಗಳನ್ನು ಬರೆದು ಸಾಕಾಯಿತು, ಇನ್ನೂ ಉತ್ತರಬಂದಿಲ್ಲವೆಂದು. ಕಾಲಕ್ಕೆ ಸರಿಯಾಗಿ ಇನ್‌ಟರ್‌ವ್ಯೂ ಕೊಡುವುದಿಲ್ಲ, ದಿನಗಟ್ಟಲೆ ಕಾಯಬೇಕು, ಕೆಲವರ ಕಾಗದಗಳು ವಿಲೆಯಾಗಲು ತಿಂಗಳುಗಟ್ಟಲೆ, ವರ್ಷಗಟ್ಟಲೆ ಹಿಡಿಯುತ್ತದೆ. ಈ ವಿದ್ಯಾಭ್ಯಾಸ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಕಾಗದ ಪತ್ರಗಳು ಕಾಲಕ್ಕೆ ಸರಿಯಾಗಿ ತೀರ್ಮಾನವಾಗುತ್ತಿಲ್ಲ. ಅನೇಕರಿಗೆ ಈ ಬಗ್ಗೆ ಜಿಗುಪ್ಸೆಯಾಗುತ್ತಿದೆ. ಪರೀಕ್ಷೆಗಳು ನಡೆಯುವ ವಿಧಾನವನ್ನು ಇದೇ ಸಭೆಯಲ್ಲಿ ಹಲವಾರು ಸಲ ಹೇಳಿದ್ದೇವೆ. ಈಗಿನ ಪರೀಕ್ಷಾ ಪದ್ಧತಿ ಸರಿಯಾಗಿಲ್ಲವೆಂದು ಈ ಹೊಸ ರೀತಿಯಲ್ಲಿ ಪರೀಕ್ಷೆ ಮಾಡುತ್ತಿರುವುದು ನಮ್ಮ ಈಗಿನ ಮಾನ್ಯ ಮಂತ್ರಿಯವರ ಕಾಲದಲ್ಲಿ ಜಾರಿಗೆ ಬಂದಿದೆ. ಇವರ ಕಾಲದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎಷ್ಟು ಜನ ಹುಡುಗರು ಪಾಸಾಗುತ್ತಿಲ್ಲ. ಹೊಸ ಪದ್ಧತಿಗೂ ಮೊದಲಿನ ಪದ್ಧತಿಗೂ ಅಜಗಜಾಂತರ ವ್ಯತ್ಯಾಸವಿದೆ. ಪಾರ್ಟ್ ಸಿಸ್ಟಮ್ ತಂದಿರುವುದರಿಂದ ಮಕ್ಕಳಲ್ಲಿ ಒಂದೊಂದು ಸಲ ಒಂದೊಂದು ಪಾರ್ಟ್ ಪಾಸು ಮಾಡಿಕೊಳ್ಳೋಣ ಎಂಬ ಚಿತ್ತವೃತ್ತಿ ಬೆಳೆಯುವುದಕ್ಕೆ ಅವಕಾಶವಾಗಿದೆ. ಈ ವರ್ಷ ಒಂದು ಪಾರ್ಟು ಮಾಡೋಣ, ಮುಂದಿನ ವರ್ಷ ಇನ್ನೊಂದು ಪಾರ್ಟು ಮಾಡೋಣ ಎನ್ನುವ ಚಿತ್ತವೃತ್ತಿ ಬಂದು ಎಲ್ಲಾ ಪಾರ್ಟುಗಳಲ್ಲಿಯೂ ಪಾಸಾಗುವವರ ಸಂಖ್ಯೆ ತಗ್ಗಿದೆ. ಒಂದು ಪಾರ್ಟಿನಲ್ಲಿ ಒಂದು ಸಲ ಪಾಸಾದರೆ ಮತ್ತೆ ಕಟ್ಟುವುದು ಬೇಡ ಎನ್ನುವುದು ಸರಿಕಂಡರೂ ಕೂಡ, ಚಿಕ್ಕ ಮಕ್ಕಳಲ್ಲಿ ಸೋಮಾರಿಪ್ರವೃತ್ತಿ ಬೆಳೆಯುವುದಕ್ಕೆ ಇದು ಕಾರಣವಾಗಿದೆ. ಇದನ್ನು ಕೂಲಂಕೂಷವಾಗಿ ಪರಿಶೀಲನೆ ಮಾಡಿ, ಈ ಹೊಸ ಪದ್ಧತಿಯನ್ನು ಬದಲಾವಣೆ ಮಾಡದೆ ಹೋದರೆ ಮಕ್ಕಳ ಅಭಿವೃದ್ಧಿ ಸರಿಯಾಗಿ ಆಗುವುದಿಲ್ಲ. ಅದರಿಂದ ತಂದೆ ತಾಯಿಗಳಿಗೆ ಮಕ್ಕಳು ಹೊರೆಯಾಗುತ್ತಾರೆ. ನಾಲ್ಕು ವರ್ಷ ಐದು ವರ್ಷ ಕಾಯ್ದು ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸ್ ಮಾಡಿಕೊಳ್ಳುವ ಪ್ರಸಂಗ ಬಂದಿದೆ. ಈ ಎಸ್.ಎಸ್.ಎಲ್.ಸಿ. ಪರೀಕ್ಷೆ ಈ ಪ್ರಾಂತ್ಯದಲ್ಲಿ ನಡೆಯುವುದಕ್ಕೂ ಮತ್ತೊಂದು ಪ್ರಾಂತ್ಯದಲ್ಲಿ ನಡೆಯುತ್ತಿರುವುದಕ್ಕೂ ವ್ಯತ್ಯಾಸವಿದೆ. ಅದರ ಬಗ್ಗೆ ಆಕ್ಷೇಪಣೆಗಳು, ಇವೆ. ಆ ಆಕ್ಷೇಪಣೆಗಳನ್ನು ಈ ಸಭೆಯಲ್ಲೂ ಮಾಡಿದ್ದೇವೆ. ಈ ಪರೀಕ್ಷಾ ಪದ್ಧತಿಯನ್ನು ಬದಲಾಯಿಸಬೇಕೆಂದು ಎಷ್ಟು ಸಾರಿ ಹೇಳಿದರೂ ಮಾಡುತ್ತಿಲ್ಲ.

ಇನ್ನು ಸಹಕಾರ ಸಂಘಗಳ ಪರಿಸ್ಥಿತಿ ದೇವರಿಗೇ ಗೊತ್ತು. ತುಮಕೂರಿನಲ್ಲಿ ಹೇಗೆ ಈ ಸಹಕಾರ ಸಂಘಗಳು ಕೆಲಸಮಾಡುತ್ತಿವೆ ಎನ್ನುವ ಬಗ್ಗೆ ಒಂದು ಸಾರಿ ಶ್ರೀಮಾನ್ ಲಕ್ಕಪ್ಪನವರು ಪ್ರಶ್ನೆಯನ್ನು ಕಳುಹಿಸಿದ್ದು. ಅಲ್ಲಿರುವ ಸಂಘಗಳಲ್ಲಿ ಮುಕ್ಕಾಲುಪಾಲು ಸಂಘಗಳಲ್ಲಿ ಹಣ ದುರುಪಯೋಗವಾಗಿರುವುದು ಕಂಡುಬಂತು. ನಮ್ಮ ಕನಕಪುರ ತಾಲ್ಲೂಕಿನಲ್ಲಿರುವ ಅರ್ಧಪಾಲು ಸೊಸೈಟಿಗಳಲ್ಲಿ ಹಣ ದುರ್ವಿನಿಯೋಗವಾಗಿವೆ. ಇಂಥಾದ್ದನ್ನೆಲ್ಲಾ ನೋಡದೆ ಕಣ್ಣುಮುಚ್ಚಿಕೊಂಡು ಸಂಬಂಧಪಟ್ಟ ಇಲಾಖೆಯವರು ಕೂತುಕೊಂಡರೆ ಏನು ಮಾಡೋಣ! ಇನ್ನು ನಾರ್ವೆ ಮತ್ತು ಡೆನ್ಮಾರ್ಕ್‌ನಲ್ಲಿರುವ ಪದ್ಧತಿಯಂತೆ ಇಲ್ಲಿಯೂ ಸಹಕಾರ ಸಂಘಗಳನ್ನು ಅಭಿವೃದ್ಧಿಪಡಿಸಬೇಕು, ಅವರ ಮಾರ್ಗಗಳನ್ನೇ ಇಲ್ಲಿಯೂ ಜಾರಿಗೆ ತರಬೇಕೆಂಬ ಇವರ ಆಶೆ ಈಡೇರುವುದು ಯಾವಾಗ! ಇದರ ಮೇಲ್ವಿಚಾರಣೆಯನ್ನು ನೋಡಲು ಸರಿಯಾದ ಅಧಿಕಾರಿ ಒಬ್ಬ ಇರಬೇಕು. ಈಗಿರುವ ಅಧಿಕಾರಿಗಳು ಸಣ್ಣಪುಟ್ಟ ಅಶೋತ್ತರಗಳಿಗೆ ಮನಸೋಲುವ ಕಾರಣ ಅಲ್ಲಿನ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಇವುಗಳನ್ನು ಸರಿಪಡಿಸಬೇಕಾದುದು ಇಲಾಖೆಯವರ ಕರ್ತವ್ಯವಾಗಿದೆ. ಆದರೆ ಎಷ್ಟೋಸಾರಿ ಈ ವಿಚಾರವನ್ನು ನಾವು ಪ್ರಶ್ನೆಗಳ ಮೂಲಕ ಹೇಳಿದರೂ ಆ ಕಡೆ ಇಲಾಖೆಯವರ ಮನಸ್ಸು ಹೋಗಿಲ್ಲ. ಇದು ನಿಜವಾಗಿ ದೇಶದ ದುರಾದೃಷ್ಟವೆಂದೇ ಹೇಳಬೇಕು. ಹೀಗೆ ಒಂದಲ್ಲ, ಎರಡಲ್ಲ, ನಾನಾ ವಿಚಾರಗಳಲ್ಲಿ ದೇಶಕ್ಕೆ ಅಪಚಾರ ಮಾಡುತ್ತಾ ಇರತಕ್ಕಂಥ ಈ ಸರ್ಕಾರ ನಮ್ಮ ಮಾನ್ಯ ಮಿತ್ರರುಗಳು ಹೇಳಿದ ಹಾಗೆ ಬೇಗ ಹೋಗಬೇಕು. ಹಾಗೆ ಹೋಗದಿದ್ದರೆ ದೇಶಕ್ಕೆ ಎಂದೆಂದಿಗೂ ಸುಖವಿಲ್ಲ.

ಇಷ್ಟು ಮಾತುಗಳನ್ನು ಹೇಳಿ ಈ ಅವಿಶ್ವಾಸ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ.

† ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೇ, ಇಂದಿನ ದಿನ ಅನಿವಾರ್ಯವಾಗಿ ನಾವು ಈ ಅವಿಶ್ವಾಸ ನಿರ್ಣಯವನ್ನು ಇಲ್ಲಿ ತರಬೇಕಾಯಿತು. ಇದನ್ನು ಸಮರ್ಥಿಸಬೇಕಾಗಿದೆ. ಏಕೆಂದರೆ ಈಗಾಗಲೇ ಐದು ವರ್ಷಗಳನ್ನು ನಾವು ಇಲ್ಲಿ ಕಳೆದಿದ್ದೇವೆ. ಅನೇಕಸಾರಿ ಆಡಳಿತ ಪಕ್ಷದ ದುರ್ವ್ಯವಸ್ಥೆ, ಪಕ್ಷಪಾತದೃಷ್ಟಿ, ಮತ್ತು ಅನಾದರಣೆಯ ಬಗ್ಗೆ ಸರ್ಕಾರಕ್ಕೆ ತಿಳುವಳಿಕೆ ಕೊಟ್ಟಿದ್ದರೂ ಅದನ್ನು ಅವರು ಸರಿಪಡಿಸುವುದಕ್ಕೆ ಮತ್ತೆ ತಪ್ಪುಮಾಡಿಕೊಂಡಿದ್ದು ಅನೇಕಸಾರಿ ಕಂಡುಬಂದಿದೆ. ಅದರಿಂದ ಅವರಿಗೇನೂ ತೊಂದರೆ ಇಲ್ಲ. ಆದರೆ ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿರುವ ಜನಗಳಿಗೆ ಇವರ ಆಡಳಿತದಿಂದ ಸಹಿಸಲಾರದಷ್ಟು ತೊಂದರೆಯಾಗಿದೆ. ಏಕೆಂದರೆ ಮತ್ತೊಮ್ಮೆ ನಮ್ಮ ನಮ್ಮ ಕ್ಷೇತ್ರಗಳಿಗೆ ನಾವು ಹೋಗುತ್ತೇವೆ, ಅಲ್ಲಿಗೆ ಹೋಗಿ ಏನು ಹೇಳೋಣ ಎಂದು ಈ ಅವಿಶ್ವಾಸ ನಿರ್ಣಯವನ್ನು ತರಬೇಕಾಯಿತು. ಮುಖ್ಯವಾಗಿ ನನ್ನ ಅನುಭವದಲ್ಲಿದ್ದಂತೆ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಒಂದು ದೊಡ್ಡ ನೀರಾವರಿ ಕೆಳಗೆ ತುಂಗಭದ್ರಾ ಅಣೆಕಟ್ಟು ನಿರ್ಮಾಣವಾಗಿ 12 ವರ್ಷಗಳಾದುವು. ಅದಕ್ಕೆ 100 ಕೋಟಿ ರೂಪಾಯಿಗಳು ವೆಚ್ಚವಾಗಿ ಅಣೆಕಟ್ಟು ನಿರ್ಮಾಣವಾಯಿತು. ಅದರಿಂದ ನಮ್ಮ ಮೈಸೂರಿಗೆ ಸುಮಾರು 8 ಲಕ್ಷ ಎಕರೆ ನೀರಾವರಿ ಆಗಬೇಕಾಗಿತ್ತು. ಇವತ್ತು ಕೇವಲ 4 ಲಕ್ಷ ಎಕರೆ ಸಾಗುವಳಿಗೆ ಬಂತು. ಉಳಿದ 4ಲಕ್ಷ ಎಕರೆ ನೀರಾವರಿಯಾಗುವುದಕ್ಕೆ ಆಕಡೆ ಮುಗಿದಂತೆ ಇಲ್ಲ. ನೀರಿನ ಸೌಕರ್ಯವನ್ನು ಇವರು ಅಲ್ಲಿಗೆ ಒದಗಿಸಿಕೊಡುವುದಕ್ಕಾಗಲಿಲ್ಲ. ಇರತಕ್ಕಂಥ ನೀರನ್ನು ಸರಿಯಾಗಿ ರೈತರಿಗೆ ಹಂಚುವುದಕ್ಕೂ ಆಗಲಿಲ್ಲ. ಇರತಕ್ಕ ನೆಲವನ್ನು ಸಾಗುಮಾಡುವುದಕ್ಕೆ ಬೇಕಾದಷ್ಟು ಅನುಕೂಲತೆಗಳನ್ನು ಮತ್ತು ಸಾಲಗಳನ್ನು ಕೊಡುವುದಕ್ಕೆ ಈ ಸರ್ಕಾರಕ್ಕೆ ಆಗುತ್ತಾ ಇಲ್ಲ. ಇವತ್ತಿನ ದಿವಸ ದೇಶದಲ್ಲಿ ಆಹಾರಾಭಾವದಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಇದು ಇಡೀ ದೇಶದ ಜನತೆಗೆ ಗೊತ್ತು. ಇದು ಬಹಳ ಮುಖ್ಯವಾದುದು. ಇವತ್ತು ದನಗಳು ತಿನ್ನತಕ್ಕ ಆಹಾರಧಾನ್ಯಗಳನ್ನು ಜನಗಳಿಗೆ ಹಾಕುತ್ತಿದ್ದಾರೆ. ಸಾಕಷ್ಟು ನೀರು ಸರಬರಾಜು ಮಾಡಿದ್ದರೆ ಸಾಗುವಳಿ ಏಕೆ ಆಗಲಿಲ್ಲ, ನೀರಿನ ಉಪಯೋಗ ಏಕೆ ಮಾಡಲಿಲ್ಲ, ಹೆಚ್ಚಿಗೆ ಆಹಾರ ಪದಾರ್ಥಗಳನ್ನು ಬೆಳೆಯಬೇಕೆಂದು ಹೇಳುತ್ತಿರುತ್ತಾರೆ. ಇವತ್ತು ತುಂಗಭದ್ರಾದಲ್ಲಿ ಒಂದು ಕಾಳೂ ಕೂಡ ಬೆಳೆಯಲಿಲ್ಲ. ಹಿಂದೆ 4 ಲಕ್ಷ ಟನ್ನುಗಳಷ್ಟು ಉತ್ಪತ್ತಿಯಾಗಿದ್ದರೆ ಮತ್ತೆ 4 ಲಕ್ಷ ಟನ್ನುಗಳಷ್ಟು ನಾವು ಬೆಳೆಯಬಹುದಾಗಿತ್ತು. ಆಗ ಕ್ಷಾಮವೇ ನಮ್ಮ ದೇಶದಲ್ಲಿ ಇರುತ್ತಿರಲಿಲ್ಲವೆಂದು ಹೇಳುತ್ತೇನೆ. ಇವತ್ತು 4 ಲಕ್ಷ ಕಿಮ್ಮತ್ತು ಖರ್ಚುಮಾಡಿದ್ದರೆ ಉತ್ಪತ್ತಿ 40 ಕೋಟಿ ರೂಪಾಯಿಗಳಷ್ಟು ಬರುತ್ತಿತ್ತು. ಅಂತಹ ಉತ್ಪತ್ತಿ ದೇಶಕ್ಕೆ ಬಾರದೇ ಇರುವಂತೆ ಈ ಮಂತ್ರಿಮಂಡಲ ಮಾಡಿರುವುದರಿಂದ ಆ ಒಂದು ನಷ್ಟವನ್ನು ಇವತ್ತು ನಾವು ಅನುಭವಿಸಬೇಕಾಗಿದೆ. ಇನ್ನು ತುಂಗಭದ್ರಾ ಜಲಾಶಯದ ಕೆಳಗೆ ಈಗ ಒಂದು ಹೊಸ ಡ್ರೈ-ಕಂ-ವೆಟ್ ಯೋಜನೆಯನ್ನು ಹಾಕಿದ್ದಾರೆ. ಆ ಯೋಜನೆಯಲ್ಲಿ ಅನೇಕ ಎಡರುತೊಡರುಗಳಿವೆ. ಹಿಂದೆ ಒಂದು ಸಾರಿ ಮಂತ್ರಿ ಮಂಡಲದ ಸಬ್ ಕಮಿಟಿಯವರು ಮುನಿರಾಬಾದಿಗೆ ಬಂದರು. ಅವರಿಗೆ ತಿಳುವಳಿಕೆ ಕೊಡುವುದಕ್ಕಾಗಲಿಲ್ಲ. ಅಂದರೆ ನಾವು ದಡ್ಡರೋ ಅವರು ದಡ್ಡರೋ ಗೊತ್ತಾಗಲಿಲ್ಲ. ನಮಗನ್ನಿಸುತ್ತದೆ, ಅವರು ದಡ್ಡರೆಂದು. ಜನತೆ ಈಗ ಇವರಲ್ಲಿರತಕ್ಕ ಸ್ವಾರಸ್ಯವನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಇವರ ದಡ್ಡತನವೋ, ಅಥವಾ ಸೊಕ್ಕೋ ಅದೊಂದೂ ಅರ್ಥವಾಗುತ್ತಿಲ್ಲ. ಪ್ರಜೆಗಳ ಮೇಲೆ ಇವರು ತೋರಿಸುತ್ತಿರತಕ್ಕಂಥ ನಿರ್ಲಕ್ಷ್ಯಭಾವನೆಯಿಂದ ಇಷ್ಟೆಲ್ಲಾ ಅನಾಹುತವಾಯಿತು. ಇನ್ನು ಅಲ್ಲಿ ನೀರಿನ ಸರಬರಾಜು ಸರಿಯಾಗಿ ಇಲ್ಲ. ಇದರ ಮೇಲೆ ನೀರಿನ ಕಂದಾಯವನ್ನು ಹಾಕುತ್ತೇವೆಂದು ಹೇಳುತ್ತಿದ್ದಾರೆ. ಸುಮ್ಮನೆ ಅನ್ಯಾಯವಾಗಿ ತೆರಿಗೆಗಳನ್ನು ಹೇರಬೇಡಿ. ನೀರಿನ ಹಂಚಿಕೆ ಸರಿಯಾಗಿ ಆಗುತ್ತಿಲ್ಲ. ಯಾವ ಭೂಮಿಯಲ್ಲಿ ಬೆಳೆಯಬೇಕು ಎಂಬುದನ್ನೇ ಇನ್ನೂ ನಿಗದಿಮಾಡಿಲ್ಲ. ಆದ್ದರಿಂದ ಜಮೀನುಗಳನ್ನು ಅಭಿವೃದ್ಧಿಮಾಡುವುದಕ್ಕೆ ಸಾಕಷ್ಟು ಸಾಲವನ್ನು ಕೊಡಬೇಕು. ನೀರಿನ ತೆರಿಗೆ ಹಾಕಬೇಕು, ಅದನ್ನು ರದ್ದುಮಾಡುವುದಕ್ಕೆ ಸಾಧ್ಯವಿಲ್ಲವೆಂದು ಬೇರೆ ಹೇಳುತ್ತಿದ್ದಾರೆ. ಸಾವಿರಾರು ಬಡ ರೈತರ ಕುಟುಂಬಗಳ ಮೇಲೆ ಇನ್ನೂ ಹೆಚ್ಚು ತೆರಿಗೆ ಹಾಕಿ ವಸೂಲುಮಾಡುತ್ತಿದ್ದಾರೆ. ನಾನು ಬಳ್ಳಾರಿ ಜಿಲ್ಲೆಯವನಾದ್ದರಿಂದ ಅಲ್ಲಿಯ ವಿಷಯ ನನಗೆ ಚೆನ್ನಾಗಿ ಗೊತ್ತು. ಮಾಲೀಕರು ಮತ್ತು ಗಣಿ ವ್ಯಾಪಾರಿಗಳು ರಾಯಲ್ಟಿಯನ್ನು ಶೇಕಡ 25 ರಷ್ಟು ಸಹ ಕೊಡುತ್ತಾ ಇಲ್ಲ. ಅಂಥಾದ್ದನ್ನು ಇವರು ಇದುವರೆಗೆ ನೋಡುವುದಕ್ಕಾಗಲಿಲ್ಲ. ಅಂತಹ ದೊಡ್ಡವರಿಂದ ರಾಯಲ್ಟಿ ಬಾರದಿದ್ದರೂ ಸಹ ಸರ್ಕಾರ ನಡೆಯುತ್ತದೆ. ಆದರೆ ಬಡ ರೈತನಾದವನು ತನ್ನ ದನಕರುಗಳನ್ನು ಮಾರಿ ಕೊನೆಯ ಪಕ್ಷ ಮಕ್ಕಳಿಗೆ ಉಣಿಸತಕ್ಕ ಅನ್ನವನ್ನಾದರೂ ಮಾರಿ ತೆರಿಗೆಗಳನ್ನು ಕೊಡಬೇಕಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ದೊಡ್ಡ ದೊಡ್ಡವರಿಗೆ ಸಹಾಯವಾಯಿತೇ ಹೊರತು ಬಡವರಿಗೆ ಎಳ್ಳಷ್ಟು ಸಹಾಯವಾಗಲಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಇನ್ನು ನೀರಾವರಿ ಜಮೀನನ್ನು ಮಟ್ಟಮಾಡುವುದಕ್ಕೆ ಸಾಲ ಕೊಡಿ ಎಂದರೆ ಸಾಲ ಕೊಡುತ್ತಾ ಇಲ್ಲ. ಇವರ ಅಪ್ಪನ

ಮನೆಯ ರೊಕ್ಕವನ್ನು ಕೊಡುತ್ತಾ ಇಲ್ಲ. ಆದರೆ ಇವರು ಹೇಳುತ್ತಾರೆ, ನಮ್ಮಲ್ಲಿ ದುಡ್ಡು ಇಲ್ಲಾ ಎಂದು. ಒಂದು ಕೋಟಿ ರೂಪಾಯಿಗಳನ್ನು ಬಸ್ ರಾಷ್ಟ್ರೀಕರಣಕ್ಕಾಗಿ ಬಳ್ಳಾರಿ ಜಿಲ್ಲೆಗೆ ಖರ್ಚು ಮಾಡಿ ಎಂದು ಇವರನ್ನು ಯಾರು ಕೇಳಿದರು ! ಭಾಷಣಗಳನ್ನೇನೂ ಚನ್ನಾಗಿ ಮಾಡುತ್ತಾರೆ. ಈ ಭಾಷಣಗಳಿಂದ ಜನಗಳಿಗೆ ಅಸೌಕರ್ಯವಾಗಿದೆಯೇ ಹೊರತು ನಮಗೇನೂ ಲಾಭವಿಲ್ಲ. ಇರತಕ್ಕ ಭೂಮಿಯಲ್ಲಿ 40 ಲಕ್ಷ ಟನ್ನುಗಳಷ್ಟು ಆಹಾರವನ್ನು ಬೆಳೆಯುತ್ತೇವೆ, ಸಾಲ ಕೊಡಿ ಎಂದರೆ ಇವರಲ್ಲಿ ದುಡ್ಡು ಇಲ್ಲವೆಂದು ಹೇಳುತ್ತಾರೆ. ಇದು ಎಂತಹ ನಿರ್ಲಕ್ಷ್ಯಭಾವನೆ ! ರೈತನಾದವನು ತನ್ನ ಖರ್ಚಿನಲ್ಲಿಯೇ ಉಳಬೇಕು ಅಂದರೆ ಹೇಗೆ ? ದನಗಳು ತಿನ್ನಲಾರದಂತಹ ಕೆಂಪುಜೋಳವನ್ನು ಮನುಷ್ಯರಿಗೆ ಇವರು ತಿನ್ನಿಸುತ್ತಿದ್ದಾರೆ. ಇವರಿಗೆ ನಾಚಿಕೆ ಇಲ್ಲವೇ ! ಇವತ್ತು ಕಾಂಗ್ರೆಸ್‌ನವರಿಗೆ ಯಾರ್ಯಾರಿಗೆ ನೀರಾವರಿ ಸೌಲಭ್ಯವನ್ನು ಕೊಟ್ಟಿದ್ದಾರೆಂಬುದನ್ನು ಇಲ್ಲಿ ಹೇಳಲಿ. ಆದರೆ ಇದರ ಕಥೆ ಮುಂದೆ ಏನಾಗುತ್ತದೆಂಬುದು ಅವರಿಗೇ ಗೊತ್ತಿದೆ. ಇಡೀ ದೇಶಕ್ಕೆ ಗೊತ್ತಿದೆ, ಇವರಲ್ಲಿರತಕ್ಕ ಕಳ್ಳತನದ ಸ್ವಾಭಾವ. ರೈತನಿಗೆ ದುಡ್ಡು ಕೊಟ್ಟರೆ ಇವರಿಗೆ ಲಾಭವಿಲ್ಲ, ದೇಶಕ್ಕೆ ಲಾಭವಾಗುತ್ತದೆಂಬುದನ್ನು ಇವರು ಮರೆಯಬಾರದು. ಇವರಿಗೆ ಬಂದೋಬಸ್ತು ಬೇಕು, ಇವರ ದುಡ್ಡಿಗೆ ರಕ್ಷಣೆ ಬೇಕು, ತುಂಗಭದ್ರಾದಿಂದ ಇವರಿಗೆ ಸಣ್ಣ ಅಕ್ಕಿ ಮನೆಗೆ ಬಂದು ಬೀಳಬೇಕು. ಬೇಕಾದರೆ 200 ರೂಪಾಯಿಗಳನ್ನು ಕೊಟ್ಟು ಒಂದು ಕ್ವಿಂಟಾಲ್ ಅಕ್ಕಿಯನ್ನು ಕೊಂಡುಕೊಳ್ಳುತ್ತಾರೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು. ಇವರಲ್ಲಿ ದುಡ್ಡು ಇಲ್ಲದೇ ಇರುವ ಸಂದರ್ಭದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಬಳ್ಳಾರಿ ಜಿಲ್ಲೆಯಲ್ಲಿ ಬಸ್ ರಾಷ್ಟ್ರೀಕರಣ ಮಾಡುವ ಪ್ರಮೇಯ ಇವರಿಗೇನಿತ್ತು !

3-00 P.M.

ಆದಕಾರಣ ಈ ರೀತಿ ಸಿಕ್ಕಾಪಟ್ಟೆ ದುಡ್ಡನ್ನು ಯಾವ ರೀತಿ ಉಪಯೋಗಿಸುತ್ತೀರಿ ! ತುಂಗಭದ್ರಾ ಪ್ರಾಜೆಕ್ಟಿನ ಕೆಳಗಡೆ ಇರತಕ್ಕ ಭೂಮಿಗೆ ನೀರು ಬಾರದೆ ಇದ್ದರೂ ಕೂಡ ಆ ಭೂಮಿಗೆ ರೈತರು ವಾಟರ್‌ರೇಟನ್ನು ಏತಕ್ಕೆ ಕೊಡಬೇಕು ? ಯಾವು ಯಾವುದಕ್ಕೋ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ ಆದರೆ ರೈತರು ನೀರಾವರಿಗೆ ಸಾಲ ಕೇಳಿದರೆ ಕೊಡುವುದಿಲ್ಲ. ಇದು ಎಂಥಾ ಸರ್ಕಾರ ಎಂಬುದನ್ನು ಅರ್ಥ ಮಾಡಿಕೊಳ್ಳಿ ! ನಮ್ಮ ಭಾಗದಲ್ಲಿ ಆಗಬೇಕಾಗಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಈಗ ಸುಮಾರು 5 ವರ್ಷಗಳಿಂದ ಒಂದೇ ಸಮನಾಗಿ ನಾನು ಹೇಳುತ್ತಿದ್ದೇನೆ. ಅದರ ಬಗ್ಗೆ ಸರ್ಕಾರದವರು ನಿಗಾ ಕೊಟ್ಟಿದ್ದೀರಾ ! ಆ ಪ್ರದೇಶದಲ್ಲಿ ಅನೇಕ ಸರ್ಕಾರದ ಕಾರುಗಳು ಜೀಪುಗಳು ಓಡಾಡುತ್ತಿವೆ. ಅಲ್ಲಿಗೆ ಮುಖ್ಯಮಂತ್ರಿಗಳು ಬಂದಿದ್ದಾಗ ಕ್ಯಾಬಿನೆಟ್ ಕಮಿಟಿಯವರು ಬಂದಿದ್ದಾಗ ಮತ್ತು ಚೀಫ್ ಇಂಜಿಯರು ಬಂದಿದ್ದಾಗ ನಮ್ಮಲ್ಲಿ ಆಗಬೇಕಾಗಿರತಕ್ಕ ಕೆಲಸದ ಬಗ್ಗೆ ಅನೇಕ ಸಾರಿ ಹೇಳಿದ್ದೇನೆ. ಆದರೂ ಸಹ ನಿಮ್ಮಿಂದ ಒಂದು ದಮ್ಮಡಿ ಕೆಲಸ ಮಾಡುವುದಕ್ಕೆ ಆಗಿಲ್ಲ. ನಮ್ಮ ಕೈಗೆ ಅಧಿಕಾರವನ್ನು ಕೊಟ್ಟಿದ್ದರೆ ಚೆನ್ನಾಗಿ ಕೆಲಸ ಮಾಡಿಸುತ್ತಿದ್ದೆವು. ನಿಮಗೆ ಬೇಕಾದಂತಹ ಕೆಲಸಗಳನ್ನು ಮಾಡಿಸುವುದಕ್ಕೆ ಸರ್ಕಾರದಲ್ಲಿ ದುಡ್ಡು ಇದೆ. ರೈತರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವುದಕ್ಕೆ, ವ್ಯವಸಾಯಕ್ಕೆ ಬೇಕಾದ ಗೊಬ್ಬರವನ್ನು ಒದಗಿಸುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತೀರಿ. ಒಂದೊಂದು ತಾಲ್ಲೂಕಿಗೆ 50 ಮೈಲಿಗಳಂತೆ ರಸ್ತೆಗಳನ್ನು ನಿರ್ಮಾಣ ಮಾಡುತ್ತೇವೆಂದು ಒಂದು ಪಾಲಿಸಿಯನ್ನು ಹಾಕಿಕೊಂಡಿದ್ದಾರೆ. ಇವರು ಮಾಡಿರತಕ್ಕಂಥ ರಸ್ತೆ ಹೇಗಿದೆ ಎಂದರೆ, ಬರೀ ಮಣ್ಣಿನ ರಸ್ತೆಯನ್ನು ನಿರ್ಮಾಣ ಮಾಡಿದ್ದಾರೆ. ಅದಕ್ಕಾಗಿ ಸಾಕಷ್ಟು ಹಣವನ್ನು ಕೂಡ ಖರ್ಚು ಮಾಡಿದ್ದಾರೆ. ಆ ರೀತಿಯ ಮಣ್ಣಿನ ರಸ್ತೆಗಳನ್ನು ಎರೆ ಮಣ್ಣು ಇರತಕ್ಕ ಪ್ರದೇಶಗಳಲ್ಲಿ ಮಾಡಿರುವುದು ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಿಂದ ಬಂದಿರತಕ್ಕ ಸದಸ್ಯರಿಗೆ ಅನುಭವ ಇದೆ. ಅಂಥಾ ಮಣ್ಣಿನ ರಸ್ತೆಗಳನ್ನು ಮಾಡಿರುವ ಕಡೆ ಜನಗಳು ಆ ರಸ್ತೆಯನ್ನು ಬಿಟ್ಟು ಬೇರೆ ದಾರಿಯಲ್ಲಿ ಹೋಗುತ್ತಿದ್ದಾರೆ. ಆ ರಸ್ತೆಗಳು ಅಂಥಾ ದುರವಸ್ಥೆಯಲ್ಲಿವೆ. ಆ ರಸ್ತೆಗಳಿಗೆ ಮೆಟಲ್ ಹಾಕಿದ್ದರೆ. ಜೆಲ್ಲಿ ಹಾಕಿದ್ದರೆ ಅವು ಈ ಸ್ಥಿತಿಗೆ ಬರುತ್ತಿರಲಿಲ್ಲ. ಆ ರಸ್ತೆಗಳನ್ನು ಮೆಟಲ್ ಮಾಡುವುದಕ್ಕೆ ರೊಕ್ಕವಿಲ್ಲ ಎಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಬಳ್ಳಾರಿ ಜಿಲ್ಲೆಯಲ್ಲಿ ಬಸ್‌ಲೈನ್ ರಾಷ್ಟ್ರೀಕರಣಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ಹಣದಲ್ಲಿ ಎಲ್ಲಾ ರಸ್ತೆಗಳಿಗೂ ಮೆಟಲ್ ಹಾಕುವುದಕ್ಕೆ ಆಗುತ್ತಿತ್ತು. ರೈತನಿಗೆ ಬೇಕಾದ ಗೊಬ್ಬರ ಮುಂತಾದ ಸೌಲಭ್ಯಗಳನ್ನು ಒದಗಿಸಬಹುದಾಗಿತ್ತು. ನೀವು ಒಕ್ಕಲಿಗರಿಗೆ ಸಹಾಯ ಮಾಡದಿದ್ದರೆ ಇನ್ನೇನು ಮಾಡುತ್ತೀರಿ ? ತುಂಗಭದ್ರಾ ಪ್ರಾಜೆಕ್ಟಿನ ಅಯಕಟ್ಟಿನಲ್ಲಿ ರೈತರು ಓಡಾಡುವುದಕ್ಕೆ ಸರಿಯಾದ ರಸ್ತೆಗಳಿಲ್ಲ. ಇವುಗಳನ್ನೆಲ್ಲಾ ಮಾಡುವುದಕ್ಕೆ ನಿಮಗೆ ಸಾಮರ್ಥ್ಯವಿಲ್ಲ. ಇನ್ನು ನಿಮ್ಮ ದರ್ಪಗಳು ಸಾಕು ಎಂದು ನಾವು ನಿಮಗೆ ಎಚ್ಚರಿಕೆಯನ್ನು ಕೊಡಬೇಕಾಗಿದೆ.

(ಶ್ರೀ ಸಿ. ಎಂ. ರೇವಣಸಿದ್ದಯ್ಯ)

ಇನ್ನು ಸಹಕಾರ ಸಂಘಗಳ ವಿಷಯವನ್ನು ತೆಗೆದುಕೊಂಡರೆ, ನಿಮಗೆ ಬೇಕಾದವರಿಗೆ ಏನೇನೋ ಮಾಡಿಕೊಟ್ಟಿದ್ದೀರಿ. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳ ಕೆಳಗೆ ಹಿರೇಹಡಗಲಿ ಎಂಬ ಊರಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಅದರ ಕಿಮ್ಮತ್ತು 4 ಲಕ್ಷ ರೂಪಾಯಿಗಳು ಇರಬಹುದು. ಆದರೆ ಅದರಲ್ಲಿ 8 ಲಕ್ಷ ರೂಪಾಯಿಗಳ ಕಿಮ್ಮತ್ತು ಇದೆಯೆಂದು ಸುಳ್ಳು ಲೆಕ್ಕ ಪತ್ರ ಇದೆ. ಅದು ಸಾಯುವಸ್ಥಿತಿಯಲ್ಲಿದ್ದರೂ ಅದಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಪಾಸು ಮಾಡಿದ್ದೀರಿ. ಇದು ಯಾರ ದುಡ್ಡು ? ನೀವು ಹೇಗೆ ಅದಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ ? ನಾಲ್ಕು ಲಕ್ಷ ರೂಪಾಯಿಗಳ ಕಿಮ್ಮತ್ತು ಇರತಕ್ಕಂಥ ಷುಗರ್ ಫ್ಯಾಕ್ಟರಿಗೆ 8 ಲಕ್ಷ ರೂಪಾಯಿಗಳ ಕಿಮ್ಮತ್ತು ಇದೆಯೆಂದು ಸುಳ್ಳು ಹೇಳಿರುವುದಕ್ಕೆ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ, ನಿಜವಾಗಿಯೂ ಇದು ಅವಹೇಳನದ ವಿಷಯ.

ಇನ್ನೊಂದು ವಿಷಯ. ನಮ್ಮ ಜಿಲ್ಲೆಯಲ್ಲಿ ಮೈನ್ ಓನರ್ಸ್ ಅಸೋಸಿಯೇಷನ್‌ನಲ್ಲಿ 20-30 ಲಕ್ಷ ರೂಪಾಯಿಗಳ ವ್ಯವಹಾರ ನಡೆದಿದೆ. ಇದರಲ್ಲಿ 14 ಜನ ಸದಸ್ಯರಿದ್ದಾರೆ. ಇದರಲ್ಲಿ 6 ಜನಗಳು ಸರ್ಕಾರಕ್ಕೆ ಕೊಡಬೇಕಾದ 3 ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡದೆ ಆ ಅಸೋಸಿಯೇಷನ್ನಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಇದನ್ನು ಪರಿಶೀಲನೆ ಮಾಡಬೇಕು. ಮತ್ತು ಇಂಥಾ ಅಕ್ರಮಗಳನ್ನು ತಪ್ಪಿಸಬೇಕು. ಲೋಪ ದೋಷಗಳು, ಪಕ್ಷಪಾತ, ರೈತರಿಗೆ ಮಾಡಿರತಕ್ಕಂಥ ದ್ರೋಹ. ಇವುಗಳಿಗಾಗಿ ಜನ ನಿಮ್ಮನ್ನು ಶಪಿಸುತ್ತಿದ್ದಾರೆ. ಇದನ್ನು ತಿಳಿದುಕೊಂಡರೆ ನಿಮ್ಮಿಂದ ರೈತರಿಗೆ ಎಳ್ಳಷ್ಟೂ ಲಾಭವಾಗಿಲ್ಲ. ಸಾಮಾನ್ಯ ಜನಗಳಿಗೆ ಎರಡು ರೂಪಾಯಿಗಳನ್ನು ಕೊಟ್ಟರೂ ಒಂದು ಕೆ. ಜಿ. ಅಕ್ಕಿ ಸಿಕ್ಕುವುದಿಲ್ಲ. ಈ ಪ್ರಸಂಗದಿಂದ ನಾನು ಈ ಅವಿಶ್ವಾಸ ನಿರ್ಣಯವನ್ನು ಪುಷ್ಟೀಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ತಂದಿರತಕ್ಕಂಥ ಅವಿಶ್ವಾಸ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಡುತ್ತಾ ಈ ರಾಜ್ಯದಲ್ಲಿ ಐದು ವರ್ಷಗಳ ಅವಧಿಯಲ್ಲಿ ನಿಜಲಿಂಗಪ್ಪನವರ ಸರ್ಕಾರ ಪ್ರಜಾಸತ್ತೆಗೆ, ನ್ಯಾಯಕ್ಕೆ ಬಾಹಿರವಾದ ಅನೇಕ ಭ್ರಷ್ಟಾಚಾರಗಳನ್ನು ನಡೆಸಿದ್ದಾರೆ. ಸ್ವಾಮಿ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಸಾಮಾನ್ಯ ಜನತೆಯ ಬೊಕ್ಕಸಕ್ಕೆ ತುಂಬಿದ ಹಣವನ್ನು ಅಧಿಕಾರ ಬಲದಿಂದ ದುರುಪಯೋಗಪಡಿಸಿಕೊಂಡಿರತಕ್ಕ ನಿದರ್ಶನಗಳ ಪಟ್ಟಿಯನ್ನು ಕೊಟ್ಟು ಈ ಸಂದರ್ಭದಲ್ಲಿ ನೇರವಾಗಿ ಸರ್ಕಾರದ ಮೇಲೆ ಜವಾಬ್ದಾರಿಯುತವಾದ ಅಪಾದನೆಗಳನ್ನು ನಾನು ಮಾಡಬಯಸುತ್ತೇನೆ. ಸ್ವಾಮಿ, ಈ ರಾಜ್ಯ ಸರ್ಕಾರ ಕಳೆದ ಐದು ವರ್ಷಗಳ ಅವಧಿಯಲ್ಲಿ ಪ್ರಜಾಪ್ರಭುತ್ವದ ಕೊಲೆಯನ್ನು ಯಾವಾಗಲೂ ಮಾಡುತ್ತಾ ಬಂದಿದೆ. ಇತ್ತೀಚೆಗೆ ನಡೆದ ಘಟನೆಯನ್ನು ನೋಡುವುದಾದರೆ, ಬಡ ನೌಕರರ ಬೇಡಿಕೆಯ ಬಗ್ಗೆ ಕ್ರೂರವಾದ ಕರಾಳ ಶಾಸನವನ್ನು ಮಾಡಿ ಅವರ ಹಕ್ಕು ಬಾಧ್ಯತೆಗಳನ್ನು ಮೊಟಕು ಮಾಡಿದ್ದಾರೆ. ಇದರಿಂದ ಆಡಳಿತದ ಯಂತ್ರ ಕುಸಿದು ಬಿದ್ದುಹೋಗಿ ದೇಶದಲ್ಲಿ ಅರಾಜಕತೆ, ಅಶಾಂತಿ ನೆಲೆಸುವ ಸ್ಥಿತಿಯಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದಾರೆ.

ಇನ್ನು ಭ್ರಷ್ಟಾಚಾರದ ವಿಚಾರವನ್ನು ಹೇಳುವುದಾದರೆ, ಮಂತ್ರಿಗಳಾಗಿ ದೇಶದ ಹೆಸರಿನಲ್ಲಿ ರಾಜ್ಯಭಾರ ಮಾಡತಕ್ಕವರು ಸ್ವಚ್ಛವಾದ ಆಡಳಿತವನ್ನು ನಡೆಸಬೇಕು, ದೇಶದ ಹಣ ದೇಶಕ್ಕೆ ಸೇರಿದ್ದು, ದೇಶದ ಹಣವನ್ನು ದೇಶದ ಅಭ್ಯುದಯಕ್ಕಾಗಿ ಖರ್ಚು ಮಾಡಬೇಕು ಎಂದು ಒಂದು ಪ್ರಮಾಣ ವಚನವನ್ನು ಅವರು ಸ್ವೀಕರಿಸಿದ್ದಾರೆ. ಆದರೆ ಈಗ ಅವರು ಆ ಪ್ರಮಾಣ ವಚನಕ್ಕೆ ವ್ಯತಿರಿಕ್ತವಾಗಿ ದುರಾಚಾರಗಳನ್ನು ಮಾಡಿದ್ದಾರೆ. ಬಹುಶಃ ಒಂದು ನಿಮಿಷ ಕೂಡ ಇವರು ಈ ಮಂತ್ರಿಗಳ ಸ್ಥಾನದಲ್ಲಿ ಇರುವುದಕ್ಕೆ ಅರ್ಹರಲ್ಲ. ಇದಕ್ಕೆ ಆಧಾರವನ್ನು ಹೇಳುವುದಾದರೆ, ಮಾನ್ಯ ವಿದ್ಯಾ ಮಂತ್ರಿಗಳ ಮಗ ಈ ದಿವಸ ಅಧಿಕಾರದಲ್ಲಿದ್ದಂತಹ ಮಂತ್ರಿಗಳ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ಮೈಸೂರು ದೇಶದ ಸೋಪ್ ಫ್ಯಾಕ್ಟರಿಯ ಏಜೆನ್ಸಿಯನ್ನು ತೆಗೆದುಕೊಂಡಿದ್ದಾರೆ. ಇನ್ನೊಂದು ನಿದರ್ಶನವನ್ನು ಹೇಳುವುದಾದರೆ, ಮಾನ್ಯ ಗೃಹ ಮಂತ್ರಿಗಳ ಸಂಬಂಧಿಯಾದ ತುಮಕೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತರಾಯರ ಮಗ ಕಾಲೇಜಿನಲ್ಲಿ ಓದುತ್ತಿರುವ ಒಬ್ಬ ವಿದ್ಯಾರ್ಥಿಯ ಹೆಸರಿನಲ್ಲಿ ಪ್ರಸಾದ್ ಅಂಡ್ ಕಂಪನಿ ಎಂಬ ಸುಳ್ಳು ಹೆಸರಿನ ಬೋರ್ಡನ್ನು ಅಂಟಿಸಿರುವವರಿಗೆ ಸರ್ಕಾರದ ಅಧಿಕಾರವನ್ನು ದುರುಪಯೋಗಪಡಿಸಿ ಮೈಸೂರು ದೇಶದ ಸೋಪ್ ಫ್ಯಾಕ್ಟರಿಯ ಏಜೆನ್ಸಿಯನ್ನು ಕೊಟ್ಟಿದ್ದಾರೆ. ಇದರ ಬಗೆಗೆ ಪ್ರಶ್ನೆಯನ್ನು ಹಾಕಿದಾಗ ಅದಕ್ಕೆ ಉತ್ತರವನ್ನು ಕೊಟ್ಟ ರೀತಿಯನ್ನು ನೋಡಿದರೆ ಇಲ್ಲಿ ಸರ್ಕಾರ ಇದೆಯೇ ? ನಮ್ಮ ದೇಶದಲ್ಲಿ

ಅಧಿಕಾರವನ್ನು ಹಿಡಿದು ಆಳುವುದಕ್ಕೆ ಇವರು ಯಾವ ನೈತಿಕ ಹೊಣೆಯನ್ನು ಹೊತ್ತಿದ್ದಾರೆ ಎನ್ನತಕ್ಕ ಪ್ರಶ್ನೆಯನ್ನು ನಾನು ಮಾಡಬಯಸುತ್ತೇನೆ. ಇದು ಒಂದೇ ಅಲ್ಲ. ಕೈಗಾರಿಕೆ ಮಾಡುತ್ತೇವೆ ಎಂದು ಹೇಳಿ ಕಾಂಗ್ರೆಸ್ ಅಧ್ಯಕ್ಷರು ಹಿಂದೆ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ ಸ್ಶೆಡ್ಡುಗಳನ್ನು ತೆಗೆದುಕೊಂಡು 36ಸಹಸ್ರ ರೂಪಾಯಿಗಳಿಗೆ ಮಾರಿದ್ದಾರೆ ಇದಕ್ಕಿಂತ ಹೆಚ್ಚಿಗೆ ನಿದರ್ಶನ ಭ್ರಷ್ಟಾಚಾರಕ್ಕೆ ಯಾವುದು ಬೇಕು ಎಂದು ನಾನು ಸವಾಲು ಹಾಕುತ್ತಾ ಇದ್ದೇನೆ. ಅರ್ಥಿಕ ಮಂತ್ರಿಗಳು ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಇದ್ದಾರೆ. ಇವರು ಮಾಡಿದಂಥ ಅಧಿಕಾರಾವಧಿಯಲ್ಲಿ ಅನ್ಯಾಯಗಳು ಎಷ್ಟು ಇದೆ ಎಂದು ಹೇಳಬೇಕು ಈಗ ವಿಕ್ಟೋರಿಯಾ ಕಾಲೋನಿಯಲ್ಲಿ ಒಂದೂವರೆ ಲಕ್ಷ ರೂಪಾಯಿ ಆಸ್ತಿ ಮಾಡಿ ಮನೆ ಕಟ್ಟುತ್ತಾ ಇದ್ದಾರೆ. ಇವರಿಗೆ ಬರತಕ್ಕ ಸಂಬಳ ಎಷ್ಟು ? ಇವರು ಹಣವನ್ನು ಹೇಗೆ ಗಳಿಸಿದರು ಕೋಷ್ಟೆ ಈಶ್ವರಸಾ ಎಂಬುವರು ವೈನು ಬ್ರಾಂದಿ ಬೀರ್ ಮಾಡುವವರು ಇದ್ದಾರೆ.

Mr. DEPUTY SPEAKER.—The Hon'ble member should not mention names.

ಶ್ರೀ ಕೆ. ಲಕ್ಕಪ್ಪ.—ಅವರಿಗೆ ನೇರವಾಗಿ ಗೋವಾದಲ್ಲಿ ವೈನ್, ಬೀರ್, ವಿಸ್ಕಿಗಳನ್ನು ಮಾರತಕ್ಕ ಏಜೆನ್ಸಿಯನ್ನು ಕೊಟ್ಟಿರಬೇಕಾದರೆ ಇವರ ಕೃಪಾಕಟಾಕ್ಷ ಎಷ್ಟು ಇರಬೇಕು ! ಅವರು ಎಷ್ಟು ಹಣ ವನ್ನು ಇವರಿಗೆ ಕೊಟ್ಟಿರಬಹುದು ಎಂದು ಊಹೆಯನ್ನು ತಾವೇ ಮಾಡಬೇಕಾಗಿದೆ. ಇನ್ನು ರಾಜಾಜಿ ನಗರದಲ್ಲಿ ಶೋಭಾಯಮಾನವಾಗಿ ಬೆಳೆದಿರತಕ್ಕಂಥ ಮನೆಗಳನ್ನು ನೋಡಬಹುದು. ರಾಜ್ಯದಲ್ಲಿ ಜನತೆ ಬಟ್ಟೆ ಇಲ್ಲ, ಅನ್ನವಿಲ್ಲ, ವಸತಿ ಇಲ್ಲ ಎಂದು ಹೇಳುತ್ತಿರುವಾಗ ಎಷ್ಟು ಜನ ಮಂತ್ರಿಗಳು ಈ ಐದು ವರ್ಷಗಳಲ್ಲಿ ರಾಜಾಜಿನಗರದಲ್ಲಿ ವಿಧಾನ ಸೌಧದ ಹಾಗೆ ಎತ್ತರವಿರುವ ಅರಮನೆಗಳನ್ನು ಕಟ್ಟಿಸಿ ಬಾಡಿಗೆಗಳನ್ನು ತೆಗೆದುಕೊಳ್ಳುತ್ತಾ ಇಲ್ಲ ! ಇಂತಹವರಿಗೆ ರಾಜ್ಯದ ಜನತೆಯ ಹೆಸರಿನಲ್ಲಿ ಅಥವಾ ಮಹಾತ್ಮಾ ಗಾಂಧಿಯವರ ಹೆಸರಿನಲ್ಲಿ ರಾಜ್ಯದ ಆಡಳಿತ ನಡೆಸುವುದಕ್ಕೆ ಯಾವ ನೈತಿಕ ಹಕ್ಕು ಇದೆ ! ಈ ತುಹವಾಗಿ ಒಂದು ವಿಚಾರಣೆ ನಡೆಸಿ ಎಂದು ಎಷ್ಟೋ ಸಲ ನಾವು ಒತ್ತಾಯ ಮಾಡಿದ್ದೇವೆ, ಈಗಲೂ ಕೂಡ ಒತ್ತಾಯ ಮಾಡುತ್ತಿದ್ದೇವೆ. ಅವರು ನೇರವಾಗಿ ತಮ್ಮ ಆತ್ಮಶೋಧನೆ ಮಾಡಿಕೊಳ್ಳಲಿ. ಅವರು ಮಂತ್ರಿಗಳಾದ ಮೇಲೆ ಅವರು ಗಳಿಸಿರತಕ್ಕ ಆಸ್ತಿ ಮತ್ತು ಅವರ ಹೆಸರಿನಲ್ಲಿ ಹೆಂಡತಿ, ಭಾವ, ಚಿಕ್ಕಪ್ಪ ಇವರುಗಳ ಹೆಸರಿನಲ್ಲಿ ಮಾಡಿರತಕ್ಕ ಆಸ್ತಿಗಳು ಎಷ್ಟು ಎನ್ನುವುದನ್ನು ಬಹಿರಂಗ ಪಡಿಸಲಿ. ಪ್ರಜಾಸತ್ತೆಯ ಹೆಸರಿನಲ್ಲಿ ಮಾಡಿರತಕ್ಕ ದುರುಪಯೋಗವನ್ನು ಬಹಿರಂಗವಾಗಿ ಈ ಸಭೆಯಲ್ಲಿ ತಾವು ವಿಚಾರಣೆ ಮಾಡುವುದಕ್ಕೆ ಒಪ್ಪಿದ್ದೇ ಆದರೆ ಬಹುಶಃ ನಾವು ಇಂಡಿಯನ್ ಪೀನಲ್ ಕೋಡಿನ ಎಲ್ಲಾ ತಕ್‌ಸೀರುಗಳನ್ನು ನಾವು ಹಾಕಬೇಕಾಗುತ್ತದೆ. ಇವರಿಗೆ ಸಿಂಡಿಕೇಟ್ ಬ್ಯಾಂಕ್‌ನವರ ಕೃಪಾಕಟಾಕ್ಷ ಇದೆ. ಮನೆಗಾಗಿ ಸಾಲ ಹಾಕಿದವರಿಗೆಲ್ಲಾ ಕೊಡುತ್ತಿದ್ದಾರೆ. ಈ ಬ್ಯಾಂಕಿನ ಆಡಳಿತವನ್ನು ನಡೆಸತಕ್ಕ ಮಂಗಳೂರು ಜಿಲ್ಲೆಯವರು ಪಾರ್ಲಿಮೆಂಟಿಗೆ ಕಾಂಗ್ರೆಸ್ ಟಿಕೆಟ್‌ಗಾಗಿ ಹಾಕಿದ್ದಾರೆ. ಇವರ ಹತ್ತಿರ ಹೆಚ್ಚು ಹಣ ಇದೆ. ಇವರ ಕೃಪಾಕಟಾಕ್ಷ ಇದೆ. ಮನೆ ಕಟ್ಟುವುದಕ್ಕೆ ಹಣ ಕೊಡುತ್ತಾರೆ. ಯಾವಾಗ ಕೇಳಿದರೆ ಬಡ್ಡಿ ಇಲ್ಲದೆ ಹಣ ಕೊಡುತ್ತಾ ಇದ್ದಾರೆ. ಹೀಗಿರುವಾಗ ಪ್ರಜಾಸತ್ತಾತ್ಮಕವಾದ ರೀತಿಯಲ್ಲಿ ರಾಜ್ಯಭಾರ ಮಾಡುತ್ತೇವೆ ಎಂದು ತಾವು ಹೇಳುತ್ತಿದ್ದೀರಿ. ಹಿಂದೆ 27 ಆರೋಪಣೆಗಳ ಪಟ್ಟಿ ಮಾಡಿದ್ದಾಗಿದೆ. ಅದಕ್ಕೆ ತಾವು ಹೊಣೆಯಾಗಿದ್ದೀರಿ, ಗುರಿಯಾಗಿದ್ದೀರಿ, ಆ ಅಪಾದನೆಗಳನ್ನು ಒಪ್ಪಿದ್ದೀರಿ ಎಂದು ಭಾವಿಸುತ್ತೇನೆ. ಅದಕ್ಕೆ ವಿಚಾರಣೆ ನಡೆಸಲಿಲ್ಲ. ಕೇಂದ್ರ ಸರ್ಕಾರದವರೂ ಕೂಡ ಈ ಅಪಾದನೆಗಳನ್ನು ವಿಚಾರಣೆ ಮಾಡಿದರೆ ಬಹಳ ಜನ ಜೈಲಿಗೆ ಹೋಗುತ್ತಾರೆ ಎಂದು ತಿಳಿದಿದ್ದಾರೆ ಎಂದು ಕಾಣುತ್ತದೆ. ಸ್ವಾಮಿ, ಈ ರಾಜ್ಯದಲ್ಲಿ ದಿನನಿತ್ಯದ ಕೆಲಸದಲ್ಲಿ ಹಸ್ತಕ್ಷೇಪ ಹೆಚ್ಚಾಗಿ ನಡೆಯುತ್ತಾ ಬಂದರೆ, ಎಷ್ಟು ಅನ್ಯಾಯ ವಾಗುತ್ತದೆ ಎಂಬು ಒಂದು ಉದಾಹರಣೆ ಹೇಳುತ್ತೇನೆ. ಪಬ್ಲಿಕ್ ಸರ್ವಿಸ್ ಕಮೀಷನ್ ಒಳ್ಳೆಯ ಸ್ಥಾನದಲ್ಲಿರತಕ್ಕದ್ದು. ಈ ಸ್ಥಾನವನ್ನು ಅಲಂಕರಿಸತಕ್ಕವರು ನಿಜವಾಗಿಯೂ ಯಾವ ರಾಜಕೀಯ ಪ್ರಭಾವಕ್ಕೇ ಆಗಲೀ ಒಳಗಾಗದೆ ನ್ಯಾಯ ಮಾರ್ಗದಲ್ಲಿ ಅವರ ಸ್ಥಾನಮಾನಗಳನ್ನು ಗೌರವಕ್ಕೆ ತಕ್ಕ ಹಾಗೆ ಅಲಂಕರಿಸಬೇಕಾಗುತ್ತದೆ. ರಾಜ್ಯದಲ್ಲಿ ಪಬ್ಲಿಕ್ ಸರ್ವಿಸ್ ಕಮೀಷನ್ ಚೇರ್‌ಮನ್ ಆಗಿರ ತಕ್ಕವರು ನೇರವಾಗಿ ರಾಜಕೀಯಕ್ಕೆ ಸೇರಿರತಕ್ಕವರು, ನಮ್ಮ ಜಿಲ್ಲೆಯಿಂದಲೇ ಬಂದಿರತಕ್ಕವರು. ಅವರಿಂದ ರಾಜೀನಾಮೆಯನ್ನು ಕೊಡಿಸಿ, ಮಾನ್ಯ ನಿಜಲಿಂಗಪ್ಪನವರ ಕೃಪಾಕಟಾಕ್ಷದಿಂದ ಅವರು ಈ ದಿವಸ ಉನ್ನತ ಸ್ಥಾನದ ಅಧ್ಯಕ್ಷಗಿರಿಯನ್ನು ಪಡೆದಿದ್ದಾರೆ. ಆದರೆ ಅವರು ಮಾಡತಕ್ಕದ್ದು ಸಣ್ಣ ಕೆಲಸ.

Mr. DEPUTY SPEAKER.—We are dealing with a no confidence Motion on the Ministry. Let the member not bring in others in this connection.

ಶ್ರೀ ಕೆ. ಲಕ್ಕಪ್ಪ.—ವಿಧಾನ ಸೌಧದ ಪಕ್ಕದಲ್ಲಿ ಬೆಲೆ ಬಾಳತಕ್ಕಂಥ ಜಾಗವನ್ನು ಇಂಡಿಯನ್ ಆಯಿಲ್ ಕಂಪನಿಯವರಿಗೆ ಕೊಟ್ಟು, ಶ್ರೀ ಚನ್ನಿಗರಾಮಯ್ಯನವರ ಮಗನಿಗೆ ನೇರವಾಗಿ ಅದರ ಏಜೆನ್ಸಿ ಕೊಡಲು ಪ್ರಬಲವಾದ ಕಾರಣಗಳು ಏನು ? · ಅವರ ಮಗನಿಗೆ ಯಾವ ಶಿಫಾರಸ್ಸು ಮಾಡುವ ಶಕ್ತಿ ಇತ್ತು ? ಅವನಿಗೆ ಯಾವ ಅಧಿಕಾರದ ಹಣದ ಬಲ ? ಶ್ರೀ ನಿಜಲಿಂಗಪ್ಪನವರ ಕೃಪಾಕಟಾಕ್ಷ ಅಲ್ಲವೇ, ಶ್ರೀ ರಾಮಕೃಷ್ಣ ಹೆಗ್ಗಡೆಯವರ ಕೃಪಾಕಟಾಕ್ಷ ಅಲ್ಲವೇ ? ಇವರು ಪೆಟ್ರೋಲ್ ಬಂಕ್ ಪ್ರಾರಂಭ ಮಾಡಿದ ಕಾಲದಲ್ಲಿ ಯಾರು ಅಧ್ಯಕ್ಷತೆ ವಹಿಸಿದರು ? ಗೃಹಮಂತ್ರಿ ಶ್ರೀಮಾನ್ ರಾಮರಾಯರು, ಶ್ರೀಮಾನ್ ವೀರೇಂದ್ರ ಪಾಟೀಲರು ಇವರಿಗೆ ಶಹಬಾಸ್‌ಗಿರಿ ಕೊಡಲಿಲ್ಲವೇ ? ಎಲ್ಲಾ ಸರ್ಕಾರದ ವಾಹನಗಳು ಇಲ್ಲಿಯೇ ಸರ್ಕಾರಿ ಪೆಟ್ರೋಲ್ ಡೀಸಲ್ ತುಂಬಬೇಕು ಎಂದು ಹೇಳಲಿಲ್ಲವೇ! ಯಾರ ಆಸ್ತಿ ವಿಧಾನ ಸೌಧದ ಪಕ್ಕದಲ್ಲಿ ಇರುವುದು ? ಬಡವರು, ಬಟ್ಟೆಗೋಸ್ಕರ, ಅನ್ನಕ್ಕೋಸ್ಕರ, ವಸತಿಗೋಸ್ಕರ ಕೇಳಿದ ಐದು-ಹತ್ತು ರೂಪಾಯಿ ಇಲ್ಲ. ಪಬ್ಲಿಕ್ ಸರ್ವಿಸ್ ಕಮೀಷನ್ ಚೇರ್‌ಮನ್ ಮಗನಿಗೆ ಬೆಲೆಬಾಳತಕ್ಕ ಆಸ್ತಿ ಕೊಟ್ಟು ಏಜೆನ್ಸಿ ಕೊಡುವುದಕ್ಕೆ; ಇಂಡಿಯನ್ ಎಕ್ಸ್‌ಪ್ರೆಸ್‌ಗೆ ನಾಲ್ಕು ಲಕ್ಷ ರೂಪಾಯಿನ ಬೆಲೆಬಾಳುವ ಆಸ್ತಿಯನ್ನು 40 ಸಾವಿರ ರೂಪಾಯಿಗೆ ಕೊಟ್ಟು ಅವರು ಶೋಭಾಯಮಾನವಾದ ದೊಡ್ಡ ಬಿಲ್ಡಿಂಗ್ ಕಟ್ಟಲಿಕ್ಕೆ ನಿಮ್ಮನ್ನು ಅಧಿಕಾರದಲ್ಲಿ ಕೊಡಿಸಿದ್ದು ? ಜನತೆ ಓಟು ಕೊಟ್ಟದ್ದು ರೈತರ ಮೇಲೆ ತರಿಗೆ ಅಥವಾ ಕರಭಾರವನ್ನು ಜಾಸ್ತಿ ಮಾಡಲಿಕ್ಕೆ ! ಎಷ್ಟು ಸಾರಿ ರಾಜ್ಯದಲ್ಲಿ ಪೋಲೀಸಿನವರು ದೌರ್ಜನ್ಯ ನಡೆಸಿದ್ದಾರೆ ! ಪೋಲೀಸ್ ಅಧಿಕಾರಿಗಳನ್ನು ಬಿಟ್ಟು ರಾಜಕೀಯ ಮಾಡಿ ವಿರೋಧಪಕ್ಷದವರನ್ನು ಹತ್ತಿಕ್ಕಲು ಹಸ್ತಕ್ಷೇಪವನ್ನು ಮಾಡುವ ಎಷ್ಟು ನಿದರ್ಶನ ನೋಡಬೇಕು ! ಇದೇ ತುಮಕೂರು ಜಿಲ್ಲೆಯಲ್ಲಿ ಗೃಹ ಮಂತ್ರಿಗಳು ನೇರವಾಗಿ ತಮ್ಮ ಸಂಬಂಧಿಕರು ಆದಂಥ ಡೆಪ್ಯೂಟಿ ಸೂಪರಿಂಟೆಂಡ್‌ಂಟ್ ಆಫ್ ಪೋಲೀಸರನ್ನು ತಿಪಟೂರಿನಲ್ಲಿ ಹಾಕಿಸಿಕೊಂಡಿದ್ದಾರೆ. ಇವರ ಉದ್ದೇಶ ತುಮಕೂರಿನಲ್ಲಿ ವಿರೋಧ ಪಕ್ಷವನ್ನು ದಮನ ಮಾಡಬೇಕು ಅಲ್ಲಿಯ ನಾಗರೀಕರನ್ನು ಬಂಧಿಸಬೇಕು, ಅವರು ಸಹಾಯಕ್ಕೆ ಯಾರು ಬಂದರೂ ಎನ್ನುವುದಾಗಿದೆ. ಅಲ್ಲಿಯ ಹೆಡ್ ಕಾನ್‌ಸ್ಟೇಬಲ್, ಕಾನ್‌ಸ್ಟೇಬಲ್‌ಗಳು ಇಂತಹ ಕೆಲಸಗಳಲ್ಲಿ ತೊಡಗಿದ್ದಾರೆ. ಈ ರೀತಿ ಹಸ್ತಕ್ಷೇಪ ಮಾಡುವ ಗೃಹ ಮಂತ್ರಿಗಳಿಗೆ ಆಡಳಿತ ಮಾಡುವ ನೈತಿಕ ಅಧಿಕಾರ ಇದೆಯೆ ? ಯಾವ ಕ್ಷೇತ್ರದಿಂದ ನೇರವಾಗಿ ಗೆದ್ದು ಬಂದಿದ್ದಾರೆ ? ನಾನು ಈ ದಿವಸ ಹೇಳುತ್ತಾ ಬಂದಿದ್ದೇನೆ. ವಿಧಾನ ಸೌಧದ ಸದಸ್ಯಸ್ಥಾನಕ್ಕೋಸ್ಕರ ನಾನು ಭಾಷಣ ಮಾಡುತ್ತಾ ಇಲ್ಲ. ಗೃಹ ಮಂತ್ರಿಗಳ ಪೋಲೀಸ್ ಹದ್‌ಬಸ್ತಿನವರಿಗೆ ಹೆದರುತ್ತಾ ಇಲ್ಲ. ಸರ್ವತ್ಯಾಗಕ್ಕೂ ಕೂಡ ಸಿದ್ಧನಾಗಿದ್ದೇನೆ. ಇವರು ಯಾವ ನೈತಿಕ ಅಧಿಕಾರ ಹೊಂದಿದ್ದಾರೆ ! ಎಲ್ಲಿ ನೋಡಿದರೂ ಹಸ್ತಕ್ಷೇಪ. ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಡಿ. ವೈ. ಎಸ್. ಪಿ. ಇವರ ಜಾತಿಯವರು, ಸರ್ಕಲ್ ಇನ್‌ಸ್ಪೆಕ್ಟರ್ ಯಾವ ಜಾತಿಯವರು ? ಇವರು ಯಾರಿಗೋಸ್ಕರ ರಾಜ್ಯಭಾರ ಆಳುತ್ತಾ ಇರುವುದು, ಯಾರ ರಕ್ಷಣೆಗೋಸ್ಕರ ಗೃಹ ಮಂತ್ರಿಗಳು ನೇರವಾಗಿ ಹಸ್ತಕ್ಷೇಪ ಮಾಡಿ, ಅಧಿಕಾರವನ್ನು ದುರುಪಯೋಗ ಪಡಿಸುವುದು ? ಇಂಥಾದ್ದು ಯಾವ ದೇಶದಲ್ಲೂ ಕೂಡ ಇಲ್ಲ. ಇನ್ನು ಕೋರ್ಟು ಕೇಸುಗಳನ್ನು ಕಾಂಗ್ರೆಸ್ಸಿನವರ ಮೇಲೆ ನೇರವಾಗಿ ಶ್ರೀಮಾನ್ ಚನ್ನಬಸಪ್ಪನವರು ಗೃಹ ಮಂತ್ರಿಗಳಾಗಿದ್ದಾಗ ಹಾಕಿದ್ದರು. ಅಂತಹವರು ಇವತ್ತಿನ ನವೀನ ಕಾಂಗ್ರೆಸ್ಸಿನ ಒಕ್ಕೂಟದಲ್ಲಿ ಸೇರಿದ್ದಾರೆ. ನೂರಾರು ಕೇಸುಗಳು ಅವರ ಮೇಲೆ ಬಿದ್ದಿವೆ. ಅವು ತುಮಕೂರು ಜಿಲ್ಲೆಯಲ್ಲಿ ಚಪಾವಣೆ ಮಾಡಿರುವುದಕ್ಕೆ ಸಂಬಂಧಪಟ್ಟವು. ಸೆಕ್ಷನ್ 420ರ ಮೇಲೆ ಮೊನ್ನೆ ಇಬ್ಬರನ್ನು ಅರೆಸ್ಟು ಮಾಡಿದರು. ಅವರೂ ಕಾಂಗ್ರೆಸ್ ಸದಸ್ಯರೆ. ಅವರ ಮೇಲೆ ನೇರವಾಗಿ ಕಾಂಗ್ರೆಸ್ಸಿನವರ ಕೃಪಾಕಟಾಕ್ಷ ಇದೆ. ಆ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಈಗ ಕ್ಯಾಬಿನೆಟ್ ತೀರ್ಮಾನಕ್ಕೆ ಬಂದಿದೆಯಂತೆ ! ಸ್ವಾಮಿ, ಹರಳೂರು ಸಹಕಾರ ಸಂಘದಲ್ಲಿ ಒಬ್ಬರು ಕೇಡಿಯಾದವರಿದ್ದಾರೆ. ಅವರ ಮೇಲೆ ಒಂದು ಮೊಕದ್ದಮೆ ಹಾಕಿದ್ದಾರೆ. ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಕ್ಯಾಬಿನಟ್ಟಿನಲ್ಲಿ ತೀರ್ಮಾನವಾಗಿ ಬಂದಿದೆ ಎಂದು ಕೇಳುತ್ತೇನೆ. ಇದು ಸರಿಯೇ ಅಲ್ಲವೇ ಎನ್ನುವ ವಿಚಾರದ ಬಗ್ಗೆ ಸರಕಾರ ನೇರವಾಗಿ ಉತ್ತರ ಕೊಡಬೇಕಾಗಿದೆ ಎಂದು ಇಲ್ಲಿ ಕೇಳುತ್ತೇನೆ.

ನಾನು ಹೇಳುವುದು ಸರಕಾರ ಅಲ್ಲಲ್ಲಿ ಈ ರೀತಿಯಾಗಿ ಹಸ್ತಕ್ಷೇಪ ಮಾಡುತ್ತ ಹೋದರೆ ಪ್ರಜಾಪ್ರಭುತ್ವದ ಹೆಸರಿದಲ್ಲಿ ತಾವು ಇಂತಹ ಭೇದಭಾವಗಳನ್ನು ಅನುಸರಿಸದೆ ಜೀವನವನ್ನು ಹಸನು ಮಾಡುವಂತಹ ಕಾರ್ಯಗಳನ್ನು ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಮತ್ತು ಚುನಾವಣೆಯಲ್ಲಿ ನಿಮ್ಮನ್ನು ಚುನಾಯಿಸಿ ಐದು ವರ್ಷಗಳ ಕಾಲ ಇರಲಿ ಎಂದು ವೋಟು ಮಾಡಿ ಕಳುಹಿಸಿದರೆ, ತಾವು ಈ ರೀತಿ ಮಾಡಿದರೆ ಸರಿಯಾಗಿರುತ್ತದೆಯೇ ? ಇದನ್ನು ತಾವು ಆಲೋಚನೆ ಮಾಡಬೇಕು. ಸ್ವಾಮಿ, ಅಧಿಕಾರಿಗಳ ಒಂದು ದುರುಪಯೋಗ ಯಾವ ರೀತಿಯಾಗಿ ಆಗುತ್ತಿದೆ ಎನ್ನುವ ವಿಚಾರವನ್ನು ಇಲ್ಲಿ ಪ್ರಸ್ತಾಪಮಾಡುತ್ತೇನೆ.

ಸ್ವಾಮೀ, ಶರಾವತಿ ಯೋಜನೆ ಬಗ್ಗೆ ಹಿಂದೆ ಬೇಕಾದಷ್ಟು ಆರೋಪಣೆಗಳನ್ನು ಇಲ್ಲಿ ಮಾಡಿದ್ದೆವು, ಮತ್ತು ಅದಕ್ಕೆ ಕೆಲವು ಅಂಕೆ ಅಂಶಗಳನ್ನೂ ಕೊಟ್ಟಿದ್ದೆವು. ಸರಕಾರ ಕೂಡ ಇದರಲ್ಲಿ ತಪ್ಪಿದೆ ಎಂದು ಒಪ್ಪಿಕೊಂಡಿದ್ದಾರೆ. ಮೊನ್ನೆ ಕೌನ್ಸಿಲ್ಲಿನಲ್ಲಿ ಇದರ ಬಗ್ಗೆ ಒಂದು ಪ್ರಶ್ನೆ ಕೇಳಿದಾಗ ಈ ಯೋಜನೆಯಲ್ಲಿ ಕೆಲಸವಾಡಿದಂತಹ ಆರು ಜನ ದೊಡ್ಡ ಕಂಟ್ರಾಕ್ಟರುಗಳಿಂದ ಸುಮಾರು 2·5 ಕೋಟಿಯಷ್ಟು ಹಣ ನಮಗೆ ಬರಬೇಕಾಗಿದೆ ಎಂದು ಅವರು ಕ್ಲೇಂ ಮಾಡಿದ್ದಾರೆ ಎಂದು ಹೇಳಿದರು. ಇಲ್ಲಿರುವ ಆರು ಜನ ದೊಡ್ಡ ಕಂಟ್ರಾಕ್ಟರುಗಳು ಯಾರು ಎಂದರೆ, ಇವರು ಕಮಿಟೀ ಆಫ್ ಹೋಸ್ಟ್ಸ ಎಂಬಂತೆ ನಮ್ಮ ಬೆಂಗಳೂರಲ್ಲಿರುವ ದೊಡ್ಡ ದೊಡ್ಡ ಮನುಷ್ಯರು ಹಾಗೂ ಕಂಟ್ರಾಕ್ಟರುಗಳು ಆಗಾಗ್ಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರಿಗೆ ಸನ್ಮಾನ್ಯ ಮಂತ್ರಿಗಳಾದ ರಾಮರಾಯರಿಗೆ ಅಲ್ಲಲ್ಲಿ ಕರೆಸಿ ಹೂವಿನ ಹಾರಗಳನ್ನು ಹಾಕಿ ಮರ್ಯಾದೆ ಮಾಡುವಂತಹ ಕಮಿಟಿ ಆಫ್ ಹೋಸ್ಟ್ಸಗಳಾಗಿದ್ದಾರೆ. ಇವರಿಗೆಲ್ಲಾ ಇಂತಹ ಅಕ್ರಮವಾದ ಹಣ ಎಲ್ಲಿಂದ ಬಂತು, ಯಾವ ರೀತಿಯಾಗಿ ಸಂಪಾದನೆ ಮಾಡಿದರು ಎನ್ನುವುದನ್ನು ಯಾರೂ ಹೇಳುವವರೇ ಇಲ್ಲ. ನಮ್ಮ ಮಂತ್ರಿಗಳು ಯಾವ ನೈತಿಕ ಮಟ್ಟಕ್ಕೆ ಇಳಿದಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಬೇಕಾದರೆ ಕಮಿಟಿ ಆಫ್ ಹೋಸ್ಟ್ಸ ಎನ್ನುವಂತಹ ಈ ದೊಡ್ಡ ಮನುಷ್ಯರೊಡನೆ ಹೋಗುತ್ತಿರುವ ವ್ಯವಹಾರಗಳು, ಇವರ ಊಟದ ವೈಖರಿ ಯಾವ ರೀತಿ ಇದೆ ಎನ್ನುವುದನ್ನು ನೋಡಿದರೆ ಈ ದೇಶದಲ್ಲಿ ಪ್ರಜಾಪ್ರಭುತ್ವ ನಿಂತೀತೇ ಎನ್ನುವ ಅನುಮಾನ ಬರುತ್ತಿದೆ. ಇಂತಹವರಿಂದ ಪ್ರಜಾಪ್ರಭುತ್ವವನ್ನು ಹಾಳುಮಾಡುತ್ತಿದ್ದಾರೆ ಎಂದು ರಾಜ್ಯಪಾಲರು ಈ ದಿಸೆಯಲ್ಲಿ ಎಂದೋ ಇವರ ಅಧಿಕಾರವನ್ನು ಕಿತ್ತುಕೊಳ್ಳಬಹುದಾಗಿತ್ತು. ಸ್ವಾಮಿ, ಚುನಾವಣೆಗೋಸ್ಕರ ಇಂತಹ ಕಂಟ್ರಾಕ್ಟರುಗಳನ್ನು ಇಟ್ಟುಕೊಂಡು ಏನು ಮಾಡುತ್ತಾರೆ ಎನ್ನುವುದನ್ನು ಇಲ್ಲಿ ಹೇಳುತ್ತೇನೆ. ಚುನಾವಣೆ ಬಂದಾಗ ಅವರು ಬಹುಶಃ ಎಷ್ಟು ಚೀಲಗಳನ್ನು ತಂದು ಇವರಿಗೆ ಸಹಾಯ ಮಾಡುತ್ತಾರೆ ಎನ್ನುವುದು ನನಗೂ ಗೊತ್ತಿದೆ. ಈ ವಿಚಾರವನ್ನೆಲ್ಲಾ ವಿಸ್ತಾರವಾಗಿ ಇಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅಂತಹ ಸನ್ನಿವೇಶ ಬಂದಾಗ ಹೇಳುತ್ತೇವೆ. ಇಂತಹ ಭ್ರಷ್ಟಾಚಾರಗಳಿಂದ ನೀವು ರಾಜ್ಯದಲ್ಲಿ ಆಡಳಿತ ವಹಿಸಿಕೊಂಡು ನಡೆಸಿಕೊಂಡು ಹೋದರೆ ಪ್ರಜಾಸತ್ತೆಯಲ್ಲಿ ನಿಮ್ಮ ಆಡಳಿತದಶಕ್ತಿ ಕುಗ್ಗುತ್ತದೆ ಮತ್ತು ಬಹಳ ಕೆಳಮಟ್ಟಕ್ಕೆ ಹೋಗುತ್ತದೆ. ಇಲ್ಲಿ ಇನ್ನೂ ಕೆಲವು ವಿಚಾರಗಳನ್ನು ಹೇಳುತ್ತೇನೆ. ನೀವು ಇಲ್ಲಿ ಮಾಡಿದಂತಹ ನಿರ್ಣಯಗಳು ಎಂದರೆ, ಉಕ್ಕಿನ ಕಾರ್ಖಾನೆ ಸ್ಥಾಪನೆ, ಗೊಬ್ಬರದ ಕಾರ್ಖಾನೆ, ಇವು ಯಾವ ದೇಶಕ್ಕೆ ಬಂತು ? ಯಾವ ಊರಿನಲ್ಲಿ ಹೆಚ್ಚು ನೀರಾವರಿ ಯೋಜನೆಗಳು ಆಗುತ್ತಿವೆ ಎನ್ನುವುದನ್ನು ನೀವು ಪರಿಶೀಲನೆಮಾಡಿ ನೋಡಿದರೆ ಎಲ್ಲ ರಾಜಕೀಯಕ್ಕೋಸ್ಕರ ಇವು ಆಗುತ್ತಿವೆ ಎನ್ನುವುದು ಎಲ್ಲರಿಗೂ ಚೆನ್ನಾಗಿ ತಿಳದುಬರುತ್ತದೆ. ನಾನು ಹಿಂದೆ ಇಲ್ಲಿ ಒಂದು ದೊಡ್ಡ ಪ್ರಾಜೆಕ್ಟನ್ನು ಕಟ್ಟಬೇಕಾಗಿದೆ, ಆಂಧ್ರಕ್ಕೆ ನಮ್ಮಿಂದ ನೀರು ಹೋಗುತ್ತಿದೆ, ಎಂದು ಹೇಳಿ ನಮ್ಮ ಭಾಗದಲ್ಲಿ ಜಯಮಂಗಲಿ ನದಿಗೆ ಅಡ್ಡಕಟ್ಟೆ ಕಟ್ಟಬೇಕೆಂದು ಹೇಳಿದರೂ ಸರಕಾರದಲ್ಲಿ ಹಣವಿಲ್ಲ ಎಂದು ಹೇಳಿದರು ಮತ್ತು ಇದರ ಬಗ್ಗೆ ವಿವರಗಳನ್ನು ಕೇಳಿದಾಗ ನಮ್ಮ ರಾಜ್ಯದಲ್ಲಿ ಹದಿನೇಳು ಗುಂಡಿಗಳನ್ನು ಹಾಕಿಕೊಂಡಿರುವ ನಮ್ಮ ನೀರಾವರಿ ಶಾಖೆಯ ಉಪಮಂತ್ರಿಗಳು ಏನೂ ಹೇಳಲಿಲ್ಲ. ಅವರಿಗೆ ಕಾಲುವೆಗಳ ವಿಚಾರ ತಾನೇ ಏನು ಗೊತ್ತಿದೆ ? ಕೋಟಿಗಟ್ಟಲೆ ಮಾತುಗಳನ್ನು ಮಾತ್ರ ಆಡತಕ್ಕದ್ದು ಅವರಿಗೆ ಗೊತ್ತಿದೆ. ಅವರು ಏನು ಒಂದು ವಿಶೇಷ ಕೆಲಸ ಮಾಡಿದ್ದಾರೆಂದರೆ ದೆಹಲಿಯಲ್ಲಿ ಒಂದು ವಿಹಾರ ಮಂದಿರವನ್ನು ಕಟ್ಟಿಸಿದ್ದಾರೆ.

ಸ್ವಾಮೀ, ಆಡಿಟ್ಟು ರಿಪೋರ್ಟಿನಲ್ಲಿ ಸುಮಾರು 87 ಲಕ್ಷದಷ್ಟು ಹಣ ಖರ್ಚು ಮಾಡಿ ಗೊಬ್ಬರಕ್ಕಾಗಿ ಇಂಡೆಂಟ್ ಮಾಡಿದ್ದು ಎಲ್ಲಿಗೆ ಹೋಯಿತು ಎನ್ನುವುದು ನಮ್ಮ ದೇಶದ ಜನತೆಯ ಕಣ್ಣಿಗೆ ಬಿದ್ದಿದೆ. ಇವರ ವಿವರಗಳನ್ನು ಪೇಪರಿನಲ್ಲೂ ಇವೊತ್ತು ಪ್ರಕಟ ಮಾಡಿದ್ದಾರೆ. ಅಲ್ಲದೆ ಸುಮಾರು ಏಳು ಲಕ್ಷ ರೂಪಾಯಿಗಳಷ್ಟು ಗೊಬ್ಬರ ತರಿಸಿದ ಲೆಕ್ಕಪತ್ರಗಳೇ ಇಲ್ಲ ಎನ್ನುವುದು ಈ ರಿಪೋರ್ಟಿನಿಂದ ತಿಳಿದು ಬರುತ್ತದೆ. ಸುಮಾರು 57 ಲಕ್ಷ ರೂಪಾಯಿಗಳ ಲೆಕ್ಕ ಇಲ್ಲ. ಇಲ್ಲಿರುವ ರೈತರಿಗೆ ನೀರಾವರಿಗಾಗಿ ಗೊಬ್ಬರ ಹಾಗೂ ಬೀಜಗಳನ್ನು ಸಾಲವಾಗಿ ಕೊಡುತ್ತಾರೆ. ಇವನ್ನು ತಾಲ್ಲೂಕು ಮಾರ್ಕೆಟಿಂಗ್ ಸಹಕಾರ ಸಂಘಗಳು ಹಾಗೂ ಸ್ಟೇಟ್ ಮಾರ್ಕೆಟಿಂಗ್ ಸಹಕಾರ ಸಂಘಗಳ ಮೂಲಕ ಹಂಚಬೇಕೆಂದು ಮಾಡಿದ್ದಾರೆ. ಇಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರು ಒಬ್ಬರಿದ್ದಾರೆ. ಇವರನ್ನೇಕೆ ವಿಚಾರಣೆ ಮಾಡಬಾರದು ? ಇವರಿಂದ ಸಹಸ್ರಾರು ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ ಎಂದು ಪದೇ ಪದೇ ಹೇಳುತ್ತಿದ್ದರೂ ಇದರ ಬಗ್ಗೆ ಏನಾದರೂ ತನಿಖೆ ನಡೆಸಿದ್ದೀರಾ ?

ಇನ್ನೊಂದು ವಿಚಾರವನ್ನು ಇಲ್ಲಿ ಪ್ರಶ್ನೆ ಮಾಡುತ್ತೇನೆ. ಸ್ವಾಮೀ, ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿನಲ್ಲಿ ಸ್ವಾಮಿನಾಥನ್ ಎನ್ನುವ ಒಬ್ಬರು ಅಧಿಕಾರಿಗಳು ಇದ್ದಾರೆ.

ಉಪಾಧ್ಯಕ್ಷರು.—ಹೆಸರುಗಳನ್ನು ಇಲ್ಲಿ ಹೇಳಬಾರದು.

ಶ್ರೀ ಕೆ. ಲಕ್ಕಪ್ಪ.—ಈ ಸ್ವಾಮಿನಾಥನ್‌ರವರು ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿನಲ್ಲಿ ಇದ್ದಾಗ ಕೆಲವು ಚಾಸಿಗಳನ್ನು ಖರೀದಿ ಮಾಡಿದರು.

[MR. SPEAKER in the Chair]

ಆಗ ಫೋರ್ಡ್, ಫಿಯಟ್ ಹಾಗೂ ಅಂಬಾಸೆಡರ್ ಕಾರುಗಳನ್ನು ಕಮಿಷನ್ನಿಗಾಗಿ ಕೊಡುತ್ತಿದ್ದರು ಎಂದು ಗೊತ್ತಾಗಿದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ಮುಂದೆ ಇದರ ವಿಚಾರ ಬಂದಾಗ ಸರಕಾರದ ವತಿಯಿಂದ ಇಲ್ಲಿ ಚಾಸಿಗಳನ್ನು ಕೊಂಡಾಗ ಎಷ್ಟು ಕಾರುಗಳು ಬಂದವು ಎಂದು ಕೇಳಿದಾಗ ಯಾವ ವಿವರಗಳೂ ಕೊಡಲಿಲ್ಲ ಎಂದು ಈ ಕಮಿಟಿಯವರ ವಿರೋಧ ಸರಕಾರಕ್ಕೆ ಬಂದಿದ್ದರೂ ಕೂಡ ಇಲ್ಲಿಯವರೆಗೂ ಸರಕಾರ ಯಾವ ಅಧಿಕಾರಿಗಳ ಮೇಲೂ ತಕ್ಕ ಕ್ರಮ ತೆಗೆದುಕೊಳ್ಳಲಿಲ್ಲ. ಇದು ಸರಕಾರದ ಅಧಿಕಾರಿಗಳ ದಕ್ಷತೆಯನ್ನು ತೋರಿಸುತ್ತದೆಯೇ? ಇಷ್ಟು ಅದಕ್ಷತೆಯಿಂದ ಕೆಲಸಮಾಡಿರುವ ಅಧಿಕಾರಿಗಳು ಸರಕಾರದಲ್ಲಿದ್ದರೂ ಅವರ ಮೇಲೆ ಯಾವ ಕಾರ್ಯಕ್ರಮವನ್ನೂ ಸರಕಾರ ತೆಗೆದುಕೊಳ್ಳದೇ ಇರಲು ಕಾರಣವೇನು! ಇದು ಯಾರ ಹಣ? ಈ ದೇಶದಲ್ಲಿ ಪ್ರಜಾಪ್ರಭುತ್ವದ ರೀತಿಯಲ್ಲಿರುವ ರಾಜ್ಯ ಸರಕಾರಕ್ಕೆ ರೈತ ಜನರಿಂದ ಬರುವ ಹಣದಿಂದ ರಾಜ್ಯ ನಡೆಸುತ್ತಿರುವ ಇಂತಹ ಸ್ವರಾಜ್ಯದಲ್ಲಿ ಜನರ ಹಿತವನ್ನು ಕಾಪಾಡಲು ತಕ್ಕ ಸೌಜನ್ಯವಾದರೂ ಈ ದೇಶದಲ್ಲಿರಬೇಡವೇ! ಈ ದೇಶದಲ್ಲಿ ಸಮಾಜ ವಾದವನ್ನು ತರುತ್ತೇವೆ ಎಂದು ಮಹಾತ್ಮ ಗಾಂಧಿಯವರ ಹೆಸರನ್ನು ಹೇಳಿಕೊಂಡು ಈ ರಾಜ್ಯದಲ್ಲಿ ನಡೆಸುತ್ತಿರುವ ಭ್ರಷ್ಟಾಚಾರಗಳನ್ನು ನೋಡಿಕೊಂಡು ಸುಮ್ಮನೇ ಇರುವುದು ಹೇಗೆ? ಅದಕ್ಕಾಗಿ ಈ ರಾಜ್ಯದ ಮಂತ್ರಿಮಂಡಲ ಕೂಡಲೇ ರಾಜೀನಾಮೆ ಕೊಡಬೇಕು. ಇಲ್ಲದೇ ಹೋದರೆ ಈ ರಾಜ್ಯದ ಆಡಳಿತವನ್ನು ನಡೆಸಲು ನಿಮಗೆ ಅರ್ಹತೆ ಇಲ್ಲ ಎಂದು ನಮ್ಮ ರಾಜ್ಯಪಾಲರು ನಿಮ್ಮಿಂದ ಅಧಿಕಾರವನ್ನು ವಾಪಸುಮಾಡಿದರೂ ನಮಗೆ ಸಂತೋಷ. ಇಲ್ಲದೇ ಹೋದರೆ ಕಾಂಗ್ರೆಸ್ಸು ಸರಕಾರದ ಅಂಕುಶವನ್ನು ಹಿಡಿದಿರತಕ್ಕ ನಿಮ್ಮ ಮಂತ್ರಿಮಂಡಲಕ್ಕೆ ಬಹಿಷ್ಕಾರ ಹಾಕ ತಕ್ಕ ಚಳುವಳಿ ನಡೆಯುತ್ತದೆ. ತಾವು ಆಗ ಜನರನ್ನು ಹೆದರಿಸಬಹುದು. ಆದರೆ ಆಗ ನೀವು ರಾಜೀನಾಮೆ ಕೊಡಬೇಕಾಗಿ ಬರುತ್ತದೆ ಎಂದು ಇಲ್ಲಿ ಹೇಳುತ್ತೇನೆ. ಅದುದರಿಂದ ನಾನು ತಮ್ಮಲ್ಲಿ ಒತ್ತಾಯಪೂರ್ವಕವಾಗಿ ಹೇಳುವುದು, ನಾವು ಮೇಲೆ ಹೇಳಿರುವ ಎಲ್ಲ ವಿಚಾರಗಳ ಬಗೆಗೂ ವಿಚಾರಣೆ ಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಗಂಗಾಧರ ನಾಮೋಷಿ (ಗುಲ್ಬರ್ಗ).—ಸ್ವಾಮಿ, ರಾಜ್ಯ ಸರಕಾರದ ಮುಂದೆ ತಂದಿರತಕ್ಕ ಅವಿಶ್ವಾಸದ ಗೊತ್ತುವಳಿಯನ್ನು ಅನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ಇಲ್ಲಿ ಹೇಳಲು ಅಪೇಕ್ಷಿಸುತ್ತೇನೆ.

ಒಬ್ಬರು ಸದಸ್ಯರು.—ಮಾನ್ಯ ಸದಸ್ಯರು ಹಾಕಿರುವ ಟೋಪಿ ಯಾವುದು!

ಶ್ರೀ ಗಂಗಾಧರ ನಾಮೋಷಿ.—ಸ್ವಾಮೀ ಅಧ್ಯಕ್ಷರೇ, ಲ್ಯಾಂಡ್ ರಿಫಾರಂಸ್ ಅಮೆಂಡ್‌ಮೆಂಟ್ ಬಿಲ್ಲನ್ನು ಪಾಸ್‌ಮಾಡಲು ಇಲ್ಲಿ ತಂದಿರುವುದರಿಂದ ಇದನ್ನು ಪ್ರತಿಭಟಿಸುವ ಸಲುವಾಗಿ ಇಂದು ಮಂಗಳೂರಿಂದ ಕೃಷಿ ಮಾಡತಕ್ಕ ಸುಮಾರು 50 ಜನರು ಕಾಲ್ನಡಿಗೆಯಿಂದ 12 ದಿನಗಳು ಕಷ್ಟಪಟ್ಟು ಇಲ್ಲಿಗೆ ಬಂದಿರುವ ಜನರು ಇಂತಹ ಒಂದು ಟೋಪಿಯನ್ನು ಹಾಕಿಕೊಂಡು ಬಂದಿದ್ದಾರೆ ಮತ್ತು ಅವರು ತಮ್ಮ ಪ್ರತಿಭಟನೆಯನ್ನು ಇದರ ಮೂಲಕ ತೋರಿಸಬೇಕೆಂದು ಹೇಳಿದುದರಿಂದ ಇಂತಹ ಟೋಪಿ ಒಂದನ್ನು ನನಗೂ ಕೊಟ್ಟರು. ಹಾಗೂ ಮಾನ್ಯ ಸದಸ್ಯರಾದ ಶ್ರೀ ಗೋಪಾಲ ಗೌಡರಿಗೂ ಒಂದು ಟೋಪಿ ಕೊಟ್ಟರು ಅದನ್ನು ಇಲ್ಲಿ ಪ್ರದರ್ಶನ ಮಾಡಲು ನಾನೂ ಕೂಡ ಹಾಕಿಕೊಂಡು ನಿಂತಿದ್ದೇನೆ.

ಸ್ವಾಮೀ, ಕೂಲಿಗಾರರ ಹಾಗೂ ರೈತರ ಹಿತಸಂರಕ್ಷಣೆ ಮಾಡುತ್ತಿದ್ದೇವೆ, ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತೇವೆ ಎಂದು ಇಲ್ಲಿ ಎಷ್ಟೋ ಸಲ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದುದರಿಂದ ಇಲ್ಲಿಗೆ ಮಂಗಳೂರು ಕಡೆಯಿಂದ ಬಂದಿರುವ ರೈತರ ಹಿತವನ್ನೂ ಗಮನದಲ್ಲಿಟ್ಟುಕೊಂಡು ಇಲ್ಲಿ ಹೇಳುತ್ತೇನೆ; ಮತ್ತು ಮಾನ್ಯ ಆಹಾರ ಮಂತ್ರಿಗಳಲ್ಲಿ ರೈತರಿಗಾಗಿ ಹಂಚುತ್ತಿರುವ ಗೊಬ್ಬರದ ಒಂದು ಸ್ಯಾಂಪಲ್ ಪೊಟ್ಟಣ ಕೊಟ್ಟಿದ್ದಾರೆ. (ಅದನ್ನು ಎತ್ತಿ ಸಭೆಯಲ್ಲಿ ತೋರಿಸುತ್ತಾ) ಇಂತಹ ಗೊಬ್ಬರ ನೋಡಿದರೆ ಇದರಲ್ಲಿ ಬರೀ ಮಣ್ಣು ಇದೆಯೇ ವಿನಾ ಗೊಬ್ಬರವಿಲ್ಲ. ಆದ್ದರಿಂದ ಇದನ್ನು ತಾವು ಪರೀಕ್ಷೆ ಮಾಡಬೇಕೆಂದು ಹೇಳಿ ಇದನ್ನು ತಮ್ಮ ಕಡೆಗೆ ಕೊಡಬೇಕೆಂದು ಹೇಳಿ ಕೊಟ್ಟಿದ್ದಾರೆ. ಅದನ್ನು ಕಳುಹಿಸಿಕೊಡುತ್ತೇನೆ. ಈ ರೀತಿ ರೈತರಿಗೆ ಗೊಬ್ಬರ ಕೊಟ್ಟರೆ ಅವರಿಗೆ ಸರಿಯಾದ ಸೌಲಭ್ಯ ಕೊಟ್ಟಂತಾಗುತ್ತದೆಯೇ! ನಿಮ್ಮ ಪ್ಲಾನುಗಳೆಲ್ಲಾ ಬರೀ ಪೇಪರಿನ ಮೇಲೆ ಇರುತ್ತವೆ. ಅದರಲ್ಲೂ ಇಂತಹ ಮಂತ್ರಿಗಳು ಇರುವ ಫೋಟೋಗಳನ್ನು ಹಾಕಿಸಿಕೊಂಡು ಹೂ ಹಾರಗಳನ್ನು ಹಾಕಿಸಿಕೊಂಡು ಜಿಲ್ಲಾಧಿಕಾರಿಗಳೊಡನೆ ಹೆಚ್ಚು ಉತ್ಪಾದನೆ ಮಾಡಿದವರು ಎಂದು ಪ್ರಕಟಣೆ

ಮಾಡುವುದಷ್ಟೇ. ಆದರೆ ನಿಜವಾಗಿ ಎಲ್ಲ ಕಾರ್ಯಗತವಾಗಿದೆ ಮತ್ತು ಇದರಲ್ಲಿ ಏನು ಲೋಪ ದೋಷಗಳಿವೆ ಎನ್ನುವುದನ್ನು ಇಲ್ಲ ಸ್ಪಷ್ಟವಾಗಿ ಹೇಳಬೇಕಾಗಿತ್ತು ಎಂದು ನನಗನಿಸುತ್ತದೆ.

3-30 P.M.

ಆಮೇಲೆ ಈಗ ಎಲ್ಲಾ ಹಳ್ಳಿಗಳಲ್ಲಿ ಬಡವರಿಗೆ, ಅದರಲ್ಲೂ ತುಮಕೂರು ಮತ್ತು ಬೇರೆ ಭಾಗ ಗಳಲ್ಲಿ ಎಲ್ಲಿ ಮಳೆ ಇಲ್ಲದೆ ತೊಂದರೆಗೆ ಈಡಾಗಿದ್ದಾರೋ, ಅವರಿಗೆ ಯಾರೂ ತಿನ್ನದಂತಹ ಜೋಳ ವನ್ನು ಕೊಟ್ಟಿದ್ದಾರೆ. ಅದರಲ್ಲಿ ಸ್ವಲ್ಪ ಇಲ್ಲಿ ತಂದಿದ್ದೇನೆ, ಇದನ್ನು ತಾವು ದಯವಿಟ್ಟು ನೋಡಬೇಕು. ಈ ಜೋಳವನ್ನು ನಾಯಿ ಕೂಡ ತಿನ್ನಲಿಕ್ಕಿಲ್ಲ. ಈಗ ಕೆಲವು ಮಂತ್ರಿಗಳ ಮನೆಯಲ್ಲಿ ನಾಯಿಗಳನ್ನು ಸಾಕುತ್ತಾರಲ್ಲ, ಅದಕ್ಕೆ ಕೂಡ ಇದನ್ನು ರೊಟ್ಟಿ ಮಾಡಿ ಹಾಕಿದರೆ, ಅದು ತಿನ್ನಲಿಕ್ಕಿಲ್ಲ. ಅದರಂತೆ ಹಿಟ್ಟು ಕೂಡ ಇದು ವಾಸನೆ ಬರುತ್ತಿದೆ. ಇದನ್ನು ಬೇರೆ ಬೇರೆ ಸದಸ್ಯರುಗಳಿಗೂ ಕೊಟ್ಟಿದ್ದಾರೆ. ಇದನ್ನು ಕೊಡಲಿಕ್ಕೆ ಸರ್ಕಾರಕ್ಕೆ ನೈತಿಕವಾಗಿ ಹೇಗೆ ಮನಸ್ಸು ಬರುತ್ತದೆ? ಬಹುಮತದ ಜನರಿ ದ್ದಾರೆ, ಅವರು ಏನು ಮಾಡಿದರೂ ನಡೆಯುತ್ತಿದೆ. ಈ ರೀತಿ ಮಾಡಿದರೆ ಖಂಡಿತವಾಗಿಯೂ ಕೆಟ್ಟ ಹೆಸರು ಬರುತ್ತದೆ, ಮತ್ತು ಹಾಗೆ ಮಾಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ.

ಆಮೇಲೆ, ಈಗ ಕೇಂದ್ರ ಸರ್ಕಾರದವರು ರಾಜ್ಯಸರ್ಕಾರದವರಿಗೆ ಯಾವ ತರದ ಮಾನ್ಯತೆ ಯನ್ನೂ ಕೊಡುವುದಿಲ್ಲ. ಮೊನ್ನೆ ತಾನೆ ಮಾನ್ಯ ಮಂತ್ರಿಯವರಾದ ಶ್ರೀ ವೀರೇಂದ್ರ ಪಾಟೀಲರ ವರು ಹೇಳಿದರು—"ಎಷ್ಟೋ ಸಲ ನಾನೂ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಡೆಲ್ಲಿಗೆ ಹೋದಾಗ ಈ ಕಾಳೀನದಿ ಯೋಜನೆಯ ಸಲುವಾಗಿ, ಅಪ್ಪರ್ ಕೃಷ್ಣಾದ ಸಲುವಾಗಿ ಹೇಳುತ್ತಾ ಬಂದಿದ್ದೇವೆ" ಎಂದು. ಆದರೆ ನಿಜವಾಗಿ ನೀವು ಸ್ಪಷ್ಟವಾಗಿ ಏನು ಅಲ್ಲಿ ಹೇಳಿದಿರಿ ಎಂಬುದನ್ನು ಸ್ಪಷ್ಟವಾಗಿ ನಮ್ಮ ಮುಂದೆ ಇಲ್ಲಿ ಹೇಳಲು ಧೈರ್ಯವಿಲ್ಲ. ಇವರು ಅಪ್ಪರ್ ಕೃಷ್ಣಾ ತೆಗೆದುಕೊಳ್ಳುತ್ತೇವೆ, ಹಾರಂಗಿ ತೆಗೆದುಕೊಳ್ಳುತ್ತೇವೆ, ಹೊಸಪೇಟೆ ಸ್ಟೀಲ್‌ಪ್ಲಾಂಟ್ ತೆಗೆದುಕೊಳ್ಳುತ್ತೇವೆ ಎಂಬುದಾಗಿ ಹೇಳುತ್ತಿ ದ್ದಾರೆ. ಇನ್ನೂ ಕೇವಲ ಮೂರೇ ತಿಂಗಳು ಇವರಿಗೆ ಇದೆ, ಇಷ್ಟರ ವರೆಗೆ ನಾಲ್ಕು ವರ್ಷ ಒಂಭತ್ತು ತಿಂಗಳು ನೀವು ಕೊಟ್ಟ ಆಶ್ವಾಸನೆಯನ್ನು ಸಾಧನೆ ಮಾಡಿದ್ದೀರಾ? ಇದಕ್ಕೆ ಏನಾದರೂ ಸೀಮ ಇದೆಯೇ! ನಮ್ಮ ಕಡೆ ಒಂದು ಬುಡುಬುಡಿಕೆಯ ಮಾತು ಎಂದು ಹೇಳುತ್ತಾರೆ. ಶ್ರೀಮಾನ್ ಜತ್ತಿ ಯವರಿಗೆ ಅದು ಗೊತ್ತಿದೆ. ಆ ರೀತಿ ಇಲ್ಲಿ ಮಾತನಾಡಿದರೆ ಹೇಗೆ ಸ್ವಾಮಿ? ನಾಲ್ಕು ವರ್ಷ 9 ತಿಂಗ ಳಿಂದ ಕೇಳುತ್ತಿದ್ದೇವೆ. ಹಾರಂಗಿ ಕೊಟ್ಟರೇ, ಅಪ್ಪರ್ ಕೃಷ್ಣ ಕೊಟ್ಟರೇ, ಅಥವಾ ಹೊಸಪೇಟೆಯ ಉಕ್ಕಿನ ಕಾರ್ಖಾನೆ ಕೊಟ್ಟರೇ? ಯಾವ ವಿಷಯದಲ್ಲಿ ನಮಗೆ ಜಯ ದೊರಕಿದೆ? ಮೊನ್ನೆ ಒಬ್ಬ ಆಂಧ್ರದ ಮಹನೀಯರು ಹೇಳುತ್ತಿದ್ದರು "ಆಂಧ್ರವನ್ನು ಕಟ್ಟಬೇಕಾದರೆ, ಎಷ್ಟೋ ಪ್ರಾಣವನ್ನು ಕೊಟ್ಟಿದ್ದೇವೆ ಮತ್ತು ಕಟ್ಟಿದ್ದೇವೆ, ಅದೇ ರೀತಿ ಸ್ಟೀಲ್ ಪ್ಲಾಂಟಗೂ ಕೂಡ ಹೋರಾಡುತ್ತೇವೆ, ಸಾಯುತ್ತೇವೆ ಮತ್ತು ತೆಗೆದುಕೊಳ್ಳುತ್ತೇವೆ" ಎಂದು. ನಾವಾದರೂ, ಇಲ್ಲಿ ಕೊಟ್ಟರೆ ಕೊಡಲಿ, ಎಂದು ಇದ್ದರೆ ನಮಗೆ ಏನು ಕೊಡುತ್ತಾರೆ! ನಾವು ಏನನ್ನು ತೆಗೆದುಕೊಳ್ಳುತ್ತೇವೆ? ನನಗೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಒಳ್ಳೆಯ ಅಭಿಪ್ರಾಯ ಇದೆ. ಆದರೆ ಅವರು ಎಲ್ಲಿ ಹೋದರೂ ಏನು ಬೇಕಾ ದರೂ ಹೇಳುತ್ತಾರೆ. ಡೆಲ್ಲಿಗೆ ಹೋಗುತ್ತಾರೆ ಸಣ್ಣ ಕಾರು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಸಣ್ಣ ಕಾರೂ ಇಲ್ಲ ಯಾವುದೂ ಇಲ್ಲ. ನಮಗೆ ಆಗಬೇಕಾದುದು ಉಕ್ಕಿನ ಕಾರ್ಖಾನೆ. ಇವರು ಹೇಳು ತ್ತಾರೆ, ನಮಗೆ ಐದು ಲಕ್ಷದಷ್ಟು ಸಾಕು, ಸಣ್ಣ ಕಾರ್ಖಾನೆ ಮಾಡುತ್ತೇವೆಂದು. ನಾಳೆ ಬರುವುದು ಹಾಗೆ ಹೀಗೆ ಎಂದು ಹೇಳುತ್ತಾರೆ. ಇದನ್ನೆಲ್ಲಾ ನೋಡಿದರೆ, ಮಧ್ಯವರ್ತಿಯಿಂದ ಸರ್ಕಾರದ ಮೇಲೆ ಎಷ್ಟು ಪ್ರಭಾವ ಬೇಕೋ, ಅಷ್ಟು ಪ್ರಭಾವ ಇಲ್ಲ. ಇದರಿಂದ ನಾನಾದರೂ ವಿನಂತಿಮಾಡಿ ಕೊಳ್ಳುವುದೇನೆಂದರೆ, ನಮಗೆ ಇದು ಆಗಲೇಬೇಕು, ಇದನ್ನು ಕೊಡಲಿಲ್ಲವಾದರೆ ಧೈರ್ಯದಿಂದ ನೀವು ರಾಜೀನಾಮೆ ಕೊಡಲು ಮುಂದೆ ಬರಬೇಕು. ನೀವು ಒಂದು ಸಲ ಧೈರ್ಯಮಾಡಿದ್ದೀರಿ. ಗೋವಾದ ಪ್ರಶ್ನೆ ಬಂದಾಗ ಇಡೀ ರಾಜ್ಯದ ಮಂತ್ರಿಮಂಡಲ ರಾಜೀನಾಮೆ ಕೊಡುತ್ತೇವೆಂದು ಧೈರ್ಯ ಮಾಡಿದ್ದೀರಿ. ಅಂತಹ ಧೈರ್ಯ ಪ್ರತಿಯೊಂದು ನ್ಯಾಯವಾದ ಕಾಲದಲ್ಲಿ ಅಷ್ಟೇ ಧೈರ್ಯ ದಿಂದ ಮಾಡಬೇಕು. ನಾಳೆ ಮಂತ್ರಿಮಂಡಲದಲ್ಲಿ ಯಾರು ಇರುತ್ತಾರೆ, ಇರುವುದಿಲ್ಲ ಎಂದು ಹೇಳು ವುದಕ್ಕಾಗುವುದಿಲ್ಲ. ಇವತ್ತಿನದಿವಸ ನೀವು ಇಷ್ಟು ಧೈರ್ಯ ಮಾಡಿ ಇದನ್ನೆಲ್ಲಾ ಮಾಡಿಸಿದರೆ, ಜನತೆಗೆ ಸರ್ಕಾರದಲ್ಲಿ ಪ್ರೇಮ, ಸಹಾನುಭೂತಿ ಬೆಳೆಯುತ್ತದೆ. ಎಷ್ಟೋ ಮಂದಿ ಮಂತ್ರಿಗಳು ಹೇಳಿದ್ದಾರೆ: "ಹೌದು ನಮ್ಮದು ಕೇಂದ್ರದಲ್ಲಿ ಪ್ರಭಾವವಿಲ್ಲ" ಎಂದು. ನಾವು ಇಲ್ಲಿ ಅಪ್ಪರ್ ಕೃಷ್ಣಾದ ವಿಚಾರವಾಗಿ ನಿರ್ಣಯವನ್ನು ಅಂಗೀಕಾರ ಮಾಡಿದ್ದೇವೆ, ಇಲ್ಲಿ ಇವರು ತಿಳಿದಿದ್ದಾರೆ, ಸರ್ಕಾರ ಬೇಡಿದ್ದೆಲ್ಲಾ ಕೊಡುತ್ತಾರೆಂದು. ಇದನ್ನೆಲ್ಲಾ ನಾವು ತೆಗೆದುಕೊಳ್ಳಲಿಕ್ಕೆ ಸ್ವಲ್ಪ ಕೇಂದ್ರದಲ್ಲಿ ಗುದ್ದಾಡಿ, ಕಿತ್ತಾಡಿ ನಮಗೆ ಬೇಕಾಗಿರತಕ್ಕ ಎಲ್ಲಾ ತೆಗೆದುಕೊಂಡು ಬರಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಗಂಗಾಧರ ನಾಮೋಷಿ)

ಇನ್ನು ವಿದ್ಯಾಭ್ಯಾಸ ಇಲಾಖೆಯ ವಿಷಯ ಹೇಳುವುದಾದರೆ ಪ್ರತಿಯೊಂದು ಸಲ ಒಂದೊಂದು ಪ್ರಶ್ನೆ ಬಂದಾಗ ಏನಾದರೂ ಉತ್ತರ ಹೇಳಿಬಿಡುತ್ತಾರೆ. ಕಂಪಲ್ಸರಿ ಎಜುಕೇಶನ್ ಬಿಲ್ ಎಂದು ಹೋದ ಸಲ ತಂದು ಪಾಸ್ ಮಾಡಿಸಿದರು. ಆ ಕಂಪಲ್ಸರಿ ಎಜುಕೇಶನ್ ಬಿಲ್ಲನ್ನು ನೀವು ಕಾರ್ಯಗತ ಮಾಡಿದ್ದೀರೋ, ಮತ್ತು ಎಷ್ಟು ಸ್ಕೂಲುಗಳನ್ನು ತೆರೆದಿದ್ದೀರಿ ? ಎಂದು ನಾನಾದರೂ ಕೇಳುತ್ತೇನೆ. ತಂದೆ ತಾಯಿಗಳು ಯಾರು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಎಂದು ಹೇಳುತ್ತಾರೋ ಅಂಥವರ ಮೇಲೆ ಕೇಸ್ ಹಾಕಬೇಕು. ಅದರಮೇಲೆ ಏನು ಕಾರ್ಯಕ್ರಮ ತಗೆದುಕೊಂಡಿದ್ದೀರಿ ! ಯಾವುದೇ ಇಲಾಖೆಯಲ್ಲಿ ಏನಾದರೂ ತಪ್ಪು ಕೆಲಸ ನಡೆದರೆ ಅವನ ಮೇಲೆ ಕೇಸ್ ಹಾಕುತ್ತಾರೆ. ಅದೇ ರೀತಿಯಾಗಿ ಇವತ್ತಿನ ದಿವಸ ಶ್ರೀಮಾನ್ ಕಂಠಿಯವರ ಮೇಲೆ ಏಕೆ ಕೇಸ್ ಹಾಕಬಾರದು ! ಎಂದು ನಾನು ಕೇಳುತ್ತೇನೆ. ಇವರೆಲ್ಲಾ ಈ ರೀತಿ ಮಾಡುತ್ತಿದ್ದಾರೆಂದು ತಾವು (ಸ್ಪೀಕರ್) ಬಿಟ್ಟು ಹೋಗುತ್ತೀರಿ ಸ್ವಾಮಿ ! (ನಗು).

ಆಮೇಲೆ ಇವತ್ತಿನ ದಿವಸ ದೇಶದಲ್ಲಿ ಭೂಹೀನರಾಗಿರುವ ಹರಿಜನ ಗಿರಿಜನರಿಗೆ ಅರಣ್ಯ ಇಲಾಖೆಯಲ್ಲಿ ಕೊಡುವಂತಹ ಭೂಮಿಯನ್ನು ಕೊಡದೆ, ಅದನ್ನು ದೊಡ್ಡ ದೊಡ್ಡ ಕಂಪೆನಿಯವರಾದ ಮಹೀಂದ್ರ ಅಂಡ್ ಮಹೀಂದ್ರ ಕಂಪೆನಿಗೆ ಕೊಟ್ಟಿದ್ದೀರಿ. ಏಕೆಂದರೆ, ಚುನಾವಣೆಯಲ್ಲಿ ನಿಮಗೆ ಜೀಪ್‌ಗಳು ಬೇಕು. ನೀವು ಕಾಫಿ ಬೆಳೆಸಿ, ಕಾಫಿಯನ್ನು ಜಾನ್ಸನ್‌ಗೆ ಕೊಟ್ಟು ಅವರಿಂದ ಏನೋ ಭಿಕ್ಷೆ ಬೇಡಿ ಏನೋ ತರುವ ಸಲುವಾಗಿ ಮಾಡುತ್ತಿದ್ದೀರಿ. ಇದು ಯಾವ ನ್ಯಾಯ ಸ್ವಾಮಿ ?

ಇನ್ನು ಏಕಸದಸ್ಯ ಕಮಿಶನಿನ ವಿಚಾರದಲ್ಲಿ ಸ್ವಲ್ಪ ಹೇಳುತ್ತೇನೆ. ನೀವು ಪ್ರದೇಶ ಕಾಂಗ್ರೆಸಿನಲ್ಲಿ ಸಬ್ ಕಮಿಟಿ ಕರೆದು ಏನು ರಿಸೊಲ್ಯೂಶನ್ ಮಾಡಿದಿರಿ ? ಅದರ ನೀತಿಯ ಮೇಲೆ ಮುಂದುವರಿದಿದ್ದೀರಾ ? ಗುಲ್ಬರ್ಗಾದಲ್ಲಿ ಗಲಾಟೆಯಾದರೆ, ಅದು ಕಮ್ಯುನಿಷ್ಟರು ಮಾಡಿದರು ಎಂದು ಶ್ರೀಮಾನ್ ವೀರೇಂದ್ರ ಪಾಟೀಲರು ಹೇಳಿದರು. ಮುನಿಸಿಪಾಲಿಟಿ, ಅಧ್ಯಕ್ಷರ ಮೇಲೆ ಹಾಗೂ ಇನ್ನುಳಿದವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಶ್ರೀಮಾನ್ ಗುರೆಡ್ಡಿಯವರು ಮತ್ತು ಶ್ರೀ ನಾಗಪ್ಪಯವರು ಹೇಳುತ್ತಾರೆ, ಸತ್ಯಾಗ್ರಹ ಮಾಡುವುದು ಓಟು ತೆಗೆದುಕೊಳ್ಳುವುದಕ್ಕಾಗಿ ಎಂದು. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ರೇಲ್ವೆ ಪ್ಲಾಟ್‌ಫಾರ್ಮ್ ಮೇಲೆ ಪೋಲೀಸರು ಬಂದು ಎಲ್ಲ ವ್ಯವಸ್ಥೆ ಮಾಡಿದ ಮೇಲೆ ನೀವು ಅಲ್ಲಿಗೆ ಹೋಗಿರುವುದು ನೋಡಿದರೆ ಇದು ಕೇವಲ ಇಲೆಕ್ಷನ್ ಸ್ಟಂಟ್ ಆಗಿದೆ ಎಂದು ಹೇಳಬಹುದು. ಬೆಳಗಾಂವಿಯು ತಮ್ಮ ರಾಜ್ಯದಲ್ಲಿ ಉಳಿಯಬೇಕು, ಕರ್ನಾಟಕದ ಯಾವ ಭಾಗವನ್ನೂ ಬಿಟ್ಟುಕೊಡುವುದಿಲ್ಲ ಎಂದು ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು.—ಕರ್ನಾಟಕದ ಅಭಿಮಾನ ನಿಮಗೆ ಒಬ್ಬರಿಗೇ ಇದೆಯೇನು ?

ಶ್ರೀ ಗಂಗಾಧರ ನಾಮೋಷಿ.—ನನಗೆ ಕರ್ನಾಟಕದ ಅಭಿಮಾನ ಇದೆ, ನಿಮಗೆ ಬರೀ ಟಿಕೆಟ್ ಪಡೆಯುವ ಅಭಿಮಾನ ಮಾತ್ರ ಇದೆ. ಕೇಂದ್ರದಲ್ಲಿ ಮಹಾರಾಷ್ಟ್ರದ ಪ್ರಮುಖರು ಈಗ ಒಳ್ಳೆಯ ಅಧಿಕಾರಕ್ಕೆ ಬಂದಿದ್ದಾರೆ. ಗೋವಾ ನಮ್ಮ ಕೈ ಬಿಟ್ಟು ಹೋಗುತ್ತದೆ. ಇದನ್ನು ವಿಚಾರ ಮಾಡಬೇಕು. ಗೋವಾ ಹೋಗಲಾರದು ಎಂದು ಧೈರ್ಯ ಮಾಡಿದರೆ ಬೆಳಗಾಂವಿ ಭಾಗವಾದರೂ ಉಳಿಯುತ್ತದೆ ಇಲ್ಲದಿದ್ದರೆ ಉಳಿಯುವುದಿಲ್ಲ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸ್ವಾಮಿ, ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಮಂತ್ರಿಮಂಡಳದಲ್ಲಿ ಈ ಸಭೆಗೆ ವಿಶ್ವಾಸವಿಲ್ಲ ಎಂದು ತಂದಿರತಕ್ಕ ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ನಿರ್ಣಯವನ್ನು ಸಭೆಯ ಮುಂದೆ ತಂದಾಗ್ಗೆ ನಿಜವಾಗಿಯೂ ಕೂಡ ಅನೇಕ ಜನರಿಗೆ ಆಶ್ಚರ್ಯವಾಯಿತು. ಈ ಶಾಸನ ಸಭೆಯ ಕಾರ್ಯ ಕಲಾಪಗಳನ್ನು ಮುಗಿಸಿ ಇನ್ನೊಂದು ತಿಂಗಳಿನಲ್ಲಿ ಸದಸ್ಯರೆಲ್ಲರೂ ಜನತೆಯ ಮುಂದೆ ಹೋಗಬೇಕಾಗಿದೆ. ಇದುವರೆಗೆ ಸರಕಾರ ಮಾಡಿರತಕ್ಕಂಥ ಸಾಧನೆಯನ್ನು ಜನರ ಮುಂದೆ ಇಟ್ಟು ಪ್ರತಿಯೊಬ್ಬ ಸದಸ್ಯರೂ ಕಾಂಗ್ರೆಸ್ ಪಕ್ಷದವರೇ ಆಗಲಿ ವಿರೋಧ ಪಕ್ಷದವರೇ ಆಗಲಿ ಜನತೆಯ ಅಭಿಮತವನ್ನು ಪಡೆಯಬೇಕಾದಂಥ ಈ ಸಂದರ್ಭದಲ್ಲಿ ಇಂಥ ನಿರ್ಣಯ ತರತಕ್ಕಂಥ ಅಗತ್ಯ ಏನು ಇಂಥ ಅವಿಶ್ವಾಸ ನಿರ್ಣಯದ ಔಚಿತ್ಯ ಏನು ಎಂಬುದನ್ನು ಎಲ್ಲರೂ ಯೋಚನೆ ಮಾಡಬೇಕಾದ ಪ್ರಶ್ನೆ. ಈ ಸಂದರ್ಭದಲ್ಲಿ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಊರಿನಲ್ಲಿ ಒಬ್ಬ ರೈತನು ಇದ್ದನಂತೆ. ಆ ರೈತನು ಲಂಚ ನಿರೋಧ ಅಧಿಕಾರಿಗೆ ಒಂದು ಅರ್ಜಿಹಾಕಿದನು. ಆ ಅರ್ಜಿಯಲ್ಲಿ ಅವನು ಬರೆದುಕೊಂಡಿದ್ದೇನೆಂದರೆ ಆ ತಾಲ್ಲೂಕಿನ ಅಧಿಕಾರಿಯು ಆ ರೈತನಿಂದ

ಲಂಚ ಕೇಳುತ್ತಿದ್ದಾನೆ ಎಂದು, ಹಾಗೂ ಈ ಬಗ್ಗೆ ವಿಚಾರಣೆ ನಡೆಸಬೇಕು ಎಂದು ಕೇಳಿಕೊಂಡಿದ್ದನು. ಲಂಚ ನಿರೋಧ ಅಧಿಕಾರಿಯು ಆ ಅರ್ಜಿಯನ್ನು ತೆಗೆದುಕೊಂಡು ಅದನ್ನು ಪರಿಶೀಲಿಸುವುದಕ್ಕಾಗಿ, ಲಂಚ ಕೇಳುತ್ತಾನೆ ಎಂದು ಆರೋಪಣೆ ಮಾಡಲ್ಪಟ್ಟ ಅಧಿಕಾರಿಯ ಹತ್ತಿರ ಬಂದು ವಿಷಯ ಏನು ಎಂದು ಕೇಳಿದನು. ನಿಜವಾಗಿಯೂ ಆ ಅಧಿಕಾರಿಯೂ ಸತ್ಯವಂತನಾಗಿದ್ದುದರಿಂದ ಲಂಚಕ್ಕೆ ಅವಕಾಶವೇ ಇರಲಿಲ್ಲ. ನನಗಂತೂ ಯಾವುದೂ ಗೊತ್ತಿಲ್ಲ, ಆ ರೈತನನ್ನೇ ಕರೆದು ಕೇಳೋಣ, ಆಗ ಗೊತ್ತಾಗುತ್ತದೆ ಎಂದು ಆ ಅಧಿಕಾರಿಯು ಹೇಳಿದನು. ಅವರು ಸೂಚಿಸಿದ ಪ್ರಕಾರ ರೈತನನ್ನು ಕರೆಸಿ ಈ ದೂರು ನಮಗೆ ಬಂದಿದೆ ಏತಕ್ಕೋಸ್ಕರ ಈ ದೂರು ತಂದಿರುವೆ ಎಂದು ಕೇಳಿದರು. ಆಗ ರೈತನು ಹೇಳಿದ್ದೇನೆಂದರೆ—ಸ್ವಾಮಿ, ನಿಜವಾಗಿಯೂ ಈ ಅಧಿಕಾರಿಯು ನನ್ನನ್ನು ಲಂಚ ಕೇಳಿಲ್ಲ, ಆದರೆ ನನಗೆ ಮೊದಲು ಬರೆಯುವುದಕ್ಕೆ ಓದುವುದಕ್ಕೆ ಬರುತ್ತಿರಲಿಲ್ಲ. ರಾತ್ರಿ ಶಾಲೆಗೆ ಹೋಗಿ ಬರೆಯುವುದಕ್ಕೆ ಓದುವುದಕ್ಕೆ ಇತ್ತೀಚೆಗೆ ಕಲಿತಿದ್ದೇನೆ. ನನಗೆ ಅರ್ಜಿ ಬರೆಯುವುದಕ್ಕೆ ಬರುತ್ತದೋ ಇಲ್ಲವೋ ನೋಡುವುದಕ್ಕಾಗಿ ಈ ಅರ್ಜಿಯನ್ನು ನಾನು ಮೊದಲು ಬರೆದೆನು. ನಾನು ಬರೆದಂಥ ಅರ್ಜಿಯ ಪರಿಣಾಮ ಏನಾದರೂ ಆಗುತ್ತದೆಯೇ, ನನ್ನ ಅರ್ಜಿ ಸರಕಾರದಲ್ಲಿ ಹಿಡಿಯುತ್ತಾರೆಯೇ ಎಂಬುದನ್ನು ನೋಡುವುದಕ್ಕಾಗಿ ಅದನ್ನು ಸರಕಾರಕ್ಕೆ ಕಳಿಸಿದೆನು. ನನ್ನ ಅರ್ಜಿಗೆ ಮಾನ್ಯತೆ ಇದೆ ಎಂಬುದು ಈಗ ನನಗೆ ಮನವರಿಕೆಯಾಯಿತು. ಇದಕ್ಕೂ ಹೆಚ್ಚಿಗೆ ಏನೂ ಇಲ್ಲ ಎಂದು ಆ ರೈತನು ನಿಜವಾದ ಸಂಗತಿ ಹೇಳಿದನು. ಅದನ್ನು ಕೇಳಿ ಆ ಅಧಿಕಾರಿಗಳು ನಕ್ಕು ಬಿಟ್ಟು ಅವನಿಗೆ ಹೋಗಲು ಹೇಳಿದರು. ರೈತನು ಅರ್ಜಿ ಮಾಡಿರುವ ಹಾಗೆ ಅದೇ ರೀತಿಯಲ್ಲಿ ಆಗಿದೆ ಈ ವಿರೋಧ ಪಕ್ಷದ ನಾಯಕರು ತಂದಿರತಕ್ಕಂಥ ಅವಿಶ್ವಾಸ ನಿರ್ಣಯದ ಪರಿಣಾಮ. ಅವಿಶ್ವಾಸ ನಿರ್ಣಯ ತಂದರೆ ಅದು ಚರ್ಚೆಯಾಗುತ್ತದೆಯೋ ಇಲ್ಲವೋ ನೋಡೋಣ ಎಂದು ತಂದಿರುವ ಹಾಗೆ ಇದೆ. ಇದರಲ್ಲಿ ಯಾವ ವಿಶೇಷವೂ ಇಲ್ಲ. ಒಂದು ನಿರ್ಣಯ ತಂದು ಈ ಸಭೆಯಲ್ಲಿ 30 ಜನ ಸದಸ್ಯರು ಎದ್ದು ನಿಂತು ಅದಕ್ಕೆ ಬೆಂಬಲ ಕೊಟ್ಟರೆ ಅಂಥ ನಿರ್ಣಯ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು ಎಂದು ನಿಯಮ ಇದೆ. ಅದೇ ರೀತಿಯಾಗಿ ಈ ನಿರ್ಣಯ ಈಗ ಚರ್ಚೆಗೆ ಬಂದಿದೆ ಅಷ್ಟೇ.

ಈಗ ಮಹಾ ಚುನಾವಣೆಯು ಹತ್ತಿರ ಬಂದಿರುವುದರಿಂದ ನಾವು ಏನು ಹೇಳಬೇಕಾದರೂ ಅದನ್ನು ಜನತೆಯ ಮುಂದೆ ಹೇಳಬೇಕಾಗುತ್ತದೆ. ನಾವು ಹೇಳುವುದು ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಂಡು ನಾವು ಹೇಳುವುದನ್ನು ಜನತೆ ತೀರ್ಮಾನ ಮಾಡುತ್ತದೆ. ಇಂಥ ಸನ್ನಿವೇಶದಲ್ಲಿ ಈ ಅವಿಶ್ವಾಸ ನಿರ್ಣಯ ಸಭೆಯಲ್ಲಿ ತರುವುದು ಉಚಿತವೇ ಎಂದು ಕೇಳುತ್ತೇನೆ. ಶ್ರೀಮಾನ್ ಶಿವಪ್ಪನವರು ಈ ನಿರ್ಣಯವನ್ನು ಮಂಡಿಸುತ್ತಾ ಭಾಷಣ ಮಾಡಿದರೂ ಕೂಡ ಅವರು ಯಾವ ಹೊಸ ವಿಷಯವನ್ನು ಹೇಳಲಿಲ್ಲ. ಶ್ರೀ ಶಿವಪ್ಪನವರ ಭಾಷಣ ಚುನಾವಣೆಯ ಭಾಷಣವಾಗಿತ್ತು. ಚುನಾವಣೆಯ ಭಾಷಣ ಈ ಮಾನ್ಯ ಸಭೆಯಲ್ಲಿ ಮಾಡಿದರು ಎಂದು ಹೇಳಬಹುದು. ಶ್ರೀಮಾನ್ ಮುಕ್ಕಣ್ಣಪ್ಪನವರಂತೂ ಇಂಗ್ಲೀಷ್ ಕನ್ನಡ ಎರಡೂ ಸೇರಿಸಿ ಅಭಿನಯ ಪೂರ್ವಕವಾಗಿ ಭಾಷಣ ಮಾಡಿದರು. ಶ್ರೀಮಾನ್ ನಾಮೋಷಿಯವರು ಗೊಬ್ಬರ ಅಕ್ಕಿ ಮೊದಲಾದ ವಿಷಯ ಹೇಳಿ ವ್ಯಾಪಾರಿ ಭಾಷಣ ಮಾಡಿದರು. ಕಳೆದ ಐದು ವರ್ಷಗಳಲ್ಲಿ ಸರಕಾರ ಏನೇನು ಮಾಡಲಿಲ್ಲ ಎಂಬುದನ್ನು ಚಿತ್ರದುರ್ಗ ಜಿಲ್ಲೆಯ ಮಟ್ಟಿಗೆ ಶ್ರೀಮಾನ್ ದುಗ್ಗಪ್ಪನವರು ಹೇಳಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಸರಕಾರ ಏನೇನು ಮಾಡಿದೆ ಎಂಬುದಕ್ಕೆ ಅಂಕಿ ಅಂಶಗಳನ್ನು ಕೊಟ್ಟು ನಾನು ಹೇಳುತ್ತೇನೆ. ಎಷ್ಟು ಪ್ರಗತಿ ಸಾಧನೆಯಾಗಿದೆ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ 70 ಸಾವಿರ ಎಕರೆ ಭೂಮಿಗೆ ನೀರು ಕೊಟ್ಟಿದೆ. 70 ಸಾವಿರ ಎಕರೆ ನೀರಾವರಿಯಾದುದನ್ನು ಇವರು ನೋಡಿಲ್ಲವೇ ? ಈ ರಸ್ತೆಯಲ್ಲಿ ಬಸ್ಸಿನಿಂದ ಹೋಗುವಾಗ ಕಣ್ಣಿಗೆ ಇದು ಕಾಣುತ್ತದೆ. ಇವರು ಕಣ್ಣು ಮುಚ್ಚಿಕೊಂಡು ಹೋಗುತ್ತಾರೇನು ? ಬಸ್ಸಿನಿಂದ ಹೋಗುವಾಗ ಕಣ್ಣು ಮುಚ್ಚಿಕೊಂಡು ಹೋಗಬೇಡಿ ಎಂದು ಹೇಳುತ್ತೇನೆ. ಸಾಯಿಲ್ ಕನ್‌ಸರ್ವೇಷನ್ ಕೆಲಸ ದೊಡ್ಡ ಪ್ರಮಾಣದಲ್ಲಿ ಮಾಡಲಾಗಿದೆ. ಎಲ್ಲಾ ಪ್ರಗತಿಯನ್ನು ಒಂದೇ ದಿವಸದಲ್ಲಿ ಸಾಧನೆ ಮಾಡುವುದು ಯಾರಿಗೂ ಸಾಧ್ಯವಿಲ್ಲ. ಇನ್ನು ಇರಿಗೇಷನ್ ಪಂಪ್ ಸೆಟ್ಸ್ ವಿಚಾರ ಹೇಳುವುದಾದರೆ, ಚಿತ್ರದುರ್ಗ ಜಿಲ್ಲೆಯಲ್ಲಿ 5,031 ಪಂಪ್ ಸೆಟ್ಸ್ ಹಾಕಿದ್ದಾರೆ. ಇದು ಹೌದೋ ಅಲ್ಲವೋ ಅವರು ಹೇಳಲಿ. ಪ್ರಗತಿ ಸಾಧನೆಯಾಗಿದ್ದರೂ ಕೂಡ ಕಣ್ಣು ಮುಚ್ಚಿಕೊಂಡು ಕಾಂಗ್ರೆಸ್ ಸಂಸ್ಥೆ ಬಿಟ್ಟಿದ್ದಾರೆ. ಜನ ಏನು ಹೇಳಿದರೂ ಕೇಳುತ್ತಾರೆ ಎಂದು ಏನು ಬೇಕಾದರೂ ಹೇಳುವುದು ಸರಿಯಲ್ಲ. ಈಗ ಜನತೆ ಕಣ್ಣು ಬಿಡುತ್ತಾರೆ. ಅಂಕಿ ಅಂಶಗಳನ್ನು ನೋಡದೆ ವಿಚಾರ ತಿಳಿದುಕೊಳ್ಳದೆ ಹೇಳುವುದು ಸರಿಯಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ 531 ಹಳ್ಳಿಗಳಿಗೆ ವಿದ್ಯುತ್ ಶಕ್ತಿ ಸರಬರಾಜು ಮಾಡಲಾಗಿದೆ. ಇದು ಸತ್ಯವೆಂದು ಹೇಳುತ್ತಾರೋ ಅಥವಾ ಸುಳ್ಳು ಎಂದು ಹೇಳುತ್ತಾರೋ ? ಮದ್ರಾಸ್ ರಾಜ್ಯದ ಮೂರ್

(ಶ್ರೀ ಎಂ. ಸಿ. ಬಸಪ್ಪ)

ಜಿಲ್ಲೆಗಳಲ್ಲಿ ನಾನು ಪ್ರವಾಸ ಮಾಡಿ ಒಂದು ಎಕರೆ ನೀರಾವರಿ ಮಾಡುವುದಕ್ಕೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ತಿಳಿದುಕೊಂಡು ಬಂದಿದ್ದೇನೆ. ಮದ್ರಾಸ್ ರಾಜ್ಯದಲ್ಲಿ ನೈಸರ್ಗಿಕ ಸೌಲಭ್ಯ ಇರುವುದರಿಂದ ಶೇಕಡ 40 ರಷ್ಟು ನೀರಾವರಿ ಮಾಡಿದ್ದಾರೆ. ಅಲ್ಲಿ ಒಂದು ಎಕರೆಗೆ 200 ರೂಪಾಯಿ ಖರ್ಚಾಗುತ್ತದೆ. ಕಾವೇರಿ ಡೆಲ್ಟಾ ಪ್ರದೇಶ ಸಹ ಅಲ್ಲಿ ಇದೆ. ಆದರೆ ನಮ್ಮಲ್ಲಿ ಒಂದು ಎಕರೆ ನೀರಾವರಿಯಾಗುವುದಕ್ಕೆ ಎರಡೂವರೆ ಸಾವಿರ ರೂಪಾಯಿ ಖರ್ಚು ಆಗುತ್ತದೆ.

Sri S. SIVAPPA.—He is telling the truth. It shows how much goes to the pockets of the contractor.

Sri K. LAKKAPPA.—Rs. 40,000 has been mis-used by the Soil Conservation Officer of Tumkur; what have you done?

Sri RAMAKRISHNA HEGDE (Minister for Finance).—Mr. Speaker, Sir, may I make a submission? From the opposition, there are still many speakers who would participate in this discussion. Do they want that this discussion should be fruitful and should go on in a smooth manner or would they also like us to disturb them while they speak? They should not forget that we are three here to one that side.

(*Interruption*)

Sri S. SIVAPPA.—Sir, I vehemently protest. He must know his position. He is not here to direct us.

(*Interruption*)

Mr. SPEAKER—Order, order.

(*Interruption*)

Order, order, order, order. By tomorrow I will cease to say 'order, order'; therefore, I will have to say it as many times as possible today. (*laughter*)

The point is, we have gone on till now with right arguments, wrong arguments, right statements and incorrect statements. Let them be met. Let the members be heard patiently. With the list that is coming to me, I will not be able to comply and the whips are sending more names and I am trying to accommodate all the members. I cannot really understand half a dozen members disturbing a person who is making a statement. If he says anything the members may make a note of it and say it is wrong when they get their chances.

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಶ್ರೀಮಾನ್ ದುಗ್ಗಪ್ಪನವರು ಆರ್.ಟಿ.ಎ. ಬಗ್ಗೆ ಪ್ರಸ್ತಾಪ ಮಾಡಿದರು. ಇದೇ ಅಧಿವೇಶನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಒಂದು ತಿದ್ದುಪಡಿ ಮಸೂದೆಯನ್ನು ತಂದಂಥ ಸಂದರ್ಭದಲ್ಲಿ ಹೇಳಿದರು : ಆರ್.ಟಿ.ಎ.ಗಳು ಕ್ವಾಸಿ ಜುಡಿಷಿಯಲ್ ಬಾಡೀಸ್; ಸರ್ಕಾರದವರು ಅವುಗಳಿಗೆ ಡೈರೆಕ್ಷನ್ ಕೊಡುವುದಕ್ಕಾಗುವುದಿಲ್ಲ. ಅವರಿಗೆ ತಿಳುವಳಿಗೆ ಕೊಡುವ ಹಕ್ಕು ಸರ್ಕಾರಕ್ಕೆ ಇರುವುದಿಲ್ಲ ಎಂದು. ಶ್ರೀಮಾನ್ ದುಗ್ಗಪ್ಪನವರು ಹೇಳಿದಂಥ ಅನಾಮಲಿ ಏನಿದೆ, ಚಿತ್ರದುರ್ಗದಿಂದ ತಿರುಪತಿಗೆ ಲೈನ್ ಕೊಡುವುದು, ಹಿರಿಯೂರಿನಿಂದ ಕೊಯಮತ್ತೂರಿಗೆ ಲೈನ್ ಕೊಡುವುದು, ಇಂಥವನ್ನು ತಡೆಗಟ್ಟುವುದಕ್ಕಾಗಿಯೇ ಈ ಸಭೆಯಲ್ಲಿ ತಿದ್ದುಪಡಿ ಮಸೂದೆ ಪಾಸಾಗಿದೆ. ಕ್ವಾಸಿ ಜುಡಿಷಿಯಲ್ ಬಾಡೀಸ್, ಇದು ಸರಿ ಎಂದು ಒಂದು ತೀರ್ಮಾನವನ್ನು ತೆಗೆದುಕೊಂಡರೆ ಅದಕ್ಕೆ ಸರ್ಕಾರದ ಮೇಲೆ ಆರೋಪ ಹೊರಿಸುವುದು ಎಷ್ಟು ಸಾಧು ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು.

ಅವರು ಅಧಿಕಾರಿಗಳ ಬಗ್ಗೆ ಹೇಳಿದರು. ಪ್ರಮೋಷನ್‌ನಲ್ಲಿ ಅನೇಕ ಅವ್ಯವಹಾರಗಳು ನಡೆದಿವೆ ಎಂದು ಹೇಳಿದರು. ಟ್ರಾನ್ಸ್‌ಫರ್ ಬಗ್ಗೆ ಕೂಡ ರಿಟ್ ಪಿಟಿಷನ್‌ಗಳು ಹೈಕೋರ್ಟಿನಲ್ಲಿರುವಾಗ ಯಾವಾಗ ಅಧಿಕಾರಿಗೆ ಅನ್ಯಾಯವಾಗುತ್ತದೆಯೋ ಆಗ ಆತ ಸುಮ್ಮನೆ ಕುಳಿತುಕೊಳ್ಳುತ್ತಾನೆಂದು ಹೇಳುವುದಕ್ಕಾಗುವುದಿಲ್ಲ. ಅವರ ವೈಯಕ್ತಿಕವಾದ ಭಾವನೆಗಳು ಏನಿವೆ ಅವುಗಳನ್ನು ಮಾತ್ರ ಹೇಳಿದ್ದಾರೆ. ಕಾಮಾಲೆ ಖಾಯಿಲೆ ಬಂದ ಮನುಷ್ಯನಿಗೆ ಅವನು ನೋಡುವುದೆಲ್ಲ ಹಳದಿಯಾಗಿ ಕಾಣುತ್ತದೆ. ಹೀಗಾಗಿ ಅವರ ಭಾವನೆಯನ್ನು ಅವರು ವ್ಯಕ್ತಪಡಿಸಿದ್ದಾರೆ.

ಕೊನೆಯದಾಗಿ, ಈ ನಿರ್ಣಯವನ್ನು ವಿರೋಧಿಸಿ ಮುಗಿಸುವುದಕ್ಕೆ ಮುಂಚೆ ಇನ್ನು ರಾಜ್ಯದ ಮಟ್ಟದಲ್ಲಿ ನಡೆದಿರತಕ್ಕ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮತ್ತು ನಡೆಯುತ್ತಿರುವ ಕಾರ್ಯಕ್ರಮಗಳ ಬಗ್ಗೆ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ಹಾಗೆ, ಸಂಬಂಧಪಟ್ಟ ಮಂತ್ರಿಗಳು ಹೇಳುವ ಅವಕಾಶವಿರುವುದರಿಂದ ಈ ನಿರ್ಣಯವನ್ನು ತಂದಿರತಕ್ಕದ್ದು ಸರಿಯಾದುದಲ್ಲವೆಂದು ಹೇಳುತ್ತೇನೆ. ಬಹುಶಃ ಈ ಒಂದು ಅಸ್ತ್ರವೇನಿದೆ, ಅವಿಶ್ವಾಸ ನಿರ್ಣಯವನ್ನು ತರತಕ್ಕದ್ದು, ಇದು ವಿರೋಧ ಪಕ್ಷದವರಿಗೆ ಒಂದು ಪವಿತ್ರವಾದ ಅಸ್ತ್ರ. ಅದನ್ನು ಉಪಯೋಗಿಸತಕ್ಕ ರೀತಿನೀತಿಯನ್ನು ಅವರು ಅರಿತುಕೊಂಡಿದ್ದರೂ ಅದನ್ನು ಲೆಕ್ಕವಿಲ್ಲದ ಹಾಗೆ ಉಪಯೋಗಿಸಿ ಅದರ ಶಕ್ತಿಯನ್ನು ಅವರು ಕುಂದಿಸಿಕೊಳ್ಳುತ್ತಿದ್ದಾರೆ. ಈ ಅವಿಶ್ವಾಸ ನಿರ್ಣಯವನ್ನು ಏನು ತಂದಿದ್ದಾರೆ, ಅದರಿಂದ ಅದರ ಶಕ್ತಿಯನ್ನು ದುರುಪಯೋಗ ಮಾಡಿಕೊಳ್ಳುವುದನ್ನು ಇನ್ನು ಮುಂದಾದರೂ ಮಾಡದೆ ಇರಲಿ ಎಂದು ಅವರಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಅಣ್ಣಾರಾವ್ ಗಣಮುಖಿ (ಅಫಜಲ್ಪುರ).—ಅಧ್ಯಕ್ಷರೇ, ಈಗ ಮಾತನಾಡಿದ ಸದಸ್ಯರು ಹೇಳಿದ ವಿಚಾರಗಳನ್ನು ಕೇಳಿ ನನಗೆ ಆಶ್ಚರ್ಯವಾಯಿತು. ದುರುದ್ದೇಶದಿಂದ ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆಂದು ಹೇಳುವುದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆ ಎನ್ನುವುದನ್ನು ನೋಡಬೇಕು. ಏಕೆಂದರೆ, ನಿನ್ನೆ ಅವರು ಮಾಡಿರುವ ಪ್ರಯತ್ನಗಳನ್ನು ಒಂದೇ ಸಮನೆ ನೋಡಿದರೆ ಈ ಅವಿಶ್ವಾಸ ನಿರ್ಣಯಕ್ಕೆ 33 ಮತಗಳು ಸಿಕ್ಕಬಾರದು ಎನ್ನುವ ಪ್ರಯತ್ನ ಮಾಡಿದರು. ನನ್ನ ಎದುರಿಗೇ ಕೆಲವು ಸದಸ್ಯರನ್ನು ಒಲಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದರು. ನಿನ್ನೆ ಟೀ ವಿರಾಮಕ್ಕೆ ಎದ್ದಿದ್ದಾಗ ಕೆಲವು ಸದಸ್ಯರನ್ನು ಹಿಡಿದು ಇಂಥ ಮಂತ್ರಿಗಳನ್ನು ಉದ್ದೇಶಪೂರ್ವಕವಾಗಿ ಕಾಣಬೇಕು ಎಂದು ಹೇಳಿದರು. ಇದು ಬಹಳ ನಾಚಿಕೆಗೇಡಿನ ಮಾತು. ಏಕೆ ಹೀಗೆ ಇನ್‌ಫ್ಲುಯೆನ್ಸ್ ಮಾಡುತ್ತಾರೆ? ಇದು ನನಗೆ ಅರ್ಥವಾಗುವುದಿಲ್ಲ. ವಿರೋಧ ಪಕ್ಷ ಉಸಿರು ಇದ್ದಂತೆ. ಅದರ ಕರ್ತವ್ಯವೇನೆಂದರೆ, ಸಕಾರಣವಾಗಿ ವಿರೋಧಿಸುವುದೇ ಆಗಿದೆ. ಕೆಲವು ಜನ ರಾಜಕಾರಣಿಗಳು ಅಥವಾ ಸ್ಟೇಟ್ಸ್‌ಮೆನ್ ಕೆಲವು ಮಾತುಗಳನ್ನು ಬರೆಯುತ್ತಿದ್ದಾರೆ. ಕೆಲವು ರಾಜ್ಯಗಳಲ್ಲಿ ಪ್ರಜಾಪ್ರಭುತ್ವ ಚೆನ್ನಾಗಿ ನಡೆಯುವುದಿಲ್ಲ, ಅಲ್ಲಿ ಕೆಲವು ಜನರು irresponsible obedience create ಮಾಡಿದ್ದಾರೆ ಎಂದು ಹೇಳುತ್ತಾರೆ. ಅಂಥ ಜನ ಯಾವ ಯಾವ ಪಕ್ಷದಲ್ಲಿದ್ದಾರೆ ಅವರು ಪಕ್ಷದವರು ಹೇಳಿದ್ದನ್ನು ಮಾಡುತ್ತಾರೆ ಎಂದು ನನಗನ್ನಿಸುತ್ತದೆ. ಆ ಮಾತನ್ನು ನಾನು ಎಲ್ಲರಿಗೂ ಹೇಳುವುದಿಲ್ಲ. ಹೀಗೆ ಪ್ರಭಾವ ಬೀರಲು ಪ್ರಯತ್ನ ಮಾಡುವವರು ಎಷ್ಟು ಜನರಿದ್ದಾರೆ ಎನ್ನುವ ಲೆಕ್ಕವನ್ನು ತೆಗೆದುಕೊಂಡರೆ ಶಾಸಕರ ಭವನದಲ್ಲಾಗಲೀ, ಬೆಂಗಳೂರು ನಗರದಲ್ಲಾಗಲೀ, ಇತರ ಜಿಲ್ಲೆಗಳಲ್ಲಾಗಲೀ ಬಹಳ ಕಡೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆ ಜನರಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಪ್ರಭಾವ ವ್ಯಾಪಾರಿಗಳ ಒಂದು ವರ್ಗವೇ ಸೃಷ್ಟಿಯಾಗಿದೆ. ಇದು 20 ವರ್ಷಗಳ ಕಾಂಗ್ರೆಸ್ ಆಡಳಿತದ ಫಲ ಎಂದು ಹೇಳಬೇಕಾಗಿದೆ. ಇಂಥ ಜನರನ್ನು ನೋಡಬೇಕಾದರೆ ಶಾಸಕರ ಭವನಕ್ಕೆ ಬಂದರೆ ಇವರೆಲ್ಲ ಕಾಂಗ್ರೆಸ್ ಶಾಸಕರ ಕೋಣೆಗಳ ಮುಂದೆ 'ಕ್ಯೂ' ನಿಂತಿರುತ್ತಾರೆ. ವಿರೋಧ ಪಕ್ಷಕ್ಕೆ ಸೇರಿರುವ ನಮ್ಮ ಕೋಣೆಯ ಕಡೆ ಒಂದು ನಾಯಿಯೂ ಬರುವುದಿಲ್ಲ. ಅದಕ್ಕಾಗಿ ನಾನು ಹೇಳುವುದು ಏನೆಂದರೆ, ನಿಜವಾಗಿ ಬರುವ ಟೀಕೆಗಳನ್ನು ಸ್ವಾಗತಿಸಬೇಕು. ಆದರೆ ಇಲ್ಲಿ ಏನು ಮಾಡುತ್ತಾರೆಂದರೆ, ಯಾವ ರೀತಿಯ ಟೀಕೆಯೇ ಇರಲಿ ಅವುಗಳನ್ನು ನಿರಾಧಾರವಾದ ಟೀಕೆಗಳೆಂದು ಮಂತ್ರಿಮಂಡಲದವರು ಹೇಳುತ್ತಾರೆ. ಕಾಂಗ್ರೆಸ್ ಪಕ್ಷದವರು ಹೇಳುವುದು ಮಾತ್ರ ಸರಿ, ವಿರೋಧ ಪಕ್ಷದವರು ಮಾಡುವ ಭಾಷಣಗಳಲ್ಲಿ ಪ್ರಜಾಪ್ರಭುತ್ವವನ್ನು ತಲೆಕೆಳಗು ಮಾಡುವಂಥ ವಿಷಯಗಳನ್ನು ಹೇಳುತ್ತಾರೆ ಎಂದು ಹೇಳುತ್ತಾರೆ. ಇಲ್ಲಿ ನಡೆಯುವ ವಿಷಯಗಳನ್ನು ಜನರು ತಿಳಿದುಕೊಂಡರೆ ಒಳ್ಳೆಯದು ಎಂದು ನನಗೆ ಅನ್ನಿಸುತ್ತದೆ. ಪ್ರಜಾಪ್ರಭುತ್ವವನ್ನು ಹತ್ತಿಕ್ಕಲು ಯಾವ ಯಾವ ದೃಷ್ಟಿಯಿಂದ ಮಾಡಬೇಕೋ ಅದನ್ನೆಲ್ಲ ಅವರೇ ಮಾಡುತ್ತಿದ್ದಾರೆ. ಇದು ಸರಿಯಾದ ಲಕ್ಷಣವಲ್ಲ, ಎಂದು ನಾನು ಹೇಳಬಯಸುತ್ತೇನೆ. ಈ ಸರ್ಕಾರದಲ್ಲಿ ನಮ್ಮ ಸ್ನೇಹಿತರು ಹೇಳಿದಂತೆ ಎಲ್ಲ ತರಹ ದುರಾಡಳಿತವಿದೆ, ಪೊಲಿಟಿಕಲ್ ಮಿಸ್-ಮ್ಯಾನೇಜ್‌ಮೆಂಟ್, ಎಕನಾಮಿಕಲ್ ಮಿಸ್-ಮ್ಯಾನೇಜ್‌ಮೆಂಟ್, ಫೈನಾನ್‌ಷಿಯಲ್ ಅನಾಮಲಿ, ಒಂದಲ್ಲ ಎಲ್ಲ ತರಹ ದುರಾಡಳಿತಗಳೂ

(ಶ್ರೀ ಅಣ್ಣಾರಾವ್ ಗಣಮುಖಿ)

ಇವೆ. ಇದು ಎಲ್ಲರಿಗೂ ಕಾಣಬರುತ್ತಿದೆ. ಒಂದು ವಿಷಯವನ್ನು ಹೇಳಬೇಕಾದರೂ ಕೂಡ ಇತಿಹಾಸವನ್ನೇ ಬರೆಯಬಹುದು. ಹೀಗೆಲ್ಲ ಇರುವಾಗ ವಿರೋಧ ಪಕ್ಷದವರು ಮಾಡುವ ಟೀಕೆಗಳು ನಿರಾಧಾರವಾದುವು ಎಂದು ಏಕರೂಪವಾಗಿ ಒಂದೇ ತರಹ ಉತ್ತರವನ್ನು ಕೊಡುವುದು stupidityಯ ಲಕ್ಷಣ ಎಂದು ಹೇಳುತ್ತೇನೆ. ಹೀಗೆ ಮಾಡಬಾರದು.

4-00 P.M

ನಮ್ಮ ಹಣಕಾಸಿನ ಸಚಿವರು ಹೇಳಿದ ಒಂದು ವಿಷಯ ಕೇಳಿ ಬಹಳ ಸಂತೋಷವಾಯಿತು. ಆದರೆ ಸ್ವಲ್ಪ ವಿಮರ್ಶೆಮಾಡಿದರೆ ಸೇಕಡ 45ರಷ್ಟು ಓಟು ತೆಗೆದುಕೊಂಡು ಇಲ್ಲಿ ಸೇಕಡ 66 ಸೀಟುಗಳನ್ನು ಆಕ್ರಮಿಸುವುದು ನಾಚಿಗೇಡು. ಪ್ರಜಾಪ್ರಭುತ್ವದಲ್ಲಿ ಮೈನಾರಿಟಿಯವರು ಮತ್ತು ಮೆಜಾರಿಟಿಯವರು ಎಲ್ಲರೂ ಸದಸ್ಯರು, ಮೆಜಾರಿಟಿ ಎಷ್ಟು ಪ್ರತಿನಿಧಿಸುತ್ತದೆ, ಅಂಕಿ ಸಂಖ್ಯೆಗಳನ್ನು ನೋಡಿ; ಮೈಸೂರು ಸಂಸ್ಥಾನದಲ್ಲಿ 49.80 ಇದೆ. ಮೈನಾರಿಟಿ ಓಟು ತೆಗೆದುಕೊಂಡು ಬಂದು ಮೆಜಾರಿಟಿಯಲ್ಲಿದ್ದೇವೆಂದು ಒಂದು ರೀತಿ ಆಡಳಿತ ನಡೆಸುವುದು ಸರಿಯಲ್ಲ. ಮುಖ್ಯವಾದುದು ಕ್ವಾಲಿಟಿ, ಕ್ವಾಂಟಿಟಿ ಅಲ್ಲ, ಸಂಖ್ಯಾಬಲ ದೊಡ್ಡದಾಗಿ ಕ್ವಾಲಿಟಿ ಇಲ್ಲದಿದ್ದರೆ ಪ್ರಯೋಜನವಿಲ್ಲ. ಈಗಾಗಲೆ ಸರಕಾರದ ಆಡಳಿತದಲ್ಲಿನ ದೋಷಗಳನ್ನು ತೋರಿಸಿದ್ದೇವೆ. ಉರ್ದುವಿನಲ್ಲಿ ಒಂದು ಗಾದೆ ಇದೆ ಪ್ರಭಾವಕ್ಕೊಳಗಾಗಿ ಒಂಟೆಯಂತೆ ಕತ್ತನ್ನು ಎತ್ತಿಕೊಂಡು ನಾವೇನೂ ಮಾಡಬಾರದ್ದನ್ನು ಮಾಡಿಲ್ಲವೆಂದು ಸುಮ್ಮನಿದ್ದರೆ ಯಾರು ಕೇಳುತ್ತಾರೆ ? ಜನರು ವಿಧಾನಸೌಧಕ್ಕೆ ಬರಬೇಕಾದರೆ ಕಷ್ಟ. ಪ್ರಜಾಪ್ರಭುತ್ವವಿರುವ ಇಂಗ್ಲೆಂಡ್ ಅಥವಾ ಅಮೇರಿಕಾಗಳಲ್ಲಿ ಸರಕಾರ ಯಾವರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ಕೂಡ ಅಲ್ಲಿಗೆ ಹೋದವರು ನೋಡಿಕೊಂಡುಬಂದಿಲ್ಲ. ಹೋಗಿ ಬಂದರೂ ಕೂಡ ಇಲ್ಲಿ ಮಾಮೂಲಿನಂತೆಯೇ ಕೆಲಸ ಮಾಡುತ್ತಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿಲ್ಲ. ಎಲ್ಲವೂ Self-interest ನಿಂದ ನಡೆಯುತ್ತಿದೆ. ಕೆಲವು ಸಂದರ್ಭಗಳಲ್ಲೇಕೆ ಕೆಲಸವನ್ನು ಪೂರ್ಣ ಮಾಡುತ್ತಿಲ್ಲ ಎಂದು ಕೇಳಿದರೆ ಮಂತ್ರಿಗಳನ್ನು ಕೇಳಿ ಎನ್ನುತ್ತಾರೆ. ಹೀಗಾಗಿ ನಮಗೆ ಕೇಳುವುದಕ್ಕೇ ನಾಚಿಕೆಯಾಗುತ್ತದೆ. ಸರ್ವಿಸಸ್‌ನಲ್ಲಿ ಅನೀತಿ ಬೆಳೆದು ಪ್ರಜಾಪ್ರಭುತ್ವ ಕೆಡುತ್ತಿದೆ. ಜನತೆಗೆ ವಿದ್ಯೆ ಇಲ್ಲದೆ ಚುನಾವಣೆಯ ಕಾಲದಲ್ಲಿ ಅವರು ಸರಿಯಾದ ಪ್ರತಿನಿಧಿಗಳನ್ನು ಆರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ, ಹಳ್ಳಿಗಳ ಜನರ ಮಟ್ಟ ಸುಧಾರಿಸಿಲ್ಲ. ಮಂತ್ರಿಗಳು ಹಳ್ಳಿಗಳ ಕಡೆ ಹೋಗಿ ಏನೋ ಮಾಡಿ ಬಂದಹಾಗೆ ಫೋಟೋ ತೆಗೆಸಿಕೊಂಡುಬಿಡುತ್ತಾರೆ. ಈಗ ಚುನಾಯಿತರಾಗಿ ಬಂದಿರುವವರಲ್ಲಿ ಅನೇಕರು ತಪ್ಪು ಹೆಜ್ಜೆ ಇಟ್ಟು ಬಂದಿರಬೇಕು. ಜನರು ಸಾಕಷ್ಟು ವಿದ್ಯಾವಂತರಾಗುವವರೆಗೆ ಪ್ರಜಾಪ್ರಭುತ್ವವು ಯಶಸ್ವಿಯಾಗಿ ನಡೆಯುವುದಿಲ್ಲ ಎಂಬುದನ್ನು ಎಲ್ಲರೂ ಒಪ್ಪಬೇಕು. ಅಧಿಕಾರ ದುರುಪಯೋಗಪಡಿಸಿಕೊಂಡು ಲೈಸೆನ್ಸ್, ಪರ್ಮಿಟ್ ಮುಂತಾದುವನ್ನು ಕೊಡುತ್ತಿದ್ದಾರೆಂದು ಮಾನ್ಯ ಸದಸ್ಯರು ಅಪಾದನೆ ಮಾಡಿದ್ದಾರೆ, ಇದಕ್ಕೆ ಅವಕಾಶ ಕೊಡಬಾರದು. ಈಗ ಎರಡನೆಯ ದೇಶದಿಂದ ಸಾಲ ತಂದು ಜನರಿಗೆ ಬೇಕಾದ ಕೆಲಸ ಮಾಡಿಕೊಟ್ಟು ಸಾಲದ ಹೊರೆಯನ್ನು ನಮ್ಮ ಮೇಲೆ ಮತ್ತು ನಮ್ಮ ಮಕ್ಕಳಮೇಲೆ ಹೊರಿಸುತ್ತಿದ್ದಾರೆ. ಇದು ಜನರಿಗೆ ಉಪಕಾರವೇ ? ಇದು ಖಂಡಿತ ಉಪಕಾರವಲ್ಲ, ಹೊರೆಯಾಗುತ್ತದೆ. ಅಲ್ಲದೆ ಈ ಉಪಕಾರ ಕೂಡ ನ್ಯಾಯವಾಗಿ ಯಾರಿಗೆ ದೊರೆಯಬೇಕೋ ಅವರಿಗೆ ದೊರೆಯುತ್ತಿಲ್ಲ; ಪ್ರಭಾವ ಬೀರುವವರಿಗೆ ದೊರೆಯುತ್ತಿದೆ. ಗೊಬ್ಬರದ ವಿಚಾರ ಮಾನ್ಯ ಪುಟ್ಟಸ್ವಾಮಿಯವರಿಗೆ ಗೊತ್ತಿರಬೇಕು, ಸಣ್ಣ ಹಿಡುವಳಿದಾರರಿಗೆ ಅದು ಸಿಕ್ಕುವುದಿಲ್ಲವೆಂದು ವರದಿಯಾಗಿದೆ. ಪ್ರಭಾವ ಬೀರದವರಿಗೂ, ಸಾಮಾನ್ಯ ಜನರಿಗೂ ಬೇಕಾದ ಸೌಕರ್ಯ ದೊರೆಯುವಂತಿರಬೇಕು. ಇಡೀ ಭಾರತ ದೇಶದಲ್ಲಿ ನಾವೇನಾದರೂ ತಪ್ಪು ಕೆಲಸ ಮಾಡಿದರೆ, ತೂಕವಿಲ್ಲದೆ ಮಾತನಾಡಿದರೆ ಅದು ಹೊರ ದೇಶಗಳವರೆಗೂ ಹೋಗುತ್ತದೆ. ಆ ದೃಷ್ಟಿಯಿಂದ ಜನರನ್ನು ವಿದ್ಯಾವಂತರನ್ನಾಗಿ ಮಾಡಿ ಪ್ರಜಾಪ್ರಭುತ್ವ ಬೆಳಸಬೇಕು.

ಈಗ ಕೆಲವರು ಸೋಷಿಯಲಿಸಂ ವಿಚಾರ ಮಾತನಾಡಿದರು. ಪ್ರಜಾಪ್ರಭುತ್ವ ಮತ್ತು ಸೋಷಿಯಲಿಸಂ ಎರಡನ್ನೂ ನೋಡಿದರೆ ಒಂದು ದಕ್ಷಿಣಕ್ಕೆ ಹೋದರೆ ಮತ್ತೊಂದು ಉತ್ತರಕ್ಕೆ ಹೋಗುತ್ತದೆ, ಒಂದು ಕುದುರೆ ಒಂದು ದಿಕ್ಕಿಗೆ ಇನ್ನೊಂದು ಕುದುರೆ ಮತ್ತೊಂದು ದಿಕ್ಕಿಗೆ ಹೋದರೆ ಬಡವರಿಗೆ ಅನುಕೂಲವಾಗುವುದಿಲ್ಲ. ಈಗ ಶ್ರೀಮಂತರು ಇನ್ನೂ ಶ್ರೀಮಂತರಾಗುತ್ತಿದ್ದಾರೆ, ಬಡವರು ಕಡು ಬಡವರಾಗುತ್ತಿದ್ದಾರೆ, ಹೀಗಾಗಿ ಸಮಾಜವಾದದ ಧ್ಯೇಯಕ್ಕೆ ವಿರುದ್ಧವಾದ ಕೆಲಸ ನಡೆದಿದೆ. ನಿಜವಾಗಿಯೂ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ಸಮಾಜರಚನೆ ಜಯಪ್ರದವಾಗಿಲ್ಲ.

ಇಷ್ಟೇ ಅಲ್ಲ, ಆಡಳಿತ ನೋಡಿದರೆ ನಾವೆಲ್ಲರೂ ನಾಚಿಕೆಪಡಬೇಕಾಗಿದೆ. ಯಾವ ಪಕ್ಷ ಅಧಿಕಾರಕ್ಕೆ ಬಂದರೂ ತತ್ವವನ್ನು ಪಾಲಿಸಬೇಕು. ಇತ್ತೀಚೆಗೆ ಒಂದು ವರ್ಷದಿಂದ ಎಷ್ಟೋ ಸರಕಾರಿ ಆಫೀಸರುಗಳಿಗೆ ವರ್ಗವಾಗಿದೆ. ಇದೆಲ್ಲಾ ಚುನಾವಣೆಗಾಗಿ ನಡೆದಿರುವ ಕೆಲಸ ಎಂದು ಘಂಟಾ ಘೋಷವಾಗಿ ಹೇಳುತ್ತೇನೆ. ಯಾರನ್ನು ಎಲ್ಲಿಗೆ ಹಾಕಿದರೆ ಅನುಕೂಲ ಎಂದು ಯೋಚನೆ ಮಾಡಿ ಅದಕ್ಕೆ ತಕ್ಕಂತೆ ವರ್ಗಾವರ್ಗಿಮಾಡಿರುವುದು ಎಂಥ ನಾಚಿಕೆಗೇಡಿನ ಕೆಲಸ? ಯಾವ ಪಕ್ಷದ ಸರಕಾರವೇ ಇರಲಿ ಹೀಗೆ ಮಾಡುವುದು ಬಹಳ ಹೀನವಾದ ಕೆಲಸ. ಉದಾಹರಣೆಗೆ ರಾಯಚೂರುಡಿಸ್ಟ್ರಿಕ್ಟ್‌ನಲ್ಲಿ ಒಬ್ಬರು ಕಲೆಕ್ಟರಿದ್ದರು, ಅವರನ್ನು 2-3 ವರ್ಷಗಳಲ್ಲಿ ನಾಲ್ಕೈದು ಕಡೆಗೆ ವರ್ಗಮಾಡಿದ್ದಾರೆ. ಎರಡು ವರ್ಷಗಳಿಗೆ ಮುಂಚೆ ವರ್ಗಮಾಡುವುದಿಲ್ಲವೆಂದು ಹೇಳುತ್ತಿದ್ದರು. ಆದರೆ ಈ ದಿವಸ ಮಾಡುತ್ತಿರುವುದಾದರೂ ಏನು? ಕಣ್ಣುಮುಚ್ಚಿ ಕಣ್ಣು ತೆರೆಯುವುದರಲ್ಲಿ ಎಲ್ಲೋ ಹೊರಟು ಹೋಗಿರುತ್ತಾರೆ. ರಾಯಚೂರಿನಲ್ಲಿ ಶಂಕರನಾರಾಯಣ್ ಅನ್ನುವ ಡೆಪ್ಯೂಟಿ ಕಮೀಷನರನ್ನು 3 ತಿಂಗಳಿನಲ್ಲಿ ರಾಯಚೂರಿನಿಂದ ಗುಲ್ಬರ್ಗಾಕ್ಕೆ ಹೊತ್ತು ಹಾಕಿದರು ಅಲ್ಲೂ ಕೂಡ ಎರಡು ಮೂರು ವರ್ಷ ಇರಗೊಡಲಿಲ್ಲ. ಅಲ್ಲಿಂದ ಎತ್ತಿ ಧಾರವಾಡಕ್ಕೆ ಹಾಕಿದರು. ಎಲ್ಲರ ವಿಷಯದಲ್ಲೂ ಒಂದು ಹೆಜ್ಜೆ ಹಿಡಿದು, ರೂಲ್ಸ್ ಪ್ರಕಾರ ನಡೆಯುವ ಆಫೀಸರು ಯಾರಿದ್ದಾರೆ ಅವರಿಗೆಲ್ಲಾ ಇದೇ ಗತಿ. ಮತ್ತೊಬ್ಬ ಅಫೀಸರನ್ನು ಟ್ರಸ್ಟ್ ಬೋರ್ಡಿಗೆ ಹಾಕಿದರು, ಅಲ್ಲಿಂದ ತೆಗೆದು ಮತ್ತೆ ಇನ್ನೆಲ್ಲಿಗೋ ಹಾಕಿದರು ಮೈಸೂರು ದೇಶ ಬಿಡಿಸಿ ಮತ್ತೆಲ್ಲಿಗೆ ಒಯ್ಯುತ್ತಾರೋ ಗೊತ್ತಿಲ್ಲ. ಸ್ವತಂತ್ರವಾಗಿ ವರ್ತಿಸುವ ಆಫೀಸರ ಗತಿ ಇದಾದರೆ ಇನ್ನು ಬಾಕಿಯವರ ಗತಿ ಏನಾಗಬೇಕು? ಅನೇಕರು ಮಿನಿಸ್ಟರು ಹೇಳಿದ ಮಾತನ್ನು ಕೇಳಿ ಅವರಂತೆಯೇ ನಡೆದುಕೊಳ್ಳುತ್ತಾರೆ ಅನ್ನುವದರಲ್ಲಿ ಯಾವ ಸಂಶಯವೂ ಇಲ್ಲ. ಇಂಥಾದ್ದು ನಮ್ಮ ದೇಶದಲ್ಲಿ ನಡೆಯಗೊಡಬಾರದು. ನಿರ್ಭಯವಾದ ಆಡಳಿತವನ್ನು ತಾವು ನಡೆಸುತ್ತಾ ಇಲ್ಲ. ನಿಮ್ಮ ಕರ್ತವ್ಯ ಏನಿದೆ ಅದನ್ನು ಮಾಡುತ್ತಾ ಇಲ್ಲ, ಪ್ರಭಾವಕ್ಕೆ ಒಳಗಾಗಿ ಕೆಲಸ ಕಾರ್ಯಗಳನ್ನು ನಡೆಸುವುದಾದರೆ, ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ನಮ್ಮ ಪ್ರೆಸಿಡೆಂಟರು ಪಾಕೀಸ್ತಾನದ ದಾಳಿಯ ವಿಷಯ ಮಾತನಾಡುತ್ತಾ 'The light of democracy will be extinguished' ಅಂತ ಹೇಳಿದರು. ಡೆಮಾಕ್ರಸಿ ಅನ್ನತಕ್ಕ ಆ ಜ್ಯೋತಿ ಏನು ಮಾಡುತ್ತಾ ಇದೆ ಅನ್ನುವುದು ಗೊತ್ತಿಲ್ಲ. ಈಗ ತಾವು ಮಾಡುತ್ತಾ ಇರುವುದಾದರೂ ಏನು? ಆ ಜ್ಯೋತಿಯನ್ನು ಬೆಳಗಿಸುವುದಕ್ಕೆ ಬದಲು ಕತ್ತಲೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಿ ಎಂದು ಹೇಳುತ್ತೇನೆ. ದಯಮಾಡಿ ಆ ರೀತಿ ಮಾಡಬಾರದು. ಮೈಸೂರು ದೇಶದಗತಿ ಏನು ಗತಿ ಆಗಿದೆ. ಎಂದರೆ, ಕೆಸರಿನಲ್ಲಿ ಸಿಕ್ಕ ಆನೆಯ ಗತಿಯಂತೆ ಆಗಿದೆ. ಯಾವುದಾದರೂ ಒಂದು ಸಮಸ್ಯೆಯನ್ನು ತಾವು ಬಗೆ ಹರಿಸಿದ್ದೀರಾ ಎಂದು ನಾನು ಕೇಳಬಯಸುತ್ತೇನೆ. ಗಡಿ ಪ್ರಶ್ನೆಯನ್ನು ಬಗೆಹರಿಸಲಿಲ್ಲ. ವರ್ಕಿಂಗ್ ಕಮಿಟಿಯಲ್ಲಿ ಕುಳಿತು ಬಸವಣ್ಣನಂತೆ ಅವರು ಏನು ಹೇಳಿದರೋ ಅದನ್ನು ಒಪ್ಪಿಕೊಂಡು ಬಂದಿರಿ, ಮೈಸೂರು ದೇಶದಲ್ಲಿ ಒಳ್ಳೆಯ ಒಂದು ಲೀಡರ್‌ಷಿಪ್ ಹುಟ್ಟಿಸಬೇಕೆಂದು ಆಶೆ ಇತ್ತು ಅದು ಯಾವ ಮಾತೂ ಈಗ ಇಲ್ಲ. ಏಕೆಂದರೆ ದೇಶ ದುರ್ಗತಿಗೆ ಬರಲಿಕ್ಕೆ ಹತ್ತಿದೆ. ಬೇರೆಯವರಿಗೆ ನೀವು ಅವಕಾಶ ಮಾಡಿಕೊಡಲಿಕ್ಕೆ ಆಸ್ಪದ ಕೊಡುತ್ತಾ ಬಂದಿದ್ದೀರಿ. ನೀರಾವರಿ ಪ್ರಶ್ನೆ ತೆಗೆದುಕೊಳ್ಳಿ, 1962 ರಿಂದ ಇಲ್ಲಿಯವರೆಗೂ ಏನೇನು ನಡೆದಿದೆ? ಏನೂ ಇಲ್ಲ. ಬೇರೆ ಕಡೆ ಬೇಕಾದಷ್ಟು ಚಳುವಳಿ ನಡೆದಿದೆ. ನಾಗಾರ್ಜುನ ಸಾಗರದ ಕೆಲಸ ನಡೆದಿದೆ. ಈ ಕಡೆ ಏನಾಗಿದೆ ಎಂದರೆ, ನಾರಾಯಣಪುರದಿಂದ ಸಿದ್ದಾಪುರಕ್ಕೆ ಹಾಕುತ್ತೀರಿ, ಸಿದ್ದಾಪುರದಿಂದ ನಾರಾಯಣಪುರಕ್ಕೆ ಬದಲಾಯಿಸುತ್ತೀರಿ. ಇದೇ ರೀತಿ ನಡೆದಿದೆ. ಇನ್ನಾವ ಕೆಲಸವೂ ಆಗಿಲ್ಲ. ಆಲಮಟ್ಟಿಯಲ್ಲಿ ಮೊನ್ನೆ ಮೊನ್ನೆ ಏನೋ ಒಂದಷ್ಟು ಮಾಡಿದ ಹಾಗೆ ಮಾಡಿದ್ದೀರಿ. 120 ಕೋಟಿ ರೂಪಾಯಿನ ಯೋಜನೆ ಇದು, ಇದಕ್ಕೆ ಹಣ ಇಲ್ಲ. ಹೀಗಿರುವಾಗ ನಮ್ಮ ನೀರಾವರಿ ಸಮಸ್ಯೆ ಏನೇನೂ ಕೂಡ ಬಗೆಹರಿದಿಲ್ಲ, ನಮ್ಮ ನೀರಿನ ಇರಿಗೇಷನ್ ಇಂಟರೆಸ್ಟ್ ಏನಿದೆ ಅದನ್ನೆಲ್ಲಾ ಹಾಳುಮಾಡಿ ಇಟ್ಟಿದ್ದೀರಿ ಅಂತ ನನ್ನ ಚಾರ್ಜ್ ಇದೆ. ಇರಿಗೇಷನ್ ಇಂಟರೆಸ್ಟ್ ಎಷ್ಟು ಇದೆ, ಎಷ್ಟು ಪ್ರಾಜೆಕ್ಟ್‌ಗಳನ್ನು ಮಾಡಬೇಕಾಗಿತ್ತು ಅಷ್ಟು ಆಂಧ್ರದವರು ಮೊದಲೇ ಮಾಡಿಕೊಂಡಿದ್ದರು. ಯಾವ ಪ್ರಾಜೆಕ್ಟ್‌ಗಳನ್ನು ಮಾಡಬೇಕು, ಯಾವುದರ ಅಗತ್ಯತೆ ಎಷ್ಟರಮಟ್ಟಿಗೆ ಇದೆ ಎನ್ನುವುದು ಮೈಸೂರು ದೇಶದ ಇಂಟೆರೆಸ್ಟ್ ತಮಗೆ ಇಲ್ಲವೇ ಇಲ್ಲ. ಕೆಲವು ಜನರು the money in the bank is mine, so the bank belongs to me, ಎಂದು ಹೇಳುತ್ತಾರೆ ಅದೇ ರೀತಿ 'The state belongs to the Congress party, I belong to the Congress party, so the state belongs to me, ಅನ್ನುವ ಜನರೂ ಕೂಡ ನಿಮ್ಮಲ್ಲಿ ಇದ್ದಾರೆ. ಗೋದಾವರಿ ಡೈವರ್ಷನ್‌ಸ್ಕೀಂ ಆದರೂ 4 ವರ್ಷ ಆಯಿತು ಇನ್ನೂ ಕೂಡ ಅದರ ರಿಪೋರ್ಟ್ ಬಂದಿಲ್ಲ. ಬೇರೆ ಸಂಸ್ಥಾನದವರು ಅದಕ್ಕೆ ಒಪ್ಪುವುದಿಲ್ಲ. ನಾವು ನಮಗೆ ಬರಬೇಕಾದ ನೀರನ್ನು ಒಪ್ಪಂದಗಳ ಪ್ರಕಾರ ಉಪಯೋಗಿಸಿ ಕೊಳ್ಳದೇ ಹೋದರೆ ಆ ನೀರು ಒಮ್ಮೆ ಹೋಯಿತು ಎಂದರೆ ಸತತವಾಗಿ

(ಶ್ರೀ ಅಣ್ಣಾರಾವ್ ಗಣಮುಖಿ)

ಹೊರಟು ಹೋಗುತ್ತದೆ ನಮಗೆ ಪುನಃ ಸಿಕ್ಕುವುದಿಲ್ಲ. ಈ ರೀತಿ ನಮ್ಮ ಹಿತಗಳು ಎಲ್ಲ ಕಡೆಯಲ್ಲೂ ಹಾಳಾಗಿ ಹೋಗಿದೆ. ಬೆಂಗಳೂರಿನಂತ ದೊಡ್ಡ ಪಟ್ಟಣದಲ್ಲಿ ಇಲ್ಲಿನ ಕಾರ್ಪೊರೇಷನನ್ನು ಸೂಪರ್ ಸೀಡ್ ಮಾಡುತ್ತೇವೆ ಎಂದು ಹೇಳಿ ಸರ್ಕಾರದಲ್ಲಿರತಕ್ಕ ಮಹಾನ್ ಪಂಡಿತರು ಹೊರಟಿದ್ದಾರೆ. ಸರ್ಕಾರದ ಕೆಲಸಕಾರ್ಯಗಳನ್ನೇ ಸರಿಯಾಗಿ ನಡೆಸಲಿಕ್ಕೆ ಬರದಿದ್ದವರು ಕಾರ್ಪೊರೇಷನ್ ಆಡಳಿತ ನಡೆಸುತ್ತೀರಾ ಅಂತ ಕೇಳುತ್ತೇನೆ. ಇದು ಬಹಳ reactionary steps ಇಂತಹ ಆರ್ಡರ್ ಪಾಸ್ ಮಾಡುವುದು ಉಚಿತವಲ್ಲ, ಇಂತಹ ತೀರ್ಮಾನಗಳನ್ನು ಯಾವ ವಿಷಯದಲ್ಲೂ ತೆಗೆದುಕೊಳ್ಳ ಬಾರದು ಎಂದು ಹೇಳುತ್ತೇನೆ.

ಇನ್ನು ಫುಡ್ ಡಿಪಾರ್ಟ್‌ಮೆಂಟಿನ ವಿಷಯ ತೆಗೆದುಕೊಂಡರೆ, ಅದರಲ್ಲಿ ಎಷ್ಟೋ ಕೋಲಾಹಲ ನಡೆದಿದೆ. ಲೆವಿ ತೆಗೆದುಕೊಳ್ಳಬೇಕಾದರೆ fertility of the land classification ಮಾಡಿ ಆ ಪ್ರಕಾರ ಲೆವಿ ತೆಗೆದುಕೊಳ್ಳುವುದು ಬಿಟ್ಟು ಎಲ್ಲಾ ತರಹದ ಲ್ಯಾಂಡ್ ಇಂದಲೂ ಫ್ಲಾಟ್‌ರೇಟ್ ತೆಗೆದುಕೊಂಡಿರುವುದು, ಇದು ಒಂದು ಇರ್ರ್ಯಾಷನಲ್ ಸಿಸ್ಟಂ ಎಂದು ನಾನು ಹೇಳಬೇಕಾಗಿದೆ. ಎರಡನೆಯದು, ಪ್ರೊಡ್ಯೂಸರ್‌ಗೆ ಜವಾರ್ 57 ರೂಪಾಯಿ ಕೊಡುತ್ತೀರಿ. ವ್ಯಾಪಾರ ಮಾಡತಕ್ಕ ಕೋ ಆಪರೇಟೀವ್ಸ್ ಅವರು ಕನ್‌ಸ್ಯೂಮರ್‌ಗೆ ಮಾರುವಾಗ ಅದನ್ನು 72 ರೂಪಾಯಿನಂತೆ ಮಾರ ಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಎಂದರೆ, 15 ರೂಪಾಯಿ ಈ ನಡುವಿನ ಕೋ ಆಪರೇಟಿವ್ ಸಂಘಗಳು ತಿನ್ನುತ್ತವೆ ಎಂದು ಹೇಳಿದ ಹಾಗೆ ಆಯಿತು. ಇನ್ನು ಸಬ್ಸಿಡಿ 5 ರೂಪಾಯಿ ಕ್ಲೈಮ್ ಮಾಡಬೇಕು ಎಂದು ಹೇಳಿ ಜನರ ಕಣ್ಣಿಗೆ ಮಣ್ಣು ಎರಚುವ ಹಾಗೆ ಅದನ್ನು ಬೇರೆ ಹಾಕುತ್ತೀರಿ. ಅಲ್ಲಿಗೆ 77 ರೂಪಾಯಿ ಆಗುತ್ತದೆ. ಈ ರೀತಿ ಮಾಡುತ್ತಾ ಹೋದರೆ ಜನರ ಗತಿ ಏನು ! ಹೀಗೆ ಈ ಕನ್ಸೂಮರ್ಸ್ ಸೊಸೈಟಿಗಳವರಿಗೆ ಎಷ್ಟು ಹಣವನ್ನು ಗಳಿಸಬೇಕೆಂಬ ದುರಾಸೆ ಇದೆ ! ಇಷ್ಟೆಲ್ಲಾ ಲಾಭಗಳಿಸಿದರೂ ಕಡೆಯಲ್ಲಿ ಇವು ತೋರಿಸತಕ್ಕದ್ದು ಲುಕ್ಸಾನೇ. ಮೊನ್ನೆ ನಮ್ಮ ಗುಲ್ಬರ್ಗದಲ್ಲಿ ಜೋಳವನ್ನು ಕ್ವಿಂಟಾಲ್ ಒಂದಕ್ಕೆ ಮಾರ್ಕೆಟ್ಟಿನಲ್ಲಿ 62 ರೂಪಾಯಿಗಳ ಬೆಲೆ ಇದ್ದಾಗ, ಇದಕ್ಕೆ 5 ರೂಪಾಯಿ ಬೇರೆ ಸಬ್‌ಸಿಡಿಯನ್ನು ತೆಗೆದುಕೊಂಡು ಅವರು ಮಾರಾಟ ಮಾಡುತ್ತಿರುವ ರೇಟ್ ಕ್ವಿಂಟಾಲಿಗೆ 72 ರೂಪಾಯಿಗಳು. ಇದು ಹೀಗಾಗುತ್ತಿರುವುದಕ್ಕೆ ಕಾರಣವೇನೆಂದರೆ: ಪಾಲಿಟೀಷಿಯನ್ ಇಲ್ಲಿ ಎಕಾನಮಿಸ್ಟ್ ಆಗಿಯೂ, ಎಕಾಮಿಸ್ಟ್ ಪಾಲಿಟೀಷಿಯನ್ನಾಗೂ ಕೆಲಸಮಾಡುತ್ತಿರುವುದರಿಂದ ಇದೆಲ್ಲಾ ನಡೆಯುವುದಕ್ಕೆ ಅವಕಾಶ ಉಂಟಾಗಿದೆ. ನಾಲದ್ದಕ್ಕೆ ಈ ದಿವಸ ರಿಜರ್ವ್ ಬ್ಯಾಂಕಿನಲ್ಲಿ ಒಕ್ಕಲುತನದವನಿಗೆ ಮಾಸಲಾಗಿಟ್ಟಿರತಕ್ಕ ಹಣದಲ್ಲಿ ಅವನ ಕೈಗೆ ನೂರಕ್ಕೆ ನೂರು ಭಾಗ ಸೇರುತ್ತಿಲ್ಲ ಶೇಕಡ 10—12 ರಷ್ಟು ಅವನ ಕೈಬಿಟ್ಟು ಹೋಗುತ್ತದೆ. ಹೀಗಾದರೆ ಒಕ್ಕಲುತನದಲ್ಲಿರತಕ್ಕವರಿಗೇನು ಸಹಾಯ ಮಾಡಿದಂತಾಯಿತು ! ಹೀಗೆ ದೇಶದಲ್ಲಿ ಈ ಕೋ ಆಪರೇಟೀವ್ ಸಂಸ್ಥೆಗಳೂ ಮತ್ತು ಪಿ. ಡಬ್ಲ್ಯು. ಡಿ. ಇವು ಬೃಹದಾಕಾರವಾಗಿ ಬೆಳೆದು ದೇಶದಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿವೆ. ಒಟ್ಟಿನಲ್ಲಿ ನಮ್ಮ ಭಾರತ ದೇಶದಲ್ಲಿ ಯಾರಾದರೂ ಪೊಲಿಟಿಕಲ್ ಮಿಸ್ ಮ್ಯಾನೇಜ್ ಮೆಂಟ್ ; ಎಕನಾಮಿಕ್ ಮಿಸ್‌ಮ್ಯಾನೇಜ್‌ಮೆಂಟ್ ಮತ್ತು ಫೈನಾನ್‌ಷಿಯಲ್ ಮಿಸ್‌ಮ್ಯಾನೇಜ್ ಮೆಂಟಿನಲ್ಲಿ ಒಂದು ಬಹುಮಾನವನ್ನು ಹಂಚಬೇಕೆಂದು ಪ್ರಯತ್ನ ಪಟ್ಟಲ್ಲಿ ಆ ಸ್ಪರ್ಧೆಯಲ್ಲಿ ನಮ್ಮ ಮೈಸೂರಿಗೇ ಪ್ರಥಮ ಬಹುಮಾನ ಸಿಗಬಹುದು ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri M. SRINIVASA NAYAK (Mangalore-I) .—Mr. Speaker, Sir, I rise to vehemently oppose the No-confidence motion moved by my friends on the other side. All of a sudden, my friends have thought of converting this august House into a House of amusement. They were expected to deal with serious or grave matters regarding the destinies of the people of the State.

My friend, Sri Ganji Veerappa who has just returned from a foreign tour was telling an audience that people in America or Canada know much about India and its conditions than people in India themselves know. This illustrates the ignorance that has been betrayed by my friends on other side while talking on this motion. My friend, the Leader of the Opposition was trying to make out a case that we have

not progressed in regard to minor irrigation. A reference volume published recently by the Government will prove that the outlay in the Third Five Year Plan for minor irrigation was. Rs. 10 crores, but the Government have spent Rs. 35 crores by the end of the Third Five Year Plan, and in regard to giving impetus to grow more food camapaign, as against 19,000 pump sets at the end of December this year there will be 43,000 pumpsets installed for the purpose. Sir, I am only trying to illustrate that there are many instances of progress. Under Minor irrigation, there are 93 Lift Irrigation schemes which have been completed and for 287 schemes estimates have been prepared costing Rs. 4 crores. What more evidence is required to show that we have progressed as far as minor irrigation is concerned ? So, in the field of minor irrigation, that the Government has done well cannot be disputed.

With regard to education, the Hon'ble Minister for Education has done his best with regard to the spread of education. If we look to the figures that are available at the end of the Second Five Year Plan, only 90,000 candidates appeared for the S.S.L.C. examination and at the end of the Third Five Year Plan, 1,90,000 candidates appeared for the S.S.L.C. examination. That shows how education has been spreading and how people have taken to the compulsory education as per the directive principles of the Constitution and this has been taken up seriously by the Government.

As far as the public works department is concerned, the Hon'ble Minister for Public Works has published books narrating the works that have been taken up and completed. It gives a clear picture of what has been done in the State regarding the construction of bridges' culverts, rural roads and highways. Most of my friends in the Opposition know the facts and they know too that it cannot be rebutted by them.

My friend, the Leader of the Opposition wanted to show that this State has not progressed as far as industries are concerned. We have done much headway with regard to industries and the Hon'ble Minister for Finance made a statement in the Upper House that there will be a Steel Plant located in Mangalore by the end of the Fourth Plan by the Japanese friends, who are here on a delegation, at a cost of Rs. 100 crores, and Mangalore will also have a Fertilizer Plant. As far as Fertilizer Plant is concerned, much progress has been made and the work will be taken up shortly.

With regard to fisheries, there was great opposition when mechanised boats were introduced. The fisherman thought that the fish in the sea will be disturbed and run away. But, after putting some vessels in the sea, it was found that it was money earning and lot of fishermen took advantage of the scheme and people have taken a large number of vessels and are earning a livelihood.

My friend, Sri Duggappa was saying that Sanjaya was preaching Geeta and he was narrating a talk supposed to have been taking place between two persons over the telephone from a distance. How can Sri Duggappa understand that talk ? How could he make out what they

(SRI M. SRINIVAS NAIK)

were conveying at different ends. One the face of it, I think, either it should be a hear-say or an imaginary conversation meant to play to the gallaries.

The Council of Ministers are really very lustrous gems and they are known for integrity, straight-forward purpose and devotion to duty. They have already shown that the administration is very safe in their hands. They have done their best to see that the State has progressed very well.

Sir, during the course of five years, my friends on the other Side have moved four No-confidence motions against the Government, the last one in January 1966, that on the 21st of January 1966 when the motion was put to vote only 29 persons voted for the motion and 115 against. That shows what an amount of effort was put to muster 30 votes. When it actually came to the point of voting, there were only 29 persons. That shows the lack of confidence in them rather than in the Council of Ministers.

4-30 P.M.

Sir, I do not want to take much time. When Mr. Ganjiveerappa went to America, the people of that country were telling that Indians have constructed the Sharavathi Project at a lesser cost than a project of such magnitude costing them there and such projects are costing them 15 times more than what we have spent for this project. This project provides us 14 lakhs units of Electricity. There are several big projects in India completed and are being completed. The people are having higher value for such projects being constructed and for the development that has taken place. Certain groups of people of this State have begun to say that the ruling party did nothing and they are trying to mislead the people. But the people know what is going on and what is the development that has taken place and they will never be misled by this group of people. These people are asking the ruling party to show the progress to the people at large before going to polls. But people know the truth. These people will reap the consequences when they go to polls. I thank the Speaker for having given me time to speak. With these few words I conclude.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಈ ಸಭೆಯ ಮುಂದೆ, ಈ ಈ ಸದನದ ವಿರೋಧಪಕ್ಷದ ಸದಸ ರ ಪರವಾಗಿ ಮಾನ್ಯ ಶ್ರೀ ಶಿವಪ್ಪನವರು ಮಂಡಿಸಿರುವ ಈ ಮಂತ್ರಿ ಮಂಡಲದಲ್ಲಿ ವಿಶ್ವಾಸವಿಲ್ಲವೆಂಬ ನಿರ್ಣಯಕ್ಕೆ ನಾನು ಬೆಂಬಲ ಕೊಡುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಆಶಿಸುತ್ತೇನೆ. ಈಗತಾನೆ ಭಾಷಣವನ್ನು ಮುಗಿಸಿದ ಮಾನ್ಯ ಕಾಂಗ್ರೆಸ್ ಸದಸ್ಯರು ವಿರೋಧಪಕ್ಷದವರಿಗೆ ಬಲ ಕಡಮೆಯಿದ್ದು, ಸಂಖ್ಯೆ ಕಡಮೆಯಿದ್ದು, ಈವರೆಗೆ ಮೂರು ಅವಿಶ್ವಾಸ ನಿರ್ಣಯಗಳನ್ನು ಮಂಡಿಸಿದ್ದು, ಈಗ ನಾಲ್ಕನೆಯದಾಗಿ ಇದನ್ನು ಮಂಡಿಸಿದ್ದಾರೆಂದು ಹೇಳಿದರು. ಮತ್ತು ನಾವು ಮಹತ್ತರವಾದ ಸಾಧನೆಗಳನ್ನು ಮಾಡಿದ್ದೇವೆ, ಅದರಲ್ಲಿ ಶರಾವತಿಯೂ ಒಂದು, ಅದಕ್ಕೆ ಬೇರೆ ದೇಶದವರೆಲ್ಲಾ ಪ್ರಶಂಸೆ ಮಾಡಿದ್ದಾರೆಂದು ಹೇಳಿ ಕಾಂಗ್ರೆಸ್ ಪಕ್ಷದ ಸದಸ್ಯರು ಈ ಪ್ರಗತಿಯನ್ನು ಪ್ರಶಂಸೆ ಮಾಡಿದರು. ಅವರು ಆ ರೀತಿ ಮಾತನಾಡುವುದು ಸ್ವಾಭಾವಿಕವಾಗಿ ಕಾಣಿಸುತ್ತದೆಂದು ನಾನು ಭಾವಿಸುತ್ತೇನೆ. ಸ್ವತಃ ಅವರು ಏನೂ ಕಳೆದುಕೊಂಡಿಲ್ಲ. ಕಾಂಗ್ರೆಸ್ಸಿಗೆ ಸೇರಿರುವುದರಿಂದ ಅವರಿಗೆ ಸ್ವತಃ ಲಾಭವಾಗಿದೆ. ಅನೇಕ ರೀತಿಯಲ್ಲಿ ಲಾಭವಾಗಿದೆ. ಏನೇ ಇರಲಿ ಈ ದೇಶದಲ್ಲಿ ಕೇಂದ್ರಕ್ಕೆ ಸಂಬಂಧಪಟ್ಟ, ರಾಜ್ಯಕ್ಕೆ ಸಂಬಂಧಪಟ್ಟ ಬೇರೆ ಬೇರೆ ಕೆಲಸ ಕಾರ್ಯಗಳು

ಇವೆ. ಯೋಜನೆಗಳನ್ನು ಮಾಡುವುದು ಮತ್ತೆ ಕೆಲವು ವಿಷಯಗಳನ್ನು ಕೇಂದ್ರದವರು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಕೆಲವು ಅಧಿಕಾರಗಳನ್ನು ರಾಜ್ಯಸರ್ಕಾರದವರು ಉಪಯೋಗ ಮಾಡಬೇಕೆಂದು ಕೇಂದ್ರದವರು ಕೊಟ್ಟಿದ್ದಾರೆ. ಇವತ್ತು ರಾಜ್ಯಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿರುವುದರಿಂದ, ಸಾಧ್ಯವಾದ ಮಟ್ಟಿಗೆ ರಾಜ್ಯಸರ್ಕಾರದವರು ಮಾಡಿರುವ ಹಾಗೂ ಮಾಡದೆ ಇರತಕ್ಕಂಥ ಅಂದರೆ, ಅವರ ಅಕಾರ್ಯಗಳು ದುಷ್ಕಾರ್ಯಗಳು, ಇವುಗಳನ್ನು ಕುರಿತು ಪ್ರಸ್ತಾಪಿಸಬೇಕಾಗಿದೆ. ಇದರ ಹಿನ್ನೆಲೆಯಲ್ಲಿ ಒಂದು ಮಾತು ಹೇಳಬೇಕಾಗಿದೆ. ದೆಹಲಿಯಲ್ಲಿ ಕುಳಿತಿರುವವರು ಬೃಹಸ್ಪತಿಗಳಲ್ಲ. ಅವರು ಮಾಡಿರುವ ಘೋರ ಅಪರಾಧಗಳು ಈಗ ದೇಶದ ಮುಂದಿವೆ. ಅಲ್ಲಿ ಕೋಟಿಗಟ್ಟಲೆ ಭ್ರಷ್ಟಾಚಾರ ನಡೆದಿದ್ದರೆ ಇಲ್ಲಿ ಲಕ್ಷಗಟ್ಟಲೆ ಭ್ರಷ್ಟಾಚಾರ ನಡೆದಿದೆ. ಪಾರ್ಲಿಮೆಂಟಿನ ವಿರೋಧಪಕ್ಷದವರ ಏನು ಹೇಳಬೇಕೋ ಅದನ್ನು ಅವರು ಹೇಳುತ್ತಾರೆ. ನಾನು ಇಲ್ಲಿಯದನ್ನು ಹೇಳುತ್ತೇನೆ. ಮಾನ್ಯ ಶ್ರೀ ನಿಜಲಿಂಗಪ್ಪನವರು ಆರೋಗ್ಯವಾಗಿದ್ದು ಅವರು ಇಲ್ಲಿ ಉಪಸ್ಥಿತರಾಗಿದ್ದರೆ ಅವರ ಮುಖಕ್ಕೆ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೆ. ಆದರೂ ಅವರ ಸಹೋದ್ಯೋಗಿಗಳಿದ್ದಾರೆ, ಅವರು ಕೇಳಿಕೊಳ್ಳುತ್ತಾರೆ. ತಮ್ಮ ಮುಖಾಂತರ ಅವರಿಗೆ ತಿಳಿಸುತ್ತಾರೆ; ಅವರು ಜವಾಬು ಕೊಡುತ್ತಾರೆ. ಆದ್ದರಿಂದ ಸರ್ಕಾರಕ್ಕೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಸರ್ಕಾರ, ಈ ಮಂತ್ರಿಮಂಡಲ ಜಾರಿಗೆ ಬಂದು, ಅಧಿಕಾರಕ್ಕೆ ಬಂದು 5 ವರ್ಷವಾಯಿತು. ಹಿಂದಿನ ಮಂತ್ರಿಗಳು ಮಾಡಿದ ಕೆಲಸಗಳ ಬಗ್ಗೆ ಹೇಳಲಿಕ್ಕೆ ಹೋಗುವುದಿಲ್ಲ. ಸರ್ಕಾರ ಕೆಲವು ಷರತ್ತುಗಳ ಮೇಲೆ ನಡೆಯುತ್ತದೆ. ಸ್ವಾತಂತ್ರ ಪೂರ್ವದಲ್ಲಿ ನಮ್ಮ ದೇಶದಲ್ಲಿ ಕೇವಲ ಲಾ-ಅಂಡ್-ಆರ್ಡರ್ ನಡೆಸಿಕೊಂಡು ಹೋಗತಕ್ಕ ಸರ್ಕಾರವಿತ್ತು. ಈ 20 ವರ್ಷಗಳು ಕಾರ್ಯಗತ ಮಾಡಿವ ಅಭಿವೃದ್ಧಿ ಸಾಧನೆಯ ನಂತರ ನಮ್ಮ ಕಾಂಗ್ರೆಸ್ ಸರ್ಕಾರ ಅನ್ಯಥಾ ಶರಣಂ ನಾಸ್ತಿ ಎಂಬಂತೆ ಪೋಲಿಸಿಗೆ, ಮಿಲಿಟರಿಗೆ ಕ್ರಮವಾಗಿ ಆಡಳಿತವನ್ನು ವಹಿಸಿಕೊಡುತ್ತಿದೆ. ಮಂಗಳೂರಿನಿಂದ ರೈತರ ಜಾಥಾ ನಗರಕ್ಕೆ ಬರುವುದದ್ದು, ಅವರನ್ನು ನೋಡಿಕೊಳ್ಳುವುದಕ್ಕೆ ಮಾನ್ಯ ರಾಮರಾಯರ ಪೋಲೀಸರು ಅವರಿಗಿಂತ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಇನ್ನೂ ಮುಂದಕ್ಕೆ ಬಂದರೆ ಬಂದೂಕ ಧಾರಿಗಳು ಸಿದ್ಧರಾಗಿ ಹೊಡೆಯಲು ನಿಂತಿದ್ದಾರೆ. ಈ ರಾಜ್ಯ 20 ವರ್ಷದ ನಂತರ ಪುನಃ ಎಲ್ಲಿಗೆ ಬಂದು ಮುಟ್ಟಿದೆಯೆಂದರೆ, ಕಲ್ಯಾಣರಾಜ್ಯ, ಅಭಿವೃದ್ಧಿರಾಜ್ಯ, ಸುಖೀರಾಜ್ಯ, ರಾಮರಾಜ್ಯ ಮತ್ತು ಸಮಾಜವಾದಿ ರಾಜ್ಯ ಇವೆಲ್ಲಾ ಹೋಗಿ ಇವತ್ತು ಈ ದೇಶದಲ್ಲಿ ಲಾಟಿ, ದೊಣ್ಣೆ, ಗುಂಡುಗಳ ರಾಜ್ಯಕ್ಕೆ ಬಂದು ನಿಂತಿದೆ. ಇರಲಿ, ಆಮೇಲೆ ಯೋಚನೆ ಮಾಡೋಣ. ಇನ್ನು ಆಡಳಿತದ ವಿಷಯದಲ್ಲಿ ವೈಯಕ್ತಿಕವಾಗಿ ಏನನ್ನೂ ಹೇಳಬಾರದೆಂದು ನಮ್ಮ ಅಧ್ಯಕ್ಷರು ಹೇಳಿದ್ದಾರೆ. ಮಂತ್ರಿಮಂಡಲದ ಮೇಲೆ ಮಾತನಾಡುವಾಗ, ಕೆಲವೊಂದು ಇಲಾಖೆಗಳ ವಿಷಯವಾಗಿ ಮಾತನಾಡುವಾಗ, ಆ ಇಲಾಖೆಯನ್ನು ನಡೆಸಿಕೊಂಡು ಹೋಗತಕ್ಕ ಮಂತ್ರಿಗಳು ಅನಿವಾರ್ಯವಾಗಿ ಬರುತ್ತಾರೆ. ಅಧಿಕಾರಿಗಳೂ ಬರಬಹುದು. ಮಾನ್ಯ ಶ್ರೀ ನಿಜಲಿಂಗಪ್ಪನವರ ಮೇಲೆ ನಾನು ವಿಶೇಷವಾಗಿ ಅಕರ್ಮಣತೆ ಮತ್ತು ಕುಕರ್ಮಣತೆಯ ಜವಾಬ್ದಾರಿಯನ್ನು ಹೊರಿಸುತ್ತೇನೆ. ಯಾರೋ ಒಬ್ಬ ನಮ್ಮ ಕಡೆ ತಪ್ಪು ಮಾಡಿದ್ದಾನೆಂದರೆ, ಅವರೇ ಮಾಡಿದ್ದಾರೆಂದು ನಾವು ತಿಳಿದುಕೊಂಡು ಮಾತನಾಡಬೇಕಾಗುತ್ತದೆ. ಹೀಗಿರುವಾಗ, ಮಾನ್ಯ ಶ್ರೀ ದೊಡ್ಡಮೇಟಿಯವರು ಈಗ ಇಲ್ಲಿಲ್ಲ, ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಡಬೇಕು ಎಂದು ಹಿಂದಿನ ಅಧಿವೇಶನದಲ್ಲಿ ಮಾತನಾಡಿ, ಇನ್ನೇನು ಮತಕ್ಕೆ ಹೋಗಬೇಕು, ಆ ಕಾಲಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು ಸಭೆಗೆ ಬಂದು ಸ್ವಲ್ಪ ತಡೆಯಿರಿ ಎಂದು ಹೇಳಿದರು. ತಡೆದದ್ದಾಯಿತು. ಈಗ ಏನು ಮಾಡಿದ್ದಾರೆಂದು ತಾವು ಯೋಚನೆ ಮಾಡಿ ನೋಡಿ. ಅವರೇನಾದರು ಮಾಡಿದ್ದರೆ ಆಕಾಶವೇನು ಕಳಚಿ ಬೀಳುತ್ತಿರಲಿಲ್ಲ. ಹೆಸರಿನಲ್ಲಿ ಏನಿದೆ ಎಂದು ಹೇಳಬಹುದು. ಕರ್ನಾಟಕವೆಂದು ಹೆಸರಿಟ್ಟಿದ್ದರೆ ಗಂಧದ ಹೊಗೆಯೇನು ಆಡುತ್ತಿರಲಿಲ್ಲ. ಇದೇ ನಾತ ಇರುತ್ತಿತ್ತು. ರಾಜ್ಯಗಳ ಪುನರ್‌ನಿರ್ಮಾಣ ಮಾಡಿದ ಮೇಲೆ ಆಂಧ್ರ ಎಂದು ಹೆಸರಾಯಿತು, ಕೇರಳ ಎಂದು ಹೆಸರಾಯಿತು, ಮಹಾರಾಷ್ಟ್ರ ಎಂದು ಹೆಸರಾಯಿತು, ಎಲ್ಲಾ ಹೊಸ ಹೊಸ ಹೆಸರುಗಳಾದ ಮೇಲೆ ನಮ್ಮ ದೇಶದಲ್ಲಿ ಮಾತ್ರ ಮೈಸೂರೇ ಎಂದು ಮುಂದುವರೆಯಬೇಕೆನ್ನುವುದರಲ್ಲಿ ಅರ್ಥವಿಲ್ಲ. ಅನೇಕ ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಕರ್ನಾಟಕದ ಎರಡು ಕೋಟಿ ಮೂವತ್ತು ಲಕ್ಷ ಜನರಿರುವ ದೊಡ್ಡ ರಾಜ್ಯವಾಗಿದೆ. ಈ ರಾಜ್ಯಕ್ಕೆ ಕರ್ನಾಟಕವಾಗಬೇಕು ಎನ್ನುವುದರಲ್ಲಿ ತಮಗ ಬಹಳ ಬೆಂಬಲವಿದೆಯೆಂದು ಮಾನ್ಯ ನಿಜಲಿಂಗಪ್ಪನವರು ಹೇಳುತ್ತಾರೆ. ಆ ಸಣ್ಣ ವಿಷಯವನ್ನು ತೀರ್ಮಾನ ಮಾಡುವುದು ಅವರಿಗೆ ಸಾಧ್ಯವಾಗಲಿಲ್ಲ. ಎರಡನೆಯದಾಗಿ, ಮಾನ್ಯ ಶ್ರೀ ನಿಜಲಿಂಗಪ್ಪನವರು ಈಚೆಗೆ ಕನ್ನಡದಲ್ಲಿಯೇ ಮಾತನಾಡುತ್ತೇನೆಂದು ಹೇಳಿದ್ದಾರೆ. ಇಷ್ಟು ವರ್ಷದ ನಂತರ ಅವರಿಗೆ ಜ್ಞಾನೋದಯವಾಯಿತು. ಈ ರಾಜ್ಯ ಕನ್ನಡ ರಾಜ್ಯ, ಕನ್ನಡದಲ್ಲಿ ಮಾತನಾಡುವುದು ಒಳ್ಳೆಯದೆಂದು. ಅದಕ್ಕೆ ನಾನು ಸಂತೋಷಪಡುತ್ತೇನೆ. ಆದರೆ 1965 ರಿಂದ ಇದೇ ಸಭೆಯಲ್ಲಿ ಕನ್ನಡ ಎಲ್ಲಾ ಕಡೆ ರಾಜ್ಯ ಭಾಷೆ ಆಗಬೇಕು ಎಂದು ಕಾನೂನು ಮಾಡಿದ್ದೀರಿ. ರಾಜ್ಯಾಂಗದ ಅದೇ

(ಶ್ರೀ ಎಸ್. ಗೋಪಾಲಗೌಡ)

ಶವೂ ಇದೆ. ಆದರೆ ಎಲ್ಲೂ ಕನ್ನಡವನ್ನು ಜಾರಿಗೆ ತರಲಿಲ್ಲ. ಈ ಸಭೆಯಲ್ಲಿ ಕನ್ನಡ ಬಳಕೆಗೆ ತರುವುದು ಸಾಧ್ಯವಾಗಲಿಲ್ಲ. ಕನ್ನಡದಲ್ಲಿ ಅಚ್ಚು ಹಾಕಿ ತಕ್ಷಣ ಕೊಡುವುದಿಲ್ಲ, 3 ದಿವಸಗಳ ನಂತರ ಬರುತ್ತದೆ. ನಿಕೃಷ್ಟವಾದ ರೀತಿಯಲ್ಲಿ ಕನ್ನಡವನ್ನು ನಡೆಸಿಕೊಂಡು ಹೋಗುತ್ತಾ ಇದ್ದೀರಿ. ಇಂಗ್ಲೀಷ್‌ನಲ್ಲಿ ವ್ಯವಹಾರ ಮಾಡುತ್ತಾ ಇದ್ದೀರಿ. ಇದು ಒಂದು ದೊಡ್ಡ ಅಕರ್ಮಣೀಯತೆ ಹೇಳಿದುದನ್ನು ಜಾರಿಗೆ ತರಲಿಲ್ಲ. ಶ್ರೀ ಅನಂತಸುಬ್ಬರಾಯರು ಟೈಪರೈಟರನ್ನು ಕನ್ನಡದಲ್ಲಿ ಕಂಡು ಹಿಡಿದರು. ಅವರಿಗೆ ಸರ್ಕಾರ ಮತ್ತು ತಮ್ಮ ಅಧಿಕಾರಿಗಳು ಏನು ಅನ್ಯಾಯ ಮಾಡಿದ್ದಾರೆ ಎನ್ನುವುದನ್ನು ಅವರು ಕರುಣಾತ್ಮಕವಾದ ರೀತಿಯಲ್ಲಿ ಹೇಳಿದ್ದಾರೆ. ಶಿಕ್ಷಣ ಮಾಧ್ಯಮ ಕನ್ನಡ ಆಗಲಿಲ್ಲ. ಆಡಳಿತ ಭಾಷೆ ಕನ್ನಡ ಆಗಲಿಲ್ಲ. ಕೋರ್ಟುಗಳಲ್ಲಿ ಕನ್ನಡ ತರಲಿಲ್ಲ, ತಾಲ್ಲೂಕು ಕಛೇರಿಗಳಲ್ಲಿ ಗ್ರಾಮಾಪಂಚಾಯಿತಿಗಳಲ್ಲಿ ಕನ್ನಡ ಬರುವುದು ಸಾಧ್ಯವಾಗಲಿಲ್ಲ.

ಇನ್ನು ನಾವು ಕರ್ನಾಟಕದ ಗಡಿಗಳನ್ನು ಕಾದುಕೊಂಡಿದ್ದೇವೆ ಎಂದು ಅವರು ಹೇಳುತ್ತಾರೆ. ಮಾನ್ಯ ಶ್ರೀ ನಿಜಲಿಂಗಪ್ಪನವರು ನಮಗೆ ಬಿಡಿ ಎಂದು ಹೇಳಿದರು. ಜನ ಅವರಿಗೇ ಬಿಟ್ಟರು. ಅವರು ಕೇಂದ್ರದಲ್ಲಿ ತಮ್ಮ ಒಂದು ಸ್ಥಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಗಡಿ ಸಮಸ್ಯೆ ಬಗ್ಗೆ ಏಕ ಸದಸ್ಯ ಆಯೋಗಕ್ಕೆ ಒಪ್ಪಿಕೊಂಡರು. ನಮಗೆ ಬರಬೇಕಾದಂಥ ಕನ್ನಡ ಭಾಗಗಳು ಹೊರಗೆ ಎಷ್ಟೋ ಇವೆ. ಈ ಆಯೋಗವನ್ನು ಒಪ್ಪಿಕೊಳ್ಳದೆ ಹಾಗೆ ಬಿಟ್ಟರೆ ಇವು ಅಲ್ಲಿಯೇ ಉಳಿದು ಹೋಗುತ್ತವೆ, ಕಾಸರಗೋಡನ್ನು ಸೇರಿಸಿದವನು ನಾನೇ ಎಂದು ಹೇಳಿದರು. ಕೇರಳದ ಜನರ ಪ್ರತಿನಿಧಿ ಸರ್ಕಾರ ಇಲ್ಲದೇ ಇರುವುದರಿಂದ, ಕಾಸರಗೋಡನ್ನು ಈಗ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ಏಕ ಸದಸ್ಯ ಆಯೋಗದ ರಚನೆ ಆಗಿದೆ. ಸರ್ಕಾರದ ನಿಲುವನ್ನು ಸರ್ಕಾರ ಹೊರಡಿಸಿದ ಎರಡು ಪುಸ್ತಕಗಳಲ್ಲಿ ಹೇಳಿದ್ದಾರೆ. 10 ವರ್ಷಗಳಿಂದ ಸಣ್ಣಪುಟ್ಟ ಹೊಂದಾಣಿಕೆ ಮಾಡಬಹುದು ಎಂದು ಶ್ರೀ ಜತ್ತಿಯವರು ಹೇಳಿದ್ದನ್ನೇ ಹೇಳುತ್ತಲೇ ಬಂದಿದ್ದಾರೆ. ಈಗ ಮಾಡುವುದು ಸಣ್ಣಪುಟ್ಟ ಹೊಂದಾಣಿಕೆಯೇ, ದೊಡ್ಡಪುಟ್ಟ ಹೊಂದಾಣಿಕೆಯೇ ಯಾವ ಹೊಂದಾಣಿಕೆ? ಏನು ಮಾಡುವವರಿದ್ದೀರಿ ನೀವು? ಶ್ರೀಮಾನ್ ರಾಮರಾಯರು ಹೇಳಿದರು, ಈ ಆಯೋಗವನ್ನು ವಿರೋಧ ಮಾಡುವುದು ನಮ್ಮನ್ನು ನಾವೇ ವಿರೋಧ ಮಾಡಿಕೊಂಡಂತೆ ಎಂದು. ವಿರೋಧ ಮಾಡುವ ವಿಚಾರವಲ್ಲ. ಕನ್ನಡ ಗಡಿಗಳನ್ನು ಕಾಪಾಡುವುದಕ್ಕೆ ಮತ್ತು ಮಡಕಶಿರ, ತಾಳವಾಡಿ, ಫಿರ್ಕ ಬಗ್ಗೆ ಏನು ಮಾಡಿದ್ದೀರಿ? ಶ್ರೀ ಅಂದಾನಪ್ಪ ದೊಡ್ಡ ಮೇಟಿಯವರು ಮಾತು ಉಳಿಸಿಕೊಳ್ಳುವವರು ಅಲ್ಲ. ಈಗ ತಾನೇ ಎಸ್. ಆರ್. ಸಿ. ಕಮೀಷನ್ ಆಧಾರದ ಮೇಲೆ ಈ ಆಯೋಗ ಮಾಡಿರುವುದರಿಂದ ನಾನು ಏನೂ ಮಾಡುವುದಕ್ಕೆ ಹೋಗುವುದಿಲ್ಲ ಎಂದು ಹೇಳಿದರು. ನುಡಿದಂತೆ ನಡೆಯುವುದಕ್ಕೆ ಪ್ರಯತ್ನ ಮಾಡೋಣ. ಆ ಪ್ರಯತ್ನದಲ್ಲಿ ಬೇಕಾದರೆ ಸತ್ತು ಹೋಗೋಣ. ಅದು ಬೇರೆ ಮಾತು ಇಲ್ಲದಿದ್ದರೆ ಏನು ಸಾಧನೆ ಮಾಡುವುದಕ್ಕಾಗುತ್ತದೆ.

ಸ್ವಾಮಿ, ಇನ್ನು ಗೋವಾ ವಿಚಾರ ಬೆಂಗಳೂರಿನಲ್ಲಿ ಎ. ಐ. ಸಿ. ಸಿ. ನಡೆದಾಗ ಶ್ರೀ ಚವಾಣರು, ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಬೆಂಗಳೂರಿನಲ್ಲಿದ್ದಾಗ್ಗೆ ಗೋವ ನಮಗೆ ಸೇರಬೇಕು, ಭೌಗೋಳಿಕವಾಗಿ ಮತ್ತು ಆರ್ಥಿಕವಾಗಿ ಗೋವಾ ನಮ್ಮಲ್ಲಿದೆ, ಅಕ್ಕಿ ನಮ್ಮಿಂದ ಹೋಗಬೇಕು, ಅವರಿಗೆ ವಿದ್ಯುಚ್ಛಕ್ತಿ ನಾವು ಕೊಡಬೇಕು, ಅವರ ಕೊಂಕಣಿ ಭಾಷೆ ಮಾತನಾಡುವವರು ನಮ್ಮಲ್ಲಿ ಇದ್ದಾರೆ. ಗೋವೆಯನ್ನು ಕರ್ನಾಟಕದಲ್ಲಿ ಸೇರಿಸಿ, ಗೋವೆಯ ಭವಿಷ್ಯವನ್ನು ಉತ್ತಮಪಡಿಸಿಕೊಳ್ಳಬೇಕು ಎಂದು ಹೇಳುತ್ತಿದ್ದುದನ್ನು ಕೇಳಿದೆ. ಅದಕ್ಕೆ ಮೊದಲು ಪ್ರಧಾನಿ ನೆಹರೂರವರು ಗೋವೆಯವರಿಗೆ 10 ವರ್ಷ ಕಾಲ ಅವರು ಪ್ರತ್ಯೇಕವಾಗಿ ಉಳಿದು ಕೇಂದ್ರದ ಆಡಳಿತದಲ್ಲಿ ಅವರ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಉತ್ತೇಜನ ಕೊಡುತ್ತಾರೆಂದು ಹೇಳಿದ ವಚನವನ್ನು ಮರೆತಿದ್ದಾರೆ. ಕೇಂದ್ರದವರ ಒತ್ತಾಯಕ್ಕೆ ಮಣಿದಿದ್ದಾರೆ. ಮಹಾರಾಷ್ಟ್ರದವರ ಜೊತೆಗೆ ಅದು ಸೇರಬೇಕೇ ಎನ್ನುವುದಕ್ಕೆ ಅಭಿಪ್ರಾಯ ಸಂಗ್ರಹ ಮಾಡಲು ಹೊರಟಿದ್ದಾರೆ. ಈ ವಿಚಾರವಲ್ಲಿ ಶ್ರೀಮಾನ್ ನಿಜಲಿಂಗಪ್ಪನವರ ಮಾತು ಏನೂ ಇಲ್ಲ. ನಮ್ಮ ಸರ್ಕಾರ ಇದೆಯೋ ಇಲ್ಲವೋ ಗೊತ್ತಿಲ್ಲ. ಈಚೆಗೆ ಅಲ್ಲಿ ಟೂರಿಸ್ಟ್ ಸೆಂಟರು ಎಂದು ಮಾಡಿದ್ದಾರೆ. ಅದಕ್ಕೆ ಬೀಗ ಹಾಕಿದೆ ಅಲ್ಲಿ ಹೇಳುವವರು ಕೇಳುವವರು ಇಲ್ಲ. ಎಲ್ಲಿಗೆ ಹೋಗಬೇಕು ಎಂದು ಹೇಳುವವರೇ ಇಲ್ಲ. ಶ್ರೀಮಾನ್ ಅರಸರು ಅಲ್ಲಿಗೆ ಒಂದು ಬಸ್ ಹಾಕಿದ್ದಾರೆ, ಇಷ್ಟು ಬಿಟ್ಟರೆ ಏನು ಮಾಡಿದ್ದೀರಿ? ಹುಬ್ಬಳ್ಳಿಯಿಂದ ಗೋವೆಗೆ ಹೋಗುವ ರಸ್ತೆ ಮಾಡಿದ್ದೀರಾ? ಏನೂ ಮಾಡಿಲ್ಲ. ಹೇಗೆ ಬಾಂಧವ್ಯ ಬೆಳೆಯುತ್ತದೆ? ಹೇಗೆ ಅವರು ನಿಮಲ್ಲಿ ಬರುತ್ತಾರೆ! ಮಾನ್ಯ ಶ್ರೀ ನಿಜಲಿಂಗಪ್ಪನವರು ಕರ್ನಾಟಕ ರಾಜ್ಯದಲ್ಲಿ ತಮ್ಮ ಮುಖ್ಯ ಮಂತ್ರಿ ಸ್ಥಾನವನ್ನು ಉಳಿಸುಕೊಳ್ಳುವುದಕ್ಕೆ ಅನ್ಯಾಯ ಮಾಡಿ, ರಾಜ್ಯದ ಹಿತಗಳನ್ನು ಬಲಿಕೊಟ್ಟರು ಎನ್ನುವ ಮಾತನ್ನು ಬಹಳ ವ್ಯಥೆಯಿಂದ ಹೇಳುತ್ತೇನೆ.

ಇನ್ನು ನೀರಾವರಿ ಯೋಜನೆಗಳ ವಿಷಯ, ಮಾನ್ಯ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಗುಲ್ಹಾಟಿ ಕಮೀಷನ್‌ನವರು ಕೊಟ್ಟಂಥ ವರದಿಯನ್ನು ಕಾರ್ಯಗತ ಮಾಡಿಲ್ಲ. ಕೃಷ್ಣಾ ಗೋದಾವರಿ ನೀರಿನ ಪಾಲು ಎಷ್ಟು ನಮಗೆ ಬರಬೇಕು ಅದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರು ಈ ಸಂಬಂಧದಲ್ಲಿ ಟ್ರಿಬ್ಯೂನಲ್‌ಗೆ ಹೋಗಲಿಲ್ಲ. 640 ಟಿ. ಎಮ್. ಸಿ. ಎಫ್. ಟಿ. ನೀರು ಕೊಟ್ಟಿದ್ದಾರೆ, ಬೇಕಾದಷ್ಟು ನೀರು ಇದೆ, ಬೇಕಾದರೆ ಕುಡಿಯುವ ನೀರನ್ನು ಬೇರೆಯವರಿಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಇವೊತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಸಂಬಂಧದಲ್ಲಿ ದಿವಂಗತ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳನ್ನು ಕರೆದುಕೊಂಡು ಹೋಗಿ ಡಾಣ, ಡಂಗೂರ ಹೊಡೆದು ಅವರ ಹತ್ತಿರ ಕಲ್ಲು ಹಾಕಿಸಿದಿರಿ. ಅದೇ ಕಾಲಕ್ಕೆ ಸ್ಕೈಟ್ ಸರಿಯಾಗಿಲ್ಲ ಎಂದು ಶ್ರೀ ಕೆ. ಎಲ್. ರಾವ್ ಅವರು ಮುಂದಕ್ಕೆ ತಳ್ಳಿದರು. ಅದೇ ಕಾಲದಲ್ಲಿ ಶ್ರೀಶೈಲದ ಪ್ರಾಜೆಕ್ಟನ್ನು ತೆಗೆದುಕೊಳ್ಳುವುದಕ್ಕೆ ಅಪ್ಪಣೆ ಕೊಟ್ಟರು. ಅದೇರೀತಿ ಪಚ್ಚಂಪಾಡನ್ನು ಪ್ರಾರಂಭ ಮಾ .ದರು, ನಾಗಾರ್ಜುನ ಸಾಗರ ಮುಂದುವರಿಸಿದರು. ನಿರನ್ನು ಅವರೆಲ್ಲಾ ಉಪಯೋಗಿಸಿಕೊಂಡರು. ತುಂಗಭದ್ರ ನೀರನ್ನು ಉಪಯೋಗಿಸುತ್ತಾ ಇಲ್ಲ. 2 ಲಕ್ಷ ಎಕರೆ ಅಚ್ಚುಕಟ್ಟಿನಲ್ಲಿ ತಮಗೆ ಬೆಳೆಯುವುದಕ್ಕೆ ಬಿಟ್ಟುಕೊಡಿ, ನದಿಗೆ ಬಿಡುತ್ತಿದ್ದೀರಿ ಕೊಡಿ ಎಂದು ಹೇಳಿದರು. ಬಾಯಿ ಮುಚ್ಚಿಕೊಂಡು 2 ವರ್ಷದಿಂದ ಕೊಡುತ್ತಾ ಇದ್ದೇವೆ, ಹಾಗೆ 2 ಲಕ್ಷ ಎಕರೆಗೆ ಆಂಧ್ರದಲ್ಲಿ ನಾವು ಬಳಸಿಕೊಳ್ಳಬೇಕಾದ ನೀರನ್ನು ಕೊಡುತ್ತಾ ಇದ್ದೇವೆ. ಇದಕ್ಕಿಂತ ಏನು ತಪ್ಪುಗಳು ಬೇಕು? ತುಂಗಭದ್ರ ಕಥೆ ಏನು ಆಗಿದೆ? ಎಷ್ಟು ಎಕರೆಗಳಲ್ಲಿ ಬೆಳೆಯುತ್ತಾ ಇದ್ದಾರೆ? ಇದು ಕೃಷ್ಣಾ ಗೋದಾವರಿ ಕಥೆ. ಇನ್ನು 10 ಕೋಟಿಗಿಂತ ದೊಡ್ಡ ಪ್ರಾಜೆಕ್ಟನ್ನು ಕೇಂದ್ರದವರೇ ತೆಗೆದುಕೊಳ್ಳಬೇಕು ಎಂದು ಶ್ರೀ ನಿಜಲಿಂಗಪ್ಪನವರು ಹೇಳುತ್ತಾ ಹೇಳುತ್ತಾ ಬಂದಿದ್ದಾರೆ. ಆತ್ಮಾಭಿಮಾನ ಇರುವವರು ಯಾರೂ ಹಾಗೆ ಹೇಳುವುದಿಲ್ಲ. ಕೇಂದ್ರದ ದೊಡ್ಡ ದೊಡ್ಡ ಸಾಲಿನಲ್ಲಿ ನಾನು ಒಬ್ಬ ಎಂದು ಹೇಳುವವರು ನನ್ನಂಥವರು ಹೇಳಿಕೆ ಕೊಡುವುದರಲ್ಲಿ ಅರ್ಥವಿದೆ. ನಾವು ಒಂದು ಹೇಳಿಕೆ ಕೊಡಬೇಕೆಂದರೆ, ಪತ್ರಿಕಾ ಸಂಪಾದಕರಿಗೆ ಕಾಗದ ಬರೆದರೆ ತೀರಿತು. ಆದರೆ, ಅವರು ತಾವೇ ಸ್ವತಃ ಆಸ್ಥಾನದಲ್ಲಿದ್ದು ಕೆಲಸ ಮಾಡುವವರು. ಇಲ್ಲಿಗೆ ಬಂದು ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರದವರು ಹಣ ಕೊಡಬೇಕು ಎಂದು ಪ್ಲೀಡ್ ಮಾಡುವುದರಲ್ಲಿ ಏನು ಅರ್ಥ ಇದೆ? ಕಡ್ಡಾಯವಾಗಿ ತೆಗೆದುಕೊಳ್ಳಬೇಕು, 10 ಕೋಟಿ ಕೊಡಿ, 20 ಕೋಟಿ ಕೊಡಿ ಕೊಡದಿದ್ದರೆ ವಾಪಸ್ಸು ಹೋಗುವುದಿಲ್ಲ, ಮನೆಯಿಂದ ದುಡ್ಡು ಕೊಡುತ್ತೀರಾ, ನಾವು ಬದುಕಬಾರದೇ ಎಂದು ಹೇಳಬೇಕ . ಇವರಿಗೆ ಗಟ್ಸ್ ಇಲ್ಲ, ನರ ಇಲ್ಲ, ಧೈರ್ಯ ಇಲ್ಲ, ಎದೆಗಾರಿಕೆ ಇಲ್ಲ. ನನಗೆ ಕರ್ನಾಟಕದ ಬಗ್ಗೆ ಬೇರೆ ಎಲ್ಲರಿಗಿಂತಲೂ ಬಹಳ ಅಭಿಮಾನ ಇದೆ, ಎಂದು ಹೇಳುತ್ತಿದ್ದುದನ್ನು ನೋಡಿದ್ದೇನೆ. ನಮ್ಮ ಪಾಡು ಏನಾಗಿದೆ! ಏನು ಆಗುತ್ತಾ ಇದೆ! ಕೃಷ್ಣಾ ಗೋದಾವರಿ ನೀರು ಶ್ರೀಮಾನ್ ನಿಜಲಿಂಗಪ್ಪನವರ ಹೆಸರಿನಲ್ಲಿ ಈ ರಾಜ್ಯಕ್ಕೆ "ಕೃಷ್ಣಾರ್ಪಣ ಮಸ್ತು" ಆಯಿತು. ಇನ್ನು ಕಾಳೀನದಿ ಯೋಜನೆ ಬಂತು, ಕೃಷ್ಣಾ ಹೋಯಿತು. ಕಾಳೀನದಿ ಯೋಜನೆ ಮಾಡಿದ್ದೇವೆ, ಕೋಟಿ ರೂಪಾಯಿಗಳನ್ನು ತರುತ್ತೇವೆ ಎಂದು ಹೇಳುತ್ತಾರೆ. ಎಂತಹ ಶೌರ್ಯದ ಮಾತು; ರಷ್ಯಾದಿಂದ ದುಡ್ಡು ಬರುತ್ತದೆ ಎಂದು ಹೇಳುತ್ತಿದ್ದಾರೆ.

ಸ್ವಾಮಿ, ಇವರು ನಿಜವಾಗಿಯೂ ಕಾಳೀ ನದಿ ಯೋಜನೆಯನ್ನು ಮಾಡಿ ಮುಗಿಸಿದರೆ ನೀವು ಹೇಳಿದ ಪ್ರಕಾರ ನಾನು ಯಾವತ್ತೂ ಋಣಿಯಾಗಿರುತ್ತೇನೆ. ಇಲ್ಲದಿದ್ದರೆ ಇಂತಹ ಬುಡಿಬುಡಿಕೆ ಮಾತುಗಳನ್ನು ಹೇಳುವುದು ಸರ್ಕಾರಕ್ಕೆ ಯೋಗ್ಯವಲ್ಲ. ಯಾರೋ ದಾರಿ ಹೋಕ ಆ ರೀತಿಯಾಗಿ ಮಾತನಾಡಬಹುದು. 4ನೇ ಯೋಜನೆಯಲ್ಲಿ ಇದನ್ನು ಏಕೆ ಸೇರಿಸಿದ್ದೀರಿ? ಒಂದು, ಎರಡು ಮತ್ತು ಮೂರನೆಯ ಯೋಜನೆಗಳಲ್ಲಿ ಸೇರಿಸಿದ್ದನ್ನೇ ಇನ್ನೂ ನೀವು ಮಾಡಲಿಲ್ಲ. ನೀವೇ ಕುಳಿತು ಸ್ಪಿಲ್ಓವರ್ ವರ್ಕ್ಸ್‌ಗೆ 250 ಕೋಟಿ ರೂಪಾಯಿಗಳು ಬೇಕು ಎಂಬುದಾಗಿ ಹೇಳಿದ್ದೀರಿ. ನಿಮ್ಮ ಯೋಜನೆಗಳು 450 ಕೋಟಿ ರೂಪಾಯಿಗಳು. ಅದಕ್ಕೆ 250 ಕೋಟಿ ರೂಪಾಯಿಗಳು ಮೇಲಿನಿಂದ ಬರಬೇಕು. 200 ಕೋಟಿ ರೂಪಾಯಿಗಳನ್ನು ಹೊಸ ತೆರಿಗೆಯಲ್ಲಿ ಬರಮಾಡುತ್ತೀರಿ. 4ನೇ ಪಂಚ ವಾರ್ಷಿಕ ಯೋಜನೆಯನ್ನು 1966ರಲ್ಲಿಯೇ ಆರಂಭ ಮಾಡಬೇಕಾಗಿತ್ತು. ಒಂದು ಸಾರಿ ಈ ದೇಶವನ್ನು ಕಣ್ಣು ಒರಿಸಿಕೊಂಡು ಮತ್ತೆ ಅರಳಿಸಿ ನೋಡಿದರೆ ಕುರುಕ್ಷೇತ್ರ ಯುದ್ಧವಾದಮೇಲೆ ರಥ, ಚಕ್ರ, ಕಾಲಾಳು ಎಲ್ಲವೂ ಬಿದ್ದು ಹೋಗಿ ಯಾವ ರೀತಿ ಎಲ್ಲಿ ನೋಡಿದರೂ ಸ್ಮಶಾನದಂತೆ ಕಾಣುತ್ತಿತ್ತೋ ಆ ರೀತಿ ಇಲ್ಲಿ ಮುಂದೆ ಕಾಣುತ್ತದೋ ಏನೋ ಗೊತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ, ತುಂಗಭದ್ರಾ ಹತ್ತಿರ ಹೋಗಿ ಅಲ್ಲಿ ಬಿದ್ದಿರುವ ಒಡೆದುಹೋದ ಯಂತ್ರಗಳು ಕೆಲವು ಯಂತ್ರಗಳು ತುಕ್ಕು ಹಿಡಿದಿರುವಂತಹುಗಳು, ಒಡೆದು ಹೋಗಿರತಕ್ಕ ರಸ್ತೆಗಳು, ಬಿದ್ದುಹೋಗಿರತಕ್ಕ ಸೇತುವೆಗಳು—ಇವನ್ನೆಲ್ಲಾ ನೋಡಿದರೆ ಸಾಕು. ಈ ದೇಶದ ಹಣ ಎಷ್ಟು ಹಾಳಾಗಿ ಹೋಗುತ್ತಿದೆ ಎಂಬುದು ಗೊತ್ತಾಗುತ್ತದೆ. ಇನ್ನೂ ದೇಶಾದ್ಯಂತ ಇರುವ ಪರಿಸ್ಥಿತಿಯನ್ನು ನೋಡಿದರೆ ಸಾಕಾಗಿ ಹೋಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಇವರು ಕಾಡುಗಳಿಗೆ ಹೋಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಇನ್ನು ರಾಮಚಂದ್ರರಾವ್ ಕಮಿಟಿ ಮತ್ತು ಸಂತಾನಂ ಕಮಿಟಿಗಳ ವರದಿ ಪ್ರಕಾರ ಮಿತವ್ಯಯವನ್ನು ಸಾಧಿಸುತ್ತೇವೆಂದು ಹೇಳಿದರು. ಏನು ಸಾಧಿಸಿದ್ದಾರೆ? ಸುಳ್ಳು ಹೇಳುವುದಕ್ಕೂ ಒಂದು ಮಿತಿ ಬೇಕು. ಮೋಸ ಪಡಿಸುವುದಕ್ಕೂ ಒಂದು ಮಿತಿ ಬೇಕು.

Mr. SPEAKER.—"ಸುಳ್ಳು" is not a very happy word.

ಶ್ರೀ ಎಸ್. ಗೋಪಾಲಗೌಡ.—ಸತ್ಯಕ್ಕೆ ದೂರವಾದ ಮಾತು ಅಂದರೆ, ಅದು ಬೇರೆ, far from truth ಎನ್ನುವುದರಲ್ಲಿ ಸುಳ್ಳು ಎನ್ನುವುದೇ ಒಂದು ಶಬ್ದ. ಅದು ಇವರಿಗೆ ಸರಿಹೊಂದುತ್ತದೆ. ಇವರ ಬಗ್ಗೆ ಬೇರೆ ಇನ್ನೊಂದು ಶಬ್ದವೇನೂ ಹೇಳುವುದಕ್ಕಾಗುವುದಿಲ್ಲ.

ಇನ್ನು ಶರಾವತಿಯಲ್ಲಿ ಎಂತಹ ಒಂದು ದಾರುಣವಾದ ದೃಶ್ಯವನ್ನು ಸೃಷ್ಟಿಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಈ ದೇಶದಲ್ಲಿ ಇಪ್ಪತ್ತು ವರ್ಷಗಳಲ್ಲಿ ಇವರ ಒಂದು ವಿವೇಕರಹಿತವಾದ ದುರಾಡಳಿತವನ್ನು ನೋಡಿದರೆ ಎಂತಹ ಭಾರತೀಯನ ಹೃದಯವನ್ನೂ ಕಲಕಿಸುವುದಾಗಿದೆ. ಇನ್ನು ಹೆಚ್ಚು ಹೇಳುತ್ತಾ ಹೋದರೆ ನನ್ನನ್ನು ಶ್ರೀ ರಾಮಕೃಷ್ಣ ಹೆಗಡೆಯವರು ಪುಸ್ತಕದಲ್ಲಿರತಕ್ಕ ಕಥೆಗಳನ್ನು ಹೇಳಲು ಷುರು ಮಾಡುತ್ತಾರೆಂದು ಹೇಳುತ್ತಾರೆ. ಇದು ವಿಶ್ವೇಶ್ವರಯ್ಯನವರು ಹುಟ್ಟಿದ ದೇಶ. ತಮ್ಮ ಕಾಲದಲ್ಲಿ ಅವರು ಲೆಜೆಂಡರಿ ಫಿಗರ್ ಆಗಿದ್ದರು. ವಿಶ್ವೇಶ್ವರಯ್ಯನವರ ಬುದ್ಧಿ, ಪ್ರಾಮಾಣಿಕತೆ, ಸರಳತೆ, ಸೌಮ್ಯ-ಇಂತಹ ಕೆಲವು ಮಾನವೀಯ ಗುಣಗಳಿಗೆ ಸಂಕೇತವಾಗಿ 100 ವರ್ಷಗಳು ಬದುಕಿದರು. ಅದು ನಮ್ಮ ಪುಣ್ಯವೋ ಅಥವಾ ಅವರ ದೌರ್ಭಾಗ್ಯವೋ ಗೊತ್ತಿಲ್ಲ. ಆಗಿನ ಕಾಲದಲ್ಲಿ ಜನ ಲ್ಯಾಂಟರ್ನ್ ಇಟ್ಟುಕೊಂಡಿದ್ದರು; ಲ್ಯಾಂಟರ್ನ್ ಇಟ್ಟುಕೊಂಡು ಚಿಮಣಿ ಹಚ್ಚುತ್ತಿದ್ದರು. ಸರ್ ಎಂ. ವಿಶ್ವೇಶ್ವರಯ್ಯನವರು ಬಂದಮೇಲೆಯೇ ಈ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಬಂದುದು. ಅವರು ಪುಸ್ತಕಗಳನ್ನು ಓದುವುದಕ್ಕೆ ಒಂದು ಲ್ಯಾಂಟರ್ನ್ ಆಫೀಸ್ ಕೆಲಸಮಾಡುವುದಕ್ಕೆ ಇನ್ನೊಂದು ಲ್ಯಾಂಟರ್ನ್ ಇಟ್ಟುಕೊಳ್ಳುತ್ತಿದ್ದರು. ಇನ್ನೂ ಅವರ ಅದ್ಭುತವಾದ ಕೆಲಸಗಳನ್ನೆಲ್ಲಾ ಹೇಳಿದರೆ ಅಂಥಾದ್ದನ್ನೆಲ್ಲಾ ಕೇಳಿದರೆ ಮಂತ್ರಿಗಳಿಗೆ ಆಶ್ಚರ್ಯವಾಗಿ ಕಾಣುತ್ತದೆ. ಇದೇನೂ ಕಥೆಯಲ್ಲ. ಇದು ಅವರು ಪ್ರಾಮಾಣಿಕವಾಗಿ ಬದುಕಿದ ಜೀವನದ ಕೃತಿ. ಅವನ್ನು ಇವರೂ ಸಹ ಮಾಡಿದರೆ ಒಳ್ಳೆಯದಲ್ಲವೇ!

Mr. SPEAKER.—Power was generated in 1902 long before Sir M. V. became Dewan.

Sri S. GOPALA GOWDA.—Thank you, Sir. ಅಧ್ಯಕ್ಷರಾಗಿ ಇವರು ಒಂದೊಂದು ಸಾರಿ ನನಗೆ ಬಹಳ ಸಹಾಯ ಮಾಡುತ್ತಾರೆ. ನನಗೆ ಅದನ್ನ ನೋಡಿ ಬಹಳ ಆಶ್ಚರ್ಯವಾಗುತ್ತದೆ. ತಮ್ಮ ವಿಷಯ ನಾನು ಮಾತನಾಡುವುದಿಲ್ಲವೆಂದು ನಾನು ಭರವಸೆ ಕೊಡುತ್ತೇನೆ.

Mr. SPEAKER.—The Hon'ble Member does not know that I like him very much.

ಶ್ರೀ ಎಸ್. ಗೋಪಾಲಗೌಡ.—ನನಗೆ ಗೊತ್ತಿದೆ. ಇರಲಿ ಸಂತೋಷ. ಇವತ್ತಿನ ದಿವಸದ ಸ್ಥಿತಿ ತಾವು ನೋಡಿರಬಹುದು. ವಿಶ್ವೇಶ್ವರಯ್ಯನವರದು ಆಯಿತು. ಅದೇ ನೋಡಿರಿ, 1966ನೇ ಇಸವಿಯಲ್ಲಿ ನಾವು ಎಂತಹ ಚಿತ್ರವನ್ನು ನೋಡುತ್ತಿದ್ದೇವೆ. ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ಓಟು ಪಡೆಯುವವರು ತಾವು. ಅದನ್ನು ಯಾರೂ ಇಲ್ಲವೆನ್ನುವುದಿಲ್ಲ. ತಾವು ಉತ್ತರಾಧಿಕಾರಿಗಳಾಗಿ ಅವರ ಹಾಗೆ ಸತ್ಯಕ್ಕೆ, ಧರ್ಮಕ್ಕೆ, ಸರಳತೆಗೆ, ಪ್ರಾಮಾಣಿಕತೆಗೆ ಬದ್ಧರಾಗಿರುವವರಲ್ಲ. ಅದು ನಿಮಗೆ ಎಷ್ಟರಮಟ್ಟಿಗೆ ಇದೆಯೋ ನನಗೆ ಗೊತ್ತಿಲ್ಲ. ನೀವು ಒಂದು ಅಂದರೆ ನಾವು ಮೂರು ಎಂದು ಹೇಳುತ್ತೇವೆ.

ಇನ್ನು ಲೋಕೋಪಯೋಗಿ ಸಚಿವರು ಇಲ್ಲಿ ಈಗ ಹಾಜರು ಇದ್ದಾರೆ. ಅವರು ಶರಾವತಿಯಲ್ಲಿ ಏನು ದುರ್ವ್ಯಯ ನಡೆಯಲಿಲ್ಲ, ಕೆಲಸವೆಲ್ಲ ಚೆನ್ನಾಗಿ ನಡೆದಿದೆ ಎಂದು ಹೇಳಿದರು. ಈ ರೀತಿ ಶ್ರೀ ಶ್ರೀನಿವಾಸ ನಾಯಕ್ ಅವರು, ಮತ್ತು ಅವರ ಹಿಂದೆ ಅದನ್ನು ಬೆಂಬಲಿಸಿ ಕೆಲವರು ಮಾತನಾಡಿದರು. ನಾನು ಹೇಳುವುದಿಷ್ಟೆ; ಅಲ್ಲಿ ದುರ್ವ್ಯಯ ನಡೆದಿದೆ. ಇನ್ನು 20 ವರ್ಷಗಳ ಮೇಲೆ ಅದರ ಬಗ್ಗೆ ವಿಚಾರಣೆಯಾದರೂ ಆಗ ಅಲ್ಲಿ ಯಾವ ರೀತಿಯಲ್ಲಿ ದುರ್ವ್ಯಯ ನಡೆದಿದೆ ಎಂಬುದು ಗೊತ್ತಾಗುತ್ತದೆ. ಈಗಿನ ಟೆಂಡರು ಬಗ್ಗೆ ಇವರದು ಏನು ಮಸಲತ್ತು. ಈ ಸಂದರ್ಭದಲ್ಲಿ ಕೆಲವು ಪ್ರಶ್ನೆಗಳನ್ನು ನಾನು ಕಳುಹಿಸಿದ್ದೆ. ನನ್ನ ಸ್ನೇಹಿತರೂ ಸಹ ಕಳುಹಿಸಿದ್ದಾರೆ. ಇನ್ನೂ ಅವು ಬೆಳಕು ಕಾಣಲಿಲ್ಲ ಹೋಗಲಿ.

ಕಂಟ್ರಾಕ್ಟುದಾರರಿಗೆ ಮತ್ತು ಲೋಕೋಪಯೋಗಿ ಶಾಖಾ ಸಚಿವರಿಗೆ ಯಾವ ರೀತಿ ಸಂಬಂಧವಿರಬೇಕು ? ಈ ದೇಶದಲ್ಲಿ ಏನಾದರೂ ಒಂದು ಒಳ್ಳೆಯ ಕಂಟ್ರಾಕ್ಟ್ ಇದೆಯೇ ? ಅವರ ತಮ್ಮನಾಗಿರಲಿ ಅಥವಾ ಯಾರೇ ಇರಲಿ, ಶ್ರೀಮಾನ್ ನಿಜಲಿಂಗಪ್ಪನವರ ಮನೆಯವರೇನೋ ಒಂದು ಕಂಪನಿ ಮಾಡಿಕೊಂಡಿದ್ದಾರೆ. ಆದರೆ ಅವರ ಮನೆಯವರು ಯಾರೂ ಅದರೊಳಗೆ ಸೇರಿರಲಾರರು. ಬೇರೆಯವರು ಅವರ ಸಂಬಂಧಿಕರೊಡನೆ ಸೇರಿದ್ದಾರೆ. ಇದರಲ್ಲಿ ಕಂಟ್ರಾಕ್ಟ್‌ದಾರರಿಗೆ ಸರ್ಕಾರದ ಸಂಬಂಧ ಯಾವ ರೀತಿ ಇರಬೇಕೆಂಬುದು ಮುಖ್ಯ. ಅದಕ್ಕೊಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಿ ವಿಚಾರಣೆ ಮಾಡಲಿ. ನಾನು ಆ ಬಗ್ಗೆ ಹೆಚ್ಚು ವಿವರಣೆಗೆ ಹೋಗುವುದಿಲ್ಲ. ಕಂಟ್ರಾಕ್ಟ್‌ದಾರರಿಗೆ, ಮಂತ್ರಿಗಳಿಗೆ, ಸೆಕ್ರೆಟೇರಿಯಟ್ ಅಧಿಕಾರಿಗಳಿಗೆ ಎಷ್ಟು ಸಂಬಂಧವಿರದೇಕೋ ಅದು ಈಗ ಸರಿಯಾದ ರೀತಿ ಇದೆಯೋ ಅದನ್ನು ಮಾತ್ರ ಹೇಳಿದರೆ ಸಾಕು. ನಾನು ಈಗ ಹೆಸರುಗಳನ್ನು ಹೇಳುವುದಿಲ್ಲ. ನಾನು ನಾಲ್ಕಾರು ಕಂಟ್ರಾಕ್ಟ್‌ದಾರರ ಹೆಸರುಗಳನ್ನು ಹೇಳಬಲ್ಲೆ, ಈಗ ಬೇಡ.

ಮತ್ತೊಂದು ವಿಷಯ. ನಮ್ಮ ಯೋಜನೆಗಳು ಯಾವ ರೀತಿ ನಡೆಯುತ್ತವೆ ಎನ್ನುವುದಕ್ಕೆ ಪಬ್ಲಿಕ್ ಅಂಕೌಂಟ್ಸ್ ಕಮಿಟಿಯವರು ಹೇಳಿದ್ದಾರೆ. ಕಪಿನಿ ರಿಜರ್‌ವಾಯರ್ ಪ್ರಾಜೆಕ್ಟ್ ಒಂದು ವಿಷಯವನ್ನು ಮಾತ್ರ ಇಲ್ಲಿ ಹೇಳುತ್ತೇನೆ. 10 ವರ್ಷಗಳ ಪ್ರಗತಿಯನ್ನು ಸರ್ಕಾರದವರು ಹೇಳುತ್ತಾರೆ. ಏನೇನೋ ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಎಲ್ಲವೂ ಅರ್ಥವಾಗುತ್ತದೆ, ಹಿಂದೆ ಭದ್ರಾ ಪ್ರಾಜೆಕ್ಟ್ ಬಗ್ಗೆ ಸಂತಾನಂ ಅವರು ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ. "The project was commenced in 1956 with an estimated cost of Rs. 3.20 crores. The estimate was revised to 10 crores in 1964. And according to the latest revision it is estimated to go up to Rs. 17 crores." ಇದು ಒಂದು ಸಣ್ಣ ಕಾರಣ. ಅಲ್ಲಿ ಹೆಚ್ಚು ಆಳ ತೋಡಬೇಕಾಗಿತ್ತು. ಅದರ ಕೆಪಾಸಿಟಿಯನ್ನು ಜಾಸ್ತಿ ಮಾಡಿದ್ದೇವೆ, ಅದಕ್ಕೋಸ್ಕರ ಕೆಲವು ಲಕ್ಷ ರೂಪಾಯಿಗಳು ಖರ್ಚಾಗಿವೆಯೆಂದು ಹೇಳಿದ್ದಾರೆ. ಈ ಒಂದು ಸಣ್ಣ ಉದಾಹರಣೆ ಒಂದು ಸಣ್ಣ ನೊಣವಿದ್ದ ಹಾಗೆ. ಈಗ ಇನ್ನಾವುದೂ ನನಗೆ ಸಿಗಲಿಲ್ಲ. ಇದನ್ನು ಮಾತ್ರ ಹೇಳುತ್ತಿದ್ದೇನೆ. ವಾಸ್ತವವಾಗಿ ಮೊದಲನೆಯ ಯೋಜನೆಯಲ್ಲಿ ಆರಂಭವಾದ ಕಾರ್ಯಗಳನ್ನೇ ಮಾಡದೆ, ಅವು ಪುನಃ ಎರಡನೆ ಯೋಜನೆಗೆ ಹೋಗಿವೆ. ಎರಡನೇ ಯೋಜನೆಯಲ್ಲಿ ಆರಂಭವಾದ ಕಾರ್ಯಗಳು ಮೂರನೆಯ ಯೋಜನೆಗೆ ಹೋಗಿವೆ. ಹಾಗೆಯೇ ಮೂರನೆಯ ಯೋಜನೆಯಲ್ಲಿ ಆರಂಭವಾದ ಕಾರ್ಯಗಳು ನಾಲ್ಕನೆಯ ಯೋಜನೆಗೆ ಹೋಗಿವೆ. ಅವನ್ನು ನಾಲ್ಕನೆಯ ಯೋಜನೆಯಲ್ಲಿ ಮಾಡುವಂತಹವರಾಗಿದ್ದಾರೆ. ಆದ್ದರಿಂದ ಏತಕ್ಕಾಗಿ ಇವರಿಗೆ ಸ್ಪಿಲ್‌ಓವರ್ ವರ್ಕ್ಸ್‌ಗೆ 250 ಕೋಟಿ ರೂಪಾಯಿಗಳು ಬೇಕಾಗಿವೆ ? ಮಾಡಿದ್ದನ್ನೇ ಮಾಡುತ್ತಿದ್ದಾರೆ. ಒಂದು ಸಾರಿ ಸೇತುವೆ ಕಟ್ಟಿದ್ದಕ್ಕೆ ಫೈನಲ್ ಬಿಲ್ ಆಯಿತು. ಪುನಃ ಅದೇನಾದರೂ ಬಿದ್ದು ಹೋಯಿತು ಅಂದರೆ, ಮತ್ತೆ ಅದನ್ನು ಕಟ್ಟಬೇಕು, ಅದಕ್ಕೆ ಇನ್ನೊಂದು ಬಿಲ್ ಮಾಡಬೇಕು. ಹೀಗೆ ಇಂತಹ ಒಂದು ಲಕ್ಷ ದೃಷ್ಟಾಂತಗಳಿವೆ. ನಮ್ಮ ಊರಿನಲ್ಲಿಯೇ ಇಂತಹ ಉದಾಹರಣೆಗಳು ಬೇಕಾದಷ್ಟಿವೆ. ದೇಶದ ಹಣ ಸಾರ್ವಜನಿಕರು ಕೊಟ್ಟ ಹಣ. ನಮ್ಮದು ಬಹಳ ಗರೀಬರ ದೇಶ. ಬಹಳ ಕಷ್ಟದಿಂದ ಜನ ಸರ್ಕಾರಕ್ಕೆ ದುಡ್ಡು ಕಟ್ಟುತ್ತಾರೆ. ಇದರಿಂದ ವರ್ಷಕ್ಕೆ ಸುಮಾರು 100 ಕೋಟಿ ರೂಪಾಯಿಗಳಷ್ಟು ಸರ್ಕಾರದ ಬೊಕ್ಕಸಕ್ಕೆ ಜಮಾ ಆಗುತ್ತದೆ. ಈಗ ಆ ನೂರು ಕೋಟಿ ರೂಪಾಯಿಗಳನ್ನು ನಮ್ಮ ಸ್ನೇಹಿತರು ಇವರು ದುರ್ವ್ಯಯ ಮಾಡುತ್ತಿರುವುದನ್ನು ಯಾರಾದರೂ ನೋಡಿದರೆ ಎಂತಹ ಪ್ರಾಮಾಣಿಕನಾದ ಮನುಷ್ಯನಾದರೂ ಕೂಡ ತಲೆ ತಗ್ಗಿಸುತ್ತಾನೆ. ಶ್ರೀ ಶ್ರೀನಿವಾಸ್ ನಾಯಕ್ ಅವರು ಹೇಳಲಿ, ಅಮೇರಿಕಾದವರು ನಮಗೆ ಗೋಧಿಯನ್ನು ಕೊಡುವುದನ್ನೂ ಮತ್ತು ಕೇರ್ ಸಂಸ್ಥೆಯವರು ಹಾಲಿನ ಪುಡಿ ಕೊಡುವುದನ್ನೂ ಏತಕ್ಕೆ ನಿಲ್ಲಿಸಿದರೆಂಬುದನ್ನು.

ಇನ್ನು ಶರಾವತಿ ಬಗ್ಗೆ ಅವರ ರಾಯಭಾರಿಯೇ ಹೇಳಿದ್ದಾರೆ.

5-00 P.M.

ಶರಾವತಿಯ ಯೋಜನೆಯ ಕೆಲಸ ಆರಂಭವಾದಾಗ ಅಲ್ಲಿ ಕೆಲಸ ಮಾಡುವುದಕ್ಕೆ ಚಿಂದಿ ಬಟ್ಟೆಯಲ್ಲಿ ಬಂದಂಥ ಒಬ್ಬ ಮನುಷ್ಯ ಇವತ್ತಿನ ದಿವಸ ಲಕ್ಷಾಧೀಶ್ವರನಾಗಿದ್ದಾನೆ. ಈ ವಿಷಯ ಒಂದು ವಾರ್ತಾ ಪತ್ರಿಕೆಯಲ್ಲಿ ಬಂದಿದೆ. ಇವರು ಹಣವನ್ನು ಖರ್ಚುಮಾಡತಕ್ಕ ಕ್ರಮ ಯಾವ ರೀತಿ ಇದೆಯೆಂಬುದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ಸ್ ಕಮಿಟಿಗಳ ವರದಿಯಲ್ಲಿ ಕೊಟ್ಟಿದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯ ವರದಿಗಳನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಎಷ್ಟು ಸಾರಿ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಎಂದು ನಾನು ಮಾನ್ಯ ಅಧ್ಯಕ್ಷರನ್ನು ಕೇಳಬೇಕಾಗಿದೆ.

Mr. SPEAKER.—Is it a no-confidence against ?......

ಶ್ರೀ ಎಸ್. ಗೋಪಾಲಗೌಡ.—ಇಂಥಾ ಸತ್ ಸಂಪ್ರದಾಯಗಳು ನಮ್ಮಲ್ಲಿ ಇವೆ. ಆ ಸಮಿತಿಗಳ ವರದಿಗಳನ್ನು ತಯಾರು ಮಾಡಬೇಕು, ಅವುಗಳನ್ನು ನಮ್ಮನೆ ಒಂದು ಕಡೆ ಹಾಕಬೇಕು, ಈ ರೀತಿಯಾಗಿದೆ. ಈ ಸಭೆಯವರು ಆ ಸಮಿತಿಯವರು ಮಾಡಿದಂತಹ ವರದಿಗಳನ್ನು ಚರ್ಚೆ ಮಾಡಿದ್ದರೆ ವರದಿಗಳಲ್ಲಿ ಇಲಾಖೆಗಳ ಆಡಳಿತದಲ್ಲಿರತಕ್ಕ ಲೋಪದೋಷಗಳನ್ನು ಮತ್ತು ಅಪಾದನೆಗಳನ್ನು ಯಾರ ಮೇಲೆ ಬರೆದಿದ್ದಾರೆಯೋ ಅವರು ಆ ಲೋಪದೋಷಗಳನ್ನು ಈಗಾಗಲೇ ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆಯೋ ಹೇಗೆ ಎಂಬುದನ್ನು ನಾವು ತಿಳಿದುಕೊಳ್ಳಬಹುದಾಗಿತ್ತು. ಸರ್ಕಾರದ ಮೇಲೆ ಅನೇಕ ಅಪಾದನೆಗಳನ್ನು ಸಾರ್ವಜನಿಕರು ಹೇಳುತ್ತಾರೆ, ಮತ್ತು ಬರವಣಿಗೆಯ ಮೂಲಕವೂ ತಿಳಿಸುತ್ತಾರೆ. ಹೀಗಿದ್ದರೂ ಕೂಡ ನಿಮ್ಮ ಕಿವಿಗಳು ಕೇಳಲಾರದಷ್ಟು ಕಿವುಡಾಗಿದ್ದರೆ ನಿಮ್ಮ ಕಣ್ಣುಗಳು ನೋಡಲಾರದಷ್ಟು ಕುರುಡಾಗಿದ್ದರೆ, ಇದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ! ಮೊನ್ನೆ ಶ್ರೀಮಾನ್ ಕೃಷ್ಣಪ್ಪನವರು ಹೇಳಿದರು, ವಿರೋಧ ಪಕ್ಷದವರಿಗೆ ಶಂಖ ಕೊಟ್ಟಿದ್ದೇವೆ, ನಾವು ಚಕ್ರ ತೆಗೆದುಕೊಂಡಿದ್ದೇವೆ ಎಂದು. ಚಕ್ರ ಹಾಕಿ, ಹಾಕಿ ಎಷ್ಟು ದಿವಸ ಚಕ್ರ ಹಾಕುತ್ತೀರಿ ನೋಡೋಣ. ಮಲಗಿರತಕ್ಕ ಜನ ಎದ್ದರೆ ಕೃಷ್ಣಪ್ಪನವರನ್ನು ನುಂಗಿಬಿಡುತ್ತಾರೆ. ಆಗ ನೀವು ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಎಚ್ಚರಿಕೆ, ಎಚ್ಚರಿಕೆ! ಈ 18 ವರ್ಷಗಳ ಕಾಂಗ್ರೆಸ್ಸಿನವರ ಆಡಳಿತದ ಅವಧಿಯಲ್ಲಿ ಒಂದು ಹೊತ್ತು ಊಟಕ್ಕೆ ಇಲ್ಲದ ಒಬ್ಬ ಕಾಂಗ್ರೆಸಿನವ ಇಲ್ಲಿ ಬಂದು ಇವೊತ್ತು ಎಷ್ಟೋ ಸಂಪಾದನೆ ಮಾಡಿದ್ದಾನೆ. ಒಂದು ಸಣ್ಣ ಸೊಸೈಟಿಯಲ್ಲಿ ಗೊಬ್ಬರದ ವ್ಯಾಪಾರದಿಂದ ಹಿಡಿದು ಅನೇಕ ದೊಡ್ಡ ವ್ಯಾಪಾರಗಳನ್ನು ಮಾಡತಕ್ಕ ಲೈಸೆನ್ಸ್‌ಗಳನ್ನು ಇವರು ಪಡೆದುಕೊಂಡು ಸಂಪಾದನೆ ಮಾಡಿದ್ದಾರೆ. ಇನ್ನೂ ಏನೇನೋ ವಿಚಾರಗಳಿವೆ. ಅವುಗಳನ್ನು ಹೇಳಿದರೆ ನಾಚಿಕೆಯಾಗುತ್ತದೆ. ಎಷ್ಟೋ ಸಲ ಎಷ್ಟೋ ಜನಗಳು ಕಾಂಗ್ರೆಸ್ಸಿನವರ ಹತ್ತಿರ ಬಂದು ಕೆಲಸ ಕೊಡಿಸಿ ಎಂದು ಕೇಳುತ್ತಾರೆ. ಸರ್ಕಾರದ ಆಡಳಿತದಲ್ಲಿರತಕ್ಕವರು ತಮಗೆ ತಮ್ಮವರಿಗೇ ಬೇಕಾದ ಕೆಲಸಗಳನ್ನು ಕೊಡಲು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ನಾವು ಎಷ್ಟು ಸಲ ಹೇಳಿದರೂ ಕೂಡ ಅದು ಅವರಿಗೆ ಮುಟ್ಟುವುದಿಲ್ಲ. ಯಾರೋ ಒಬ್ಬ ಕಾನ್‌ಸ್ಟೇಬಲ್ ಲಂಚವನ್ನು ತೆಗೆದುಕೊಳ್ಳಬಹುದು. ಆದರೆ ಮೇಲ್ಪಟ್ಟವರು, ಐ.ಜಿ.ಪಿ.ಯವರು ಮಂತ್ರಿಗಳು ಆದರ್ಶವಾಗಿರಬೇಕು. ಯಾರು ಲಂಚವನ್ನು ತೆಗೆದುಕೊಳ್ಳುತ್ತಾರೆಯೋ ಅವರನ್ನು ಹಿಡಿದು ಶಿಕ್ಷೆ ಮಾಡಬೇಕು; ಯಾರು ಅಧಿಕಾರ ದುರುಪಯೋಗದಿಂದ ಆಸ್ತಿಪಾಸ್ತಿಗಳನ್ನು ಮಾಡಿಕೊಂಡು ತಪ್ಪಿತಸ್ಥರಾಗಿದ್ದಾರೆಯೋ ಅವರಿಗೆ ಉಗ್ರ ಶಿಕ್ಷೆ ಆಗಬೇಕು. ಮರಣ ದಂಡನೆಯೇ ಆಗಬೇಕು. ಆದರೆ ನಾನು ಮರಣ ದಂಡನೆಗೆ ವಿರೋಧ ಇದ್ದೇನೆ. ಆದ್ದರಿಂದ ಅವರಿಗೆ ಸಾಮಾನ್ಯ ಶಿಕ್ಷೆ ಆಗಬೇಕು. ತಪ್ಪಿತಸ್ಥರಾದವರು ಯಾರೇ ಆಗಿರಲಿ ಅವರಿಗೆ ಶಿಕ್ಷೆಯನ್ನು ವಿಧಿಸಲೇಬೇಕು. ಅದು ಆಗದೇ ಹೋದರೆ ಏನೂ ಪ್ರಯೋಜನವಿಲ್ಲ. ದೇಶದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು, ಬಸವಣ್ಣನವರು ಮುಂತಾದ ದೊಡ್ಡ ದೊಡ್ಡವರ ಹೆಸರನ್ನು ಹೇಳುತ್ತೀರಿ, ಆದರೆ ನೈತಿಕವಾಗಿ ನಿಮಗೆ ಯಾವ ಅಧಿಕಾರವೂ ಇಲ್ಲ. ಸ್ವಾಮಿ, ಈಚೆಗೆ ನಾನು ಗುಲ್ಬರ್ಗಾ ಜಿಲ್ಲೆಗೆ ಹೋಗಿದ್ದೆ. ಅಲ್ಲಿ ಒಂದು ದೊಡ್ಡ ವ್ಯವಹಾರ ನಡೆದಿದೆ. ಅಲ್ಲಿ ಷಹಾಬಾದಿನಲ್ಲಿ ಲೈಮ್ ಸ್ಟೋನ್ ಬಹಳ ಇದೆ. ಸೇಡಂ ತಾಲ್ಲೂಕಿನಲ್ಲಿ ಒಂದು ಸಿಮೆಂಟ್ ಫ್ಯಾಕ್ಟರಿಯನ್ನು ಹಾಕುವ ಪ್ರಯತ್ನ ನಡೆದಿದೆ. ಅಲ್ಲಿ ಮನಾಪಲಿ ಕಂಪನಿಗಳಿವೆ. ಆ ಮನಾಪಲಿ ಕಂಪನಿಗಳಿಗೆ 5 ಮೈಲಿ ಸುತ್ತಳತೆ ಕೊಟ್ಟಿದ್ದಾರೆ. ಅದರ ಸುತ್ತಮುತ್ತ ಬೇರೆಯವರ ಜಮೀನು ಕ್ವಾರಿ ಇದ್ದರೂ ಅದನ್ನು ಅವರು ಮಾಡುವ ಹಾಗಿಲ್ಲ. ಅದನ್ನು ಆ ಕಂಪನಿಯವರೇ ಮಾಡಬೇಕು. ಬೇರೆಯವರ ಸಂಪತ್ತನ್ನು ಕಂಪನಿಗಳವರು ಸಂಗ್ರಹಿಸುತ್ತಿದ್ದಾರೆ. ಅಲ್ಲಿ ಈ ರೀತಿ ಇದೆ.

ಇನ್ನೊಂದು ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಕೈಗಾರಿಕಾ ಮಂತ್ರಿಗಳು ಇವೊತ್ತು ಈ ಸಭೆಯಲ್ಲಿ ಇಲ್ಲ. ದುರದೃಷ್ಟವಶಾತ್ ಅವರು ದಿವಂಗತರಾಗಿದ್ದಾರೆ. ಅವರು 31ನೇ ಜನವರಿ 66 ರಲ್ಲಿ ಈ ಸಭೆಯಲ್ಲಿ ಶ್ರೀಮಾನ್ ಜೆ. ಪಿ. ಸರ್ವೇಶ್ ಅವರ ಪ್ರಶ್ನೆಗೆ ಉತ್ತರ ಕೊಡುತ್ತಾ We have taken decision on November 65 to permit the quarying. ಅದಕ್ಕೆ ಅಡ್ವೋಕೇಟ್ ಜನರಲ್ ಅವರು ಹೈಕೋರ್ಟಿನಲ್ಲಿ ಅಫಿಡವಿಟ್ ಹಾಕಿದ್ದಾರೆ. ಏನಾದರೂ ನಾವು ಅದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದು ಹೇಳಿದ್ದಾರೆ. ಇಂಥಾದ್ದು ಒಂದು ಆಗಿವೆ. ಕಂಪನಿಗಳು ದೇಶವನ್ನು ಲೂಟಿ ಹೊಡೆಯುತ್ತಿವೆ. ಸಿಮೆಂಟ್ ಫ್ಯಾಕ್ಟರಿಗಳವರು ದೇಶವನ್ನು ಲೂಟಿ ಹೊಡೆಯುತ್ತಾರೆ. ಅಂಥವರನ್ನು ಮಾತ್ರ ಸರ್ಕಾರದವರು ಹಿಡಿಯುವುದಿಲ್ಲ. ತಮಗೆ ಬೇಕಾದಾಗ ಅವರಿಂದ ಕಾಂಗ್ರೆಸ್ ಫಂಡಿಗೆ ಹಣ ಮಾತ್ರ ತೆಗೆದುಕೊಳ್ಳುತ್ತಾರೆ. ಹಾಗೆಯೇ ಫುಲರ್ಸ್ ಅರ್ತ್ ಮೌಲ್ಡಿಂಗ್ ಸ್ಯಾಂಡ್ ಎನ್ನುವ ಮಣ್ಣು ಸಿಕ್ಕುತ್ತದೆ. ಅದರ ಲೈಸನ್ಸ್ ಒಬ್ಬರಿಗೆ ಕೊಡಲಾಗಿದೆ. ಲೈಸನ್ಸ್ ಪರ್ಮಿಟ್ ರಾಜ್ಯ ಎಂದು ರಾಜಾಜಿಯವರು ಹೇಳುತ್ತಿರುವುದು ನಮಗೆಲ್ಲಾ ಗೊತ್ತಿದೆ. ಇದು ಲೈಸನ್ಸ್ ಮತ್ತು ದುರುಪಯೋಗಕ್ಕೆ ಸಂಬಂಧಪಟ್ಟ

ವಿಷಯ. ಒಂದೊಂದು ಲೈಸೆನ್ಸ್‌ನಿಂದ ಯಾರಿಗೆ ಎಷ್ಟೆಷ್ಟು ಹೋಗುತ್ತದೆ, ಸಂಬಂಧಪಟ್ಟವರಿಗೆ ಎಷ್ಟೆಷ್ಟು ವಿಲೇವಾರಿ ಆಗುತ್ತಿದೆ ಎನ್ನುವುದು ಗೊತ್ತು. ಏತಕ್ಕೆ ನಿಮಗೆ ಅಧಿಕಾರದಲ್ಲಿ ಆಸಕ್ತಿ ಇದೆಯೆಂಬುದು ಇದರಿಂದಲೇ ಗೊತ್ತಾಗುತ್ತದೆ. ನೀವು ಸರ್ಕಾರದ ಆಡಳಿತವನ್ನು ನಡೆಸಕ್ಕದ್ದರಲ್ಲ ಒಂದು ಕ್ರಮವಿದೆಯೇ? ನಾನು ಹೇಳಬೇಕು ಎಂದರೆ, ನನ್ನ ಕಡಿತದಲ್ಲಿ ನೂರಾರು ಇವೆ. ಶ್ರೀಮಾನ್ ಬಸಪ್ಪನವರು ಮತ್ತು ಶ್ರೀಮಾನ್ ಶ್ರೀನಿವಾಸ ನಾಯಕರು ಇವರುಗಳಿಗೆ ನಾನು ಹೇಳುತ್ತೇನೆ. ಏನೋ ಒಂದು ಅವಿಶ್ವಾಸ ನಿರ್ಣಯವನ್ನು ಮಂಡಿಸುವುದಕ್ಕೆ ಒಂದು ಅವಕಾಶ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿದೆ, ಅದನ್ನು ಉಪಯೋಗಿಸಿಕೊಂಡು ಇವರು ಇದನ್ನು ಹೇಳಿ ಹೊರಟು ಹೋಗುತ್ತಾರೆ ಎಂದು ಇವರು ಯಾರೂ ಭಾವಿಸುವುದು ಬೇಡ. ನಾನು ವೈಯ್ಯುಕ್ತಿಕವಾಗಿ ಆ ಭಾವನೆಯಿಂದ ಹಗುರವಾಗಿ ಆ ಮಾತನ್ನು ಆಡುತ್ತಿಲ್ಲ. ಈ ಅಧಿವೇಶನ ಮುಗಿದರೂ ಮುಂದೆ ಅಧಿವೇಶನಗಳು ಬರುತ್ತವೆ. ಈ ಚುನಾವಣೆ ಮುಗಿದರೂ ಮುಂದೆ ಚುನಾವಣೆಗಳು ಬರುತ್ತವೆ. ಚುನಾವಣೆಗಳು ಬಾರದೇ ಹೋದರೂ ಜನ ಇರುತ್ತಾರೆ. ಜನತೆಯ ಬಾಯನ್ನು ಮುಚ್ಚಿಸುವುದಕ್ಕಾಗುವುದಿಲ್ಲ. ಆಕಾಶವನ್ನು ಮುಚ್ಚುವುದಕ್ಕಾಗುವುದಿಲ್ಲ. ದೇಶ ದೊಡ್ಡದು ಅದು ಶಾಶ್ವತ, ನಾವೂ ನೀವೂ ಹೋಗುತ್ತೇವೆ. ಆದರೆ ಇರುವಷ್ಟು ದಿವಸ ಪ್ರಾಮಾಣಿಕವಾಗಿ ಬದುಕಬೇಕು. ಕಾಂಗ್ರೆಸ್ ಸಂಸ್ಥೆ ಈ ದೇಶದಲ್ಲಿ ತ್ಯಾಗ ಮಾಡಿದಂತಹ ಒಂದು ಉತ್ತಮ ಸಂಸ್ಥೆ ಮತ್ತು ಬಹಳ ಮಹತ್ವವುಳ್ಳಂತಹ ಪುಣ್ಯ ಸಂಸ್ಥೆ. ಇಂತಹ ಪುಣ್ಯವಾದಂತಹ ಸಂಸ್ಥೆಯನ್ನು ಕೇವಲ ಇಪ್ಪತ್ತು ವರ್ಷಗಳೊಳಗೆ ನಾಮಾವಶೇಷವಾಗಿ ಹೋಗುವಂತೆ ಮಾಡಿದಿರಿ. ಕಾಂಗ್ರೆಸ್ ಎನ್ನುವ ಪದಕ್ಕೆ ಮೋಸ ಎನ್ನುವ ಅರ್ಥ ಬರುವಂತೆ ಮಾಡಿದ್ದೀರಿ. ಇದರಿಂದ ಎಷ್ಟುಮಟ್ಟಿಗೆ ಇಂತಹ ತ್ಯಾಗ ಮಾಡಿದಂತಹ ಸಂಸ್ಥೆಗೆ ಗೌರವ ಬಂತು ಎನ್ನುವುದನ್ನು ತಾವೇ ಯೋಚನೆ ಮಾಡಬೇಕು. ಇಂತಹ ಉತ್ತಮವಾದ ಸಂಸ್ಥೆಯ ಭವಿಷ್ಯ ಯಾವ ತರಹ ಆಗುತ್ತದೋ ಎಂದು ಇದರ ಬಗ್ಗೆ ನಾವು ಪಶ್ಚಾತ್ತಾಪ ಪಡಬೇಕಾಗಿ ಬಂದಿದೆ. ದೇಶದಲ್ಲಿ ಇಂದು ನಿರಾಸೆಯ ವಾತಾವರಣ ಎಲ್ಲೆಲ್ಲೂ ಎದ್ದು ಕಾಣುತ್ತಿದೆ. ಯಾರೂ ಬೇಕಾದರೂ ನೋಡಲಿ. ಇವೊತ್ತು ನಿಮ್ಮ ನೌಕರರ ಪರಿಸ್ಥಿತಿ ಹೇಗಿದೆ ? ಎಲ್. ಐ. ಸಿ. ನೌಕರರ ಪರಿಸ್ಥಿತಿ ಏನಿದೆ ? ಅಥವಾ ಬೇರೆ ಮಿನರ್ವಾ ಮಿಲ್ಲುಗಳ ನೌಕರರ ಪರಿಸ್ಥಿತಿ ಏನು ? ಎಷ್ಟು ಜನ ನೌಕರರು ಅಶಾಂತಿಯಿಂದ ಜೀವನ ನಡೆಸುವುದೇ ಕಷ್ಟ ಎಂದು ಹೇಳುತ್ತಿದ್ದಾರೆ ಅದನ್ನೂ ನೋಡಿ. ಇದರಿಂದ ಯಾರು ಸುಖಿಯಾಗಿದ್ದಾರೆ ಎನ್ನುವುದನ್ನು ತಾವು ನೋಡಬಹುದು. ಇವೊತ್ತು ದೇಶದಲ್ಲಿರುವ ಸುಮಾರು 600 ಮಿಲ್ಲುಗಳಿಗೆ ಹತ್ತಿ ಸಿಗಲಿಲ್ಲ ಎಂದು ಹತ್ತಿ ಮಿಲ್ಲುಗಳ ಫೆಡರೇಷನ್ನಿನವರು ಹದಿನೈದು ದಿನ ಮಿಲ್ಲುಗಳ ಕೆಲಸವನ್ನು ಮುಚ್ಚಬೇಕೆಂದು ಮಾಡುತ್ತಿದ್ದಾರೆ. ಇದರಿಂದ ಎಷ್ಟು ಜನ ಕಾರ್ಮಿಕರ ಸ್ಥಿತಿ ಕಷ್ಟಕ್ಕೆ ಸಿಗುತ್ತದೆ ಎನ್ನುವುದನ್ನು ಯೋಚನೆ ಮಾಡಿದ್ದಾರೆಯೇ ? ಇನ್ನು ನಿಮ್ಮ ಯೋಜನೆಯ ಚಿತ್ರವನ್ನು ಇಲ್ಲಿ ನಾವು ನೋಡಬೇಕಾಗಿದೆ. ಯಾರೂ ಇವೊತ್ತು ಹತ್ತು ಷರಟುಗಳು ಹಾಗೂ ಹತ್ತು ಜೊತೆ ಪಂಚೆ ಇಟ್ಟುಕೊಂಡು ಐಷಾರಾಮ ಮಾಡುವಂತಹ ಜೀವನ ನಡೆಸುತ್ತಿಲ್ಲ. ಇವೊತ್ತು 16 ಗಜ ಬಟ್ಟೆ ಇಟ್ಟುಕೊಂಡಿರುವವರು 18 ಗಜ ಮಾಡಿಕೊಳ್ಳಲು ಆಗುವುದಿಲ್ಲ. ಏಕೆಂದರೆ, ಸಾಮಾನ್ಯವಾಗಿ ಇವೊತ್ತಿನ ಪೇಟೆಯಲ್ಲಿ ನೋಡಿದರೆ, ಯಾವ ಬಟ್ಟೆಯೂ ಕೂಡ ಮೀಟರಿಗೆ ಎರಡು ರೂಪಾಯಿಗಳಿಗಿಂತ ಕಡಿಮೆ ಇಲ್ಲ. ಜಾಸ್ತಿಯಾಗಿಯೇ ಬೆಲೆ ಇರುತ್ತದೆ. ಇವೊತ್ತು ಯಾರೂ ಐಷಾರಾಂನಂತೆ ಕಾರುಗಳಲ್ಲಿ ಓಡಾಡುತ್ತಿಲ್ಲ. ಆದರಲ್ಲೂ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಅಲ್ಲಂ ಕರಿಬಸಪ್ಪನವರು ಇಟ್ಟುಕೊಂಡಿರುವಂತಹ ಕಾರುಗಳಲ್ಲಿ ಯಾರೂ ಓಡಾಡುತ್ತಿಲ್ಲ. ಇಂತಹ ಒಂದು ಕಾರನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಇಟ್ಟುಕೊಂಡಿದ್ದಾರೆ. ಒಂದು ಸಾರಿ ನಾನು ನಡೆದುಕೊಂಡು ಒಂದು ರಸ್ತೆಯಲ್ಲಿ ಹೋಗುತ್ತಿದ್ದಾಗ ಶ್ರೀ ಅಲ್ಲಂ ಕರಿಬಸಪ್ಪನವರ ಕಾರು ಬಹಳ ಜೋರಾಗಿ ಬರುತ್ತಿತ್ತು. ಅದನ್ನು ನೋಡಿದ ಕೂಡಲೇ ನನಗೆ ಗಾಬರಿಯಾಯಿತು, ನಾನು ಎಲ್ಲಿ ಈ ಕಾರಿನ ಮಧ್ಯಕ್ಕೆ ಸಿಕ್ಕಿಕೊಂಡು ಸತ್ತು ಹೋಗುತ್ತೇನೋ ಎನ್ನುವಂತೆ ಆಯಿತು. ಹೀಗೆ ಸುಖ ಜೀವನವನ್ನು ನಡೆಸುತ್ತಿರುವ ಶ್ರೀಮಂತ ವರ್ಗ ಒಂದು ಕಡೆ, ಬಡತನದಿಂದ ನರಳುತ್ತಿರುವ ವರ್ಗ ಒಂದು ಕಡೆ ಇದೆ. ಇದರಲ್ಲೂ ನಿಮ್ಮ ಪಕ್ಷಕ್ಕೆ ಸೇರಿದವರು ಎಂದು ಅವರಿಗೆ ಎಷ್ಟು ಬಸ್ಸುಗಳ ಪರ್ಮಿಟ್ಟುಗಳನ್ನು ಎಷ್ಟು ಫುಡ್ ಪರ್ಮಿಟ್ಟುಗಳನ್ನು ಕೊಡುವುದು, ಸ್ಟೇನ್‌ಲೆಸ್ ಸ್ಟೀಲ್ ಪರ್ಮಿಟ್ಟುಗಳನ್ನು ಕೊಡುವುದೆಷ್ಟು ! ಕಾರುಗಳಿಗಾಗಿ ಕೊಡುವ ಪರ್ಮಿಟ್ಟುಗಳೆಷ್ಟು ? ಹೀಗೆ ಕೊಡುವಾಗ ನಿಮಗೇನಾದರೂ ಪೂರ್ವಾಪರ ವಿವೇಚನೆ ಇದೆಯೋ ಎಂದು ನಾನು ಇಲ್ಲಿ ಕೇಳುತ್ತೇನೆ.

ಒಬ್ಬರು ಮಾನ್ಯ ಸದಸ್ಯರು.—ಯಾರಿಗೂ ಅಕ್ಕಿ ಕೊಡಬೇಡ ಎಂದು ಸಲಹೆ ಮಾಡುತ್ತೀರಾ ?

ಶ್ರೀ ಎಸ್. ಗೋಪಾಲಗೌಡ.—ಅಕ್ಕಿ ಕೊಡಬೇಡ ಎಂದು ಹೇಳುತ್ತಿಲ್ಲ. ಎಲ್ಲರಿಗೂ ಕೊಡಿ. ಅನ್ನ ಹಾಕಿ. ಅವರೂ ಚೆನ್ನಾಗಿ ಊಟ ಮಾಡಲಿ. ಅಕ್ಕಿ ಕೊಡುತ್ತೇವೆ ಎಂದು ಹೇಳುತ್ತಾ ದೇಶದ ಗಂಟನ್ನು ಹೊಡೆಯುವುದಕ್ಕೆ ಹೋಗಬೇಡಿ. ಈಗ ನೀವು ಆ ರೀತಿ ಮಾಡುತ್ತಿದ್ದೀರಿ.

(ಶ್ರೀ ಎಸ್. ಗೋಪಾಲಗೌಡ)

ನಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ಮುಂದೆ ಪಬ್ಲಿಕ್ ಅಕೌಂಟ್ಸ್ ಸಮಿತಿಯವರ ವರದಿ ಬಂದಿದೆ. ಅದರಲ್ಲಿ ಅವರು ಏನು ಹೇಳಿದ್ದಾರೆಂದರೆ, ಲಕ್ಷ ರೂಪಾಯಿಗಳ ಗೊಬ್ಬರವನ್ನು ತರಿಸುದುದಕ್ಕೆ ಲೆಕ್ಕಪತ್ರಗಳೇ ಇಲ್ಲ. ಇದಕ್ಕಾಗಿ ಬೇರೆ ಒಂದು ಕಮಿಟಿಯನ್ನೇ ನೇಮಕ ಮಾಡಿ, ಅದರಲ್ಲಿ ಎಲ್ಲರೂ ಹೋಗಿ ವಿಚಾರಣೆ ಮಾಡಲಿ ಎಂದು ಹೇಳಿದ್ದಾರೆ. ಇನ್ನು ಟ್ರಾನ್ಸ್‌ಪೋರ್ಟ್ ಶಾಖೆ ಬಗ್ಗೆ ಕೂಡ ಇದರಲ್ಲಿ ಹೇಳಿದ್ದಾರೆ. ಹಿಂದೆ ಕೇರಳದಲ್ಲಿದ್ದಂತಹ ಮಂತ್ರಿಗಳಾದ ಶ್ರೀ ಶಂಕರ್‌ರವರೂ ಕೂಡ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಾದ ಕಾರ್ಮಿಕರ ಗೊಂದಲಗಳಿಂದಾಗಿ ಮಂತ್ರಿ ಪದವಿಯನ್ನು ಕಳೆದುಕೊಳ್ಳಬೇಕಾಗಿ ಬಂತು. ಇಲ್ಲೂ ಕೂಡ ಅಂತಹ ಆಪಾದನೆಗಳೇ ಬಂದಿವೆ. ಇದನ್ನು ಏನಾದರೂ ಅವರು ಗಮನಕ್ಕೆ ತೆಗೆದುಕೊಂಡಿದ್ದಾರೆಯೇ ಎಂದರೆ ಹಾಗೇನೂ ಕಾಣಿಸುತ್ತಿಲ್ಲ. ಇನ್ನು ನಮ್ಮ ಪಿ. ಡಬ್ಲ್ಯು. ಡಿ. ಮಂತ್ರಿಗಳು ಹೈದರಾಬಾದಿನಿಂದ ಫಾರ್ಗೋಗಳನ್ನು ನಮ್ಮ ದೇಶಕ್ಕೆ ಬೇಕೆಂದು ತರಿಸಿಕೊಂಡರು. ಅವು ಮೊದಲು ಹೈದರಾಬಾದಿನಲ್ಲಿ ಕ್ರಯವಾಗಿ ಇಲ್ಲಿಗೆ ಬಂದಿವೆ ಎಂದು ಕೇಳುತ್ತೇನೆ. ಅದರ ಮೇಲೆ ನಮಗೆ ಬರಬೇಕಾದ ಸೇಲ್ಸ್ ಟ್ಯಾಕ್ಸ್ ಕೂಡ ಅವರಿಗೇ ಹೋಯಿತು. ಇದನ್ನೇಕೆ ಮಾಡಿದರೋ ಗೊತ್ತಾಗುತ್ತಿಲ್ಲ. ಇದರಿಂದೇನಾದರೂ ಕಮಿಷನ್ ಪಡೆಯುವುದಕ್ಕಾಗಿ ಮಾಡಿದರೋ ಏನೋ ತಿಳಿಯದು. ಆದುದರಿಂದ ಇಂತಹ ವಿಚಾರಗಳ ಬಗ್ಗೆ ಇನ್ನೂ ಹೆಚ್ಚಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಸ್ವಾಮಿ, ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಇಲ್ಲಿ ಬರುತ್ತಾರೆಂದಿದ್ದೆ. ಆದರೆ ಅವರು ಇಲ್ಲಿ ಕಾಣುತ್ತಿಲ್ಲ.

ಕೆಲ ಸದಸ್ಯರು.—ಮಾನ್ಯ ಮಂತ್ರಿಗಳು ಇಲ್ಲೇ ಇದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಹಾಗಿದ್ದರೆ ಕೃಷಿಯ ಬಗ್ಗೆ ಕೆಲವು ಮಾತುಗಳನ್ನು ಅವರಿಗೆ ಹೇಳಬೇಕಾಗಿದೆ. ಇವೊತ್ತು ಇಲ್ಲಿಗೆ ಮಂಗಳೂರಿನಿಂದ ಕೆಲವು ಜನ ಕೃಷಿ ಮಾಡುವ ಜನ ಇಲ್ಲಿ ತಮ್ಮ ಕಷ್ಟಗಳನ್ನು ಹೇಳಬೇಕೆಂದು ಬಂದಿದ್ದಾರೆ. ಅವರಿಗೆ ಕಳೆದ ಹದಿನೈದು ವರ್ಷಗಳಿಂದಲೂ ಪೋಡಿ ಮಾಡಿಕೊಡುವುದಕ್ಕೆ ಆಗಲಿಲ್ಲ. ಮಾಡಬೇಕಾದ್ದನ್ನು ಮಾಡದೇ, ಮಾಡಬಾರದ್ದನ್ನೇ ಮಾಡುತ್ತಾ ಹೋಗುತ್ತಿದ್ದೀರಿ. ಹೀಗೆ ಹೋಗುವುದರಿಂದ ಈ ದೇಶದಲ್ಲಿ ಒಂದು ರೀತಿಯಾದ ನೈತಿಕ ಅಧಃಪತನಕ್ಕೆ ದಾರಿ ಮಾಡಿಕೊಡುತ್ತಿದ್ದೀರಿ. ಇವೊತ್ತು ಎಲ್ಲೆಲ್ಲೂ ಭ್ರಷ್ಟಾಚಾರಗಳು ತಾಂಡವವಾಡುತ್ತಿವೆ. ಲಂಚ ಕೊಡದೆ ಯಾವ ಕೆಲಸವೂ ಆಗುವುದಿಲ್ಲ ಎನ್ನುವ ಭಾವನೆ ಜನರಲ್ಲಿ ಬೆಳೆದು ಬಂದಿದೆ. ದೇಶದ ನೈತಿಕ ಅಧಃಪತನವಾಗುತ್ತಿದೆ. ಜನರಲ್ಲಿ ವಿಶ್ವಾಸ ಭಂಗವಾಗುತ್ತಿದೆ ಅವರ ಉತ್ಸಾಹ ಕುಗ್ಗುತ್ತಿದೆ. ದೇಶವೆಲ್ಲಾ ದಿವಾಳಿಯಾಗುತ್ತಿದೆ. ನಿಮ್ಮ ಅಮೆರಿಕಾದ ಅಧ್ಯಕ್ಷರಾದ ಜಾನ್‌ಸನ್‌ರವರು ಪಿ. ಎಲ್. 480 ರಂತೆ ಗೋಧಿ ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಈಗ ನಮ್ಮ ಮಾನ್ಯ ಆಹಾರ ಮಂತ್ರಿಗಳಾದ ಜತ್ತಿಯವರು ಎಲ್ಲಿಂದ ಅನ್ನ ತಂದು ಮುಂದೆ ಜನರಿಗೆ ಹಾಕುತ್ತಾರೋ ನೋಡಬೇಕಾಗಿದೆ. ನಾನು ಈ ಹಿಂದೆ ಒಂದು ಸಾರಿ ಮಾತನಾಡಿದಾಗ ಹೇಳಿದ್ದೆ. ಇದು ಪರಾಭವ ಸಂವತ್ಸರ ಎಂದು. ಹಾಗೂ ಮುಂದೆ ಬರುವ ಫೆಬ್ರುವರಿ ತಿಂಗಳ ಹೊತ್ತಿಗೆ ದೊಡ್ಡ ಕ್ಷಾಮವನ್ನು ಎದುರಿಸಬೇಕಾಗಿ ಬರಬಹುದು. ಕಾಂಗ್ರೆಸ್ಸು ಪಕ್ಷದವರು ಮುಂದೆ ದೊಡ್ಡ ಬರಗಾಲವನ್ನು ಎದುರಿಸಬೇಕಾಗಿ ಬರುತ್ತದೆ. ತ್ಯಾಗದ ಕಾಲ ಮುಗಿದು ಇಪ್ಪತ್ತು ವರ್ಷಗಳ ಭೋಗದ ಕಾಲವನ್ನು ನಾವಿಂದು ನೋಡುತ್ತಿದ್ದೇವೆ. ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ಹಿಟ್ಟಿಗೆ ಉಪ್ಪು ಹಾಕದೆ ಊಟಮಾಡುತ್ತಿದ್ದಂತಹವರು ಇವೊತ್ತು ಎಷ್ಟು ಮಾಫಾಡು ಆಗುತ್ತಿದ್ದಾರೆ ಎನ್ನುವುದನ್ನು ನೋಡಿದರೆ ನನಗೆ ಪರಮಾಶ್ಚರ್ಯವಾಗುತ್ತಿದೆ. ಕಾಂಗ್ರೆಸ್ಸಿನವರು ಹೀಗಾಗುತ್ತಾರೆಂದು ನಾನು ಭಾವಿಸಿರಲಿಲ್ಲ. ಒಂದೇ ಸಮನೆ ಅಧಿಕಾರದಲ್ಲಿ ಸುಮಾರು 20 ವರ್ಷಗಳಿಂದಲೂ ಅಧಿಕಾರದ ತೆಕ್ಕೆಗೆ ಸಿಕ್ಕಿಕೊಂಡು ಇದ್ದರೂ ಯಾರೂ ಹೀಗೆ ಹೋಗುತ್ತಿರಲಿಲ್ಲ. ಆದರೆ ಇಂದು ಆ ರೀತಿಯಾಗಿ ನಡೆದುಕೊಂಡು ಹೋಗುತ್ತಿದ್ದಾರೆ. ಈಚೆಗೆ ನಮ್ಮ ಎನ್. ಜಿ. ಓ. ಗಳ ಪ್ರತಿಧಿಗಳು ಮುಖ್ಯ ಮಂತ್ರಿಗಳೊಡನೆ ಭೇಟಿಗೆ ಬಂದಾಗ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ರಾಮರಾಯರೂ ಇದ್ದರಂತೆ. ಅವರು ಇಲ್ಲಿ ಉತ್ತರ ಹೇಳುವಾಗ ಇಂಥಿಂಥವರು ಇಂಥ ಪೋಷಾಕು ಹಾಕಿದ್ದರು ಇಂಥ ಪೆನ್ನು ಇಟ್ಟುಕೊಂಡಿದ್ದರು ಎಂದು ಇನ್ನಿತರ ಮಾತುಗಳನ್ನು ಹೇಳಿದರು, ಛೇ, ಅವರು ಇಂತಹ ಮಾತುಗಳನ್ನು ಆಡುವುದು ಎಂದರೆ......

ಶ್ರೀ ಎಂ. ವಿ. ರಾಮರಾವ್ (ಗೃಹಶಾಖೆಯ ಮಂತ್ರಿಗಳು).—ಸ್ವಾಮಿ, ನಾನು ಇಲ್ಲಿ ಹೇಳಿರುವುದನ್ನು ಎಲ್ಲರೂ ಕೇಳಿದ್ದಾರೆ. ನಾನೇನು ಹೇಳಿದೆ ಎಂದರೆ, ಅವರು ಇಟ್ಟುಕೊಂಡಿರುವ ಪೆನ್ ಹಾಗೂ ವಾಚು ಮತ್ತು ಅವರ ಪ್ರತಿನಿಧಿಗಳಾಗಿ ಬಂದಿದ್ದವರು ಹಾಕಿಕೊಂಡಿರುವ ಪೋಷಾಕು ಬಹಳ

ಬೆಲೆಯುಳ್ಳಂತಹವುಗಳು. ಇಂತಹ ಬೆಲೆಯುಳ್ಳ ವಸ್ತುಗಳನ್ನು ನಾನು ಕೂಡ ತೆಗೆದುಕೊಂಡು ಉಪಯೋಗಿಸುವುದಕ್ಕೆ ಆಗುವುದಿಲ್ಲ ಎಂದು. ಇದರ ಬಗ್ಗೆ ಯಾವುದೋ ಒಂದು ಪೇಪರಿನವರೂ ಕೂಡ ಒಂದು ಲೀಡರು ಆರ್ಟಿಕಲ್ ಬರೆದು ಅದರಲ್ಲಿ ಸರ್ಕಾರಕ್ಕೆ ಇವರ ಬಗ್ಗೆ ಸೌಜನ್ಯವಿರಬೇಡವೇ ? ಎಂದು ಬರೆದಿದ್ದುದನ್ನು ನಾನೂ ಕೂಡ ಓದಿ ನೋಡಿದೆ. ನಾನೇನೂ ಅವರಿಗೆ ಬುದ್ಧಿವಾದ ಹೇಳುತ್ತ ಇಂತಹ ಪೆನ್ನುಗಳನ್ನು ಇಟ್ಟುಕೊಳ್ಳಬೇಡಿ, ಇಂತಹ ಬಟ್ಟೆಗಳನ್ನು ಹಾಕಿಕೊಳ್ಳಬೇಡಿ ಎಂದು ಹೇಳಲಿಲ್ಲ. ಆದರೆ ಅಂತಹ ವಸ್ತುಗಳನ್ನು ಇಟ್ಟುಕೊಳ್ಳಲು ನನಗೆ ಆಗುತ್ತಿಲ್ಲ ಎಂದು ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ತಾವೇನೋ ಶ್ರೀಮಂತರಿರಬಹುದು ; ಸಿಂಪಲ್ ಆಗಿರಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಿಂಪ್ಲಿಸಿಟಿಯಲ್ಲಿ ದಲಾಯಿಲಾಮ ಇದ್ದಹಾಗೆ ಇದ್ದೇನೆ ಅಂತ ಅವರು ಹೇಳಿದರು. (ನಗು)

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಈ ಮಾತನ್ನು ನಾನು ಹೇಳಬಾರದು ಎಂದಿದ್ದೆ. ಆ ಸಮಯದಲ್ಲಿ ನಾನು ಇರಲಿಲ್ಲ. ನಾನೂ ಕೂಡ ಪತ್ರಿಕೆಗಳ ವರದಿಗಳ ಆಧಾರದಮೇಲೆ ಇಲ್ಲಿ ಹೇಳಬೇಕಾಗಿ ಬಂತು. ಗಾಂಧಿವಾದಿಗಳಾಗಿದ್ದವರಲ್ಲಿ ಒಬ್ಬರು ಪೋಲೀಸು ಇಲಾಖೆ ವಹಿಸಿಕೊಂಡರೆ ಬುದ್ಧಿ ಹೇಗೆ ಪರಿವರ್ತನೆಯಾಗುತ್ತದೆ ಎನ್ನುವುದನ್ನು ನಾವು ಬಿಡಿಸಿ ಇಲ್ಲಿ ಹೇಳಲು ಯಾರಿಗೂ ಆಗುವುದಿಲ್ಲ. ಇವೆರಡನ್ನೂ ರೆಕನ್‌ಸೈಲ್ ಮಾಡುವುದು ಕಷ್ಟವಾಗುತ್ತದೆ. ಇದು ಏನೇ ಇರಲಿ, ತಮ್ಮ ಗಮನಕ್ಕೆ ಇನ್ನೊಂದು ವಿಚಾರ ಇಲ್ಲಿ ತರುತ್ತೇನೆ. ಬಾಗಲಕೋಟೆಯಲ್ಲಿರುವ ಒಂದು ಸಿಮೆಂಟು ಫ್ಯಾಕ್ಟರಿ ಇದೆ. ಈ ಬಾಗಲಕೋಟೆಯಿಂದಲೇ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಿಗೆ ಒಂದು ಸ್ಥಾನ ಕೊಟ್ಟು ಚುನಾವಣೆ ಮಾಡಿಸುವುದಕ್ಕಾಗಿ ಇಲ್ಲಿದ್ದ ಒಬ್ಬರಿಂದ ರಾಜೀನಾಮೆ ಕೊಡಿಸಿ ಇವರನ್ನು ಅವಿರೋಧವಾಗಿ ಚುನಾಯಿಸಬೇಕೆಂದು ಮಾಡಿ ತಂದು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಮಾಡಿದರು. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಬಾಗಲ ಕೋಟೆಯ ಸಿಮೆಂಟು ಫ್ಯಾಕ್ಟರಿಯಲ್ಲಿ ಅನೇಕ ಅಕ್ರಮ ವ್ಯವಹಾರಗಳು ನಡೆಯಲು ಇಲ್ಲಿದ್ದ ಒಬ್ಬರು ಶ್ರೀಮಂತ ಡೈರೆಕ್ಟರೇ ಕಾರಣ ಎಂದು ಅವರ ಮೇಲೆ ದುಡ್ಡಿನ ಧಪಾವಣೆಗಾಗಿ ಸುಮಾರು 33 ಕೇಸುಗಳಲ್ಲಿ ಲಕ್ಷ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ ಎನ್ನುವುದು ಇನ್ನೂ ಕೋರ್ಟುಗಳಲ್ಲಿರುವಾಗ ಅದನ್ನು ವಾಪಸು ತರಿಸಿ ಕೊಳ್ಳಲು ನಮ್ಮ ಮಂತ್ರಿಮಂಡಲದವರು ಸಹಾಯ ಮಾಡಿ ವಿತ್‌ಡ್ರಾ ಮಾಡಿಸಿದರೆಂದು ಕೇಳುತ್ತೇನೆ. ಇಂತಹ ಅಕ್ರಮ ವ್ಯವಹಾರಗಳಿಗೆ ಗುರಿಯಾಗಿ ಸೆಷನ್ ಕೇಸು ಇದ್ದಂತಹ ವ್ಯಕ್ತಿಯನ್ನೇ ಪುನಃ ಇದರ ಮ್ಯಾನೇಜಿಂಗು ಡೈರೆಕ್ಟರಾಗಿ ನೇಮಿಸಿ ಅವರಿಗೆ ಸುಮಾರು 8-10 ಸಾವಿರ ರೂಪಾಯಿಗಳಷ್ಟು ಪಗಾರ ಎಂದು ಕೊಡುತ್ತಿದ್ದಾರೆ. ಅಲ್ಲದೆ ಆ ಫ್ಯಾಕ್ಟರಿಯಲ್ಲಿ ಪುನಃ ಚುನಾವಣೆಗಳು ನಡೆಯಲು ಬಂದಾಗ ಇಲ್ಲಿನ ರಾಜ್ಯ ಸರ್ಕಾರದವರು ಹಾಗೂ ಮಂತ್ರಿಮಂಡಲದವರು ಪ್ರಾಕ್ಸಿ ಕೊಟ್ಟು ಅವರಿಗೆ ವೋಟು ಬರುವಂತೆ ಪುನಃ ಪ್ರಚಾರ ಮಾಡಿ ಡೈರೆಕ್ಟರಾಗಿ ಬರಲು ಪ್ರಯತ್ನ ಮಾಡುತ್ತಿದ್ದಾರೆಂದು ಕೇಳುತ್ತೇವೆ. ಇದೇ ಕಾರಣಕ್ಕಾಗಿಯೇ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಆರ್. ಎಂ. ಪಾಟೀಲ್‌ರವರೂ ಕೂಡ ಅವರು ತಮ್ಮ ಮೊದಲನ ಪೋರ್ಟ್‌ಫೋಲಿಯೋ ಕಳೆದುಕೊಳ್ಳಲು ಕಾರಣವಾಯಿತು ಎಂದು ಕೇಳುತ್ತೇವೆ. ಇದೇ ಕಾರಣಕ್ಕಾಗಿಯೋ ಏನೋ ನಮ್ಮ ಮಾನ್ಯ ಆಹಾರ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರೂ ಕೂಡ ಡಿಮೋಟ್ ಆಗುವ ಪ್ರಮೇಯ ಬಂತು ಎಂದು ಕೇಳುತ್ತೇವೆ. ಇನ್ನೂ ಒಂದು ಕಾರಣ ಇಲ್ಲಿ ಹೇಳುವುದಾದರೆ, ಈ ಮಂತ್ರಿಮಂಡಲದಲ್ಲಿ ಸತ್ತೋರು ಕೆಟ್ಟೋರು ಯಾರಿದ್ದರೂ ಸರಿ ಇವರ ಜಾಗಗಳನ್ನು ಭರ್ತಿ ಮಾಡಲು ಆಗಲಿಲ್ಲ. ಯಾರು ಹೋದರೂ ಸರಿಯೇ ಎಲ್ಲ ಮಂತ್ರಿಗಳ ಸ್ಥಾನವನ್ನೂ ನಾವೊಬ್ಬರೇ ವಹಿಸಿಕೊಳ್ಳುತ್ತೇನೆಂದು ಹೇಳುತ್ತಾರೆ. ಈಗ ನೀವೇ ನೋಡಬಹುದು ಹಿಂದೆ ಸೋಷಿಯಲ್ ವೆಲ್‌ಫೇರು ಇಲಾಖೆಗೆ ಒಬ್ಬರು ಮಂತ್ರಿಗಳು ಇದ್ದವರು ಈಗ ಇಲ್ಲ. ಅವರ ಬಗ್ಗೆ ಏನಾದರೂ ಕೇಳಲು ಆ ಇಲಾಖೆಯ ಅಧಿಕಾರಿಗಳ ಬಳಿ ಹೋದರೆ ನಮಗೇನೂ ಗೊತ್ತಿಲ್ಲ, ಇವೆಲ್ಲಾ ಪಾಲಿಸಿ ಮ್ಯಾಟರುಗಳು, ಮಂತ್ರಿಮಂಡಲಕ್ಕೆ ಸೇರಿದ್ದು ಎನ್ನುತ್ತಾರೆ ಮತ್ತು ನಾವೇನೂ ಮಾಡುವುದಕ್ಕೆ ಆಗುವುದಿಲ್ಲ ಎಂದೂ ಹೇಳುತ್ತಾರೆ. ಈ ಪಾಲಿಸಿಯನ್ನು ಡಿಸೈಡ್ ಮಾಡುವವರು ಯಾರು ? ಯಾರ ಮನೆ ಬಾಗಿಲು ಕಾಯಬೇಕು ? ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ಮಾನ್ಯ ಶ್ರೀ ದುಗ್ಗಪ್ಪನವರು ಹೇಳಿದರು, ಸೋಶಿಯಲ್ ವೆಲ್‌ಫೇರ್ ಏನೂ ಆಗಿಲ್ಲ ಎಂದು. ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಉದ್ಧೃದ್ಧವಾದ ದೊಡ್ಡ ದೊಡ್ಡ ಮಾತುಗಳನ್ನು ಹೇಳಿದ್ದಾರೆ. ಸರ್ದಾರ್ ವಲ್ಲಭಾಯಿ ಪಟೇಲರ ಒಂದು ತತ್ವವನ್ನು ಹೇಳಿದ್ದಾರೆ. ರಾಜ್ಯಗಳ ವಿಲೀನೀಕರಣವಾಯ್ತು. ಎರಡನೆಯದು ಅಸ್ಪೃಶ್ಯತೆ ತೆಗೆದುಹಾಕಿದ್ದಾರೆ, ಮತ್ತು ಸ್ತ್ರೀಯರಿಗೆ ಸ್ಥಾನಮಾನ ಬಂದಿದೆ ಇತ್ಯಾದಿ. ಇವತ್ತು ಏನಾಗಿದೆ ಎಂದರೆ, ಇವರ ಸರ್ಕಾರದ ಎಲ್ಲಾ ವಿಷಯಗಳನ್ನೂ ನಾವು ಧೃತರಾಷ್ಟ್ರನಿಗೆ, ಸಂಜಯನ ಮೂಲಕ ಹೇಳಿಸಿ ಕೇಳುತ್ತಾ ಇರಬೇಕು. ಇವತ್ತು ರಾಜ್ಯ ಹೇಗೆ ಇದೆ ? ಬರಾಬರಿ ಇದೆ ಎಂದು ಇವರು ಹೇಳುತ್ತಾರೆ. ಇನ್ನೂ ಸ್ವಲ್ಪ

(ಶ್ರೀ ಎಸ್. ಗೋಪಾಲಗೌಡ)

ಮುಂದಕ್ಕೆ ಹೋದರೆ ಮಾನ್ಯ ಕೃಷ್ಣಪ್ಪನವರು ಬಹಳ ಚೆನ್ನಾಗಿ ವಿವರಣೆ ಮಾಡಿ ಅಲ್ಲಿಯೇ ನರಕಕ್ಕೆ ತಳ್ಳಿಬಿಡುತ್ತಾರೆ. ಇವರು ಹೇಳುತ್ತಾರೆ, ಜಾನ್‌ಸನ್ ಇಲ್ಲದಿದ್ದರೆ, ಕೊಸಿಜಿನ್ ಬರುತ್ತಾನೆ ಎಂದು. ಯಾವ ದೇಶವೂ ಪರದೇಶದ ಹಣ, ಪರದೇಶದ ಗೋಧಿ, ಗೊಬ್ಬರದಿಂದ ಸ್ವಾತಂತ್ರ್ಯವನ್ನು ಕಟ್ಟಿಲ್ಲ. ನೆರವು ಪಡೆಯಬಹುದು, ತಾಂತ್ರಿಕ ಸಹಾಯ ಪಡೆಯಬಹುದು. ಮಾನ್ಯ ಮುಖ್ಯಮಂತ್ರಿಯವರು ಸಣ್ಣ ಕಾರು, ಸಣ್ಣ ಕಾರು ಎಂದು ಹೇಳುತ್ತಾ ಇದ್ದಾರೆ. ಬಹುಶಃ ಈಗ ಅದು ಹೋಯಿತು ಎಂದು ಕಾಣುತ್ತದೆ. ಗಾಲ್‌ಬ್ರೆತ್ ಹೇಳುತ್ತಾರೆ, ನೀವು ಇನ್ನೂ ಸೈಕಲ್ ಯುಗದಲ್ಲೇ ಇದ್ದೀರಿ, ಕಾರುಗಳಲ್ಲಿ ಇನ್ನೂ ಓಡಾಡುವುದಕ್ಕಾಗಲಿಲ್ಲ ಎಂದು. ಶ್ರೀ ರಾಮಕೃಷ್ಣ ಹೆಗಡೆಯವರು ಹೇಳುತ್ತಾರೆ — ಜನ ಎಂತಹದ್ದು ಇರುತ್ತಾರೋ, ಅಂಥದೇ ಸರ್ಕಾರ ಸಿಗುತ್ತದೆ ಎಂದು. ನಾನಾದರೂ ಹೇಳುವುದಿಷ್ಟೆ, ಇರುವ ಸ್ವಲ್ಪ ಕಾಲದಲ್ಲಾದರೂ ದೇಶದ ಹಿತದೃಷ್ಟಿಯಿಂದ ಸ್ವಾರ್ಥವನ್ನು ಸ್ವಲ್ಪ ಕಡಿಮೆ ಮಾಡಿ. ಇನ್ನೂ ತಿಂದುಕೊಂಡು ಮುಂದುವರಿಸಿಕೊಂಡು ಹೋಗಬೇಡಿ. ನೀವು ಜನರಿಗೆ ನೀರು ಕೊಡುವ, ದೀಪ ಕೊಡುವ, ಗೊಬ್ಬರ ಕೊಡುವ ಮುಂತಾದ ಸಹಸ್ರಾರು ಭರವಸೆಗಳನ್ನು ಕೊಟ್ಟು ವಂಚಿಸಿದಿರಿ. ಅದರಲ್ಲಿ ಒಂದಾದರೂ ಮಾಡಿ ದೇಶವನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿ.

ಶ್ರೀಮಾನ್ ಕಂಠಿಯವರು ಹೇಳುತ್ತಾರೆ, ವಿದ್ಯಾಭ್ಯಾಸ ವಿಷಯದಲ್ಲಿ ಸುಧಾರಣೆಯಾಗಿದೆಯೆಂದು. ಆದರೆ, ಅಂಥ ಸುಧಾರಣೆಯಾಗುತ್ತಾ ಇಲ್ಲ. ಅದನ್ನು ಹೇಗೆ ಸಾಧಿಸುವುದಾಗಲೀ ಗೊತ್ತಿಲ್ಲ. ಅಂತೂ ಕನ್ನಡ ಮಾಧ್ಯಮ ಮಾಡಬೇಕು, ಮತ್ತು ಇತರ ಬೇರೆ ಪ್ರಯೋಗಗಳನ್ನು ರಿವ್ಯೂ ಮಾಡಿ ಸರಿಪಡಿಸಬೇಕು. ಉದಾಹರಣೆಗೆ ಸ್ಕೂಲುಗಳಲ್ಲಿ 50 ಜನ ಪ್ರೊಬೇಶನರುಗಳನ್ನು ತೆಗೆದುಕೊಳ್ಳುವುದು. 20 ವರ್ಷ ಸರ್ವೀಸ್ ಮಾಡಿ ಎಂ.ಎ., ಬಿ.ಟಿ. ಯಾಗಿದ್ದರೂ ಅವನಿಗೆ ಹೆಡ್‌ಮಾಸ್ತರ್ ಆಗುವ ಸಂದರ್ಭ ಇಲ್ಲ. ಈ ಪ್ರೊಬೇಶನರುಗಳನ್ನು ಹೆಡ್‌ಮಾಸ್ತರ್, ಹೆಡ್‌ಮಿಸ್ಟ್ರೆಸ್ ಮಾಡುವುದರಿಂದ ಆ 20 ವರ್ಷ ಸೇವೆ ಮಾಡಿದವರು ಯಾವ ಹೊಳೆಗೆ ಹಾರಬೇಕು ? ಅದೇ ರೀತಿ ಜೂನಿಯರ್ ಇಂಜಿನಿಯರ್ಸ್ ಇದ್ದಾರೆ. ಅಂತೂ ಸಹಸ್ರಾರು ಸಮಸ್ಯೆಗಳನ್ನು ನಿರ್ಮಾಣ ಮಾಡಿ ಹದಗೆಡಿಸಿಬಿಟ್ಟಿದ್ದಾರೆ. ಇವತ್ತು ದೇಶದ ಒಂದು ಅತಿ ಅಮೂಲ್ಯವಾದ 20 ವರ್ಷಗಳನ್ನು ಹಾಳು ಮಾಡಿದಿರಿ. ಇವತ್ತು ಜನತೆಯ ದೇಶವನ್ನು ಕಟ್ಟಿ ಎಲ್ಲರೂ ಬದುಕಬೇಕು ಎನ್ನುವ ದೃಷ್ಟಿಯಿಂದ ಕೆಲಸವನ್ನು ಮಾಡಬೇಕು. ಅದಿಲ್ಲವೆ, ನೀವು ದೇಶದ ಬೊಕ್ಕಸವನ್ನು ಬರಿದು ಮಾಡಿ ದಾರಿದ್ರ್ಯವನ್ನು ತಂದೊಡ್ಡಿದ್ದೀರಿ. ಅಪಾರವಾದ ಸಾಲವನ್ನು ಮಾಡಿದಿರಿ. ಇವತ್ತಿನ ದಿವಸ ಯಾವುದಕ್ಕೆ ಮಾಡಬೇಕಾಗಿತ್ತೋ ಅದಕ್ಕೆ ಮಾಡದೆ ಬೇರೆ ಬೇರೆ ವಿಚಾರಗಳಿಗೆ ಖರ್ಚು ಮಾಡಿ, ತಿಂದು ಬರಿದು ಮಾಡಿದಿರಿ. ದೇಶದ ಜನತೆಗೆ ಅನ್ನ ಕೊಡುವುದಕ್ಕೂ ಆಗಲಿಲ್ಲ, ಮತ್ತು ಯಾವ ಮೂಲಭೂತ ಸಮಸ್ಯೆಯನ್ನು ಬಗೆಹರಿಸಲಾಗಲಿಲ್ಲ. ನಮ್ಮ ಮಾನ್ಯ ಮಂತ್ರಿಗಳು ಹೇಳುತ್ತಾರೆ, ಪೌರಸಭೆಯ ಹಣಕಾಸಿನ ಪರಿಸ್ಥಿತಿಯು ಚೆನ್ನಾಗಿಲ್ಲದಿರುವುದರಿಂದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಂಭಾವನೆಗಳನ್ನು ನಿಲ್ಲಿಸುತ್ತೇವೆ ಎಂದು. 10 ವರ್ಷಗಳ ಹಿಂದೆ ಮಾಡಿದ ಸಾಲ, — ಈಗ ಹಣಕಾಸಿನ ವ್ಯವಸ್ಥೆ ಸರಿಯಾಗಿಲ್ಲ ಎಂದು ಈಗಿರುವ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಕೊಡಬಾರದು ಎಂದು ಹೇಳುತ್ತಾರೆ. ನಾನಾದರೂ ಕೇಳುತ್ತೇನೆ : ಇವರು ಹಣವನ್ನು ದುರುಪಯೋಗ ಮಾಡಿದ್ದಾರೆ — ಒಂದು ತಿಂಗಳು ಇವರೆಲ್ಲಾ ಏಕೆ ಪುಕ್ಕಟ್ಟೆಯಾಗಿ ಕೆಲಸ ಮಾಡಬಾರದು ? ಯಾವ ತಪ್ಪಿಗೆ ಯಾವ ಶಿಕ್ಷೆ ? ಮಿತವ್ಯಯ ಸಾಧಿಸುವುದು ಹೇಳುತ್ತಾರೆ. ಎಡಗೈಯಲ್ಲಿ ಸಾಸಿವೆಯನ್ನು ಗಟ್ಟಿಯಾಗಿ ಹಿಡಿದಿದ್ದರೆ ಬಲಗೈಯಲ್ಲಿ ಕುಂಬಳಕಾಯಿ ಹೋಗುತ್ತದೆ. ಒಬ್ಬೊಬ್ಬ ಕಂಟ್ರಾಕ್ಟರುಗಳು ಮಾಡಿದ ಮನೆಗಳನ್ನು ನೋಡಿದರೆ, ನಮ್ಮ ಹೊಟ್ಟೆ ಉರಿದು ಹೋಗುತ್ತದೆ. ರಾಜನ ಅರಮನೆಗಳು ಕೂಡ ಆ ರೀತಿ ಇಲ್ಲ. ಇದೆಲ್ಲಾ ಯಾವ ಹಣ ? ಕೊಯಂಬತ್ತೂರು ನೋಟೆ ? ಪಿ.ಡಬ್ಲ್ಯು.ಡಿ. ನೋಟೆ ? ಏನಿದು ಸೂರೆ ? ಇವೆಲ್ಲಾ ನಿಲ್ಲಬೇಕು. ಜನ ಬೆಂಬಲದಿಂದ ಇದನ್ನೆಲ್ಲಾ ನಾವು ನಿಲ್ಲಿಸುತ್ತೇವೆ. ಇಷ್ಟು ಹೇಳಿ, ಈ ಮಂತ್ರಿಮಂಡಲದಲ್ಲಿ ಜನತೆಯ ವಿಶ್ವಾಸ ಉಳಿದಿರುವುದಿಲ್ಲ, ಹಾಗು ನೀವು ಜನರ ವಿಶ್ವಾಸ ಉಳಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಲಿಲ್ಲ ಎಂದು ಹೇಳುತ್ತೇನೆ. ಕೊನೆಯದಾಗಿ ಹೇಳುವುದು ಏನೆಂದರೆ, ಆಳುವ ನೈತಿಕ ಅರ್ಹತೆಯ ಹಕ್ಕನ್ನು ಇವರು ಕಳೆದುಕೊಂಡಿದ್ದಾರೆ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

5–30 P.M.

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಸ್ವಾಮಿ, ಒಂದೆರಡು ನಿಮಿಷ ಮಾತ್ರ ಮಾತನಾಡಲು ನಾನು ಬಯಸುತ್ತೇವೆ. ಹೆಚ್ಚಿಗೆ ಏನೂ ಹೇಳುವುದಿಲ್ಲ. ಒಂದೇ ಒಂದು ಮಾತು ಹೇಳು

ತ್ತೇನೆ. ಅಪರಾಧಗಳ ಪರಮಾವಧಿಯಾಗಿದ್ದರೂ ಕೂಡ ವಿರೋಧ ಪಕ್ಷದವರು ಈ ಅವಿಶ್ವಾಸ ನಿರ್ಣಯವನ್ನು ಚುನಾವಣೆ ಪ್ರಸಾರಕ್ಕೋಸ್ಕರ ತಂದರು ಎಂದು ಮಾನ್ಯ ಸದಸ್ಯರಾದ ಬಸಪ್ಪನವರು ಮಾತನಾಡುತ್ತಾ ಹೇಳಿದರು. ನಾವು ಮಾಡಿದ ಅಪಾದನೆಗಳಿಗೆ ಸರಿಯಾಗಿ ಉತ್ತರ ಕೊಡದೆ ಏನೇನೋ ಹೇಳಿದರು. ಮಂತ್ರಿಗಳು ಏನೇನು ಮಾಡಿದ್ದಾರೆ ಎಂಬುದು ಆಡಿಟ್ ರಿಪೋರ್ಟ್‌ನಲ್ಲಿದೆ. ಅದನ್ನು ಓದಿ ನೋಡಿದರೆ ಗೊತ್ತಾಗುತ್ತದೆ. ಈ ಅಪಾದನೆ ಬಗ್ಗೆ ಶ್ರೀಮಾನ್ ಗೋಪಾಲಗೌಡರು ಸಾಕಷ್ಟು ಹೇಳಿದರು. ಅವರು ಹೇಳಿದ್ದನ್ನು ಸರಿಯಾಗಿ ಕೇಳಿದ್ದರೆ ಇವತ್ತು ಈ ಮಂತ್ರಿಮಂಡಲ ರಾಜೀನಾಮೆ ಕೊಟ್ಟು ಹೋಗ ಬೇಕಾಗಿತ್ತು. ಇವತ್ತು ವಿಧಾನಸೌಧದ ಕ್ಯಾಂಟೀನ್ ಸರಕಾರ ನಡೆಸುತ್ತಿದ್ದಾರೆ. ಈ ಕ್ಯಾಂಟೀನು ನಷ್ಟದಲ್ಲಿ ನಡೆಯುತ್ತಿದೆ. ಇಂಥವರು ರಾಜ್ಯ ಸರಕಾರ ನಡೆಸುವುದಕ್ಕೆ ಸಾಧ್ಯವೇ ? ಅಧಿಕಾರದಲ್ಲಿರುವವರು ಐಶ್ವರ್ಯ ಸಂಪಾದನೆ ಮಾಡುವುದೇ ಉದ್ದೇಶವಾಗಿಟ್ಟುಕೊಂಡಿದ್ದಾರೆ. ಸರಕಾರದ ಅಪರಾಧಗಳನ್ನು ಈ ಸಭೆಯಲ್ಲಿ ನಾವು ಹೇಳುತ್ತಲೇ ಬಂದಿದ್ದೇವೆ. ಆದರೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇಂಥ ಸಂದರ್ಭದಲ್ಲಿ ನಿನ್ನೆಯ ದಿವಸ ಈ ಅವಿಶ್ವಾಸ ನಿರ್ಣಯ ತರಬೇಕಾಯಿತು. ಇಂದು ರೈತರ ಸ್ಥಿತಿ ಕೆಟ್ಟುಹೋಗಿದೆ. ಮಂಡ್ಯ ಸಕ್ಕರೆ ಕಾರ್ಖಾನೆ ನಿಂತು ಹೋಯಿತು. ಪಾಂಡವಪುರ ಸಕ್ಕರೆ ಕಾರ್ಖಾನೆ ನಿಂತುಹೋಗುವುದರಲ್ಲಿದೆ. ನಾವು ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರುವುದಿಲ್ಲ. ಟೂರ್ ಮೇಲೆ ಮಂತ್ರಿಗಳು ಬಂದಾಗ್ಗೆ ಅಲ್ಲಿಯ ಪರಿಸ್ಥಿತಿಯ ಸತ್ಯಾಂಶ ತಿಳಿದುಕೊಂಡು ಬರುವುದಿಲ್ಲ. ತಮ್ಮ ತಮ್ಮ ಕ್ಷೇತ್ರಗಳಿಗೆ ಒಂದು ತಿಂಗಳಿನಲ್ಲಿ ನಾಲ್ಕು ಸಾರಿ ಹೋಗುತ್ತಾರೆ. ಇದು ಅಧಿಕಾರ ದುರುಪಯೋಗವಾಗುತ್ತದೆ ಅಲ್ಲವೇ ? ತಮ್ಮ ಕ್ಷೇತ್ರದಲ್ಲಿ ಆಗಬೇಕಾದ ಕೆಲಸ ಮಾಡಿಸಿಕೊಳ್ಳುತ್ತಾರೆ. ಇದು ಅಧಿಕಾರದ ದುರುಪಯೋಗವಾಗುತ್ತದೆ. ಇದು ಜನರಿಗೆ ಗೊತ್ತಾಗಿದೆ. ಚುನಾವಣೆ ಹತ್ತಿರ ಬಂದಿದೆ. ಜನರನ್ನು ಇನ್ನು ಮೋಸ ಮಾಡುವುದು ನಿಮಗೆ ಸಾಧ್ಯವಿಲ್ಲ. ಜನರು ಕಣ್ಣು ಬಿಟ್ಟಿದ್ದಾರೆ. ಈ ಸಂದರ್ಭದಲ್ಲಿ ಮಂತ್ರಿಮಂಡಲ ರಾಜೀನಾಮೆ ಕೊಟ್ಟು ಹೊರಗೆ ಬರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಹೇಳಿದಹಾಗೆ ಇದು ನಾಲ್ಕನೇ ಅವಿಸ್ವಾಸ ನಿರ್ಣಯ ಸಭೆಯ ಮುಂದೆ ಬಂದಿದೆ. ಇವತ್ತಿನ ದಿವಸ ಮಧ್ಯಾಹ್ನದಿಂದ ಈ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯಾಗುತ್ತಿದೆ. ಇಂಥ ಅವಿಶ್ವಾಸ ನಿರ್ಣಯ ಈ ಸಭೆಗೆ ಹೊಸವೇನೂ ಅಲ್ಲ. ಪ್ರತಿಯೊಂದು ಅಸೆಂಬ್ಲಿ ಅಧಿವೇಶನದಲ್ಲಿಯೂ ಇಂಥ ನಿರ್ಣಯ ಬರಲೇಬೇಕು ಎಂದು ಅವರು ಸಂಪ್ರದಾಯ ಹಾಕಿದಂತೆ ಇದೆ. ಈ ಸಲ ನಾವೆಲ್ಲರೂ ಹೋಗುವ ಮುಂದೆ ಈ ತರಹದ ಅವಿಶ್ವಾಸ ನಿರ್ಣಯ ತಂದಿರುವುದು ವಿರೋಧ ಪಕ್ಷದವರು ರೂಲಿಂಗ್ ಪಾರ್ಟಿಗೆ ಪಾರ್ಟಿಂಗ್ ಗಿಫ್ಟ್—ಒಂದು ವರದಾನ ಕೊಟ್ಟ ಹಾಗೆ ಇದೆ. ಈಗ ಹೇಳಿದ ಹಾಗೆ ವಿರೋಧ ಪಕ್ಷದವರ ನೋ ಕಾನ್‌ಫಿಡೆನ್ಸ್ ಮೋಷನ್ ಪ್ರತಿಯೊಂದು ಅಸೆಂಬ್ಲಿ ಮುಂದೆ ಬರುತ್ತದೆ. ಆದರೆ ಈ ಸಲ ಬಂದಾಗ್ಗೆ ನನಗೆ ಸ್ವಲ್ಪ ಆಶ್ಚರ್ಯವಾಯಿತು. ಯಾಕಂದರೆ, ನಾಳೆಯಿಂದ ಈ ಅಸೆಂಬ್ಲಿ ಅಧಿವೇಶನ ಮುಕ್ತಾಯವಾಗುತ್ತದೆ. ಇನ್ನು ಎರಡು ಮೂರು ತಿಂಗಳೊಳಗಾಗಿ ಚುನಾವಣೆ ನಡೆಯುತ್ತದೆ. ಅದು ಆದಮೇಲೆ ಹೊಸದಾಗಿ ಮತ್ತೆ ಅನೇಕ ಜನ ಸದಸ್ಯರು ಆರಿಸಿ ಬರುತ್ತಾರೆ, ಹಾಗೂ ರಾಜ್ಯ ಸರಕಾರ ಹೊಸದಾಗಿ ರಚನೆಯಾಗುತ್ತದೆ. ಈಗ ಇರತಕ್ಕ ಎಷ್ಟೋ ಜನ ಸದಸ್ಯರು ಆ ಕಡೆ ಈಕಡೆ ಪುನಃ ಆರಿಸಿ ಇಲ್ಲಿಗೆ ಬರುತ್ತಾರೆ. ಯಾರು ಯಾರು ಬರುತ್ತಾರೆ ಎಂದು ಹೇಳುವುದು ಸಾಧ್ಯವಿಲ್ಲ. ನನಗೆ ಆಶ್ಚರ್ಯವಾದುದು ಏನೆಂದರೆ, ಸುಮಾರು 4 ವರ್ಷ 9 ತಿಂಗಳು ವರೆಗೆ ಈ ಸಭೆಯಲ್ಲಿ ಎಲ್ಲರೂ ಸೇರಿ ನಮ್ಮ ಶಕ್ತ್ಯಾನುಸಾರ ಮೈಸೂರು ರಾಜ್ಯದ ಕರ್ನಾಟಕ ರಾಜ್ಯದ ಪ್ರಜೆಗಳ ಸೇವೆ ಮಾಡಿದ್ದೇವೆ. ಕೊನೆಯ ಗಳಿಗೆಯಲ್ಲಿ ನಾವೆಲ್ಲರೂ ಅಗಲುವ ಸಮಯದಲ್ಲಿ ಒಳ್ಳೆಯ ವಾತಾವರಣದಲ್ಲಿ ಬೀಳ್ಕೊಡುವ ಒಂದು ಪ್ರಸಂಗದಲ್ಲಿ ಈ ತರಹದ ಒಂದು ಅವಿಶ್ವಾಸ ನಿರ್ಣಯ ಬಂದುದು ನನಗೆ ಆಶ್ಚರ್ಯವಾಯಿತು. ಈ ನಿರ್ಣಯದ ಪರಿಣಾಮ ಏನಾಗುತ್ತದೆ ಎಂಬುದು ನಮಗೂ ಗೊತ್ತು ಅವರಿಗೂ ಗೊತ್ತು. ಆರೇಳು ಗಂಟೆವರೆಗೆ ಚರ್ಚೆಯಾದ ಮೇಲೆ ವಿರೋಧ ಪಕ್ಷದ ಕಡೆಗೆ 30-31 ವೋಟು ಬರಬಹುದು, ನಮ್ಮ ಕಡೆ 150 ವೋಟು ಬರುತ್ತವೆ ಎಂಬುದು ನನಗೂ ಗೊತ್ತಿದೆ. ಆದರೆ ಈ ಅವಿಶ್ವಾಸ ನಿರ್ಣಯ ತರುವ ಅವಶ್ಯಕತೆ ಏನು ಬಂತು ಎಂಬುದು ಒಂದು ಪ್ರಶ್ನೆ. ಇಲ್ಲಿ ನಡೆಯುತಕ್ಕ ಸಭೆಯನ್ನು ಜನ ನೋಡುತ್ತಾರೆ, ಚರ್ಚೆಯನ್ನು ಕಾತರತೆಯಿಂದ ನಾಳೆ ಪೇಪರಿನಲ್ಲಿ ಜನ ಓದುತ್ತಾರೆ. ಅಂಥದೇನು ಹೊಸದಾಗಿ ದೊಡ್ಡ ಗಂಡಾಂತರ ಬಂದಿದೆ ಎಂದು ಯೋಚನೆ ಮಾಡುತ್ತಾರೆ. ಮೂರು ತಿಂಗಳಿಗೆ ಬರಲಿರುವ ಮಹಾ ಚುನಾವಣೆಯ ಕೋಲಾಹಲ ಎಬ್ಬಿಸಲು ಈ ಸಭೆಯನ್ನು ಉಪಯೋಗಿಸಿದ್ದಾರೆ. ಮೂರು ತಿಂಗಳು ರಾಜ್ಯ ನಮ್ಮ ಕೈಯಲ್ಲಿ ಇದ್ದರೆ ಪ್ರಳಯವಾಗುತ್ತದೆಯೇ ? ಮೈಸೂರು ರಾಜ್ಯದಲ್ಲಿ ಅಂಥದೇನು ಆಗುತ್ತದೆ ? ಎಂದು ಅನೇಕರು ವಿಚಾರ ಮಾಡುತ್ತಾರೆ. ಜವಾಬ್ದಾರಿಯಿಂದ ವಿಚಾರ ಮಾಡತಕ್ಕ

(ಶ್ರೀ ವೀರೇಂದ್ರ ಪಾಟೀಲ್)

ವರು ಸರಿಯಾಗಿ ವಿಚಾರ ಮಾಡುತ್ತಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಅಂಥದೇನು ಕೆಟ್ಟ ಪರಿಸ್ಥಿತಿ ಬಂದಿದೆ ಅವಿಶ್ವಾಸ ನಿರ್ಣಯ ತರುವುದಕ್ಕೆ? ಪ್ರತಿಯೊಂದು ಸಲ ಅವಿಶ್ವಾಸ ನಿರ್ಣಯ ತಂದಾಗ್ಲೆ ಹಾಡಿದ್ದನ್ನೇ ಹಾಡುತ್ತಾರೆ. ಈ ಸಲ ಸಹ ಮೊದಲು ಹಾಡಿದಂತೆಯೇ ಹಾಡಿದ್ದಾರೆ. ಹಾಡಿದ್ದೇಹಾಡೋ ಕಿಸಬಾಯಿ ದಾಸ ಎನ್ನುವ ಹಾಗೆ ಆಗಿದೆ.

ಶ್ರೀ ಎಸ್. ಗೋಪಾಲಗೌಡ.—ನಾವು ಎಷ್ಟು ಹೇಳಿದರೂ ಕೂಡ ಮಾಡಿದ್ದನ್ನೇ ಮಾಡುತ್ತೀರಿ ಎಂದು ನಾವು ಹಾಡಿದ್ದನ್ನೇ ಹಾಡುತ್ತೇವೆ.

ಶ್ರೀ ವೀರೇಂದ್ರ ಪಾಟೀಲ್.—ಒಟ್ಟಿನಲ್ಲಿ ಹಾಡಿದ್ದನ್ನೇ ಹಾಡೋ ಕಿಸಬಾಯಿ ದಾಸನಂತೆ ಮತ್ತೊಮ್ಮೆ ಅದನ್ನೆ ಹಾಡಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಅನೇಕಸಲ ಅವಿಶ್ವಾಸ ನಿರ್ಣಯ ತಂದಿರುವುದರಿಂದ ಡೆಮಾಕ್ರೆಸಿಯಲ್ಲಿ ಅದಕ್ಕೆ ಇರುಸಂಥ ಮಹತ್ವ ಉಳಿಯದೇ ಹೋಗಿದೆ ಎಂದು ಸ್ಪಷ್ಟವಾಗಿ ಹೇಳಲು ಇಚ್ಛೆಪಡುತ್ತೇನೆ. ನಮ್ಮ ಮೇಲೆ ವಿಶ್ವಾಸ ಇಲ್ಲಾ ಎಂದು ವಿರೋಧ ಪಕ್ಷದ ನಾಯಕರು ಹೇಳಿದರು. ನಿಜವಾಗಿಯೂ ಜನತೆಯ ವಿಶ್ವಾಸ ನಮ್ಮ ಮೇಲೆ ಇದೆ. ಜನತೆಯ ವಿಶ್ವಾಸ ದುರ್ದೈವದಿಂದ ವಿರೋಧ ಪಕ್ಷದವರ ಮೇಲೆ ಇಲ್ಲ. ಜನತೆಯ ವಿಶ್ವಾಸ ವಿರೋಧ ಪಕ್ಷದವರ ಮೇಲೆ ಇದ್ದಿದ್ದರೆ ಅವರು ಈ ಕಡೆ ಬರಬಹುದಾಗಿತ್ತು. ಎಷ್ಟು ಜನ ಸದಸ್ಯರು ನಿಮ್ಮಲ್ಲಿ ಜನತೆಯ ವಿಶ್ವಾಸ ಗಳಿಸಿ ಈ ಸಭೆಗೆ ಪುನಃ ಆರಿಸಿ ಬಂದಿದ್ದಾರೆ? ನನ್ನ ಮಟ್ಟಿಗೆ ಹೇಳುವುದಾದರೆ ನಾನು ಕಳೆದ 15 ವರ್ಷ ಈ ಸಭೆಯ ಸದಸ್ಯನಾಗಿದ್ದೇನೆ. ನಮ್ಮ ಪಕ್ಷದಲ್ಲಿ 15 ವರ್ಷ ಈ ಅಸೆಂಬ್ಲಿಯ ಸದಸ್ಯರಾದವರು ಬಹಳ ಜನ ಇದ್ದಾರೆ. ಒಂದು ಟರ್ಮ್ ಆರಿಸಿ ಬಂದವರೇ ನಿಮ್ಮ ಪಕ್ಷದಲ್ಲಿದ್ದಾರೆ. ಒಂದು ಟರ್ಮ್ ಆರಿಸಿ ಬಂದ ಮೇಲೆ ಎರಡನೇ ಟರ್ಮ್ ಆರಿಸಿ ಬಂದವರು ಮೂರು ನಾಲ್ಕು ಜನ ಸಿಕ್ಕುತ್ತಾರೆ ಎಂದು ನನಗೆ ಅನಿಸುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮಂತ್ರಿಗಳು ಜನರ ವಿಶ್ವಾಸವನ್ನು ಗಳಿಸಿದ್ದೇವೆಂದು ಹೇಳಿದರು. ಹಣ ಎಷ್ಟು ಗಳಿಸಿದ್ದಾರೆ ಸ್ವಾಮಿ?

ಶ್ರೀ ವೀರೇಂದ್ರ ಪಾಟೀಲ್.—ಕೋಟಿಗಟ್ಟಲೆ ಹಣವನ್ನು ಗಳಿಸಿದ್ದೇವೆ. ಟ್ಯಾಕ್ಸ್ ರೂಪದಲ್ಲಿ ಜನರು ಕೊಟ್ಟ ಹಣ ಕೋಟಿಗಟ್ಟಲೆ ಇದೆ, ನನ್ನ ಜೇಬಿನಲ್ಲಿಲ್ಲ, ಟ್ರೆಜರಿಯಲ್ಲಿ. ಪ್ರತಿಸಲ ಹೊಸ ಮುಖಗಳು ಆ ಕಡೆಯಿಂದ ಬರುತ್ತಿವೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಎರಡು ಅವಧಿಯಿಂದ ಕಾಣಿಸುತ್ತಿದ್ದಾರೆ, ಶ್ರೀಮಾನ್ ರೇವಣ್ಣಸಿದ್ದಪ್ಪನವರು ಮತ್ತು ಶ್ರೀಮಾನ್ ಜಿ. ವಿ. ಗೌಡರೂ ಎರಡು ಸಲದಿಂದ ಬಂದಿದ್ದಾರೆ. ಈ ಮೂರು ಜನರನ್ನು ಬಿಟ್ಟರೆ ಉಳಿದವರೆಲ್ಲ ಮೊದಲನೆಯ ಸಲ ಬಂದಿರುವವರು. ಎಲ್ಲ ಹೊಸ ಮುಖಗಳು. 1962ರಲ್ಲಿ ನಿವೃತ್ತರಾದ 21 ಪ್ರಜಾ ಸೋಷಿಯಲಿಸ್ಟ್ ಪಕ್ಷದ ಸದಸ್ಯರಲ್ಲಿ ಶ್ರೀಮಾನ್ ರೇವಣಸಿದ್ದಪ್ಪನವರೊಬ್ಬರು ಮಾತ್ರ ಪುನಃ ಚುನಾವಣೆಯಲ್ಲಿ ಬಂದಿದ್ದಾರೆ. ಈ ಸಲ ಎಷ್ಟು ಜನ ಬರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಪ್ರತಿಯೊಂದು ಸಲವೂ ನಿಮ್ಮ ಮೇಲೆ ವಿಶ್ವಾಸವಿಲ್ಲ; ಎಂದು ಜನರ ಗುತ್ತಿಗೆ ತೆಗೆದುಕೊಂಡು ಹೇಳುತ್ತಾರೆ. ಹಾಗಿದ್ದರೆ ನಾವು ಇಲ್ಲಿ ಬಂದು ಸರ್ಕಾರವನ್ನು ಕಟ್ಟುತ್ತಿದ್ದೇವೆ ಎನ್ನುವುದನ್ನು ವಿಚಾರ ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಎಷ್ಟು ಜನ ಮಂತ್ರಿಗಳಾಗಿದ್ದವರು ಆರಿಸಿ ಬಂದಿಲ್ಲ ಎನ್ನುವುದನ್ನು ಹೇಳುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—(ಹೆಬ್ಬೂರು).—ಹೊಸದುರ್ಗದಲ್ಲಿ ಮುಖ್ಯ ಮಂತ್ರಿಗಳ ಪಾಡು ಏನಾಯಿತು?

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ನಿಂತವರು ಎಲ್ಲರೂ ನೂರಕ್ಕೆ ನೂರು ಜನ ಆರಿಸಿ ಬಂದಿದ್ದಾರೆ ಎಂದು ನಾನು ಹೇಳಲಿಲ್ಲ. ಆದರೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಆರಿಸಿ ಬರದೆ ಇದ್ದರೆ ನಾವು ಈ ಕಡೆ ಬರುತ್ತಿರಲಿಲ್ಲ. ಜನರ ವಿಶ್ವಾಸ ತಮ್ಮ ಮೇಲೆ ಇಲ್ಲ ಎನ್ನುವ ಮಾತು ಇದರಿಂದ ಸ್ಥಾಪಿತವಾಗುತ್ತದೆ ಎಂದು ನಾನು ಹೇಳುತ್ತಿದ್ದೇನೆ.

ಈ ಅವಿಶ್ವಾಸ ನಿರ್ಣಯ ಬಂದದ್ದು, ನನಗೆ ಗೊತ್ತಿರುವಂತೆ, ಚುನಾವಣಾ ಪ್ರಚಾರ ಮಾಡುವುದಕ್ಕೆ, ನಾಳೆ ಎಲ್ಲರೂ ಚುನಾವಣೆಯನ್ನು ಎದುರಿಸಬೇಕಾಗಿದೆ. ಅದಕ್ಕೆ ಇಲ್ಲಿಯೇ ಪ್ರಾರಂಭ ಮಾಡಿದ್ದಾರೆಂದು ಹೇಳುತ್ತೇನೆ. ಆದರೆ ನಾನು ಯಾರ ಮೇಲೂ ಮಣ್ಣೆರಚುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಯಾರ ಮುಖಕ್ಕೂ ಮಸಿ ಬಳಿಯುವುದಕ್ಕೆ ಪ್ರಯತ್ನ ಪಡುವುದಿಲ್ಲ. ಆ ರೀತಿ ಬೇಕಾದರೆ ಅಂಕಿ ಅಂಶಗಳ ಸಮೇತ ಹೇಳುವುದಕ್ಕೆ ಸಿದ್ಧವಾಗಿದ್ದೇನೆ. ಆದರೆ ಹೇಳುವುದಿಲ್ಲ. ಏಕೆಂದರೆ ನಾಳೆ ನಾವೂ, ನೀವೂ ನಮ್ಮ ಮತಕ್ಷೇತ್ರಗಳಿಗೆ ಹೋಗಬೇಕು. ಎಷ್ಟು ಜನ ಆರಿಸಿ ಬರುತ್ತೇವೆ ಎನ್ನು

ವುದು ಮುಂದಿನ ಮಾತು. ಒಬ್ಬರ ಮೇಲೆ ಒಬ್ಬರು ವೈಯುಕ್ತಿಕವಾಗಿ ದೋಷಾರೋಪಣೆ ಮಾಡಿಕೊಳ್ಳುವುದು ಪ್ರಜಾರಾಜ್ಯದಲ್ಲಿ ಸರಿಯಾದುದಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ವೈಯುಕ್ತಿಕವಾದ ದೋಷಾರೋಪಣೆ ಎಂದು ಹೇಳಿದಿರಿ. ಈ ಸರ್ಕಾರ ತಮ್ಮದೇ? It is not your Government. It is people's Government. Do not take it as your personal property just because you are running it. Government is not personal.

Sri VEERENDRA PATIL.—We are the representatives of the people.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರು ಅಧಿಕಾರದಿಂದ ಈಚೆಗೆ ಬರಲಿ. ಹಣಕಾಸಿನ ಸಚಿವರು ಹೇಗೆ ಗೆದ್ದು ಬಂದರು ಎಂದು ಗೊತ್ತಿದೆಯೇ ? ಆಸ್ಪತ್ರೆಯಲ್ಲಿ ಸೇರಿಸಿದ್ದಾರೆ, ಖಾಯಿಲೆ ಬಿದ್ದಿದ್ದಾರೆ ನಿಮ್ಮ ಓಟು ಕೊಡಿ ಎಂದು ಅತ್ತೂ ಕರೆದೂ ಇಲ್ಲಿಗೆ ಬಂದರು.

ಶ್ರೀ ವೀರೇಂದ್ರ ಪಾಟೀಲ್.—ನಾನು ಈ ಮಾತುಗಳನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಅನೇಕ ಜನ ಆ ಕಡೆ ಇರುವವರಿಗೆ ಈ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಡುವುದು ಮನಸ್ಸಿನಲ್ಲಿರಲಿಲ್ಲ. ಒಳ್ಳೆಯ ವಾತಾವರಣದಲ್ಲಿ ಬೀಳ್ಕೊಂಡು ಹೋಗಬೇಕು ಎಂದು ಇತ್ತು. ಕೆಲವರು ವಿಚಾರ ಮಾಡಿದರು, ಚುನಾವಣಾ ಪ್ರಚಾರವನ್ನು ಇಲ್ಲಿಯೇ ಪ್ರಾರಂಭ ಮಾಡೋಣ ಎಂದು, ವಿರೋಧ ಪಕ್ಷದ ಚುನಾವಣಾ ಪ್ರಚಾರದ ಉದ್ಘಾಟನೆ ಈ ಮನೆಯಿಂದ ಪ್ರಾರಂಭವಾಗಬೇಕು ಎನ್ನುವ ಉದ್ದೇಶದಿಂದಲೇ ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆ. ಕಳೆದ ಮೂರು ನಾಲ್ಕು ಬಾರಿ ತಂದಿದ್ದ ಅವಿಶ್ವಾಸ ನಿರ್ಣಯದ ಸಂಬಂಧವಲ್ಲಿ ಏನು ಮಾತುಗಳನ್ನು ಆಡಿದ್ದರೋ ಆ ಮಾತುಗಳನ್ನೇ ಆಡಿದ್ದಾರೆ. ಈಗ ಅವಿಶ್ವಾಸ ನಿರ್ಣಯ ತರುವಂಥ ಅವಶ್ಯಕತೆ ಇತ್ತೇ ಎನ್ನುವುದನ್ನು ಅವರು ತಿಳಿದುಕೊಳ್ಳಬೇಕು.

ಅವಿಶ್ವಾಸ ನಿರ್ಣಯದ ಮೇಲೆ ಎರಡು ರೀತಿಯ ಭಾಷಣಗಳಾಗಿವೆ, ಟೀಕೆಗಳಾಗಿವೆ. ಒಂದು ವಿರೋಧ ಪಕ್ಷದಲ್ಲಿದ್ದು ಆ ಕಡೆಯಿಂದಲೇ ಆರಿಸಿ ಬಂದದ್ದು ಕೆಲವು ಸದಸ್ಯರು ಟೀಕೆ ಮಾಡಿದ್ದಾರೆ. ಅದರ ಬಗ್ಗೆ ವಿಶೇಷವಾಗಿ ಹೇಳಬೇಕಾಗಿಲ್ಲ. ಆದರೆ ಈ ಕಡೆ ಇದ್ದು ಎರಡು ಮೂರು ತಿಂಗಳುಗಳು ಅಥವಾ ಎರಡು ಮೂರು ವರ್ಷಗಳನಂತರ ಈ ಕಡೆಯಿಂದ ಆ ಕಡೆಗೆ ಹೋದಂಥ ಕೆಲವು ಮಾನ್ಯ ಸದಸ್ಯರು ಮಾಡಿದಂಥ ಟೀಕೆಗೆ ಉತ್ತರ ಕೊಡಬೇಕಾಗಿದೆ. ಮಾನ್ಯ ಗೋಪಾಲಗೌಡರವರಿಗೆ ಈ ಸದಸ್ಯರು ಮಾತನಾಡಿದ್ದು ಬಹಳ ಹಿಡಿಸಿದೆ ಎಂದು ಕಾಣುತ್ತದೆ, ಅದು ಕಿವಿಗೆ ಅಷ್ಟು ಇಂಪಾಗಿ ಕೇಳಿಸಿರಬಹುದು. ಅವರು ಈ ಕಡೆಯೇ ಇದ್ದು ಮಾತನಾಡಿದ್ದರೆ ಅವರಿಗೆ ಬಹಳ ಕಹಿಯಾಗಿರುತ್ತಿತ್ತು. ಅವರೂ ನಮ್ಮಂತೆಯೇ ಇದ್ದವರು. ಏನಾಯಿತೋ ಪಕ್ಷವನ್ನು ಬಿಟ್ಟು ಅತ್ತ ಕಡೆ ಹೋಗಿದ್ದಾರೆ. ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸರ್ಕಾರದಲ್ಲಿ ಇಲ್ಲದ ಕೋದು ಅವರಿಗೆ ಇವತ್ತು ದರ್ಶನವಾಯಿತೇ ಎನ್ನುವುದನ್ನು ಅವರು ವಿಚಾರ ಮಾಡಬೇಕು. ಈ ಕಡೆ ಇರುವವರು ನಾವು ಮಾತನಾಡಿದರೆ ಇಂಪಾಗಿ ಕಾಣಿಸುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಈ ಕಡೆಯಿಂದ ಆ ಕಡೆಗೆ ಬಂದರಲ್ಲ ಅವರ ಅಭಿಪ್ರಾಯ ......

ಶ್ರೀ ವೀರೇಂದ್ರ ಪಾಟೀಲ್.—ಆ ಕಡೆಯಿಂದ ಈ ಕಡೆಗೆ ಕೆಲವರು ಬಂದಿದ್ದಾರೆ. ಈ ರೀತಿ ನಮ್ಮ ರಾಜ್ಯದಲ್ಲಿ ಒಂದರಲ್ಲಿ ಮಾತ್ರ ಬರಲಿಲ್ಲ. ಹಾಗೆ ಬರುವ ಮುಂಚೆ ಏನಾದರೂ ಸಿಕ್ಕುತ್ತದೆ ಎನ್ನುವ ಉದ್ದೇಶದಿಂದ ಬರಲಿಲ್ಲ. ಪ್ರಜಾ ಸೋಷಿಯಲಿಸ್ಟ್ ಪಕ್ಷ ಇಡೀ ರಾಷ್ಟ್ರದಲ್ಲಿ ಇಬ್ಭಾಗವಾಗಿ ಪ್ರತಿ ರಾಜ್ಯ ವಿಧಾನ ಸಭೆಯಲ್ಲಿಯೂ ಕೆಲವು ಜನ ಕಾಂಗ್ರೆಸ್ ಪಕ್ಷಕ್ಕೆ ಬಂದು ಸೇರಿದ್ದಾರೆ.

ಶ್ರೀ ಎಸ್. ಶಿವಪ್ಪ.—ಕಾಂಗ್ರೆಸ್‌ನಲ್ಲಿ ಸಹ ಹಾಗೆಯೇ ಆಗಿದೆ.

ಶ್ರೀ ಎಸ್. ಎಂ. ಕೃಷ್ಣ.—ಕಾಂಗ್ರೆಸ್ ಕೂಡ ಇಬ್ಭಾಗವಾಗಿ ಛಿದ್ರ ಛಿದ್ರವಾಗಿದೆ. ಬಂಗಾಳದಲ್ಲಿ ಬಂಗ್ಲಾ ಕಾಂಗ್ರೆಸ್, ಕೇರಳದಲ್ಲಿ ಕೇರಳ ಕಾಂಗ್ರೆಸ್ ಹೀಗೆ ಆಗಿದೆ.

ಶ್ರೀ ವೀರೇಂದ್ರ ಪಾಟೀಲ್.—ಅದು ಇಬ್ಭಾಗವಲ್ಲ. ಪ್ರಜಾ ಸೋಷಿಯಲಿಸ್ಟ್ ಪಕ್ಷದಲ್ಲಿ ಆದುದೇ ಬೇರೆ. ಯಾರನ್ನಾದರೂ ಪಕ್ಷದಿಂದ ತೆಗೆದು ಹಾಕಿದರೆ, ಅವರು ಬೇರೆ ಪಕ್ಷಕ್ಕೆ ಹೋದರೆ ಅದು ಇಬ್ಭಾಗವಾಗುವುದಿಲ್ಲ. ಅದು 'ರೆಬೆಲ್' ಎನಿಸುತ್ತದೆ. ಅದನ್ನು ಮಾನ್ಯ ಸದಸ್ಯರು ವಿಚಾರ ಮಾಡಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೇಗೆ ಬಹುಮತದಿಂದ ಆರಿಸಿ ಬಂದಿರಿ ? ಗುಲ್ಬರ್ಗದಲ್ಲಿ ನೀವೇ ಇದ್ದೀರಿ.

ಶ್ರೀ ವೀರೇಂದ್ರಪಾಟೀಲ್.—ಹಾಗೆಂದರೆ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದೇ ಕೋಮಿನವರು......

ಶ್ರೀ ವೀರೇಂದ್ರಪಾಟೀಲ್.—ಹಾಗೋ......

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಸಭೆಯ ಘನತೆಯನ್ನು ಕಾಪಾಡಬೇಕು. ವಿರೋಧ ಪಕ್ಷದವರು ಮಾತನಾಡುವಾಗ ಘನತೆ ಗೌರವದಿಂದ ಮಾತನಾಡಬೇಕು. ಮಾನ್ಯ ಅಧ್ಯಕ್ಷರು ಅವಕಾಶ ಕೊಡುವುದರಿಂದ ಇಷ್ಟೆಲ್ಲ ಆಗುತ್ತದೆ. ವಿರೋಧ ಪಕ್ಷದವರು ಅವಿಶ್ವಾಸ ನಿರ್ಣಯವನ್ನು ತಂದು ಗಲಾಟೆ ಎಬ್ಬಿಸುತ್ತಿದ್ದಾರೆ. ಮಾನ್ಯ ಅಧ್ಯಕ್ಷರು ಇದಕ್ಕೆಲ್ಲ ಅವಕಾಶ ಕೊಡಬಾರದು ಸ್ವಾಮಿ. ಇಷ್ಟು ದಿವಸ ಆಳುವ ಪಕ್ಷದವರು ಸುಧಾರಿಸಿದ್ದೇವೆ, ಅಧ್ಯಕ್ಷರು ಗಲಾಟೆಮಾಡುವುದಕ್ಕೆ ಅವಕಾಶ ಕೊಡಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏನು ನಡೆದಿದೆ ಎಂದು ಕೇಳಿದೆವೇ ಹೊರತು ಮಂತ್ರಿಗಳನ್ನು ಆಕ್ಷೇಪಣೆಮಾಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಕರಿಯಪ್ಪನವರು ಸರ್ಕಾರದವರು ಹಳೆಯ ಮೈಸೂರಿಗೆ ಅನ್ಯಾಯಮಾಡಿದ್ದಾರೆ, ಅದು ಕಡೆಗಣಿಸಲ್ಪಟ್ಟಿದೆ ಎಂದು ಹೇಳಿದರು, ಆ ಬಗ್ಗೆ ಹಿಂದೆ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇನೆ, ಈಗ ಮತ್ತೆ ಹೇಳುವುದಿಲ್ಲ. ಪ್ರತಿಯೊಂದು ಸಲವೂ ಈ ಮಾತನ್ನು ಆಡಬಾರದು, ಹಾಗೆ ಮಾಡಿರುವುದಿಲ್ಲ. ಪ್ರತಿ ಸಲವೂ ಶಿವಪ್ಪನವರು ಹೇಳುತ್ತಾರೆ, ಆದರೆ ಹಾಗೆ ಹೇಳಿ ವಾತಾವರಣ ಕೆಡಿಸಬಾರದು. ನಾನು ಅದು ಸರಿಯಲ್ಲವೆಂದು ಅಂಕಿಅಂಶಗಳೊಂದಿಗೆ ಬೇಕಾದರೆ ಸ್ಥಿರಪಡಿಸಬಲ್ಲೆ, ಅದಕ್ಕೆ ಹೆಚ್ಚು ಕಾಲ ಬೇಕಾಗುತ್ತದೆ, ಬೇಕೆಂದು ಕೇಳುವುದಾದರೆ ಹೇಳುತ್ತೇನೆ. ಸದ್ಯಕ್ಕೆ ಅದು ಬೇಡ, ಮುಂದೆ ಹೋಗೋಣ.

ಈಗ ಅನೇಕ ಮಾನ್ಯ ಸದಸ್ಯರು ಕೃಷ್ಣ ಮತ್ತು ಕಾವೇರಿ ನೀರಿನ ಬಗ್ಗೆ ನಿರ್ಣಯಮಾಡಿಲ್ಲ. ಸ್ಟೀಲ್ ಪ್ಲಾಂಟ್ ನಮಗೆ ದೊರೆಯಲಿಲ್ಲ, ಗೋವಾ ನಮ್ಮ ದೇಶಕ್ಕೆ ಸೇರುವಂತೆ ಮಾಡಲಿಲ್ಲ, ಫರ್ಟಿಲೈಜರ್ ಕಾರ್ಖಾನೆ ದೊರೆಯಲಿಲ್ಲ, ಮುಂತಾದ ಅನೇಕ ಕಾರಣಗಳನ್ನು ನಮೂದಿಸಿ ಅವಿಶ್ವಾಸ ಸೂಚನೆ ತಂದಿದ್ದಾರೆ. ಸ್ಟೀಲ್ ಪ್ಲಾಂಟ್ ತಮ್ಮ ದೇಶಕ್ಕೆ ದೊರೆಯಬೇಕೆಂದು ಆಂಧ್ರ ಮತ್ತು ಮದ್ರಾಸಿನವರು ಒತ್ತಾಯಮಾಡುತ್ತಿದ್ದಾರೆ. ಆದರೆ ಅದು ಅವರಿಗೆ ಸಿಕ್ಕಿದೆಯೇ? ಅದಿನ್ನೂ ಕೈ ಬಿಟ್ಟುಹೋಗಿಲ್ಲ, ಯಾರಿಗೆ ಯಾವಾಗ ಸಿಕ್ಕುತ್ತದೆಯೋ ಗೊತ್ತಿಲ್ಲ. ಅದೇ ರೀತಿ ಕಾವೇರಿ ಮತ್ತು ಕೃಷ್ಣ ನದಿಗಳ ನೀರಿನ ಪೂರ್ಣ ಉಪಯೋಗದ ಬಗ್ಗೆ ಭರವಸೆ ಇನ್ನೂ ದೊರೆತಿಲ್ಲ. ನಮ್ಮ ಇರಿಗೇಷನ್ ಪರಿಸ್ಥಿತಿ ಹೇಗಿದೆಯೆಂಬುದನ್ನು ಅನೇಕಸಲ ಹೇಳಿದ್ದೇನೆ. ಕಾವೇರಿ ನೀರಿನ ಬಗ್ಗೆ ಒಂದು ಒಪ್ಪಂದವಾಗಿದೆ, ಅದರ ಪ್ರಕಾರ ನಡೆದುಕೊಳ್ಳಬೇಕು, ಅವಕಾಶವಿರುವುದನ್ನು ಉಪಯೋಗ ಮಾಡಿಕೊಳ್ಳಲು ಪ್ರಯತ್ನಮಾಡುತ್ತೇವೆ. ಇದೇ ರೀತಿಯಲ್ಲಿ ಕೃಷ್ಣಾ ನೀರಿನ ಬಗ್ಗೆ ಕೂಡ ಏನೋ ಒಂದು ರೀತಿಯಿಂದ ಒಂದು ತಾತ್ಕಾಲಿಕ ನಿರ್ಣಯಮಾಡಿದ್ದಾರೆ. ಅದರ ಬಗ್ಗೆ ಸಮಾಧಾನವಾಗಿಲ್ಲ ವೆಂದು ಪದೇಪದೇ ಹೇಳುತ್ತಿದ್ದೇವೆ. ಕೃಷ್ಣಾ ನೀರಿನ ಪ್ರಶ್ನೆ ಬಗೆ ಹರಿಯಬೇಕಾದರೆ ಈ ದಿವಸ ಆಂಧ್ರ ಒಪ್ಪಬೇಕು ಮಹಾರಾಷ್ಟ್ರ ಒಪ್ಪಬೇಕು, ಮತ್ತು ಮೈಸೂರು ಒಪ್ಪಬೇಕು. ಒಂದುವೇಳೆ ನಮ್ಮೊಳಗೆ ಯಾವ ರೀತಿಯಲ್ಲೂ ಒಂದು ನಿರ್ಣಯಕ್ಕೆ ಬರಲು ಅವಕಾಶವಾಗದಿದ್ದರೆ ಅರ್ಬಿಟ್ರೇಷನ್ನಿಗೆ ಹೋಗಬೇಕು. ನಾವೇ ನಿರ್ಣಯಮಾಡುವುದಕ್ಕೆ ಅಧಿಕಾರವಿಲ್ಲ. ಈ ಪ್ರಶ್ನೆ ಬಂದಾಗ ಬಿಡುಬಿಡಿಕೆ ಆಟವಾಗಿದೆ ಎಂದು ಗೋಪಾಲಗೌಡರು ಹೇಳುವುದುಂಟು. ಆದರೆ ಮಾನ್ಯ ಸದಸ್ಯರು ರಸ್ತೆ ಆಗಬೇಕು, ಸೇತುವೆ ಆಗಬೇಕು, ಮನೆ ಕಟ್ಟಬೇಕು, ಶಾಲೆ ಕೊಡಬೇಕು, ಕಾಲೇಜು ಹೈಸ್ಕೂಲು ಎಲ್ಲಾ ಬೇಕು ಎಂದು ಯಾವಾಗಲೂ ಒತ್ತಾಯಮಾಡುತ್ತಾರೆ. ಅದರ ಜೊತೆಗೆ ಕಾವೇರಿ ನದಿ ನೀರಿನ ಉಪಯೋಗವಾಗಬೇಕು, ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಆಗಬೇಕು ಎಂದರೆ ಇದಕ್ಕೆಲ್ಲಾ ಹಣವನ್ನು ಎಲ್ಲಿಂದ ತರುವುದು! ಅದೇ ಆಂಧ್ರಕ್ಕೆ ಹೋಗಿ ನೋಡಿದರೆ ಇತರ ಯಾವುದಿಲ್ಲದಿದ್ದರೂ ಪರವಾಗಿಲ್ಲ, ಮೊದಲು ನಾಗಾರ್ಜುನಸಾಗರ ಪ್ರಾಜೆಕ್ಟಿಗೆ ಹಣ ಒದಗಿಸಿ ಎಂದು ಹೇಳುವ ಮನೋಭಾವ ಅಲ್ಲಿನ ಜನರಲ್ಲಿದೆ. ಅದೇ ನಮ್ಮಲ್ಲಿ ಕೇಳಿದ್ದೆಲ್ಲಾ ಆಗಬೇಕು. ಕೈಕೊಂಡಿರುವ ಯೋಜನೆ ಮುಗಿಸುವುದಕ್ಕೇ 120 ಕೋಟಿ ರೂಪಾಯಿ ಬೇಕಾಗಬಹುದು ಎಂದು ಹೇಳಿದ್ದೇವೆ. ಈ ವಿಚಾರದಲ್ಲಿ ಒಂದು ಸರಿಯಾದ ನಿರ್ಣಯಮಾಡಿದರೆ ಅನುಕೂಲ, ಇಲ್ಲದಿದ್ದರೆ ಎಲ್ಲವನ್ನೂ ಮಾಡಬೇಕೆಂದರೆ ಮಾಡುವುದಕ್ಕಾಗುವುದಿಲ್ಲ, ಇಂಥ ಪರಿಸ್ಥಿತಿ ಇದೆ. ನಮಗೆ ಈ ದಿವಸ ಹೊಸ ಯೋಜನೆ ತೆಗೆದುಕೊಳ್ಳುವುದಕ್ಕೆ ಶಕ್ತಿಯಿಲ್ಲವೆಂದು ಹೇಳಿದಾಗ್ಯೂ ಕೂಡ ವಿರೋಧ ಪಕ್ಷದವರು ತೆಗೆದುಕೊಳ್ಳಬೇಕೆಂದು ಹೇಳಿದರು. 120 ಕೋಟಿ ರೂಪಾಯಿಗಳ ಯೋಜನೆ ತೆಗೆದುಕೊಂಡರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ 63 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಒದಗಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ, ನಾವೇನು ಮಾಡ ಬೇಕು? ತೆಗೆದುಕೊಳ್ಳುವುದನ್ನು ವಿಚಾರಮಾಡುತ್ತೇವೆ ಎಂದು ಹೇಳಬೇಕಾಗುತ್ತದೆ. ತೆಗೆದು ಕೊಂಡ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಶಕ್ತಿಯಿಲ್ಲವೆಂಬುದು ಶಿವಪ್ಪನವರಿಗೂ ಮತ್ತು ಇತರರಿಗೂ ಗೊತ್ತಿದೆ. ಅದಕ್ಕಾಗಿ ಕೇಂದ್ರ ಸರಕಾರವೇ ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ವಹಿಸಿ ಕೊಳ್ಳಬೇಕು ಎಂದು ಹೇಳಿದ್ದೇವೆ. ಇಂದು ಪ್ರಾಜೆಕ್ಟುಗಳನ್ನು ಹೆಚ್ಚಾಗಿ ತೆಗೆದುಕೊಂಡರೆ ಪೂರ್ಣ

ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಗೊತ್ತಿದ್ದರೂ ಹೆಚ್ಚಾಗಿ ತೆಗೆದುಕೊಳ್ಳಬೇಕೆಂಬ ಒತ್ತಾಯ ಬರುತ್ತಿದೆ. ಕಾವೇರಿ ನದಿಯಿಂದ 100 ಟಿ.ಎಂ.ಸಿ.ಎಫ್.ಟಿ. ನೀರನ್ನು 1974ನೆಯ ಇಸವಿಯೊಳಗಾಗಿ ನಾವು ಉಪಯೋಗಮಾಡಿಕೊಳ್ಳಬೇಕು; ಕಪಿನಿ ಯೋಜನೆಗೆ 20 ಕೋಟಿ ರೂಪಾಯಿ ಬೇಕು, ಹೇಮಾವತಿ ಯೋಜನೆಗೆ 32 ಕೋಟಿ ಬೇಕು, ಹಾರಂಗಿ ಯೋಜನೆಗೆ 16 ಕೋಟಿ ಬೇಕು, ಅಪ್ಪರ್ ಕೃಷ್ಣ ಯೋಜನೆಗೆ 120 ಕೋಟಿ ಬೇಕು, ಇವನ್ನೆಲ್ಲಾ ತೆಗೆದುಕೊಳ್ಳಬೇಕೆಂಬ ಇಚ್ಛೆ ಇದೆ. ಒಂದು ಕಡೆ 1974ರ ಒಳಗೆ ನೀರನ್ನು ಉಪಯೋಗಮಾಡಿಕೊಳ್ಳಬೇಕು, ಹಾಗೆ ಮಾಡಿಕೊಳ್ಳದಿದ್ದರೇನಾಗುತ್ತದೆಯೆಂಬುದು ಗೊತ್ತಿದೆ. ಈಗ ಈ ಕೆಲಸ ಪ್ರಾರಂಭಮಾಡಿದ್ದೀರಿ ಎಂದು ಹೇಳಬಹುದು. ಆದರೆ ಸರಕಾರ ಬೇಗ ಮಾಡಲು ಪ್ರಯತ್ನಮಾಡುತ್ತಿರುವಾಗ ಬುಡುಬುಡಿಕೆ ಮಾತನ್ನು ಹೇಳುತ್ತಿದ್ದೀರೆಂದವರೆ ಅದಕ್ಕೇನು ಹೇಳಬೇಕು ?

6-00 P.M.

ಒಂದುವೇಳೆ ಅರ್ಧಮರ್ಧವಾದರೂ ಪ್ರಾರಂಭ ಮಾಡಿ ನೀರು ಬುಕ್ ಮಾಡದಿದ್ದರೆ ಮುಂದಿನ ಪೀಳಿಗೆ ಶಾಪ ಕೊಡುತ್ತದೆ. ಆದ್ದರಿಂದ ಕೆಲಸ ಪ್ರಾರಂಭ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಅವನ್ನು ಪೂರೈಸುತ್ತಾರೆ ಎಂಬ ದೃಷ್ಟಿಯಿಂದ ಕೆಲಸ ಮುಂದುವರಿಸಿಕೊಂಡು ಹೋಗುತ್ತಾ ಇದ್ದೇವೆ. ಅದೇ ರೀತಿಯಿಂದ ಕೃಷ್ಣಾದಲ್ಲಿ 600 ಟಿ.ಎಂ.ಸಿ.ಎಫ್.ಟಿ. ನೀರನ್ನು 1975ರ ಒಳಗಾಗಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಅಷ್ಟು ನೀರು ಬರುತ್ತದೆ. ಅಂದಮೇಲೆ ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಿದ್ಧತೆಯನ್ನು ಮಾಡಿದ್ದೇವೆ. ಈ ರೀತಿ ಹೇಳಿಕೊಳ್ಳುವಂತಹ ಪ್ರಸಂಗದಲ್ಲಿ ನಾವು ಇಲ್ಲದೇ ಇದ್ದರೆ ನಮ್ಮ ಮುಂದಿನ ಗತಿ ಏನಾಗುತ್ತದೆ ಎಂಬುದನ್ನು ತಾವೇ ನೋಡಬೇಕು. ಅಪ್ಪರ್ ಕೃಷ್ಣಾ ಒಂದು ವರ್ಷದಲ್ಲಿ ಆಗುವ ಹಾಗೆ ಇಲ್ಲ. ಎರಡು ವರ್ಷದಲ್ಲಿ ಆಗುವ ಹಾಗೆ ಇಲ್ಲ. ಇಂಡಿಯಾ ಸರ್ಕಾರದವರು ಕ್ಲಿಯರೆನ್ಸ್ ಕೊಟ್ಟಿದ್ದಾರೆ; ಅದಕ್ಕೆ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಶಂಕು ಸ್ಥಾಪನೆ ಮಾಡಿದ್ದಾರೆ. ನಮ್ಮ ಹತ್ತಿರ ಶಕ್ತಿ ಇಲ್ಲದೇ ಇದ್ದರೆ ನಮ್ಮ ಮಕ್ಕಳ ಹೊತ್ತಿಗೆ ಶಕ್ತಿ ಬರಬಹುದು. ಅಲ್ಲಿ 14 ಲಕ್ಷ ಎಕರೆ ನೀರಾವರಿಯಾಗುತ್ತದೆ. ಒಂದಾದರೂ ಯೋಜನೆಯನ್ನು ಪ್ರಾರಂಭ ಮಾಡಿದ್ದು ಮುಗಿಸಿದ್ದೀರಾ ಎಂದು ಕೇಳಿದರು. ಕೇಂದ್ರ ಸರ್ಕಾರದವರನ್ನು ಕೇಳುತ್ತಾ ಇದ್ದೇವೆ, ಇವತ್ತು ಈ ವೇದಿಕೆಯ ಮೇಲಿಂದ ಹೇಳುತ್ತಾ ಇದ್ದೇನೆ. ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್‌ನವರು ನಮ್ಮನ್ನು ಕೇಳುತ್ತಾರೆ, ಸುಮ್ಮನೆ ನಿಮ್ಮ ಯೋಜನೆಗಳನ್ನು ಬೆಳೆಸಿಕೊಂಡು ಹೋಗುತ್ತಾ ಇದ್ದೀರಿ, ಮುಗಿಸುವುದಕ್ಕೆ ದುಡ್ಡಿಲ್ಲ ಏಕೆ ಬೆಳೆಸುತ್ತೀರಿ ಅಂತ. ಇರಿಗೇಷನ್ ಅಂಡ್ ಪವರ್ ಮಿನಿಸ್ಟರು ಕೇಳಿದಾಗ ಒಂದೇ ಒಂದು ಪ್ರಶ್ನೆಯನ್ನು ಹಾಕಿದೆವು. ಅದೇನೆಂದರೆ, ಕೃಷ್ಣಾದಲ್ಲಿರುವಂತಹ ನೀರು ಇಷ್ಟು ಎಂದು ಖಂಡಿತವಾಗಿಯೂ ಹೇಳಿ, ಎಂದಾದರೂ ಅದನ್ನು ಉಪಯೋಗ ಮಾಡಿಕೊಳ್ಳಿ ಎಂದು ಹೇಳಿ ಆಗ ಯಾವ ಅತುರತೆಯಿಂದ ಹೆಚ್ಚು ಹೆಚ್ಚು ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇವೆಯೋ ಅದನ್ನು ಬಿಟ್ಟು ಶಕ್ತಿ ಇದ್ದಷ್ಟು ತೆಗದುಕೊಳ್ಳುತ್ತೇವೆ ಎಂದು ಹೇಳಿದ್ದಕ್ಕೆ ಅವರಿಂದ ಏನೂ ಭರವಸೆ ಬರಲಿಲ್ಲ. ಏಕೆಂದರೆ, ಅದು ಬಹಳ ಜಟಿಲವಾದ ಪ್ರಶ್ನೆ. ಎರಡು ಪಟ್ಟು ನೀರನ್ನು ಮೂರು ಸ್ಟೇಟಿನವರು ಕೇಳುತ್ತಾ ಇದ್ದೇನೆ. ಎಲ್ಲಿಂದ ಕೊಡುವುದು ? ಇಷ್ಟು ನೀರು ಕೊಟ್ಟಿದ್ದೇವೆ, ನಿಮ್ಮ ಸಲುವಾಗಿ ರಿಸರ್ವ್ ಇದೆ ಎಂದು ಹೇಳುವಂತಹ ಮಾತು ಹೇಳದೆ ಇರುವಾಗ ಇಲ್ಲಿಯವರೆಗೂ ಹೆಚ್ಚು ಹೆಚ್ಚು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡದ್ದನ್ನು ಪೂರೈಸಿ ಹೆಚ್ಚು ನೀರನ್ನು ಪಡೆಯುವುದಕ್ಕೆ ಮುಂದಿನ ಪೀಳಿಗೆಗೆ ಅನುಕೂಲ ಮಾಡಿ ಕೊಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಇರಿಗೇಷನ್ ಸಲುವಾಗಿ ಈ ಧೋರಣೆಯನ್ನು ತಾಳಿದ್ದೇವೆ.

ಶ್ರೀ ಜಿ. ಮರುಳಪ್ಪ (ಕಡೂರು).—ಮದ್ರಾಸ್ ಮತ್ತು ಆಂಧ್ರದಲ್ಲಿ ಇರಿಗೇಷನ್ ಏಕರೇಜ್ ಪರ್ಸೆಂಟೇಜ್ ಮೊದಲು ಏನಿತ್ತು ಈಗ ಏನಿದೆ, ಮೈಸೂರು ಸಂಸ್ಥಾನದಲ್ಲಿ ಮೊದಲು ಏನಿತ್ತು ಈಗ ಏನಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಸವಿಸ್ತಾರವಾಗಿ ಅನೇಕಸಲ ಹೇಳಿದ್ದೇನೆ. ಕೃಷ್ಣಾ ಗೋದಾವರಿ ನೀರಿನ ಚರ್ಚೆ ಬಂದಾಗ, ಸ್ಟೇಟುಮೆಂಟ್ ಮಾಡಿದಾಗ ಎಲ್ಲವನ್ನೂ ಹೇಳಿದ್ದೇವೆ. ಮದ್ರಾಸ್‌ನಲ್ಲಿ ಪರ್ಸೆಂಟೇಜ್ ಆಫ್ ಇರಿಗೇಷನ್ 40 ಪರ್ಸೆಂಟ್ ಇದೆ. ಆಂಧ್ರದಲ್ಲಿ ನಾಗಾರ್ಜುನ ಸಾಗರ ಬಿಟ್ಟು 26 ರಿಂದ 28 ಪರ್ಸೆಂಟ್ ಇದೆ. ನಮ್ಮ ದೇಶದಲ್ಲಿ 8.5 ಪರ್ಸೆಂಟ್ ಇದೆ. ನಿಮ್ಮ ಉದ್ದೇಶ ಈ ಪ್ರಶ್ನೆಯನ್ನು ಕೇಳುವುದರಲ್ಲಿ ಏನಿದೆ ಎಂಬುದು ನನಗೆ ಗೊತ್ತು. ಅವರು ಮೊದಲೇ ನಮ್ಮ ಜೊತೆಯಲ್ಲಿ ಇರಲಿಲ್ಲ ಬಹಳ ಮುಂದೆ ಹೋಗಿದ್ದರು. ಅವರೂ ಕೂಡ ನಮ್ಮ ಜೊತೆಯಲ್ಲಿ ಇದ್ದು, ನಾವು ಹಿಂದೆ ಬಿದ್ದಿದ್ದರೆ ಆಗ ಒಪ್ಪಿಕೊಳ್ಳುತ್ತಾ ಇದ್ದೆ. ಮಾನ್ಯ ಸದಸ್ಯರು ಶ್ರೀ ಮರುಳಪ್ಪನವರು ಏಕೆ ಹೀಗೆ ವ್ಯತ್ಯಾಸವಾಗಿದೆ ಎಂಬುದನ್ನು ತಿಳಿದುಕೊಂಡರೆ ಅವರಿಗೇ ಅರ್ಥವಾಗುತ್ತದೆ.

(ಶ್ರೀ ವೀರೇಂದ್ರ ಪಾಟೀಲ್)

ಕಾವೇರಿಯಲ್ಲಿ, ಗೋದಾವರಿಯಲ್ಲಿ, ಕೃಷ್ಣಾದಲ್ಲಿ ಇರುವಂತಹ ನೀರನ್ನು ನಾವು ಕೊನೆಯ ತೊಟ್ಟಿನವರೆಗೂ ಉಪಯೋಗಿಸಿಕೊಂಡರೆ ನಮ್ಮ ಇರಿಗೇಷನ್ ಪರ್ಸೆಂಟೇಜ್ 28ರಿಂದ 30 ಕ್ಕಿಂತಲೂ ಹೆಚ್ಚು ಹೋಗುವ ಹಾಗೆ ಇಲ್ಲ.

ಶ್ರೀಮಾನ್ ಶಿವಪ್ಪನವರು ಕೆಲಸಗಳನ್ನು ಮುಗಿಸಿಲ್ಲ ಎಂದು ಹೇಳುತ್ತಾ ಇದ್ದರು. ಮೈನರ್ ಇರಿಗೇಷನ್‌ನಲ್ಲಿ ಸುಮಾರು 7 ಸಾವಿರದ 448 ಕೆಲಸಗಳನ್ನು 2 ಮತ್ತು 3ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಮುಗಿಸಿದ್ದೇವೆ. ಅದಕ್ಕೆ ಸುಮಾರು 23 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈಗಾಗಲೇ 5 ಲಕ್ಷ ಎಕರೆ ನೀರಾವರಿ ಈ ಟ್ಯಾಂಕ್‌ಗಳ ಕೆಳಗೆ ಆಗಿದೆ. ಮೇಜರ್ ಇರಿಗೇಷನ್‌ನಲ್ಲಿ ತುಂಗಭದ್ರಾ ಲೆಫ್ಟ್ ಬ್ಯಾಂಕ್, ರೈಟ್ ಬ್ಯಾಂಕ್, ಮಲಪ್ರಭಾ ಫಸ್ಟ್ ಸ್ಟೇಜ್ ಮುಗಿಸಿದ್ದೇವೆ. ಮೀಡಿಯಂ ಇರಿಗೇಷನ್‌ನಲ್ಲಿ ರಾಜೋಳಿಬಂಡ ಡೈವರ್ಷನ್ ಸ್ಕೀಂ, ಚಿಕ್ಕ ಹೊಳೆ ಮುಂತಾದ ಕೆಲಸಗಳನ್ನು ಮಾಡಿದ್ದೇವೆ. ಈ ರೀತಿಯಿಂದ 1956ರಲ್ಲಿ 6.4 ಪರ್ಸೆಂಟ್ ಇದ್ದದ್ದು 66ರಲ್ಲಿ 8.5 ಪರ್ಸೆಂಟ್‌ಗೆ ಬಂದಿದೆ. ಇದರಿಂದಲೇ ಪರ್ಸೆಂಟೇಜ್ ಎಷ್ಟು ಹೆಚ್ಚಾಗಿದೆ ಎಂಬುದು ಗೊತ್ತಾಗುತ್ತದೆ. ಇನ್ನೂ ಅನೇಕ ದೊಡ್ಡ ಕೆಲಸಗಳು ಆಗುವುದಕ್ಕೆ ದುಡ್ಡಿನ ಕೊರತೆ ಇರುವುದರಿಂದ ಎಷ್ಟು ಪ್ರಮಾಣದಲ್ಲಿ ಆಗಬೇಕೋ ಅಷ್ಟು ಪ್ರಮಾಣದಲ್ಲಿ ಆಗಿಲ್ಲ. ಆದರೆ ಒಂದು ಪ್ರಶ್ನೆಯನ್ನು ತಮ್ಮ ಮುಂದೆ ಕೇಳುತ್ತೇನೆ. ಇವತ್ತು ನೀರಾವರೀ ಸೌಕರ್ಯ ಹೆಚ್ಚು ಆಗಬೇಕು ಎನ್ನುವಾಗ ಈಗಾಗಲೇ 8.5 ಪರ್ಸೆಂಟ್‌ನಷ್ಟು ನೀರಾವರಿ ಸೌಕರ್ಯವನ್ನು ಪಡೆಯಲು ಅನುಕೂಲತೆಯನ್ನು ಹೊಂದಿರತಕ್ಕ ಜನ ಯಾರಿದ್ದಾರೆ ಅವರು ಸ್ವಲ್ಪಮಟ್ಟಿಗೆ ಸ್ಯಾಕ್ರಿಫೈಸ್ ಮಾಡಬೇಕು. ಆದರೆ ಅವರು ಆ ರೀತಿ ಸ್ಯಾಕ್ರಿಫೈಸ್ ಮಾಡುವುದಕ್ಕೆ ತಯಾರಾಗಿಲ್ಲ. ಏನಾದರೂ ಹತ್ತಾರು ರೂಪಾಯಿ ವಾಟರ್ ರೇಟ್, ಬೆಟರ್‌ಮೆಂಟ್ ಲೆವಿ ಹೆಚ್ಚಾಗಿ ಹಾಕಿದರೆ ಗದ್ದಲ ಮಾಡುತ್ತಾರೆ. ಇವತ್ತು ನಾನು ಕೇಳುವುದು ಇಷ್ಟೆ, 92 ಪರ್ಸೆಂಟ್‌ನಷ್ಟು ಜನ ಆಕಾಶದ ಕಡೆಗೆ ನೋಡಿ ಮಳೆ ಬಂದರೆ ಬೆಳೆದುಕೊಳ್ಳುವ ಪರಿಸ್ಥಿತಿಯಲ್ಲಿ ಇದ್ದಾರೆ. ಆ ಜನರಿಗೆ ಇವತ್ತಿನ ದಿವಸ ಅನುಕೂಲತೆ ಮಾಡಿಕೊಡಬೇಕಾದ್ದು ನಮ್ಮ ಕರ್ತವ್ಯ, ಧರ್ಮ ಇದೆಯೋ ಇಲ್ಲವೋ ? ಯಾರು ಅನುಕೂಲತೆ ಪಡೆಯುತ್ತಾರೋ ಅವರ ಮೇಲೆ ಹೆಚ್ಚು ಟ್ಯಾಕ್ಸ್ ಹಾಕಿ ಹೆಚ್ಚು ಹೆಚ್ಚು ವರಮಾನವನ್ನು ಪಡೆದುಕೊಳ್ಳಲಾರದೇ ಹೋದರೆ ಇವತ್ತು ಯಾವ ರೀತಿಯಿಂದ ಈ ಕೆರೆ ಕಟ್ಟೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ? ಜವಾಬ್ದಾರಿಯಿಂದ ಪರಿಶೀಲನೆ ಮಾಡಿ ದೇಶದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ.

ಹೀಗೆ ಎಲ್ಲಿ ಒಂದು ಬೆಟರ್‌ಮೆಂಟ್ ಲೆವಿ ಹಾಕುವುದಕ್ಕೆ ಅವಕಾಶವಿದೆಯೋ ಅಲ್ಲಿ ಅದನ್ನು ಜನರು ಹಾಕುವುದು ಬೇಡ ಎಂದು ಬೊಬ್ಬೆಹಚ್ಚಿದರೆ ಇನ್ನು ದೇಶದಲ್ಲಿ ನೀರಾವರಿಯಾಗದ ಸ್ಥಳಗಳಲ್ಲಿ ಸರ್ಕಾರವರು ಹೇಗೆ ಅನುಕೂಲ ಮಾಡಬೇಕು ? ಸುಮ್ಮನೆ ಅರ್ಥವಿಲ್ಲದೆ ಯಾರೂ ಮಾತನಾಡಬಾರದು. ನಾವು ಯಾವುದನ್ನೇ ಆಗಲೀ ಒಂದು ಕಾನೂನನ್ನು ಅನುಸರಿಸಿ ಕೆಲಸಮಾಡುತ್ತಿದ್ದೇವೆ. ಇಂಥ ಕೆಲವು ಪ್ರಸಂಗಗಳು ತುಂಗಭದ್ರದ ಕೆಳಗೆ ಬಂದಿವೆ. ಈ ಹಿಂದೆ ರಾಜ್ಯಗಳ ಪುನರ್ವಿಂಗಡಣೆಯಾಗತಕ್ಕ ಕಾಲಕ್ಕೆ ಇಲ್ಲಿ ವಿದ್ಯುಚ್ಛಕ್ತಿಯ ಅಭಾವ ತುಂಬಾ ಇತ್ತು. ಆ ತೊಂದರೆಯ ದೆಶೆಯಿಂದ ನಾವು ಆಗ ಕೆಲವರಿಗೆ ಅದನ್ನು ಸರಬರಾಯಿ ಮಾಡುವುದಕ್ಕೆ ಸಾಧ್ಯವಿಲ್ಲದೆ—ಕೆಲವರಿಗೆ ಹಗಲು ಕೊಟ್ಟರೆ ರಾತ್ರಿ ನಿಲ್ಲಿಸಿ, ಕೆಲವರಿಗೆ ರಾತ್ರಿ ಕೊಟ್ಟ ಕಡೆ ಅವರಿಗೆ ಹಗಲು ನಿಲ್ಲಿಸಿ, ಇನ್ನು ಕೆಲವರಿಗೆ ವಾರದಲ್ಲಿ 3 ದಿನ, 2 ದಿನ ಕರೆಂಟು ಕೊಡುವುದನ್ನು ಕಟ್‌ಮಾಡಿ ಜನರಿಗೆ ತುಂಬಾ ಇಕ್ಕಟ್ಟಾಗಿತ್ತು. ಈ ದಿವಸ ಹಿಂದೆ ಉತ್ಪತ್ತಿಯಾಗುತ್ತಿದ್ದ 185 ಮೆಗಾವ್ಯಾಟ್ ಸ್ಥಳದಲ್ಲಿ ನಾವು 430 ಮೆಗಾವ್ಯಾಟ್ ಪವರನ್ನು ಶರಾವತಿಯಲ್ಲಿ ಉತ್ಪತ್ತಿಮಾಡುತ್ತಿದ್ದೇವೆ. 1956–57 ರಲ್ಲಿ ಇದ್ದುದು 185 ಮೆಗವ್ಯಾಟ್ಸ್ ಈಗ 430 ಮೆಗವ್ಯಾಟ್ಸ್ ಪವರ್ ನಮ್ಮಲ್ಲಿ ಉತ್ಪತ್ತಿಯಾಗುತ್ತಿದೆ. ಈಗ ಇದನ್ನು ಇನ್ನೂ ಒಂದು ದಶಲಕ್ಷ ಕಿಲೋವ್ಯಾಟ್ಸ್‌ಗೆ ಹೆಚ್ಚಿಸಬೇಕೆಂಬ ಪ್ರಯತ್ನಗಳು ನಡೆಯುತ್ತಿವೆ. ಈ ದಿವಸ ನಮ್ಮ ರಾಜ್ಯದಲ್ಲಿ ಸಾವಿರಾರು ಹಳ್ಳಿಗಳಿಗೆ ಪವರನ್ನು ಕೊಟ್ಟಿದ್ದೇವೆ. ನಮ್ಮ ನಾಲ್ಕನೆ ಪ್ಲಾನಿನಲ್ಲಿ ನಾವು ಒಂದು ಲಕ್ಷ ಐ. ಪಿ. ಸೆಟ್ಸ್‌ಗಳಿಗೂ ಮತ್ತು ಒಂದು ಸಾವಿರ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡಬೇಕೆಂದು ಮನಸ್ಸು ಮಾಡಿದ್ದೇವೆ. ಸುಮ್ಮನೆ ಮದ್ರಾಸಿನಲ್ಲಿ ಹಾಗೆ ಮಾಡಿದ್ದಾರೆ ಹೀಗೆ ಮಾಡಿದ್ದಾರೆಂದು ಹೇಳುವುದು ಸರಿಯಲ್ಲ. ಇಲ್ಲಿ 1955-57ರಲ್ಲಿ ಎಷ್ಟು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿತ್ತು ? ನಾವು ಕಳೆದ 10 ವರ್ಷಗಳಲ್ಲಿ ಏನೇನು ಸಾಧನೆ ಮಾಡಿದ್ದೇವೆ ಎಂಬುದನ್ನು ಅನೇಕ ಪುಸ್ತಕಗಳ ರೂಪದಲ್ಲಿ ಮಾನ್ಯ ಸದಸ್ಯರಿಗೆ ಈಗಾಗಲೇ ಒದಗಿಸಿದ್ದೇನೆ. ಹೀಗಿದ್ದರೂ ಶ್ರೀ ದುರ್ಗಪ್ಪನವರು ಮಾತನಾಡುತ್ತಾ ಚಿತ್ರದುರ್ಗಕ್ಕೆ ಏನು ಖರ್ಚುಮಾಡಲಿಲ್ಲ ಎಂತ ಹೇಳಿದರು. ಅಲ್ಲಿ 1964-65 ರಲ್ಲಿ ಪಿ. ಡಬ್ಲ್ಯೂ. ಡಿ. 48 ಲಕ್ಷ 26 ಸಾವಿರ ರೂಪಾಯಿಗಳನ್ನು

ಖರ್ಚುಮಾಡಿತ್ತು. ಈಗ ಆ ಜಿಲ್ಲೆಗೆ 119 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಹೀಗೆ ದೇಶಾದ್ಯಂತವೂ ಜನರ ಅನುಕೂಲಕ್ಕಾಗಿ ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಅದನ್ನು ನಾವುಗಳ್ಯಾರೂ ನಮ್ಮ ಜೇಬಿಗೆ ಇಳಿಬಿಟ್ಟುಕೊಂಡು ಹೋಗಿಲ್ಲ. ನಾವು ಅಧಿಕಾರಕ್ಕೆ ಬರುವ ಮುನ್ನ ನಾವೇನೂ ಭಿಕ್ಷಾಧಿಪತಿಗಳಾಗಿರಲಿಲ್ಲ. ಈ ದಿವಸ ನಾವುಗಳ್ಯಾರೂ ಲಕ್ಷಾಧಿಪತಿಗಳೂ ಆಗಿಲ್ಲ. ನಾವು ಎಲ್ಲರಂತೆ ಚುನಾವಣೆಗೆ ನಿಂತು ಗೆದ್ದುಬಂದಿದ್ದೇವೆ. ನಾವು ಚುನಾವಣೆಯಲ್ಲಿ ಗೆದ್ದುಬಂದಿರತಕ್ಕದ್ದು ನಮ್ಮ ಒಂದು ಗುಣವನ್ನು ನಡತೆಯನ್ನು ನೆಚ್ಚಿಗಿಟ್ಟುಕೊಂಡು ಇರುವದರಿಂದ ಜನರು ನಮ್ಮನ್ನು ಚುನಾವಣಾ ಮಾಡಿದ್ದಾರೆ. ಅಧಿಕಾರ ಯಾರೊಬ್ಬರಿಗೂ ಶಾಶ್ವತವಾದುದಲ್ಲ. ನಮ್ಮಲ್ಲಿ ಒಂದು 'ಕೋಡ್ ಆಫ್ ಕಾಂಡಕ್ಟ್' ಇರೋವರೆಗೂ ನಾವು ಅಧಿಕಾರದಲ್ಲಿರುವುದಕ್ಕೆ ಸಾಧ್ಯವಿದ್ದೇ ಇದೆ. ಇಂಥ ಒಂದು ನೀತಿಯುಳ್ಳ ಜನರು ಅವರು ಯಾರೇ ಆಗಲಿ ಇತ್ತ ಕಡೆಯವರಾಗಲಿ ಅತ್ತ ಕಡೆಯವರಾಗಲೀ ಚುನಾವಣೆಯಲ್ಲಿ ಬಂದೇ ಬರುತ್ತಾರೆ. ಹೀಗಿದ್ದರೂ ರಾಜ್ಯದಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ, ಕಂಟ್ರಾಕ್ಟರುಗಳನ್ನು ಇಟ್ಟುಕೊಂಡು ವಂಚನೆ ಮಾಡುತ್ತಿದ್ದಾರೆ ಎಂದು ಅಲ್ಲಸಲ್ಲದ ಮಾತುಗಳನ್ನಾಡುವುದು ನ್ಯಾಯವಾದ್ದಲ್ಲ. ಅಂಥ ಒಂದು ವಿಚಾರ ಯಾವ ಒಬ್ಬ ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದಲ್ಲಿ ಅವರು ಯಾರೇ ಆಗಿರಲೀ ಯಾವ ಪಕ್ಷದವರೇ ಆಗಿರಲಿ ಯಾವ ಒಂದು ಮುಚ್ಚುಮರೆಯೂ ಇಲ್ಲದೆ ಬಂದು ನೇರವಾಗಿ ನನ್ನನ್ನೇ ನಿಮ್ಮ ಬಗ್ಗೆ ಇಂಥ ಒಂದು ಆರೋಪಣೆ ಬಂದಿದೆ, ಅದಕ್ಕೆ ನೀವು ಏನು ಹೇಳುತ್ತೀರಿ ಎಂದು ಕೇಳಬಹುದಾಗಿತ್ತು. ಏತಕ್ಕೆ ಯಾರೂ ಹಾಗೆ ಮಾಡಲಿಲ್ಲಾ ಎಂದು ತಮ್ಮನ್ನು ಪ್ರಶ್ನೆಮಾಡುತ್ತೇನೆ ನನ್ನಲ್ಲಿ ಯಾವ ವಿಚಾರವೂ ಮುಚ್ಚುಮರೆ ಎನ್ನುವುದಿಲ್ಲ. ಇನ್ನು ಕಾಳೀ ನದಿ ಪ್ರಾಜೆಕ್ಟ್ ಬಗ್ಗೆ ಮತ್ತು ನವ ಕಲ್ಯಾಣ ಪತ್ರಿಕೆಯ ಸಂಪಾದಕರ ಬಗ್ಗೆ ನನ್ನ ಮೇಲೆ ಒಂದು ಆಪಾದನೆಯನ್ನು ಶ್ರೀ ಮುಕ್ಕಣ್ಣಪ್ಪನವರು ಮಾಡಿದ್ದಾರೆ. ನನಗೂ ಆ ನವಕಲ್ಯಾಣ ಪಬ್ಲಿಕೇಷನ್ನಿನವರಿಗೂ ಯಾವ ಸಂಬಂಧವೂ ಇಲ್ಲ. ಇನ್ನು ಮಂತ್ರಿಗಳು ಸಿಕ್ಕಿದಕಡೆ ಅಸ್ತಿವಾರಗಳನ್ನು ಹಾಕುವುದಕ್ಕೂ ಮತ್ತು ಪ್ರಾರಂಭೋತ್ಸವಗಳಿಗೂ ಹೋಗುತ್ತಿದ್ದಾರೆಂದು ಹೇಳಿದ್ದಾರೆ. ಅದು ನಮ್ಮ ತಪ್ಪಲ್ಲ ಅವರದ್ದೇ ಅದು. ಜನರೇ ತಾವಾಗಿ ಬಂದು ಅದರಲ್ಲೂ ಮಾನ್ಯ ಸದಸ್ಯರುಗಳೇ ಹೆಚ್ಚಾಗಿ ನಮ್ಮನ್ನು ಕೆರೆ, ರಸ್ತೆ ಇತ್ಯಾದಿಗಳ ಅಸ್ತಿಭಾರಕ್ಕೆ ಬರಬೇಕೆಂದು ಕಾಡುತ್ತಿರುತ್ತಾರೆ. ಪ್ರಜಾಪ್ರಭುತ್ವದಲ್ಲಿ ಜನರ ಮಾತನ್ನು ಕೇಳಿದರೂ ತಪ್ಪೇ, ಕೇಳದಿದ್ದರೂ ತಪ್ಪೇ ಹೀಗಾಗಿದೆ ಇಲ್ಲಿನ ವಿಚಾರಗಳ ವೈಖರಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನೇ ಆ ನವಕಲ್ಯಾಣದ ವಿಚಾರವಾಗಿ ಒಂದ ಪ್ರಶ್ನೆಯನ್ನು ಹಾಕಿದ್ದೆನು, ಅದಕ್ಕೆ ಇಲ್ಲಿಯವರೆಗೂ ಉತ್ತರ ಬರಲಿಲ್ಲ. ಅದಕ್ಕಾಗಿ ಅದನ್ನು ಹೇಳಿದೆ.

ಶ್ರೀ ವೀರೇಂದ್ರಪಾಟೀಲ್.—ತಾವು ನಾಳೆಯೇ ಪ್ರಶ್ನೆಯನ್ನು ಕಳುಹಿಸಿ, ನಾನು ಅದಕ್ಕೆ ನಾಳೆಯೇ ಉತ್ತರವನ್ನು ಕೊಡುತ್ತೇನೆ. ನಮ್ಮಲ್ಲಿ ಯಾರಿಗಾದರೂ ಒಂದು ಕಂಟ್ರಾಕ್ಟ್ ಕೆಲಸವನ್ನು ಒಪ್ಪಿಸಬೇಕಾಗಿದ್ದರೆ ಅದಕ್ಕೆ ಸಂಬಂಧಪಟ್ಟಹಾಗೆ ಒಂದು ಬೋರ್ಡಿದೆ. ಅದರ ಶಿಫಾರ್ಸಿನ ಮೇರೆಗೆ ಕೆಲಸವನ್ನು ಕೊಡಲಾಗುತ್ತದೆ. ಅದರ ವಿನಾ ಯಾರೂ ಸ್ವತಂತ್ರವಾಗಿ ಅವರಿಗೆ ಬೇಕಾದಂತೆ ಬೇಕಾದವರಿಗೆ ಕಂಟ್ರಾಕ್ಟ್ ಕೊಡುವುದಕ್ಕೆ ಅವಕಾಶವೇ ಇಲ್ಲ ಹಾಗಿದ್ದರೂ ಕೆಲವರು ಮನಸ್ಸಿಗೆ ಬಂದಹಾಗೆ ಮಾತನಾಡಿದ್ದಾರೆ. ಅದಕ್ಕೇನು ಮಾಡುವುದು ?

ಇನ್ನು ಶ್ರೀ ಎಸ್. ಗೋಪಾಲಗೌಡರು ಕಾಳೀ ನದಿ ಪ್ರಾಜೆಕ್ಟಿನ ವಿಚಾರವನ್ನು ಎತ್ತಿದ್ದಾರೆ. ಅದನ್ನು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಅಡಕಮಾಡುವುದಾಗಿ ನಾವು ತಿಳಿಸಿದ್ದುಂಟು. ಆದರೆ ಅದರ ಕಾರ್ಯವನ್ನು ಮುಗಿಸಿಬಿಡುತ್ತೇವೆಂದೇನೂ ಹೇಳಿರಲಿಲ್ಲ. ರಷ್ಯಾದೇಶದಿಂದ ನಮ್ಮ ಕೇಂದ್ರ ಸರ್ಕಾರಕ್ಕೆ ಸಹಾಯ ಬರತಕ್ಕದ್ದು ಇತ್ತು. ಪ್ಲಾನ್ ಡೆವಲಪ್‌ಮೆಂಟಿನ ಹೊರಗಡೆ ಇರತಕ್ಕ ಪವರ್‌ಪ್ರಾಜೆಕ್ಟ್‌ಗಳಿಗೆ ಕೇಂದ್ರದವರ ಸಹಾಯವನ್ನು ನಾವು ಬೇಡಿದ್ದೇವೆ. ನಮ್ಮ ಪ್ರಾಜೆಕ್ಟ್ ಬಹಳ ಕಡಮೆ ವೆಚ್ಚದಲ್ಲಿ ಹೆಚ್ಚು ಲಾಭದಾಯವಾದ ಪ್ರಾಜೆಕ್ಟ್ ಆಗಿರುವುದರಿಂದ ಇದಕ್ಕೆ ಸಹಾಯ ಮಾಡಬೇಕೆಂದು ಅವರನ್ನು ಒತ್ತಾಯಮಾಡುತ್ತಿದ್ದೇವೆ. ಹೀಗೇನಾದರೂ ಹೊರಗಡೆಯ ಹಣ ಬಂದರೆ ಅದನ್ನು ಮಾಡೋಣವೆಂದು ಹೇಳಿದ್ದೇವು. ಅಷ್ಟೆ ವಿನಾ ಅದನ್ನು ನಾವು ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗೆ ಮುಗಿಸುತ್ತೇವೆಂದು ಯಾವತ್ತೂ ಹೇಳಿಲ್ಲ.

ಇನ್ನು ಕೆಲವರು ಷಾಬಾದ್ ಸ್ಟೋನ್ ಕ್ವಾರೀ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರ ನನಗೆ ನೇರವಾಗಿ ಸಂಬಂಧಪಡದಿದ್ದರೂ ಇದು ನನಗೆ ಸಂಬಂಧಪಟ್ಟ ಶಾಖೆಯ ಉಪಮಂತ್ರಿಗಳ ಅಧಿಕಾರವ್ಯಾಪ್ತಿಯಲ್ಲಿದೆ. ಆ ವಿಚಾರ ನನಗೆ ಇದುವರೆಗೂ ಗೊತ್ತಿರಲಿಲ್ಲ. ಈಗತಾನೆ ನನಗೆ ಅವರು ತಿಳಿಸಿದರು, ಈ ವಿಚಾರ ಹೈಕೋರ್ಟಿನಲ್ಲಿ ತೀರ್ಮಾನವಾಗಿ ಅದು ಸುಪ್ರೀಂ ಕೋರ್ಟಿಗೆ ಅಪೀಲು ಹೋಗತಕ್ಕ ಸನ್ನಿವೇಶದಲ್ಲಿ ವಿಚಾರ ನಿಂತಿದೆ ಎಂಬುದಾಗಿ ಎಂಬುದಾಗಿ

(ಶ್ರೀ ವೀರೇಂದ್ರ ಪಾಟೀಲ್)

ತಿಳಿಸಿದುದರಿಂದ ನಾನು ಈಗ ಅದರ ಬಗ್ಗೆ ಪ್ರಸ್ತಾಪವಾಡವುದಕ್ಕೆ ಇಚ್ಛೆಪಡುವುದಿಲ್ಲ. ಕೊನೆಯದಾಗಿ ಒಂದು ವಿಚಾರ. ವಿಧಾನಸೌಧದ ಹತ್ತಿರ ಇಂಡಿಯನ್ ಆಯಿಲ್ ಕಂಪನಿಗೆ ಸ್ಥಳ ಕೊಟ್ಟ ವಿಚಾರ. ಅದನ್ನು ಯಾರೋ ಕೇಳಿದಹಾಗಿತ್ತು. ಹಿಂದೆ ಸಹ ಈ ಸಭೆಯಲ್ಲಿ ಉತ್ತರ ಕೊಟ್ಟಿದ್ದೇನೆ. ಅದರ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ. ಮಾನ್ಯ ಸದಸ್ಯರೆಲ್ಲರ ವಿಶ್ವಾಸ ತೆಗೆದುಕೊಂಡು ನಮ್ಮ ಅಧಿಕಾರದ ಅವಧಿಯಲ್ಲಿ ನಿಮ್ಮೆಲ್ಲರನ್ನು ಬೀಳ್ಕೊಡಬೇಕಾಗಿದೆ. ಈ ಅವಿಶ್ವಾಸ ನಿರ್ಣಯವನ್ನು ತರಬಾರದಾಗಿತ್ತು. ಆದರೂ ತಂದಾಗಿದೆ. ನಾನು ಈ ಮನೆಯ ಮುಖಾಂತರ ಜನತೆಗೆ ಹೇಳಬೇಕಾದರೆ ಈ 5 ವರ್ಷ ಅವಧಿಯಲ್ಲಿ ನಾವು ಅಧಿಕಾರ ಮಾಡಿ ಮುಂದುವರಿದುಕೊಂಡು ಬಂದಿದ್ದು ಜನರ ಆಶೀರ್ವಾದದಿಂದ. ಅದನ್ನು ದುರುಪಯೋಗ ಮಾಡಿಲ್ಲ. ಪ್ರಾಮಾಣಿಕತೆಯಿಂದ ಹೇಳಬೇಕಾದರೆ, ಜನತೆಯ ಸೇವೆ ಮಾಡಲು ನಮಗೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದ್ದೇವೆ. ವಿರೋಧಪಕ್ಷದಿಂದ ಆರಿಸಿ ಬಂದ ಜನತೆ ಇರಲಿ, ಪಕ್ಷದಿಂದ ಆರಿಸಿ ಬಂದ ಜನತೆ ಇರಲಿ, ಅದನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ, ನಮ್ಮದು ಕನ್ನಡ ನಾಡು, ಕನ್ನಡ ನಾಡು, ಚಿನ್ನದ ನಾಡಾಗಬೇಕು ಎಂದು ಅಂತರಾತ್ಮಸಾಕ್ಷಿಯಿಂದ ದುಡಿದಿದ್ದೇವೆ. ನಮ್ಮಲ್ಲಿ ಜನರಿಗೆ ವಿಶ್ವಾಸವಿದ್ದರೆ ಮುಂದಕ್ಕೂ ಕೊಡುತ್ತಾರೆ, ಆ ರೀತಿಯಿಂದ ಇನ್ನೂ ಹೆಚ್ಚಿನ ಸೇವೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri ANNA RAO GANAMUKHI.—Point of Order, Sir. ಪಿ. ಡಬ್ಲ್ಯು. ಡಿ. ಮಿನಿಸ್ಟರ್ ಅವರು ಮಾತನಾಡುವಾಗ ಹೇಳಿದರು, ಈ ಕಡೆ ಇದ್ದ ಕಾಂಗ್ರೆಸ್ ಸದಸ್ಯರು ಆ ಕಡೆ ಹೋದಮೇಲೆ ಆಕ್ಷೇಪಣೆ ಮಾಡುತ್ತಿದ್ದಾರೆ, ಈ ಕಡೆ ಇದ್ದಾಗ ಮಾಡಲಿಲ್ಲವೆಂದು. ನಾನು ಯಾರನ್ನೂ ಪರಸನಲ್ ಆಗಿ ಆಕ್ಷೇಪಣೆ ಮಾಡಿಲ್ಲ, ಸರ್ಕಾರಕ್ಕೆ ಮಾಡಿದ್ದೇನೆ. ಅಲ್ಲದೆ ಆ ಕಡೆ ಇದ್ದಾಗಲೂ ಸಹ ಚಾರ್ಜುಸೀಟನ್ನು ಕೆಲವರ ಮೇಲೆ ಕಳಿಸಿದ್ದೆವು. ಇಲ್ಲವೆಂದು ಹೇಳುವುದಿಲ್ಲ. ಶ್ರೀ ನಂದಾರವರು ಈ ರಾಜ್ಯಕ್ಕೆ ಬಂದಾಗ ಚಾರ್ಜುಸೀಟ್ ಬಗ್ಗೆ ಹೇಳಿದ್ದೇವೆ. ಆಗ ಶ್ರೀಮಾನ್ ವೆಂಕಟರಾಮನ್ ಅವರು ಸಹ ಇದ್ದರು. ಎನ್‌ಕ್ವೈರಿ ಮಾಡಿ, ನಮ್ಮಲ್ಲಿ ತಪ್ಪು ಇದ್ದರೆ ನಮಗೆ ಶಿಕ್ಷೆ ವಿಧಿಸಿ ಎಂದು ಶ್ರೀ ನಂದಾರವರಿಗೆ ಹೇಳಿದ್ದೆವು. ಈ ಕಡೆ ಬಂದ ಮೇಲೆ ದೂರಿದರು ಎಂದು ಹೇಳುವುದು. ಶುದ್ಧ ತಪ್ಪು ನಾನು ಹೇಳಿದ್ದು ತಪ್ಪಿದ್ದರೆ ಎನ್‌ಕ್ವೈರಿ ಕಮಿಟಿ ಬೇಕಾದರೆ ಮಾಡಿ. ಆದರೆ ಈ ರೀತಿ ಮಾತನಾಡುವುದು ಸರಿ ಬರುವುದಿಲ್ಲ.

ಶ್ರೀ ವೀರೇಂದ್ರಪಾಟೀಲ್.—ನನಗೆ ಗೊತ್ತಿದೆ. ಹುಡುಗಾಟಿಕೆಗೆ ನಾನೂ ಒಂದು ಹೇಳಬಹುದು. ಅದರಲ್ಲಿ ಅರ್ಥವಿಲ್ಲ. ನಾನು ಹೇಳಿದ್ದು ಏನೆಂದರೆ, ಈ ಕಡೆ ಇದ್ದ ಜನ ಆ ಕಡೆ ಹೋಗಿದ್ದಾರೆ. ನೀವು ಹೇಳುವ ಮಾತು ನಿಮಗೆ ಇಂಪಾಗಿ ಕಾಣಬಹುದು. ಒಮ್ಮಿಂದೊಮ್ಮೆಗೆ ಕಾಂಗ್ರೆಸ್‌ನಲ್ಲಿ ಆ ರೀತಿಯಿದೆ, ಈ ರೀತಿಯಿದೆ ಎಂದು ಹೇಳುವ ಮಾತನ್ನು ಪ್ರಜಾಪ್ರಭುತ್ವದಲ್ಲಿ ಹೇಳತಕ್ಕದ್ದಲ್ಲ. 44—46 ಪರ್‌ಸೆಂಟ್ ಓಟು ಪಡೆದು ಈ ಸಭೆಗೆ ಬಂದು ಆ ರೀತಿ ಮಾತನಾಡುವುದು ಇಂಪಾಗಿ ಕಾಣಸಬಹುದು. ಅದೇ ಮಾತನ್ನು ಈ ಕಡೆ ಇದ್ದಾಗ ಮಾತನಾಡಿದ್ದರೆ ಸರಿ ಕಾಣುತ್ತಿತ್ತು.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ಅವಿಶ್ವಾಸ ನಿರ್ಣಯದ ಮೇಲೆ ಮಾನ್ಯ ಸದಸ್ಯರು ಕೆಲವರು ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಆಡಿದ್ದಾರೆ. ಆ ಮಾತುಗಳಿಗೆ ನನ್ನ ಸಮಯದಲ್ಲಿ ಉತ್ತರ ಕೊಡುವುದು ಅವಶ್ಯಕವೆಂದು ಭಾವಿಸಿ ನಾನು ಹೇಳುತ್ತಿದ್ದೇನೆ. ವಿರೋಧಪಕ್ಷದ ಮುಖಂಡರಾದ ಶ್ರೀಮಾನ್ ಶಿವಪ್ಪನವರು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯ ವ್ಯವಹಾರದ ವಿಚಾರದಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ. ಮೊನ್ನೆಯ ದಿನ ಇದೇ ಸಂಬಂಧದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರೊಬ್ಬರು ಪ್ರಶ್ನೆಗಳನ್ನು ಹಾಕಿದ್ದರು. ಆ ಪ್ರಶ್ನೆಗಳಿಗೆ ನಾನು ಆ ದಿನ ಉತ್ತರ ಕೊಟ್ಟಿದ್ದೇನೆ. ಈ ಸ್ಟೇಟ್‌ಮಾರ್ಕೆಟಿಂಗ್ ಸೊಸೈಟಿಯ ವ್ಯವಹಾರ ಕ್ರಮಬದ್ಧವಾಗಿದೆ. ಲೆಕ್ಕಗಳೆಲ್ಲಾ ಇವೆ. ಸ್ಟೇಟ್ ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿ ಅವರಿಗೂ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯವರಿಗೂ ಇರುವ ಲೆಕ್ಕವನ್ನು ತಾಳೆ ಹಾಕಲಿಕ್ಕೆ, ಅದಕ್ಕೆ ಬೇಕಾಗಿರುವ ಸಿಬ್ಬಂದಿಗಳನ್ನು ಒದಗಿಸಿಕೊಟ್ಟಿದೆ. ಕೆಲವರು ಈ ವಿಚಾರದಲ್ಲಿ ತುಂಬಾ ನಷ್ಟವಾಗಿದೆಯೆಂದು ಹೇಳಿದರು. 1962-63 ರಲ್ಲಿ ನಷ್ಟವಾಗಿರುವುದಕ್ಕೆ ಇರುವ ಕಾರಣಗಳನ್ನು ಈ ಸಭೆಯಲ್ಲಿ ಹೇಳಿದ್ದೇನೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಪ್ರತಿಯೊಂದು ಟನ್ ಗೊಬ್ಬರಕ್ಕೆ 1962-63 ನೇ ಸಾಲಿನಲ್ಲಿ ಕೇವಲ 6 ರೂಪಾಯಿ ಮಾರ್ಜಿನ್ ಕೊಟ್ಟು, ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯ ಗೋಡೌನ್ ಬಾಗಿಲವರೆಗೂ ಸಾಗಿಸುವ ಜವಾಬ್ದಾರಿ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗೆ ಬೇಕಾದಂತಹ ಗೋಡೌನ್ ಬಾಡಿಗೆ ಜವಾಬ್ದಾರಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗೆ ಇದ್ದುದರಿಂದ ಆ ವರ್ಷ 7,12,776 ರೂಪಾಯಿ ನಷ್ಟವಾದ ವಿಚಾರ

ವನ್ನು ಸಭೆಗೆ ಹೇಳಿದ್ದೇನೆ. ಮತ್ತು ಈಗ ಕೆಲವು ಅಂಕಿಅಂಶಗಳನ್ನು ಕೊಟ್ಟರೆ ಎಲ್ಲಾ ವ್ಯವಹಾರಗಳೂ ಸರಿಯಾಗಿ ನಡೆಯುತ್ತಿವೆಯೆಂದು ಮಾನ್ಯ ಸದಸ್ಯರಿಗೆ ತಿಳಿಯಬಹುದು ಎಂದು ನಿರೀಕ್ಷೆ ಮಾಡುತ್ತೇನೆ. 1964-65 ನೇ ಸಾಲಿನವರೆಗೆ ಲೆಕ್ಕ ತನಿಖೆಯಾಗಿದೆ. ಆಡಿಟ್ ರಿಪೋರ್ಟ್ ಬಂದಿದೆ. ಕಳೆದ ವರ್ಷದ ಆಡಿಟ್ ರಿಪೋರ್ಟ್ ವಿಚಾರದಲ್ಲಿ ಆಡಿಟ್ ಅವರು ಹೇಳಿರತಕ್ಕಂಥ ಆಕ್ಷೇಪಣೆಗಳೇನಿವೆ, ಅವನ್ನು ಆಡಳಿತ ಮಂಡಳಿಯವರು ಮತ್ತು ನಮ್ಮ ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೆ. 1960-61 ರಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು ಫರ್ಟಿಲೈಸರ್ಸ್‌ನ್ನು ಹಂಚುವ ಜವಾಬ್ದಾರಿಯನ್ನು ಹೊತ್ತಿದ್ದರು. 1960-61 ರಲ್ಲಿ 20 ಸಾವಿರ ರೂಪಾಯಿಗಳ ಲಾಭ ಬಂದಿದೆ. 1961-62 ರಲ್ಲಿ 38 ಸಾವಿರ ರೂಪಾಯಿಗಳು ಮತ್ತು, ಅದೇ 1961 62 ರಲ್ಲಿ 1 ಲಕ್ಷದ 24 ಸಾವಿರ ರೂಪಾಯಿಗಳು ಲಾಭ ಬಂದಿವೆ. 1962-63 ರಲ್ಲಿ ನಷ್ಟವಾಗಿದೆ. 1963-64 ರಲ್ಲಿ 2 ಲಕ್ಷದ 21 ಸಾವಿರ ರೂಪಾಯಿ ನಷ್ಟವಾಗಿದೆ. 1964-65 ರಲ್ಲಿ 2,69,846 ರೂಪಾಯಿ ಲಾಭ ಬಂದಿದೆ. ಇದು ಒಂದು ದೊಡ್ಡ ವ್ಯವಹಾರವಾದ್ದರಿಂದ ಸುಮಾರು 145 ತಾಲ್ಲೋಕ್ ಮಾರ್ಕೆಟಿಂಗ್ ಸೊಸೈಟಿಗಳಿಗೆ ಅವರು ಮಾಲನ್ನು ಒದಗಿಸಿಕೊಟ್ಟ, ಲೆಕ್ಕ ತನಿಖೆ ಮಾಡಬೇಕಾಗಿರುವುದರಿಂದ ಲೆಕ್ಕ ಹಾಕುವುದರಲ್ಲಿ ಸಿಬ್ಬಂದಿಗಳು ಸಾಕಷ್ಟು ಇರಲಿಲ್ಲ. ಈ ವರ್ಷ ಸರ್ಕಾರದವರು ಆ ಸೊಸೈಟಿಗೆ ಸಿಬ್ಬಂದಿಗಳನ್ನು ಒದಗಿಸಿದೆ. ಆ ಕಾರ್ಯ ಬಹಳ ಜಾಗ್ರತೆ ನಡೆಯುತ್ತದೆಯೆಂಬ ವಿಚಾರವನ್ನು ಈ ಸಭೆಯಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರಾದಂಥ ಶ್ರೀಮಾನ್ ದುಗ್ಗಪ್ಪನವರು ಹರಿಜನ ವಸತಿ ನಿರ್ಮಾಣಕ್ಕಾಗಿ ಕೊಟ್ಟಂಥ ಮೂರೂವರೆ ಕೋಟಿ ರೂಪಾಯಿಗಳು ಏನಾಗಿದೆ ಎಂದು

6-30 P.M.

ಕೇಳಿದ್ದಾರೆ. ಆ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ನನ್ನಲ್ಲಿರತಕ್ಕ ಅಂಕಿಅಂಶಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಸರ್ಕಾರ 3½ ಕೋಟಿ ರೂಪಾಯಿಗಳನ್ನು ಕಳೆದ ಮಾರ್ಚ್ ತಿಂಗಳಲ್ಲಿ ಅಪೆಕ್ಸ್ ಲೆವಲ್‌ನಲ್ಲಿ ಮಾಡಿದಂತಹ ಷೆಡ್ಯೂಲ್ಡ್ ಟ್ರೈಬ್ಸ್ ಸಹಕಾರ ಸಂಘಕ್ಕಾಗಿ ಒದಗಿಸಿರುವ ವಿಚಾರವನ್ನು ಈ ಸಭೆಯ ಜ್ಞಾಪಕಕ್ಕೆ ತರುತ್ತಿದ್ದೇನೆ. 92 ಸೊಸೈಟಿಗಳ ವಿಚಾರವನ್ನು ನಮ್ಮ ಇಲಾಖೆಯಿಂದ ಪರಿಶೀಲನೆ ಮಾಡಿ 2 ಕೋಟಿ 5 ಲಕ್ಷ 41 ಸಾವಿರದ 190 ರೂಪಾಯಿಗಳ ಸಾಲವನ್ನು ಶಿಫಾರ್ಸು ಮಾಡಿ ಷೆಡ್ಯೂಲ್ ಟ್ರೈಬ್ಸ್ ಕೋ-ಆಪರೇಟಿವ್ ಸೊಸೈಟಿಗೆ ಕಳುಹಿಸಿದೆ. ಕೋ-ಆಪರೇಟಿವ್ ಸೊಸೈಟಿಯವರು ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್ ಸಹಕಾರ ಸಂಘ ಕಾರ್ಪೊರೇಷನ್ನಿನವರು 77 ಸೊಸೈಟಿಗಳ ರಿಕಾರ್ಡುಗಳನ್ನು ಪರಿಶೀಲಿಸಿ 87 ಲಕ್ಷ 42 ಸಾವಿರದ 200 ರೂಪಾಯಿಗಳನ್ನು ಸಾಲ ಕೊಡಲು ಮಂಜೂರು ಮಾಡಿದೆ. ಆ ಹಣ ಈಗ ವಿಲೇವಾರಿ ಆಗುತ್ತಿದೆ. ಶ್ರೀಮಾನ್ ದುಗ್ಗಪ್ಪನವರಿಗೆ ಇದರಿಂದೇನಾದರೂ ತಾತ್ಸಾರವಾಗುತ್ತದೆಂಬ ಭಾವನೆ ಬರುವುದಿಲ್ಲವೆಂದು ನಾನು ನಂಬಿದ್ದೇನೆ. 1962 ರಿಂದ 1966ರವರೆಗೆ ಕೇವಲ 35 ಲಕ್ಷದ 97 ಸಾವಿರದ 140 ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದರೆ ಈ ವರ್ಷದಲ್ಲಿ ಸಹಕಾರ ಸಂಘಗಳವರು ಮಂಜೂರು ಮಾಡಿರತಕ್ಕದ್ದು 87 ಲಕ್ಷದ 42 ಸಾವಿರದ 200 ರೂಪಾಯಿಗಳು. ಆದ್ದರಿಂದ ಈ ವಿಚಾರ ಮಾನ್ಯ ಸದಸ್ಯರು ಕೇಳಿದಮೇಲೆ ಇದು ಅವರಿಗೆ ಸಮರ್ಪಕವಾಗಿದೆಯೆಂದು ಅವರು ಭಾವನೆ ಮಾಡಬಹುದು ಎಂಬುದಾಗಿ ನಾನು ತಿಳಿದಿದ್ದೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕರಿಯಪ್ಪನವರು ಈಗ ಈ ಸಭೆಯಲ್ಲಿಲ್ಲ. ಅವರು ಒಂದು ವಿಚಾರವನ್ನು ಹೇಳಿದ್ದರು.

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ನಮಗೆ ಬೇಕಾಗಿರುವುದು ಕೆಲವು ಸಂಘಗಳಲ್ಲಿ ಹಣ ದುರುಪಯೋಗವಾಗಿರುವುದನ್ನೂ ಜನರಲ್ ಬಾಡಿ ಮೀಟಿಂಗ್ ನಡೆಯದೇ ಇರತಕ್ಕದ್ದನ್ನೂ ಇಲಾಖೆಯವರು ಸರಿಯಾಗಿ ಪರಿಶೀಲಿಸುತ್ತಾರೆಯೇ ಎಂಬುದು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಶ್ರೀಮಾನ್ ಕರಿಯಪ್ಪನವರು ತುಮಕೂರಿನಲ್ಲಿ ಅರ್ಧಕ್ಕಿಂತ ಮೇಲ್ಪಟ್ಟು ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ ಎಂದು ಹೇಳಿದರು. ಹಾಗೂ ಕನಕಪುರ ತಾಲ್ಲೂಕಿನಲ್ಲಿ ಅರ್ಧಕ್ಕಿಂತ ಹೆಚ್ಚು ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ ಎಂದು ಹೇಳಿದರು. ಈ ವಿಚಾರದಲ್ಲಿ ಇಲಾಖೆ ಬಹಳ ತಾತ್ಸಾರ ಮನೋಭಾವನೆಯನ್ನು ತಾಳಿದೆ, ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲವೆಂಬುದಾಗಿಯೂ ಹೇಳಿದರು. ಮೊನ್ನೆ ತಾನೇ ಸಂಸ್ಥಾನಮಳೆ ಸಹಕಾರ ಸಂಘಗಳಲ್ಲಿ ಎಷ್ಟು ಹಣ ದುರುಪಯೋಗವಾಗಿದೆ, ಯಾವ ರೀತಿ ತಕ್ಕ ಕ್ರಮವನ್ನು ಅವುಗಳಮೇಲೆ ತೆಗೆದುಕೊಂಡಿದೆ ಎಂಬ ಬಗ್ಗೆ ಪ್ರಶ್ನೋತ್ತರ ವೇಳೆಯಲ್ಲಿ ತಿಳಿಸಿದ್ದೇನೆ. ಆ ವಿಚಾರವನ್ನು ಪುನಃ ಈಗ ಇಲ್ಲಿ ಪ್ರಸ್ತಾಪ ಮಾಡಿ ಈ ಸಭೆಯ ಕಾಲವನ್ನು ಕಳೆಯುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. ತುಮಕೂರಿನಲ್ಲಿ ಒಟ್ಟು 365 ಸೊಸೈಟಿಗಳು ಇವೆ. ಹಣ

(ಶ್ರೀ ಕೆ. ಪುಟ್ಟಸ್ವಾಮಿ)

ದುರುಪಯೋಗವಾಗಿರತಕ್ಕದ್ದು 27 ಸೊಸೈಟಿಗಳಲ್ಲಿ ಮಾತ್ರ. ಈ ಸೊಸೈಟಿಗಳಲ್ಲಿ ಉತ್ಪತ್ತಿಯಾದ ಹಣ 1 ಲಕ್ಷ 71 ಸಾವಿರದ 440 ರೂಪಾಯಿಗಳು. ಹಣ ದುರುಪಯೋಗವಾಗಿರತಕ್ಕದ್ದು 24 ಸಾವಿರ 327 ರೂಪಾಯಿಗಳು, ಉಳಿದಿರುವುದು 1 ಲಕ್ಷ 47 ಸಾವಿರ 113 ರೂಪಾಯಿಗಳು. ಹಣ ದುರುಪಯೋಗ ಮಾಡಿದವರಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲವೆನ್ನುವುದು ಫಿರ್ಯಾದು. ಇದುವರೆಗೆ ಕ್ರಮ ತೆಗೆದುಕೊಂಡಿರುವುದು ಕೋರ್ಟಿನಲ್ಲಿ ಕೇಸು ಹಾಕಿದ್ದು 8 ಕೇಸುಗಳು. 27ರಲ್ಲಿ ಪೋಲೀಸಿನವರು ಇನ್‌ವೆಸ್ಟಿಗೇಷನ್ ಮಾಡಿರುವುದು 11 ಕೇಸುಗಳಲ್ಲಿ ಮತ್ತು ಇನ್ನೂ ವ್ಯವಹಾರದಲ್ಲಿ ಇರತಕ್ಕದ್ದು 8 ಕೇಸುಗಳು. ಅಂತೂ 27 ಕೇಸುಗಳ ಪೈಕಿ 19 ಕೇಸುಗಳು ಕೋರ್ಟಿನಲ್ಲಿವೆ. ಈಗಾಗಲೇ 8 ಕೇಸುಗಳು ಕೋರ್ಟಿನಲ್ಲಿ ಫೈಸಲ್ ಆಗಿವೆ. ಇಷ್ಟು ಹೇಳಿದಮೇಲೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ ಕನಕಪುರ ತಾಲ್ಲೂಕಿನ 75 ಸಹಕಾರ ಸಂಘಗಳ ಪೈಕಿ ಕೆಲವು ಸಂಘಗಳಲ್ಲಿ ಹಣ ದುರುಪಯೋಗ ವಾಗಿದೆ ಎಂದು ವರದಿ ಬಂದಿರತಕ್ಕದ್ದಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಕೇಸುಗಳನ್ನು ಹಾಕಿದ ಮಾತ್ರಕ್ಕೆ ಬಹಳ ಪರಿಣಾಮ ಕಾರಿಯಾಗಿ ತಮ್ಮ ಇಲಾಖೆ ಕೆಲಸ ಮಾಡುತ್ತಿದೆ ಎಂದೇ ?

ನಿಮ್ಮಲ್ಲಿ 18 ಜನ ಜಾಯಿಂಟ್ ರಿಜಿಸ್ಟ್ರಾರುಗಳಿದ್ದಾರೆ. ಬಳ್ಳಾರಿಯೊಳಗೆ 3 ಸೊಸೈಟಿಗಳ ಪೈಕಿ ಮೈನ್ ಓನರ್ ಕೋ-ಆಪರೇಟಿವ್ ಸೊಸೈಟಿಯಲ್ಲಿ 6 ಲಕ್ಷ ರೂಪಾಯಿಗಳ ಪೈಕಿ 4 ಲಕ್ಷ ರೂಪಾಯಿಗಳು ಥಪಾವಣೆಯಾಗಿದೆ. ಆ ಒಂದು ಸೊಸೈಟಿಯಲ್ಲಿ ಮನೆ ಮಕ್ಕಳೆಲ್ಲಾ ಸಾಲ ತೆಗೆದುಕೊಂಡಿದ್ದಾರೆ. ಈ ಬಗ್ಗೆ ತಮಗೆ ಅನೇಕ ದೂರುಗಳು ಬಂದಿದ್ದರೂ ತಾವು ಏನು ಕ್ರಮ ವನ್ನೂ ತೆಗೆದುಕೊಳ್ಳಲಿಲ್ಲ. ಹಿರೇಹಡಗಲಿ ಸೊಸೈಟಿಯಲ್ಲಿ 2 ಲಕ್ಷ ರೂಪಾಯಿಗಳವರೆಗೆ ಗ್ಯಾರಂಟಿ ಕೊಟ್ಟಿದ್ದೀರಿ. ಆ ಮೂರು ಸೊಸೈಟಿಗಳಿಗೂ ಒಬ್ಬರೇ ಅಧ್ಯಕ್ಷರು ಇದ್ದಾರೆ. I am bringing to his notice how far the department is effectively taking care in the public funds.

ಶ್ರೀ ಕೆ. ಪುಟ್ಟಸ್ವಾಮಿ.—ಇನ್ನು ಕನಕಪುರದ ಮಾನ್ಯ ಸದಸ್ಯರಾದ ಶ್ರೀ ಕರಿಯಪ್ಪನವರು ಎತ್ತಿದಂಥ ಆಕ್ಷೇಪಣೆಗಳಿಗೆ ಉತ್ತರ ಕೊಡುತ್ತೇನೆ. 75 ಸಹಕಾರ ಸಂಘಗಳ ಪೈಕಿ ಹಣ ದುರುಪಯೋಗವಾಗಿರತಕ್ಕದ್ದು 13 ಸಹಕಾರ ಸಂಘಗಳಲ್ಲಿ ಆ ಸೊಸೈಟಿಗಳಿಗೆ ಸಂಬಂಧಪಟ್ಟ ಹಣ 37,684 ರೂಪಾಯಿಗಳು. ವಸೂಲಾಗಿರತಕ್ಕದ್ದು 10,550 ರೂಪಾಯಿಗಳು. ಆ 13 ಸೊಸೈಟಿ ಗಳ ಪೈಕಿ ಕೋರ್ಟಿನಲ್ಲಿರತಕ್ಕದ್ದು 4 ಕೇಸುಗಳು, ಪೋಲೀಸ್ ಇನ್‌ವೆಸ್ಟಿಗೇಷನ್ನಿನಲ್ಲಿರುವುದು 6 ಕೇಸುಗಳು, ನೋಟೀಸ್ ಕೊಟ್ಟಿರುವ ಕೇಸುಗಳು 3 ಕೇಸುಗಳು ಒಟ್ಟು 13 ಸಹಕಾರ ಸಂಘಗಳಲ್ಲಿ ಆ ರೀತಿಯಾಗಿದೆ ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಸಹಕಾರ ಸಂಘಗಳಲ್ಲಿ ಆಗತಕ್ಕ ನಡವಳಿಕೆಗಳು ಕ್ರಮಬದ್ಧವಾಗಿಲ್ಲ. ಅಲ್ಲಿನ ನಡವಳಿಕೆಗಳಿಗೆ ಸರ್ಕಾರವೇ ಜವಾಬ್ದಾರಿ ಎಂದು ಹೇಳುತ್ತಿದ್ದರು.

Sri S. KARIAPPA.—I will clarify if I am permitted.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸಹಕಾರ ಸಂಘಗಳು ಜನ ನಡೆಸತಕ್ಕ ಸಂಸ್ಥೆಗಳು. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಸಹಕಾರ ಸಂಘಗಳನ್ನು ನಡೆಸುವಾಗ ಅಲ್ಲಿನ ಜನರ ತಿಳುವಳಿಕೆ ಎಷ್ಟು ಮಟ್ಟದಲ್ಲಿರುತ್ತದೆ ಎನ್ನುವುದನ್ನು ತಿಳಿಯುವುದು ಅವಶ್ಯಕವಾಗಿದೆ. ಅಲ್ಲಿ ಸಾಕಷ್ಟು ಲೆಖ್ಖಗಳನ್ನು ಇಡುವ ಶಕ್ತಿ ಇರುವುದಿಲ್ಲ. ಆದರಿಂದಲೇ ಅನೇಕ ವೇಳೆ ಇಂತಹ ಅಪಾದನೆ ಗಳಿಗೆ ಅಲ್ಲಿನ ಜನ ಒಳಗಾಗುತ್ತಾರೆ. ಹಾಗೆ ಕನಕಪುರದಲ್ಲಿರತಕ್ಕ 75 ಸಹಕಾರ ಸಂಘಗಳ ಪೈಕಿ 13 ಸಹಕಾರ ಸಂಘಗಳಲ್ಲಿ ಅಕ್ರಮ ನಡವಳಿಕೆ ನಡೆದಿದ್ದರೆ ಅದು ಬಹಳ ದೊಡ್ಡದೆಂದು ನಾನು ಭಾವನೆ ಮಾಡುವುದಿಲ್ಲ. ಅವುಗಳ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಆ ಕ್ರಮವನ್ನು ಈಗಾಗಲೇ ತೆಗೆದುಕೊಂಡಿದೆ ಎಂಬುದಾಗಿ ನಾನು ಈ ಸಭೆಯಲ್ಲಿ ವಿನಂತಿ ಮಾಡುತ್ತೇನೆ.

ಇನ್ನು ಶ್ರೀಮಾನ್ ಲಕ್ಕಪ್ಪನವರು ಒಂದು ವಿಚಾರವನ್ನು ಹೇಳಿದರು. ಯಾವುದೋ ಒಂದು ಸೊಸೈಟಿಯಲ್ಲಿ ಕೇಸನ್ನು ವಿತ್‌ಡ್ರಾ ಮಾಡಿದ್ದಾರೆಂದು. ಅವರು ಹೇಳಿದಂತಹ ಸೊಸೈಟಿಯ ಬಗ್ಗೆ ಎಲ್ಲ ವಿಚಾರಗಳೂ ತನಿಖೆಯಾಗಿ ಅವರಮೇಲೆ ಕೇಸು ಹಾಕಿರುವುದೇನೋ ಉಂಟು. ಆ ಕೇಸನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ಅರ್ಜಿ ಕೊಟ್ಟಿದ್ದಾರೆ. ಆ ಅರ್ಜಿಮೇಲೆ ಇನ್ನೂ ಪರಿಶೀಲನೆ

ಮಾಡುತ್ತಿದ್ದೇವೆ. ನನಗೆ ತಿಳಿದಿರುವ ಪ್ರಕಾರ ಆ ಕೇಸು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಲಾಯಕ್ಕಾದ ವಿಚಾರವೆಂದು ತಿಳಿದು ಬಂದಿದೆ. ಆದರೆ ಅದು ಇನ್ನೂ ಅಖೈರಾಗಿ ತೀರ್ಮಾನ ವಾಗಿಲ್ಲ.

ಶ್ರೀ ಕೆ. ಲಕ್ಕಪ್ಪ.—ಅವರು ಕಾಂಗ್ರೆಸ್‌ನವರಾಗಿರುವುದರಿಂದ ತಾವು ಹಾಗೆ ಮಾಡಿರುವುದರಲ್ಲಿ ಅದು ಲಾಯಕ್ಕಾಗಿದೆಯೆಂದು ಹೇಳುತ್ತಿದ್ದೀರಿ. ಎಷ್ಟು ಕೇಸುಗಳನ್ನು ಅವರಮೇಲೆ ಇದುವರೆಗೆ ಹಾಕಿದ್ದೀರಿ, ಹೇಳಿ. ನಿಜವಾಗಿ ಇಂಥಾದ್ದನ್ನು ನಾಗರಿಕ ಸರ್ಕಾರ ಮಾಡುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ನಾಮೋಷಿಯವರು ಭಾಷಣ ಮಾಡುವಾಗ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ನಿದರ್ಶನ ರೂಪವಾಗಿ ತಂದರು. ನಾನು ಒಂದು ವಿಚಾರ ವನ್ನು ಹೇಳುವುದಾದರೆ, ಅವರು ಗೊಬ್ಬರದಲ್ಲಿ ಮಣ್ಣು ಮಿಶ್ರವಾಗಿದೆ ಎಂದು ಹೇಳಿದರು. ಇದು ವರೆಗೂ ಮೈಸೂರು ರಾಜ್ಯದಲ್ಲಿ ಗೊಬ್ಬರವನ್ನು ಹಂಚಿಕೆ ಮಾಡಿರುವುದರಲ್ಲಿ ಮಣ್ಣು ಬೆರಕೆಯಾದ ಗೊಬ್ಬರವನ್ನು ಹಂಚುತ್ತಿದ್ದಾರೆ ಎನ್ನುವ ವಿಷಯವನ್ನು ನಾನು ಎಲ್ಲೂ ಕೇಳಿಲ್ಲ. ಯಾವ ಸಹಕಾರ ಸಂಘದಲ್ಲಿ ಆ ರೀತಿ ಮಣ್ಣು ಮಿಶ್ರವಾದ ಗೊಬ್ಬರವನ್ನು ಹಂಚಿಕೆ ಮಾಡಿದ್ದಾರೆ ಎನ್ನುವ ವಿಚಾರ ಹೇಳದೆ ಸುಮ್ಮನೆ ಕಾಗದದ ಪೊಟ್ಟಣಗಳಲ್ಲಿ ಮಣ್ಣು ಮಿಶ್ರವಾದ ಗೊಬ್ಬರವನ್ನು ಈ ಸಭೆಗೆ ತಂದು ತೋರಿಸಿದರೆ ಅದರ ಮೇಲೆ ಈ ಸಭೆ ಆ ವಿಚಾರದಲ್ಲಿ ಒಂದು ಅಭಿಪ್ರಾಯಕ್ಕೆ ಬರುತ್ತದೆ ಎಂದು ನಾನು ನಂಬಿಕೊಂಡಿಲ್ಲ.

ಅವರು ಇನ್ನೊಂದು ವಿಚಾರವನ್ನು ಹೇಳಿದರು. ಅದೇನೆಂದರೆ, ಕೆಲವು ಕಡೆ ಜನಗಳಿಗೆ ಕೊಟ್ಟಿರತಕ್ಕಂಥ ಜೋಳ ಏನಿದೆ ಅದನ್ನು ತಿನ್ನುವುದಕ್ಕಾಗುವುದಿಲ್ಲ, ಒಂದು ವೇಳೆ ಆ ಜೋಳದಲ್ಲಿ ರೊಟ್ಟಿಯನ್ನು ಮಾಡಿ ನಾಯಿಗೆ ಹಾಕಿದರೆ ಅದೂ ಕೂಡ ತಿನ್ನಲಿಕ್ಕಿಲ್ಲ ಎಂದು ಹೇಳಿದರು. ಆ ಮೇಲೆ ತುಮಕೂರಿನಿಂದ ಜೋಳವನ್ನು ಮಂಗಳೂರಿಗೆ ಸಾಗಿಸಿದ್ದಾರೆ ಎಂದು ಹೇಳಿದರು. ಈ ಮಾನ್ಯ ಸಭೆಗೆ ಗೊತ್ತಿರುವ ಹಾಗೆ ತುಮಕೂರು ಪ್ರದೇಶದಲ್ಲಿ ಹೆಚ್ಚಿಗೆ ಜೋಳವನ್ನು ಬೆಳೆಯುವುದಿಲ್ಲ. ಆ ಪ್ರದೇಶದ ಮುಖ್ಯವಾದ ಬೆಳೆ ರಾಗಿ. ಹೀಗಿರುವಾಗ ಅವರ ಮಾತಿನಲ್ಲಿ ಎಷ್ಟರಮಟ್ಟಿಗೆ ನಿಜ ಇದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ.

ಶ್ರೀ ಕುಂದೂರು ರುದ್ರಪ್ಪ.—ಸ್ವಾಮಿ, ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ನಾಮೋಷಿಯವರು ತೋರಿಸಿದಂತಹ ಜೋಳ ಹಗೇವಿನಲ್ಲಿ ಇಟ್ಟಿದ್ದಂತಹ ಜೋಳ. ಅವರು ಆ ಜೋಳಕ್ಕೆ ನೀರು ಹಾಕಿಕೊಂಡು ತಂದು ಈ ಸಭೆಯಲ್ಲಿ ತೋರಿಸಿದರು.

ಶ್ರೀ ಗಂಗಾಧರ ನಾಮೋಷಿ.—ವಿಧಾನಸಭೆಯ ಹೊರಗಡೆ ಜೋಳವನ್ನು ಪ್ರದರ್ಶನಕ್ಕಾಗಿ ಇಟ್ಟಿದೆ. ಅದನ್ನು ಯಾರು ಬೇಕಾದರೂ ಹೋಗಿ ನೋಡಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಬಹುಶಃ ಮಾನ್ಯ ಸದಸ್ಯರಿಗೆ ಇರತಕ್ಕಂಥ ವಿಚಾರವನ್ನು ಹೇಳಿದರೆ ಸ್ವಲ್ಪ ಬೇಗ ಮನಸ್ಸು ಕದಡುತ್ತದೆ ಎಂದು ಕಾಣುತ್ತದೆ. ಇದರಲ್ಲಿ ಒಂದು ವಿಚಾರ, ವಿರೋಧ ಪಕ್ಷದ ಸದಸ್ಯರು ಅವಿಶ್ವಾಸ ನಿರ್ಣಯವನ್ನು ತಂದದ್ದು ಒಂದು ವಿಧದಲ್ಲಿ ಒಳ್ಳೆಯ ಅವಕಾಶವನ್ನು ನಮಗೆ ಒದಗಿಸಿಕೊಟ್ಟರು. ಈ ಒಂದು ಅವಿಶ್ವಾಸ ನಿರ್ಣಯ ಬರುವಂಥಾ ವೇಳೆಯಲ್ಲಿ ನಾನು ಭಾವವೆ ಮಾಡಿದ್ದೆ ಇವರ ಬತ್ತಳಿಕೆಯಲ್ಲಿ ಎಷ್ಟೆಷ್ಟು ಬಾಣಗಳು ಇರಬಹುದೋ ಎಂದು. ಆದರೆ ಈಗ ಇದುವರೆಗೂ ಮಾನ್ಯ ಸದಸ್ಯರು ಹೇಳಿದ್ದನ್ನು ನೋಡಿದರೆ ಅವರು ಹಿಂದೆ ಹೇಳಿದಂತಹ ವಿಚಾರ ಗಳನ್ನೇ ಹೇಳಿದ್ದಾರೆ. ಈ ವಿಚಾರಗಳಿಗೆ ಅನೇಕ ಸಾರಿ ಸರ್ಕಾರದವತಿಯಿಂದ ಉತ್ತರ ಕೊಟ್ಟಿದ್ದೇವೆ. ಈಗ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದು ಅಗತ್ಯ. ಶ್ರೀಮಾನ್ ಲಕ್ಕಪ್ಪನವರು ಒಂದು ವಿಚಾರವನ್ನು ಹೇಳಿದರು, ಅದೇನೆಂದರೆ, ಎಲ್ಲಾ ಮಂತ್ರಿಗಳೂ ರಾಜಾಜಿ ನಗರದಲ್ಲಿ ಮುಗಿಲು ಎತ್ತರದ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆಂದು ಹೇಳಿದರು. ಮತ್ತು ಅದಕ್ಕಾಗಿ ಲಕ್ಷಾಂತರ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದರು. ನನಗೆ ಗೊತ್ತಿರುವ ಹಾಗೆ ರಾಜಾಜಿನಗರದಲ್ಲಿ ರುವುದು ಒಬ್ಬ ಉಪಸಚಿವರ ಮನೆ ಮಾತ್ರ. ಬೇರೆ ಯಾರೂ ಮನೆಗಳನ್ನು ಕಟ್ಟಿಕೊಂಡಿಲ್ಲ. ಆ ಒಬ್ಬರು ಉಪಮಂತ್ರಿಗಳು 48 ಸಾವಿರ ರೂಪಾಯಿಗಳನ್ನು ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್ ನಲ್ಲಿ ಸಾಲ ತೆಗೆದುಕೊಂಡು ಅವರು ಮನೆಯನ್ನು ಕಟ್ಟಿಸಿದ್ದಾರೆ. ಆದ್ದರಿಂದ ಎಲ್ಲಾ ಮಂತ್ರಿಗಳೂ ರಾಜಾಜಿನಗರದಲ್ಲಿ ಮನೆಗಳನ್ನು ಕಟ್ಟಿಸಿದ್ದಾರೆ ಎನ್ನುವುದು ಉತ್ಪ್ರೇಕ್ಷೆಯ ಮಾತು. ದೇಶದಲ್ಲಿ ಜನಗಳು ತಮ್ಮ ಪ್ರತಿನಿಧಿಗಳನ್ನು ಪರೀಕ್ಷೆ ಮಾಡಬಲ್ಲರು. 208 ಜನ ಸದಸ್ಯರಿಗೂ ಕೂಡ ಆಯಾ ಕ್ಷೇತ್ರದ ಜನಗಳು ತಮ್ಮ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವಾಗ ವಿವೇಚಿಸಿ ಸರಿಯಾಗಿ ತಿಳಿದು ಕೊಂಡು ತಮ್ಮ ತೀರ್ಮಾನವನ್ನು ಕೊಡಬಲ್ಲರು. ಆ ರೀತಿ ತೀರ್ಮಾನವನ್ನು ಕೊಡತಕ್ಕಂಥ ಕಾಲ

(ಶ್ರೀ ಕೆ. ಪುಟ್ಟಸ್ವಾಮಿ)

ದೂರವಿಲ್ಲ. ಕೇವಲ ಕೆಲವು ತಿಂಗಳುಗಳು ಮಾತ್ರ ಉಳಿದಿದೆ. ಆಗ ಯಾರ ಯಾರ ಚರಿತ್ರೆ ಎಷ್ಟೆಷ್ಟು ಸ್ವಚ್ಛವಾಗಿದೆ ಎಂಬುದು ಗೊತ್ತಾಗುತ್ತದೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ವಿ. ರಾಮರಾವ್.—ಸ್ವಾಮಿ, ಈ ಚರ್ಚೆಯಲ್ಲಿ ಕಾಂಗ್ರೆಸ್ ಪಾರ್ಟಿಯ ವಿಚಾರದಲ್ಲಿ ಕೆಲವಾರು ಟೀಕೆಗಳನ್ನು ಮಾನ್ಯ ಸದಸ್ಯರು ಮಾಡಿದರು. ಕಾಂಗ್ರೆಸ್ ಪಾರ್ಟಿಯಲ್ಲಿ ಎರಡು ಗುಂಪುಗಳಾಗಿ ಅವರಿಂದ ಮುಂದೆ ಒಳ್ಳೆಯ ಭವಿಷ್ಯವಿಲ್ಲ ಎನ್ನುವ ವಿಷಯವನ್ನು ಅವರು ವ್ಯಕ್ತ ಪಡಿಸಿದರು. ಅವರು ಪ್ರಸ್ತಾಪ ಮಾಡಿದ ಪ್ರಕಾರ ಆಗುತ್ತದೆ ಎಂದು ನನಗೆ ಕಾಣಿಸುವುದಿಲ್ಲ. ಈ ಸಭೆಯಲ್ಲಿರತಕ್ಕ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಈ ಸಭೆಗೆ ಅವರು ಹೊಂದಿರತಕ್ಕ ಸದಸ್ಯತ್ವದ ಬಗ್ಗೆ ಇರತಕ್ಕ ಸ್ಥಾನಮಾನಗಳು, ಹಕ್ಕು ಬಾಧ್ಯತೆಗಳು, ಹೊಣೆಗಾರಿಕೆಗಳು ಮತ್ತು ಗೌರವಗಳು ಇವೆ. ಈ ದೆಶೆಯಿಂದ ಯಾರೊಬ್ಬ ಸದಸ್ಯರ ವಿಷಯದಲ್ಲೂ ನಾವು ಇವೊತ್ತಿನ ದಿವಸ ಒಂದು ಅವಹೇಳನದ ಮಾತುಗಳನ್ನು ಹೇಳಿದರೆ ಅದು ಸಲ್ಲದು ಎಂದು ಅನಿಸುತ್ತದೆ. ಮಾನ್ಯ ಸದಸ್ಯರಲ್ಲಿ ಕೇವಲ ಸಲಿಗೆ ಇರತಕ್ಕ ಕಾರಣದಿಂದ ಪ್ರಸ್ತಾಪ ಮಾಡಿ ಅವರ ಹೆಸರನ್ನು ಹೇಳುವುದಾದರೆ ಶ್ರೀಮಾನ್ ಮಾದಪ್ಪಗೌಡರು ಮತ್ತು ಶ್ರೀಮಾನ್ ಕರಿಯಪ್ಪನವರು ಹಿಂದೆ ಕಾಂಗ್ರೆಸ್ ಪಕ್ಷದಲ್ಲಿದ್ದು ಏನೋ ಕೆಲವು ಭಿನ್ನಾಭಿಪ್ರಾಯಗಳಿಂದ ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ಚುನಾವಣೆಯಲ್ಲಿ ಆರಿಸಿ ಬಂದು ಬೇರೆ ಸ್ಥಾನಗಳಲ್ಲಿ ಕುಳಿತುಕೊಂಡಿದ್ದಾರೆ. ಹಾಗೆಂದ ಮಾತ್ರಕ್ಕೆ ಅವರ ಸದಸ್ಯತ್ವದ ವಿಚಾರದಲ್ಲಾಗಲೀ, ಅವರ ವ್ಯಕ್ತಿತ್ವದ ವಿಚಾರದಲ್ಲಾಗಲೀ ಇಲ್ಲಿ ಕುಳಿತುಕೊಂಡಿರತಕ್ಕ ಸದಸ್ಯರಿಗೆ ಸದ್ಭಾವನೆ ಇಲ್ಲ ಎಂದು ಭಾವಿಸುವುದಕ್ಕಾಗುವುದಿಲ್ಲ. ಹಾಗೆಯೇ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಸದಸ್ಯರಲ್ಲಿ ಕೆಲವರು ಭಿನ್ನಾಭಿಪ್ರಾಯದ ದೆಶೆಯಿಂದ ಬೇರೆ ಒಂದು ಪಕ್ಷವನ್ನು ಮಾಡಬೇಕೆಂದು ಸಂಯುಕ್ತ ಸೋಷಿಯಲಿಸ್ಟ್ ಪಾರ್ಟಿ ಮಾಡಿದರು. ಆಗ ಆ ಪಾರ್ಟಿಯಲ್ಲಿದ್ದ ಕೆಲವರು ಕಾಂಗ್ರೆಸ್ಸಿಗೆ ಸೇರಿದರು. ಶ್ರೀಮಾನ್ ಗೋಪಾಲಗೌಡರು ಈ ದಿವಸ ಏಕಮಾತ್ರ ಸದಸ್ಯರಾಗಿ ಆ ಪಕ್ಷದ ಪ್ರತಿನಿಧಿಯಾಗಿ ಈ ಸಭೆಯಲ್ಲಿ ಇದ್ದಾರೆ. ಎಂದ ಮಾತ್ರಕ್ಕೇ ಅವರ ಸದಸ್ಯತ್ವದ ಹೊಣೆಗಾರಿಕೆ ಕಡಿಮೆಯಾಗಿಲ್ಲ. ಅವರ ವಿಷಯದಲ್ಲಿ ಯಾರೂ ಏನೂ ತಪ್ಪು ಭಾವನೆ ಹೊಂದಿಲ್ಲ. ಪ್ರತಿಯೊಬ್ಬ ಸದಸ್ಯರೂ ಸದಸ್ಯತ್ವದ ದೆಶೆಯಿಂದ ಉಂಟಾಗಿರತಕ್ಕ ಹೊಣೆಗಾರಿಕೆಯನ್ನು ಪಕ್ಷದ ಕಾರಣಕ್ಕೋಸ್ಕರ ಅಲ್ಲಗಳೆಯಬಾರದು, ಅದನ್ನು ಕಡಿಮೆ ಮಾಡಲೂ ಬಾರದು ಅನಿಸುತ್ತದೆ. ಆ ವಿಷಯವಾಗಿ ನಾನು ಹೆಚ್ಚು ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಒಂದು ಪಾರ್ಟಿಯ ಸದಸ್ಯರು ಇನ್ನೊಂದು ಪಾರ್ಟಿಗೆ ಹೋಗತಕ್ಕಂಥಾದ್ದು ಅವರವರ ಅಗತ್ಯತೆಗೆ ಸಂಬಂಧಪಟ್ಟ ವಿಷಯ.

ಇನ್ನು ಒಂದು ವಿಷಯ. ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಕಪ್ಪನವರು ಒಂದೆರಡು ವೈಯಕ್ತಿಕವಾಗಿ ಕಾಣಿಸತಕ್ಕಂಥ ಅಪಾದನೆಗಳನ್ನು ನನ್ನ ಮಟ್ಟಿಗೆ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅವರು ಮಾಡಿದಂಥ ಭಾಷಣದ ಪ್ರತಿಯಿಂದ ನನಗೆ ಇದು ಗೊತ್ತಾಗುತ್ತದೆ. ಅವರು ಈ ರೀತಿ ಹೇಳಿದ್ದಾರೆ. ಇದೇ ತುಮಕೂರು ಜಿಲ್ಲೆಯಲ್ಲಿ ಗೃಹ ಮಂತ್ರಿಗಳು ನೇರವಾಗಿ ತಮ್ಮ ಸಂಬಂಧಿಕರಾದಂಥ ಡೆಪ್ಯುಟಿ ಸೂಪರಿಂಟೆಂಡೆಂಟರನ್ನು ತಿಪಟೂರಿನಲ್ಲಿ ಹಾಕಿಸಿಕೊಂಡಿದ್ದಾರೆ. ಇವರ ಉದ್ದೇಶ ತುಮಕೂರಿನಲ್ಲಿ ವಿರೋಧಪಕ್ಷವನ್ನು ದಮನ ಮಾಡಬೇಕು, ಅಲ್ಲಿಯ ನಾಗರೀಕರನ್ನು ಬಂಧಿಸಬೇಕು, ಅವರ ಸಹಾಯಕ್ಕೆ ಯಾರು ಬಂದರೂ ಎನ್ನುವುದಾಗಿದೆ. ಅಲ್ಲಿಯ ಹೆಡ್ ಕಾನ್ ಸ್ಟೇಬಲ್, ಕಾನ್‌ಸ್ಟೇಬಲ್‌ಗಳು ಇಂತಹ ಕೆಲಸಗಳಲ್ಲಿ ತೊಡಗಿದ್ದಾರೆ. ಈ ರೀತಿ ಹಸ್ತಕ್ಷೇಪ ಮಾಡುವ ಗೃಹಮಂತ್ರಿಗಳಿಗೆ ಆಡಳಿತ ಮಾಡುವ ನೈತಿಕ ಅಧಿಕಾರ ಇದೆಯೆ ? ಯಾವ ಕ್ಷೇತ್ರದಿಂದ ನೇರವಾಗಿ ಗೆದ್ದು ಬಂದಿದ್ದಾರೆ? ನಾನು ಈ ದಿವಸ ಹೇಳುತ್ತಾ ಬಂದಿದ್ದೇನೆ. ವಿಧಾನಸೌಧದ ಸದಸ್ಯ ಸ್ಥಾನಕ್ಕೋಸ್ಕರ ನಾನು ಭಾಷಣ ಮಾಡುತ್ತಾ ಇಲ್ಲ. ಗೃಹಮಂತ್ರಿಗಳ ಪೋಲೀಸ್ ಹದ್‌ಬಸ್ತಿಗೆ ಹೆದರುತ್ತಾ ಇಲ್ಲ. ಸರ್ವತ್ಯಾಗಕ್ಕೂ ಕೂಡ ಸಿದ್ಧನಾಗಿದ್ದೇನೆ. ಇವರು ಯಾವ ನೈತಿಕ ಅಧಿಕಾರಹೊಂದಿದ್ದಾರೆ, ಎಲ್ಲಿ ನೋಡಿದರು ಹಸ್ತಕ್ಷೇಪ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಡಿ. ವೈ. ಎಸ್. ಪಿ. ಇವರು ಯಾವ ಜಾತಿಯವರು, ಸರ್ಕಲ್ ಇನ್‌ಸ್ಪೆಕ್ಟರ್ ಯಾವ ಜಾತಿಯವರು, ಇವರು ಯಾರಿಗೋಸ್ಕರ ರಾಜ್ಯಭಾರ ಆಳುತ್ತಾ ಇರುವುದು, ಯಾರ ರಕ್ಷಣೆಗೋಸ್ಕರ ಗೃಹಮಂತ್ರಿಗಳು ನೇರವಾಗಿ ಹಸ್ತಕ್ಷೇಪ ಮಾಡಿ, ಅಧಿಕಾರವನ್ನು ದುರುಪಯೋಗಪಡಿಸುವುದು ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ತಪ್ಪು ತಿಳುವಳಿಕೆ ಎಂದು ಕಾಣುತ್ತದೆ. ನನ್ನ ಸಂಬಂಧಿಕರು ಯಾರೂ ಪೋಲೀಸ್ ಅಧಿಕಾರಿಗಳು ಇಲ್ಲ. ಎರಡನೆಯದಾಗಿ ತುಮಕೂರು ಡಿಸ್ಟ್ರಿಕ್ಟ್‌ನಲ್ಲಿರುವ ಪೋಲೀಸ್ ಸೂಪರಿಂಟೆಂಡೆಂಟ್ ಐ. ಪಿ. ಎಸ್. ಆಫೀಸರ್ ಶ್ರೀ ಜಗನ್ನಾಥನ್ ಎನ್ನುವವರು. ಮದ್ರಾಸ್ ಸ್ಟೇಟಿನ ಐ. ಪಿ. ಎಸ್. ಆಫೀಸರು ನಮ್ಮ

ಸ್ಟೇಟ್‌ಗೆ ಅಲಾಟ್ ಆಗಿದ್ದಾರೆ. ಅಲ್ಲಿಯ ಡಿ. ವೈ. ಎಸ್. ಪಿ.ಯವರ ಹೆಸರು ಶ್ರೀ ದೊರೈ ಎಂದು. ಅವರು ಕ್ರಿಶ್ಚಿಯನ್, ಕೇರಳದವರೋ ಅಥವಾ ಮದ್ರಾಸಿನವರೋ. ಇನ್ನು ಇನ್‌ಸ್ಪೆಕ್ಟರ್ ಶ್ರೀ ಶ್ರೀನಿವಾಸನ್ ಅವರು ಆಂಧ್ರ ಪ್ರದೇಶದವರು. ಅವರಿಗೂ ನನಗೂ ಯಾವ ಸಂಬಂಧವೂ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ನಾನು ಹೇಳಿದ್ದು ತಿಪಟೂರ್ ಡಿ. ವೈ. ಎಸ್. ಪಿ. ಅವರ ವಿಚಾರ. ಅವರು ಪಾರ್ಲಿಮೆಂಟಿಗೆ ಅರ್ಜಿ ಹಾಕಿಕೊಂಡಿರುವ ಕಾಂಗ್ರೆಸ್ ಅಭ್ಯರ್ಥಿಗಳ ಸಂಬಂಧಿಕರು ಆಗಿದ್ದರೋ, ಅಲ್ಲವೋ ?

ಶ್ರೀ ಎಂ. ವಿ. ರಾಮರಾವ್.—ಪಾರ್ಲಿಮೆಂಟಿಗೆ ನಿಂತಾಗ ಏನಾಗುತ್ತದೆ ಎನ್ನುವ ಭಯವೋ ?

ಶ್ರೀ ಕೆ. ಲಕ್ಕಪ್ಪ.—ನಾನು ಯಾರಿಗೂ ಹೆದರಬೇಕಾಗಿಲ್ಲ. ನಾನು ಚುನಾಯಿಸಿ ಬಂದೇ ಬರುತ್ತೇನೆ ಎನ್ನುವ ಭರವಸೆ ಇದೆ. ಏನು ಮಾಡಿದರೂ ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಅಲ್ಲಿಯ ಡಿ. ವೈ. ಎಸ್. ಪಿ. ಅವರು ಪಾರ್ಲಿಮೆಂಟಿಗೆ ಅರ್ಜಿ ಹಾಕಿರುವವರ ಸಂಬಂಧಿಕರು ಅಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಿ.

ಶ್ರೀ ಎಂ. ವಿ. ರಾಮರಾವ್.—ಹಾಗಾದರೆ ನನ್ನ ಸಂಬಂಧಿ ಎಂದು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈಗ ಪಾರ್ಲಿಮೆಂಟ್ ಕ್ಯಾಂಡಿಡೇಟ್ ಆಗಿ ಅರ್ಜಿ ಹಾಕಿರುವವರಿಗೆ ಸಂಬಂಧಿಕರು ಎಂದು ಈಗ ಹೇಳುತ್ತಾ ಇದ್ದಾರೆ. ತಿಳಿಯದೆ ತಪ್ಪಾಗಿ ಹೇಳಬಹುದು. ಗೊತ್ತಿಲ್ಲದೆ ಮನಸ್ಸಿಗೆ ಬಂದಂತೆ ಹೇಳಿದರೆ ಏನು ಪ್ರಯೋಜನ ? ಆಮೇಲೆ ಮಾನ್ಯ ಸದಸ್ಯರಾದಂಥ ಶ್ರೀ ರೇವಣ ಸಿದ್ದಪ್ಪನವರನ್ನು ದಯವಿಟ್ಟು ಬನ್ನಿ ಎಂದು ಕರೆದು ತಿಪಟೂರಿನ ಡಿ. ವೈ. ಎಸ್. ಪಿ. ಯಾರು ಎಂದು ಕೇಳಿದೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—On a point of order. ಇದು ಬಹಳ ಗಹನವಾದ ವಿಚಾರ. ಶ್ರೀ ಲಕ್ಕಪ್ಪನವರು ಹೇಳಲಿಲ್ಲ ಎಂದು ಹೇಳುತ್ತಾರೆ. ಅವರು ಹೇಳಿದ್ದಾರೆ ಎಂದು ಟ್ರಾನ್ಸ್‌ಕ್ರಿಪ್‌ಷನ್ ತೆಗೆದುಕೊಂಡು ಸಭೆಯ ಮುಂದೆ ಓದುತ್ತಾರೆ. ಸದಸ್ಯರು ಹೇಳಿದ್ದು ತಪ್ಪೆ ? ಅಥವಾ ಬರವಣಿಗೆ ಮಾಡಿದವರ ತಪ್ಪೆ ? ಯಾರದು ತಪ್ಪು ಎಂದು ನಿಷ್ಕರ್ಷೆ ಮಾಡಬೇಕು. ಹೇಳಿದವರದ್ದು ತಪ್ಪೆ ಅಥವಾ ಕೇಳಿಕೊಂಡಿರುವವರದ್ದು ತಪ್ಪೆ ?

MR. SPEAKER.—Now it is a question of fact and not a point of order to know which version is correct, I will have to hold an elaborate enquiry into it.

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರಾದಂಥ ಶ್ರೀಮಾನ್ ರೇವಣಸಿದ್ದಪ್ಪನವರು ತಿಪಟೂರು ಕ್ಷೇತ್ರದಿಂದ ಆರಿಸಿ ಬಂದವರು. ಯಾರು ಡಿ. ವೈ. ಎಸ್. ಪಿ. ಎಂದು ಕೇಳಿದರೆ ಅವರ ಹೆಸರು ಗೊತ್ತಿಲ್ಲ ಎಂದು ಹೇಳಿದರು. ಶ್ರೀ ಕೆ. ಲಕ್ಕಪ್ಪನವರು ಅನುಮಾನ ಪರಿಚ್ಛೇದಕ್ಕೋಸ್ಕರ, ಡಿ. ವೈ. ಎಸ್. ಪಿ. ಯಾರೇ ಆಗಿರಲಿ, ಅವರಿಗೂ ನನಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳುತ್ತೇನೆ. "ಮಾನ್ಯ ಗೃಹಮಂತ್ರಿಗಳ ಸಂಬಂಧಿಯಾದ ತುಮಕೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತರಾಯರ ಮಗ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿ ಹೆಸರಿನಲ್ಲಿ ಪ್ರಸಾದ್ ಅಂಡ್ ಕಂಪನಿ ಎಂಬ ಸುಳ್ಳು ಹೆಸರಿನ ಬೋರ್ಡನ್ನು ಅಂಟಿಸಿರುವವರಿಗೆ ಸರ್ಕಾರದ ಅಧಿಕಾರವನ್ನು ದುರುಪಯೋಗಪಡಿಸಿ ಮೈಸೂರು ದೇಶದ ಸೋಪ್ ಫ್ಯಾಕ್ಟರಿಯ ಏಜೆನ್ಸಿಯನ್ನು ಕೊಟ್ಟಿದ್ದಾರೆ" ಎಂದು ಹೇಳಿದ್ದಾರೆ. ಇದು ನಿಜವಲ್ಲದ ವಿಷಯ, ನನಗೂ ಹನುಮಂತರಾಯರಿಗೂ ಯಾವ ವಿಧವಾದ ಸಂಬಂಧವೂ ಇಲ್ಲ. ಪ್ರಸಾದ್ ಕಂಪೆನಿಯ ವಿಷಯದ ಪ್ರಶ್ನೆ ಬಂದಂಥ ಕಾಲದಲ್ಲಿ, ನಾನು ಉತ್ತರ ಹೇಳಿದೆ. ಈ ಪ್ರಸಾದ್ ಅಂಡ್ ಕಂಪನಿಗೆ ಕೊಡಗು ಡಿಸ್ಟ್ರಿಕ್ಟ್‌ನ ಸೋಪ್ ಏಜೆನ್ಸಿ ಕೊಟ್ಟಿರುವುದು ಒಂದು ವರ್ಷವೂ ಆಗಿಲ್ಲ. ಅವರು 6 ತಿಂಗಳು ವ್ಯಾಪಾರ ನಡೆಸಿ 120 ರೂಪಾಯಿ ಕಮಿಷನ್ ಇದುವರೆಗೆ ತೆಗೆದುಕೊಂಡಿದ್ದಾರೆ. ಏನೋ ನನಗೆ ಸಂಬಂಧ ಕಲ್ಪಿಸಿ ಹೇಳುವುದಕ್ಕೆ ಬರುತ್ತಾರೆ. ಪ್ರಾಯಶಃ ರಾವ್ ಹೆಸರು ಬರುವ ಜನರು ಎಲ್ಲಾ ನನಗೆ ಸಂಬಂಧಿಗಳೆಂದು ತಿಳಿದುಕೊಂಡಿದ್ದಾರೆ ಎಂದು ಕಾಣುತ್ತದೆ (ನಗು), ಗರ್ಜಿ ಮರುಳಪ್ಪನವರು ಎರಡು ವರ್ಷದ ಹಿಂದೆ ಬಡ್ಜೆಟ್‌ನ ಮೇಲೆ ಚರ್ಚೆ ನಡೆದಂಥ ಕಾಲದಲ್ಲಿ, ಇಂತಹ ಅನುಮಾನಕ್ಕೆ ಗುರಿಯಾಗಿ ಒಂದು ಟೀಕೆಯನ್ನು ಮಾಡಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ ಮಾಡಿದಾಗ ಎಲ್ಲಾ ನನ್ನ ಜಾತಿಯವರಿಗೇ ಕೊಟ್ಟಿದ್ದೇನೆ ಎಂದು. ಆದರೆ, ಹೈದರಾಬಾದ್ ಕರ್ನಾಟಕದಲ್ಲಿ ಅಣ್ಣಾರಾವ್, ಗೋಪಾಲರಾವ್ ಎಂದು ಹೆಸರು ಇಟ್ಟುಕೊಳ್ಳುತ್ತಾರೆ, ಶಂಕರರಾವ್ ಎಂದು ಇಟ್ಟುಕೊಳ್ಳುತ್ತಾರೆ. ರಾವ್ ಎಂದು ಇಟ್ಟುಕೊಳ್ಳುವವರೆಲ್ಲಾ ನನ್ನ ಜಾತಿಯವರು ಎಂದು ಹೇಳಿದಹಾಗಾಯಿತು. ಶ್ರೀ ಲಕ್ಕಪ್ಪ

(ಶ್ರೀ ಎಂ. ವಿ. ರಾಮರಾವ್)

ನವರು ಹೇಳಿದ ವಿಷಯ ಸುಳ್ಳು ಹೆಸರಿನ ಬೋರ್ಡನ್ನು ಅಂಟಿಸಿರುವವರಿಗೆ ಸೋಪ್ ಫ್ಯಾಕ್ಟರಿ ಏಜೆನ್ಸಿ ಕೊಟ್ಟಿದ್ದಾರೆ ಎನ್ನುವುದು ನಿಜವಲ್ಲ, ಇದು ಸುಳ್ಳು. ಏತಕ್ಕೆ ಹೀಗೆ ಇದನ್ನೆಲ್ಲಾ ಹೇಳುತ್ತಿದ್ದಾರೆಂದು ಕುತೂಹಲ ಬಂದು ವಿಚಾರಿಸಿದೆ. ಇಲ್ಲದೆ ಇರತಕ್ಕ ಒಂದು ಫರ್ಮ್, ಅಮರ ಜ್ಯೋತಿ ಇಂಡಸ್ಟ್ರೀಸ್ ಎಂದು ಬೋರ್ಡ್ ತಗಲಿ ಹಾಕಿ, ಅವರಿಗೆ ಸ್ಟೈನ್‌ಲೆಸ್ ಸ್ಟೀಲ್ ಕೋಟಾ ಕೊಡಬೇಕು ಎಂದು ಮಾನ್ಯ ಸದಸ್ಯರು ಓಡಾಡಿದರು, ಅವರಿಗೆ ಕೊಡಲಿಲ್ಲ.

Sri K. LAKKAPPA.—I emphatically repudiate all the charges. It is casting an insinuation. It is all false to say that I had made any attempt regarding Amar Jyothi Industries. Let them go to the Court. I shall make a challenge.

Sri M. V. RAMARAO.—He can make any challenges.

MR. SPEAKER.—I will give chance to Sri Lakkappa for personal explanation.

ಶ್ರೀ ಎಂ. ವಿ. ರಾಮರಾವ್.—ಎತ್ತಿನಗಾಡಿ ಚಕ್ರಗಳನ್ನು ತಯಾರು ಮಾಡತಕ್ಕ ಕಾರ್ಖಾನೆಗೆ ಸ್ಟೈನ್‌ಲೆಸ್ ಸ್ಟೀಲ್ ಕೋಟಾ ಕೊಡುವುದಕ್ಕೆ ಅಮರ ಜ್ಯೋತಿ ಬೋರ್ಡ್ ತಗಲು ಹಾಕಿ ಡೈರಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್‌ನವರ ಹತ್ತಿರ ಹೋಗಿ ಕೇಳಿದರು. ಅವರು ಕೊಡಲಿಲ್ಲ. ಬಾಯಿಗೆ ಬಂದಹಾಗೆ ವ್ಯಾಜ್ಯ ಆಡಿ ಅವರನ್ನು ದೂಷಣೆ ಮಾಡಿ, ಇಲ್ಲಿಗೆ ಬಂದು ಇಲ್ಲಸಲ್ಲದ ಆರೋಪಣೆ ಮಾಡುತ್ತಿದ್ದಾರೆ.

Sri K. LAKKAPPA.—I emphatically deny the allegation. I have not started Amar Jyothi Industries and my people have not started it. I do not know how he got the information. It may be Amara Jyothi Industries elsewhere. How he is making all the allegations against me ? I wish the Hon'ble Home Minister had taken the challenge and let us go to the court.

ಶ್ರೀ ಎಂ. ವಿ. ರಾಮರಾವ್.—ಇದು ಹೇಗೆ ಗೊತ್ತಾಗುತ್ತದೆ ಎಂದು ಕೇಳುತ್ತಾರೆ. ಗೊತ್ತಾಗುವುದಿಲ್ಲ ಎಂದು ತಿಳಿದುಕೊಂಡು ಮಾಡಿದರು, ಈಗ ಗೊತ್ತಾಗಿ ಹೋಗಿದೆ.

Sri S. SIVAPPA.—If the Hon'ble Home Minister has known that Mr. Lakkappa is doing this for the last three years, why did he not bring this to the notice of the House before ? Why should he do character assassination of Mr. Lakkappa now ?

ಶ್ರೀ ಎಂ. ವಿ. ರಾಮರಾವ್.—ಇಲ್ಲದ ಸಲ್ಲದ ಮಾತುಗಳನ್ನು ಏತಕ್ಕೆ ಹೇಳುತ್ತೇನೆ ? ಅದು ಇವೊತ್ತು ಗೊತ್ತಾಯಿತು.

ಶ್ರೀ ಕೆ. ಲಕ್ಕಪ್ಪ.—ಅಧ್ಯಕ್ಷರೇ, ಗೃಹಮಂತ್ರಿಗಳು, ನಮ್ಮ ಜಿಲ್ಲೆಯಿಂದ ಬಂದವರು, ನಾವು ರಾಜಕೀಯ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದೇವೆ. ಈ ರಾಜಕೀಯ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳು ಇದ್ದರೂ ಕೂಡ, ಮಾನ್ಯ ಸಭೆಗೆ ಸದಸ್ಯರಾಗಿ ಬಂದಮೇಲೆ, ಯಾವ ಪ್ರತಿಫಲಾಪೇಕ್ಷೆಯನ್ನೂ ಬಯಸಿ, ನಾನು ಸರ್ಕಾರದ ಸವಲತ್ತುಗಳನ್ನಾಗಲಿ ಅಧಿಕಾರವನ್ನಾಗಲಿ ಯಾವ ವಿಚಾರದಲ್ಲೂ ಕೆಲಸ ಮಾಡಿಲ್ಲ. ನನ್ನ ಸ್ಥಾನದ ದುರುಪಯೋಗಪಡಿಸಿಕೊಂಡಿಲ್ಲ. ಬಹುಶಃ ರಾಜಕೀಯ ಬಣ್ಣದ ಕಾರಣದಿಂದ ಈ ತುಮಕೂರು ಜಿಲ್ಲೆಯಲ್ಲಿ ಪ್ರಜಾಸೋಷಿಯಲಿಸ್ಟ್ ಪಕ್ಷ ಪ್ರಬಲವಾಗಿದೆ ಎಂದು ಇದರ ರಾಜಕೀಯ ಭದ್ರತೆಯನ್ನು ಅವರು ಒಂದು ಕುಟಿಲೋಪಾಯದಿಂದ ಹತ್ತಿಕ್ಕಬೇಕೆಂದು ಬಹುಶಃ ಈ ಅಪಾದನೆಗಳನ್ನು ಮಾಡಿರಬೇಕು. ಆದರೆ ವೈಯಕ್ತಿಕವಾಗಿ ಈ ಅಮರ್ ಜ್ಯೋತಿ ಇಂಡಸ್ಟ್ರೀ ಬಗ್ಗೆ ಅವರು ನಾನು ಸ್ಥಾಪನೆ ಮಾಡಿದ್ದಾರೆ ಎನ್ನತಕ್ಕ ವಿಚಾರದಲ್ಲಿ......

7-00 P.M.

ಶ್ರೀ ಎಂ. ವಿ. ರಾಮರಾವ್.—ಸ್ಥಾಪನೆ ಮಾಡಿದ್ದಾರೆಂದು ನಾನು ಹೇಳಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಸಾರ್ವಜನಿಕ ಕ್ಷೇತ್ರದಲ್ಲಿ ನಾನು ಸದಸ್ಯನಾಗಿ ಸೇವೆ ಮಾಡತಕ್ಕ ಕಾಲದಲ್ಲಿ ಕಾನೂನನ್ನು ದುರುಪಯೋಗಪಡಿಸಿ ಸ್ಟೇನ್‌ಲೆಸ್ ಸ್ಟೀಲ್ ಕೋಟಾವನ್ನು ಪಡೆದು ನಾನು ದುರುಪಯೋಗಪಡಿಸುವುದು ಅಥವಾ ಈ ಸಂಸ್ಥೆಗೋಸ್ಕರ ತೆಗೆದುಕೊಂಡಿರುವುದು ನಿಜವಾಗಿದ್ದರೆ ನಾನು ಈ ಸಭೆಯ ಸದಸ್ಯತ್ವಕ್ಕೆ ಈ ದಿವಸವೇ ರಾಜೀನಾಮೆ ಕೊಡುತ್ತೇನೆ. ಅದೇ ರೀತಿ ಮಾನ್ಯ ಗೃಹಮಂತ್ರಿಗಳು ಇದರ ಬಗ್ಗೆ ವಿಚಾರಣೆ ಮಾಡಿ ಆಗ ಅವರಿಗೆ ಎಲ್ಲ ವಿಚಾರಗಳೂ ಅವರ ಅವಗಾಹನೆಗೆ ಬಂದು ಅವನ್ನು ಈ ಸಭೆಯ ಅವಗಾಹನೆಗೂ ತರಲಿ. ಅದು ನಿಜವಾಗಿದ್ದರೆ ಆಗಲೇ ನಾನು ರಾಜೀನಾಮೆ ಕೊಡುತ್ತೇನೆ, ಇಲ್ಲವಾದರೆ ಅವರು ರಾಜೀನಾಮೆ ಕೊಡಲಿ. ನಾನು ಸಾರ್ವಜನಿಕ ಜೀವನದಿಂದ ನಿವೃತ್ತಿಯಾಗಲು ತಯಾರಾಗಿದ್ದೇನೆ. ಈ ರೀತಿಯಾಗಿ ಜವಾಬುದಾರಿಯುತರಾದ ಗೃಹಮಂತ್ರಿಗಳು ನಿಜವಾಗಿಯೂ ಕೂಡ ಇಂತಹ ಅಪಾದನೆ ಮಾಡಬಾರದು. ಬಹುಶಃ ಅವರು ರಾಜಕೀಯಕ್ಕೋಸ್ಕರ ಮಾಡಿರಬಹುದು. ಆ ರೀತಿ ಮಾಡಬಾರದು ಎಂದು ನಾನು ಇಲ್ಲಿ ಅವರನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಆಹಾರ ಮಂತ್ರಿಗಳು ಮಾತಾಡುತ್ತಾರೆ.

ಶ್ರೀ ಬಿ. ಡಿ. ಜತ್ತಿ (ಆಹಾರಶಾಖಾ ಮಂತ್ರಿಗಳು).—ಸ್ವಾಮೀ, ಒಂದೇ ಒಂದು ವಿಷಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಅಣ್ಣಾರಾವ್‌ಗಣಮುಖಿಯವರು ಬಿಳಿ ಜೋಳದ ಮಾರಾಟದ ರೇಟಿನ ಬಗ್ಗೆ 52 ರೂಪಾಯಿಗಳಂತೆ ಕೊಂಡುಕೊಳ್ಳುತ್ತಾರೆ. 77 ರೂಪಾಯಿಗಳಂತೆ ಮಾರಾಟ ಮಾಡುತ್ತಿದ್ದಾರೆಂದು ಹೇಳಿದರು. ನಾವು ಮಾರಾಟ ಮಾಡುತ್ತಿರುವುದು ಸಬ್ಸಿಡಿ ಸೇರಿಸಿ 77ರಂತೆ ಮಾರಾಟವಾಗುತ್ತಿದ್ದರೂ ಒಂದು ಕಡೆ 62 ರೂಪಾಯಿಗಳಂತೆ ಮಾರಾಟವಾಗುತ್ತಿದೆ ಎಂದು ಹೇಳಿದರು. ಅವರಿಗೆ ಹೇಳಬೇಕಾದರೆ ಗುಲ್ಬರ್ಗಾ ಮಾರ್ಕೆಟ್ಟಿನಲ್ಲಿ 62 ರೂಪಾಯಿನಂತೆ ಸರಕಾರ ಮಾರಾಟ ಮಾಡಿಲ್ಲ. ಅಲ್ಲದೆ ಜೋಳದ costing sheets ಕೊಟ್ಟಿದೆ. ಅದರಲ್ಲಿ ಬೆಲೆಯನ್ನು ಕಡಿಮೆ ಮಾಡುವ ಉಪಾಯವನ್ನು ಯಾರಾದರೂ ಸರಿ, ನನಗೆ ತೋರಿಸಿಕೊಡಲಿ ಎಂದು ಹಿಂದೆ ಒಮ್ಮೆ ಇಲ್ಲಿ ತಿಳಿಸಿದ್ದೆ. ಅದು ಎಲ್ಲರಿಗೂ ನೆನಪಿರಬಹುದು. ಖರ್ಚು ಕಡಿಮೆ ಮಾಡುವಂತಹ ಯಾವ ತರಹದ ಯೋಜನೆಗಳನ್ನು ಇದುವರೆಗೆ ಯಾರೂ ನನ್ನಲ್ಲಿಗೆ ಕಳುಹಿಸಿಕೊಡಲಿಲ್ಲ. ಇದರ ಬಗ್ಗೆ ನಾವೇ ವಿಚಾರಮಾಡಿ ಎಷ್ಟು ಬೆಲೆ ಕಡಿಮೆ ಮಾಡಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡಿ ರೇಟುಗಳನ್ನು ನಿಗದಿ ಮಾಡುತ್ತಿದ್ದೇವೆ. ಗುಲ್ಬರ್ಗಾ ಓಪನ್ ಮಾರ್ಕೆಟ್ಟಿನಲ್ಲಿ 62 ರೂಪಾಯಿನಂತೆ ಮಾರಾಟವಾಗುತ್ತಿದೆ. ಸರಕಾರ ಮಾರಾಟ ಮಾಡುತ್ತಿರುವ ಬೆಲೆಗಿಂತಲೂ ಈ ಬೆಲೆ ಅಂದರೆ 62 ರೂಪಾಯಿ ಕಡಿಮೆ ಇದೆ. ಸರಕಾರದ ಉದ್ದೇಶ ಆದಷ್ಟು ಜನಕ್ಕೆ ಕಡಿಮೆ ರೇಟಿನಲ್ಲಿ ದವಸವನ್ನು ಒದಗಿಸುವುದೇ ಆಗಿದೆ. ಅವರಿಗೆ ಸರಿಯಾದ ರೇಟು ಗೊತ್ತಿಲ್ಲ ಎಂದು ತೋರುತ್ತೆ, ಬೇಕಾದರೆ ಹೇಳುತ್ತೇನೆ. ತಿಳಿದುಕೊಳ್ಳಬಹುದು. ಬೆಳಗಾಂ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುತ್ತಿರುವ ''ಮೂರು ತಿಂಗಳ'' ಜೋಳದ ಬೆಲೆ ಪಲ್ಲಾ ಒಂದಕ್ಕೆ 45 ರೂಪಾಯಿಗಳು ಇರುವುದು ಓಪನ್ ಮಾರುಕಟ್ಟೆಯಲ್ಲಿ ಸರ್ಕಾರದವರು ಮಾರಾಟ ಮಾಡುವ ದರಕ್ಕಿಂತಲೂ ಕಡಿಮೆ ಬೆಲೆಗೆ ಮಾರಾಟವಾಗುತ್ತಿದ್ದರೆ ಅದು ಸಂತೋಷದ ಸಂಗತಿ.

ಶ್ರೀ ರಾಮಕೃಷ್ಣಹೆಗಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಸ್ವಾಮೀ, ಈ ಸಲ ವಿರೋಧಪಕ್ಷದ ಸದಸ್ಯರು ಸರಕಾರದ ಮೇಲೆ ತಂದಂತಹ ಈ ಅವಿಶ್ವಾಸ ನಿರ್ಣಯ ಆಶ್ಚರ್ಯಕರವೂ ಅಲ್ಲ ಅನಿರೀಕ್ಷಿತವೂ ಅಲ್ಲ. ಕಳೆದ ಎರಡು ಮೂರು ವರ್ಷಗಳ ಅವಧಿಯಲ್ಲಿ ಪ್ರತಿಸಾರಿ ಸಭೆ ಸೇರಿದಾಗಲೂ ಇಂತಹ ಒಂದು ಅವಿಶ್ವಾಸ ನಿರ್ಣಯ ತರತಕ್ಕದ್ದು ಒಂದು ಸಂಪ್ರದಾಯವಾಗಿದೆ. ಮತ್ತು ಇದು ಕೊನೆಯ ಅಧಿವೇಶನವಾದುದರಿಂದ ಸ್ವಾಭಾವಿಕವಾಗಿಯೇ ನಾವು ನಿರೀಕ್ಷೆ ಮಾಡುತ್ತಿದ್ದೆವು ಇಂತಹ ಒಂದು ಅವಿಶ್ವಾಸ ನಿರ್ಣಯವನ್ನು ತರುತ್ತಾರೆ ಮತ್ತು ದೇಶದ ಆಡಳಿತದ ಬಗ್ಗೆ ಟೀಕೆ ಮಾಡುತ್ತಾರೆ ಎಂದು. ಅವರು ಕಳೆದ ನಾಲ್ಕು ವರ್ಷ ಆರು ತಿಂಗಳ ಅವಧಿಯಲ್ಲಿ ನಮ್ಮ ರಾಜ್ಯದಲ್ಲಿ ಆಗಿರುವ ಲೋಪದೋಷಗಳ ಬಗ್ಗೆ ಹೇಳಬೇಕೆಂದು ಇಂತಹ ಒಂದು ಅವಿಶ್ವಾಸ ನಿರ್ಣಯ ತರಬೇಕೆಂದು ಆ ಪಕ್ಷದವರು ಕಳೆದ ನಾಲ್ಕಾರು ದಿವಸಗಳಿಂದ ಇದಕ್ಕಾಗಿ ಏನು ಮಾಡಿದರು ಎನ್ನುವುದು ನಮಗೂ ಗೊತ್ತು. ಅವಿಶ್ವಾಸ ನಿರ್ಣಯ ತರುವ ಉದ್ದೇಶವಾದರೂ ಏನು ? ನನ್ನ ದೃಷ್ಟಿಯಲ್ಲಿ ಅವಿಶ್ವಾಸ ನಿರ್ಣಯ ತರುವ ಉದ್ದೇಶವಿರತಕ್ಕ ಸರಕಾರವನ್ನು ಉರುಳಿಸುವುದಕ್ಕಲ್ಲ ಮತ್ತು ಹಾಗೆ ಉರುಳಿಸುವುದಕ್ಕೆ ಸಾಧ್ಯವೂ ಇಲ್ಲ. ಸರಕಾರವು ತನಗೆ ವಹಿಸಿದಂತಹ ಜವಾಬುದಾರಿಗಳನ್ನು, ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿದೆಯೇ ಇಲ್ಲವೇ, ಇಲ್ಲದಿದ್ದರೆ ಯಾವ ರೀತಿಯಲ್ಲಿ ಅದು ತಪ್ಪು ಮಾಡಿದೆ ಎನ್ನುವುದರ ಬಗೆಗೆ ಜನತೆಯ ಗಮನ ಸೆಳೆಯುವ ಒಂದು ಉದ್ದೇಶಕ್ಕಾಗಿ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಉದ್ದೇಶದಿಂದ ಇಂತಹ ಅವಿಶ್ವಾಸ ನಿರ್ಣಯ ತಂದಿದ್ದರೆ ನಾನು ಇದನ್ನು ಸ್ವಾಗತಿಸುತ್ತೇನೆ. ಏಕೆಂದರೆ, ಇನ್ನು ಕೆಲವೇ ತಿಂಗಳುಗಳಲ್ಲಿ

(ಶ್ರೀ ರಾಮಕೃಷ್ಣ ಹೆಗಡೆ)

ನಾವೆಲ್ಲರೂ ಮುಂದೆ ರಾಜ್ಯದಲ್ಲಿ ಇರತಕ್ಕ ಎಲ್ಲ ರಾಜಕೀಯ ಪಕ್ಷಗಳವರೂ ಪುನಃ ಜನತೆಯ ಮುಂದೆ ಹೋಗಬೇಕಾಗುತ್ತದೆ. ಐದು ವರ್ಷಗಳ ಹಿಂದೆ ಜನತೆ ಯಾವ ನಿರ್ಣಯ ಕೊಟ್ಟಿತ್ತೋ, ಯಾವ ಪಕ್ಷಕ್ಕೆ ತನ್ನ ಬೆಂಬಲವನ್ನು ಕೊಟ್ಟಿತ್ತೋ ಅಂತಹ ಸರಕಾರದ ಪಕ್ಷವೂ ಇತರ ಪಕ್ಷಗಳೊಡನೆ ಚುನಾವಣೆಯ ರಂಗಕ್ಕೆ ಧುಮುಕಬೇಕಾದಂತಹ ಸಮಯ ಸನ್ನಿಹಿತವಾಗಿದೆ. ಇದು ಒಂದು ಕೊನೆಯ ಮತದಾನ ಏನಲ್ಲ. ಐದು ವರ್ಷಕ್ಕೊಮ್ಮೆ ಚುನಾವಣೆಗಳು ಬರುತ್ತವೆ. ಇದು ಇತರ ದೇಶಗಳಲ್ಲಿಯೂ ಬರುತ್ತದೆ ಎನ್ನುವುದನ್ನು ಗಮನದಲ್ಲಿಡಬೇಕಾದುದು ಅತ್ಯಗತ್ಯ. ಅದೇನೆಂದರೆ, ಜನ ತಮ್ಮ ಮತವನ್ನು ಯಾವ ಪಕ್ಷಕ್ಕೆ ಬೇಕಾದರೂ ಕೊಡಲಿ. ಆ ಪಕ್ಷ ಅಧಿಕಾರಕ್ಕೆ ಬರುತ್ತದೆ. ಇವೊತ್ತು ಕಾಂಗ್ರೆಸ್ಸು ಪಕ್ಷದ ಸರಕಾರವಿದೆ. ನಾಳೆ ಕಮ್ಯೂನಿಸ್ಟು ಸರಕಾರ ಬರಬಹುದು, ಇಲ್ಲ ಪಿ.ಎಸ್.ಪಿ. ಸರಕಾರ ಬರಬಹುದು, ಇಲ್ಲ ಜನಗಳು ಸೋಷಿಯಲಿಸ್ಟು ಪಕ್ಷಕ್ಕೆ ಮತ ಕೊಟ್ಟರೆ ಸೋಷಿಯಲಿಸ್ಟು ಸರಕಾರ ಬರಬಹುದು. ಇದು ಪ್ರಜಾಪ್ರಭುತ್ವ ಪದ್ಧತಿ. ಇದರಲ್ಲಿ ಎಲ್ಲರಿಗೂ ಅವಕಾಶವಿದೆ. ಯಾವ ಸರಕಾರವೇ ಬರಲಿ ಅಯಾ ಕಾಲದಲ್ಲಿ ಇದ್ದಂತಹ ಪರಿಸ್ಥಿತಿಗನುಗುಣವಾಗಿ ಅದರ ಒಂದು ಚೌಕಟ್ಟಿನಲ್ಲಿದ್ದು ಈ ದೇಶದ ಕೆಲಸ ಮಾಡಬೇಕಾಗಿ ಬರುತ್ತದೆ. ಈ ಒಂದು ಅಂಶವನ್ನು ಇಂತಹ ಒಂದು ನಿರ್ಣಯವನ್ನು ಚರ್ಚೆ ಮಾಡುವ ಕಾಲಕ್ಕೆ ಗಮನದಲ್ಲಿಟ್ಟುಕೊಂಡು ಈ ಚರ್ಚೆಯನ್ನು ಒಂದು ಯೋಗ್ಯ ಮಟ್ಟದಲ್ಲಿ ನಡೆಸಬೇಕು. ಇಷ್ಟನ್ನು ಪ್ರಾಸ್ತಾವಿಕವಾಗಿ ಹೇಳಿ, ಇಲ್ಲಿ ಮಾನ್ಯ ಸದಸ್ಯರು ಮುಖ್ಯವಾಗಿ ಕಳೆದ ಐದು ವರ್ಷದ ಅವಧಿಯಲ್ಲಿ ನಾವು ಮಾಡಿದಂತಹ ಸಾಧನೆಗಳಲ್ಲಿ ಯಾವ ಯಾವ ಲೋಪದೋಷಗಳು ಇವೆ ಎಂದು ಎತ್ತಿ ತೋರಿಸಿದ್ದಾರೋ ಅದರ ಬಗ್ಗೆ ನಾಲ್ಕಾರು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ.

ಮೊದಲನೆಯದಾಗಿ, ನಾವು ಹಾಗೂ ನೀವೂ ಎಲ್ಲ ಸೇರಿ ಐದು ವರ್ಷಗಳಿಗಾಗಿ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಕಳೆದ ಹದಿನೈದು ವರ್ಷಗಳ ಅವಧಿಯಲ್ಲಿ ಮೂರು ಯೋಜನೆಗಳನ್ನು ಮಾಡಿ ಅದನ್ನು ಕಾರ್ಯಗತ ಮಾಡಿದ್ದೇವೆ. ಎಷ್ಟರ ಮಟ್ಟಿಗೆ ತೃಪ್ತಿಕರವಾಗಿ ಇದು ಕಾರ್ಯಗತವಾಗುತ್ತಿದೆ ಅಥವಾ ಇಲ್ಲವೇ ಎನ್ನುವುದನ್ನು ಸರಕಾರಕ್ಕೆ ತೋರಿಸಿ ಕೊಡಬೇಕು. ಇದರ ಬಗ್ಗೆ ಯಾವ ಅಳತೆಯ ಕೋಲನ್ನು ಹಿಡಿದು ಹೇಳುತ್ತಾರೆ ಎನ್ನುವುದನ್ನು ನೋಡಬೇಕು. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಮೂರನೆ ಯೋಜನೆಗಾಗಿ 250 ಕೋಟಿ ನಿಗದಿಯಾಗಿರುವುದರಲ್ಲಿ ಸುಮಾರು 110 ಕೋಟಿಯಷ್ಟನ್ನು ನಮ್ಮ ರಾಜ್ಯ ಸರಕಾರ ತನ್ನದೇ ಆದ ಹಣದಿಂದ ಖರ್ಚು ಮಾಡಲು ಒಪ್ಪಿಕೊಂಡು ಇದೆ. ಈ 250 ಕೋಟಿ ರೂಪಾಯಿ ಯೋಜನೆ ಇವತ್ತಿನ ದಿವಸ ಎಷ್ಟು ಮಟ್ಟಿಗೆ ಕಾರ್ಯಗತವಾಗಿದೆ ಎಂದರೆ, ಈ ಅವಧಿಯಲ್ಲಿ 264 ಕೋಟಿ ರೂಪಾಯಿ ನಾವು ಖರ್ಚು ಮಾಡಿದ್ದೇವೆ. ದುಡ್ಡು ಖರ್ಚಾಗಿದ್ದರೆ ಅದಕ್ಕೆತಕ್ಕಂತೆ ಕೆಲಸವಾಗಿದೆ. ಮುಖ್ಯವಾಗಿ ಯಾವ ಯಾವ ಕ್ಷೇತ್ರಗಳಲ್ಲಿ ವಿಶೇಷವಾದ ಗಮನಾರ್ಹವಾದ ಕೆಲಸವಾಗಿದೆ ಎಂದು ನಾನು ಅಂಕಿಅಂಶಗಳ ಮುಖಾಂತರವಾಗಿ ಇಲ್ಲಿ ಹೇಳಬಯಸುತ್ತೇನೆ.

ವ್ಯವಸಾಯ ಮತ್ತು ಅದಕ್ಕೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳು. ನಾವು ಯೋಜನೆಯಲ್ಲಿ ಒದಗಿಸಿದಂತಹದು 41 ಕೋಟಿ ರೂಪಾಯಿ. ಒಟ್ಟು ಖರ್ಚಾದ ಹಣ 66.68 ಕೋಟಿ ರೂಪಾಯಿ. ಇರಿಗೇಶನ್ ಮತ್ತು ಪವರ್ ಇದರಲ್ಲಿ ನಾವು ಒದಗಿಸಿದ್ದು 110 ಕೋಟಿ ರೂಪಾಯಿ. ಖರ್ಚಾದದ್ದು ಒಂದು ನೂರು 20 ಲಕ್ಷ ರೂಪಾಯಿಗಳು.

ಇಂಡಸ್ಟ್ರೀಸ್ ಮತ್ತು ಮೈನಿಂಗ್. ಇದರಲ್ಲಿ 15 ಕೋಟಿ ಒದಗಿಸಿದರೆ 15 ಕೋಟಿ ಖರ್ಚಾಗಿದೆ. ಟ್ರಾನ್ಸ್‌ಪೋರ್ಟು ಮತ್ತು ಕಮ್ಯುನಿಕೇಶನ್. ಈ ವಿಚಾರದಲ್ಲಿ 13 ಕೋಟಿ 30 ಲಕ್ಷ ಒದಗಿಸಿದರೆ, 22 ಕೋಟಿ 46 ಲಕ್ಷ ಖರ್ಚಾಗಿದೆ. ಈ ಅಂಕೆ ಸಂಖ್ಯೆಗಳು ಏನು ತೋರಿಸುತ್ತವೆ ಮಾನ್ಯ ಸದಸ್ಯರು ಹೇಳುತ್ತಾರೆ ದುಡ್ಡು ಖರ್ಚಾಗಿದೆ, ಕೆಲಸ ಎಲ್ಲಿ ಆಗಿದೆ ಎಂದು. ಆ ಮಾತನ್ನು ಅವರು ಬಾಲಕರಿಗೆ ಹೇಳಬೇಕು. ಒಂದು ಫಿನಾನ್ಷಿಯಲ್ ಟಾರ್ಗೆಟ್ ಇನ್ನೊಂದು ಫಿಸಿಕಲ್ ಟಾರ್ಗೆಟ್. ಅದರದ್ದೂ ಅಂಕೆಸಂಖ್ಯೆ ಇದೆ. ಅದನ್ನು ನಿಮಗೆ ತಾಳ್ಮೆ ಇದ್ದರೆ ಓದುತ್ತೇನೆ. ಅಂಕೆ ಸಂಖ್ಯೆಗಳನ್ನು ಇನ್ನೊಮ್ಮೆ ಅವಕಾಶ ಬಂದಾಗ ಹೇಳುತ್ತೇನೆ. ಶ್ರೀಮಾನ್ ಶಿವಪ್ಪನವರು ಕಳೆದ ಐದು ವರ್ಷಗಳಲ್ಲಿ ಯಾವುದೇ ಔದ್ಯೋಗಿಕ ಬೆಳವಣಿಯಾಗಿಲ್ಲವೆಂದು ಬಲವಾದ ವಾದ ಮಾಡಿದರು. ಐದು ವರ್ಷಗಳಲ್ಲಿ ಔದ್ಯೋಗಿಕ ಬೆಳವಣಿಗೆಗೆ ಮುಖ್ಯವಾದಂತಹ ಒಂದು ಅವಶ್ಯಕತೆ ವಿದ್ಯುಚ್ಛಕ್ತಿ ಎಂಬುದನ್ನು ನಾವು ಮರೆಯಕೂಡದು. ಕಳೆದ ಒಂದುವರೆ ವರ್ಷದ ಹಿಂದಿನವರೆಗೂ, ಶರಾವತಿಯ ವಿದ್ಯುಚ್ಛಕ್ತಿ ಉತ್ಪಾದನೆಯಾಗುವವರೆಗೂ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಬಹಳವಾಗಿತ್ತು. ವಿದ್ಯುಚ್ಛಕ್ತಿ ಯಾವ ರಾಜ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಗುವುದಿಲ್ಲವೋ, ಆ ರಾಜ್ಯ ಹೆಚ್ಚು ಉತ್ತಮವಾಗಿ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಹೊಸ ಉದ್ದಿಮೆಗಾರರು

ಬಂದು ಯಾವುದೇ ಉದ್ದಿಮೆ ಸ್ಥಾಪನೆ ಮಾಡುವುದಕ್ಕೆ ಬರುವಾಗ ಅವರು ಮೊದಲು ಕೇಳುವುದು ಎಂದರೆ, ವಿದ್ಯುಚ್ಛಕ್ತಿ ಎಷ್ಟು ಇದೆ, ಮತ್ತು ಯಾವ ದರದಲ್ಲಿ ಒದಗಿಸುತ್ತಾರೆ ಎಂದು. ಆದ್ದರಿಂದ ಮೊದಲನ ಮೂರು ವರ್ಷಗಳಲ್ಲಿ ನಮ್ಮ ಪ್ರಗತಿಯು ಬಹಳ ಕುಂಠಿತವಾಗಿತ್ತು. ಆದರೂ ಕೂಡ ಐದು ವರ್ಷದ ಬೆಳವಣಿಗೆಯನ್ನು ನೋಡಿದರೆ, ಈ ಅವಧಿಯಲ್ಲಿ ದೊಡ್ಡ ಪ್ರಮಾಣದ, ಮಧ್ಯಮ ಪ್ರಮಾಣದ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಒಟ್ಟು ಹಾಕಿದಂತಹ ಬಂಡವಾಳ ಸುಮಾರು 67 ಕೋಟಿ ರೂಪಾಯಿ. ಮತ್ತು ಈ ಅವಧಿಯಲ್ಲಿ ನಾವು ನಮ್ಮ ಇಡೀ ದೇಶದ ಅಭಿವೃದ್ಧಿ ಮತ್ತು ನಮ್ಮ ರಾಜ್ಯದ ಅಭಿವೃದ್ಧಿಯನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿದರೆ, ಅದರಲ್ಲೂ ನಾವು ಹಿಂದೆ ಬಿದ್ದಿಲ್ಲ. ಇಡೀ ದೇಶದ ಅಭಿವೃದ್ಧಿ 34.02 ಇದ್ದರೆ, ನಮ್ಮದು ಅದಕ್ಕಿಂತ ಸ್ವಲ್ಪ ಹೆಚ್ಚು ವೇಗದಲ್ಲಿ ಅಭಿವೃದ್ಧಿಯಾಗಿದೆ ಎಂಬುದನ್ನು ಅಂಕೆಸಂಖ್ಯೆಗಳ ಮುಖಾಂತರ ತಿಳಿಸಬಯಸುತ್ತೇನೆ.

Sri S. SIVAPPA.—Will you please tell me what is the *per capita* income of India ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ನಾನು ಬಹಳ ವಿನಯದಿಂದ ಕೇಳಿಕೊಳ್ಳುವುದೇನೆಂದರೆ, ನಾನು ಆಡುವ ಮಾತನ್ನು ಕೇಳಬೇಕು. ಕೊನೆಗೆ ಏನಾದರೂ ಇದ್ದರೆ ಕೇಳಬಹುದು. ಈಗ 1960—61ನೇ ಇಸವಿಯಲ್ಲಿ ನಮ್ಮ ರಾಜ್ಯದ ಒಟ್ಟು ಔದ್ಯೋಗಿಕ ಉತ್ಪಾದನೆಯ ಕಿಮ್ಮತ್ತು 84 ಕೋಟಿ ಇದ್ದರೆ, ಅದು ಈಗ 65-66ನೇ ಇಸವಿಯಲ್ಲಿ ಉತ್ಪಾದನೆಯ ಕಿಮ್ಮತ್ತು 115 ಕೋಟಿ ರೂಪಾಯಿಗಳು.

ಇನ್ನು ಹೆಚ್ಚಿನ ವಿವರಗಳನ್ನು ಕೊಡುವುದಕ್ಕೆ ಬಯಸುವುದಿಲ್ಲ. ಈ ಅಂಕೆಸಂಖ್ಯೆಯಿಂದ ಏನು ಗೊತ್ತಾಗುತ್ತದೆ ಎಂದರೆ, ಕಳೆದ ಐದು ವರ್ಷಗಳಿಂದ ನಾವು ಸಾಧಿಸಿದ ಪ್ರಗತಿ ತೃಪ್ತಿಕರವಾಗಿದೆ ಮತ್ತು ನಮ್ಮ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಸಮಾಧಾನಕರವಾದಂತಹ ತೃಪ್ತಿಕರವಾದಂತಹ ಪ್ರಗತಿ ಆಗಿದೆ ಎಂಬುದು ಗೊತ್ತಾಗುತ್ತದೆ.

ಎರಡನೆಯ ವಿಚಾರ. ಮಾನ್ಯ ಶ್ರೀ ದುಗ್ಗಪ್ಪನವರು ಒಂದು ಮಹತ್ವದ ವಿಚಾರ ಪ್ರಸ್ತಾಪಿಸಿದರು. ಶ್ರೀ ದುಗ್ಗಪ್ಪನವರು ನಮ್ಮ ಸ್ನೇಹಿತರಾಗಿ ಈ ಕಡೆ ಕೂಡುತ್ತಿದ್ದರು. ಆದರೆ, ಅಥಾವುದೋ ಮನಸ್ತಾಪದಿಂದ, ಅಥವಾ ಭಿನ್ನಾಭಿಪ್ರಾಯದಿಂದ ನಮ್ಮ ಪಕ್ಷವನ್ನು ಅಗಲಿ ಹೋಗಿದ್ದಾರೆ. ಒಂದು ಗಾದೆ ಇದೆ—"a convert is more fanatic" ಎಂದು ಅಧ್ಯಕ್ಷರೇ, ನಾನು ವೈಯಕ್ತಿಕವಾಗಿ ಯಾವ ಆರೋಪವನ್ನು ಮಾಡುತ್ತಾ ಇಲ್ಲ. ಬಹುಶಃ ಅವರ ಹೃದಯದಲ್ಲಿ ಅನೇಕ ವಿಚಾರಗಳು ಹತ್ತಿಕ್ಕಲ್ಪಟ್ಟಿವೆಯೋ ಎಂದು ಗೊತ್ತಿಲ್ಲ. ಕಳೆದ ಐದು ವರ್ಷಗಳಲ್ಲಿ ಹರಿಜನ ಗಿರಿಜನರ ಅಭಿವೃದ್ಧಿಗೆ ಏನೋ ಮಾಡಿದ್ದಾರೆ, ಅದು ಸ್ವಲ್ಪ ಕೂಡ ತೃಪ್ತಿಕರವಾಗಿ ನಡೆದಿಲ್ಲ ಮೂರುವರೆ ಕೋಟಿ ರೂಪಾಯಿ ಲೈಫ್ ಇನ್‌ಶೂರೆನ್ಸ್ ಕಾರ್ಪೊರೇಶನ್‌ನಿಂದ ತಂದಿದ್ದಾರೆ ನಿಜ, ಆದರೆ ಯಾರಿಗೂ ಸ್ಯಾಂಕ್ಷನ್ ಮಾಡಿಲ್ಲ ಎಂದು ಹೇಳಿದರು. ನಾನು ಕೇವಲ ಒಂದೇ ಮಾತಿನಲ್ಲಿ ಅವರ ಮಾತು ಸರಿಯಲ್ಲವೆಂದು ಹೇಳುತ್ತೇನೆ. ಕಳೆದ ಐದು ವರ್ಷಗಳಲ್ಲಿ 1961-62 ರಿಂದ 65-66 ರವರೆಗೆ ಹರಿಜನ ಗಿರಿಜನರಿಗೆ ಮನೆಕಟ್ಟುವ ಸಲುವಾಗಿ ಒದಗಿಸಿದ್ದು ಒಟ್ಟು ಹಣ 36 ಲಕ್ಷ ರೂಪಾಯಿ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಲ್ಪ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟು ನೋಡಿ ಸ್ವಾಮಿ.

Mr. SPEAKER.—If there is any Scope for me to give chance for one or two clarifications, even that is being wiped out.

ಶ್ರೀ ರಾಮಕೃಷ್ಣ ಹೆಗಡೆ.—ಲೈಫ್ ಇನ್‌ಶ್ಯೂರೆನ್ಸ್ ಕಾರ್ಪೊರೇಶನಿಂದ ತಂದಂತಹ ಹಣದಲ್ಲಿ ಈಗಾಗಲೆ ಒಂದು ಕೋಟಿ ರೂಪಾಯಿಯಷ್ಟು ಹಣವನ್ನು ಮಂಜೂರು ಮಾಡಿದ್ದಾರೆ. ಇದರಿಂದ ಈ ವಿಚಾರದಲ್ಲೂ ಕೂಡ ಸರ್ಕಾರ ಅಲಕ್ಷ್ಯ ಮಾಡಿಲ್ಲ ಎನ್ನುವುದು ವಿದಿತವಾಗುತ್ತದೆ.

ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಗೋಪಾಲ ಗೌಡರು ಬಹು ತರ್ಕ ಬದ್ಧವಾಗಿ ಮಾತನ್ನಾಡಿದ್ದಾರೆ. ನಿಜವಾಗಿಯೂ ನನಗೆ ಸಂತೋಷವಾಯಿತು. ಅವರ ಭಾಷಣ ಅಷ್ಟು ತೀಕ್ಷ್ಣವಾಗಿರಲಿಲ್ಲ, ಕೆಳಮಟ್ಟದ ಭಾಷಣವಾಗಿರಲಿಲ್ಲ. ಅವರ ಅಭಿಪ್ರಾಯ ಭಿನ್ನವಾಗಿರಬಹುದು ಆದರೆ ಅಭಿಪ್ರಾಯ ವ್ಯಕ್ತಮಾಡುವಾಗ್ಗೆ ಪ್ರತಿಯೊಬ್ಬ ಸದಸ್ಯರು ಒಂದು ಲಕ್ಷ ಜನರನ್ನು ಪ್ರತಿನಿಧಿಸುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದುದರಿಂದ ಅಭಿಪ್ರಾಯ ವ್ಯಕ್ತ ಮಾಡುವಾಗ ಸಂಪೂರ್ಣ ಜವಾಬ್ದಾರಿಯನ್ನು ಅರಿತು ಮಾಡತಕ್ಕಂಥಾದ್ದು ಅಗತ್ಯ. ನಾನು ಅವರನ್ನು ಅಭಿನಂದನೆ ಮಾಡುತ್ತೇನೆ. ಅವರ ಭಾಷಣ ಎಷ್ಟೇ ಗ್ರಾಹ್ಯವಿರಲಿ, ಅಗ್ರಾಹ್ಯವಿರಲಿ, ನಾವು ಒಪ್ಪಲಿ ಒಪ್ಪದೇ ಇರಲಿ

(ಶ್ರೀ ರಾಮಕೃಷ್ಣ ಹೆಗಡೆ)

ಅವರು ಭಾಷಣದ ಒಂದು ಮಟ್ಟ ಕಾಯ್ದುಕೊಂಡು ಬಂದಿದ್ದಾರೆ. ನಾಲ್ಕೈದು ಮಹತ್ವದ ವಿಚಾರಗಳನ್ನು ಹೇಳಿದರು. ನಮ್ಮಲ್ಲಿ ಜನತೆಯ ವಿಶ್ವಾಸ ಇಲ್ಲಾ ಎಂದು ಅವರು ವಾದಮಾಡಿದರು. ಹೊಸ ರಾಜ್ಯ ಅಸ್ತಿತ್ವಕ್ಕೆ ಬಂದು ಹತ್ತು ವರ್ಷಗಳಾದರೂ ಕೂಡ ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇರಬೇಕು ಎಂದು ಹೇಳುವುದರ ಬಗೆಗೆ ಇನ್ನೂ ಸರಕಾರ ಒಂದು ನಿರ್ಧಾರಕ್ಕೆ ಬಂದಿಲ್ಲ ಎಂದು ಹೇಳಿದರು. ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ಹೆಸರು ಬದಲಿಸುವ ವಿಚಾರ ಒಮ್ಮತದಿಂದ ನಿರ್ಧಾರವಾದರೆ ಅದಕ್ಕೆ ಯಾವ ಬೆಲೆ ಇರುತ್ತದೆಯೋ, ಅದಕ್ಕೆ ಎಷ್ಟು ಸೌಂದರ್ಯ ಬರುತ್ತದೆಯೋ, ಅದು ಬರಿಯ ಬಹು ಮತದಿಂದ ನಿರ್ಣಯ ಮಾಡಿದರೆ ಬರುವುದಿಲ್ಲ, ಹೆಸರಿನಲ್ಲಿ ಏನಿದೆ ಎಂಬುದಕ್ಕೆ ಒಂದು ಮಾತು ಹೇಳುತ್ತೇನೆ. ಹೆಸರು ಇದೊಂದು ಮಹತ್ವವಾದುದು. ಆದರೆ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಇದಕ್ಕೂ ಹೆಚ್ಚು ಪ್ರಾಮುಖ್ಯವಾದ ಸಮಸ್ಯೆಗಳನ್ನು ನಾವು ಬಿಡಿಸಬೇಕಾಗಿದೆ. ಈ ರೀತಿ ಪರಿಸ್ಥಿತಿ ಇರುವುದರಿಂದ ವಾದ ಮಾಡುವುದು, ಅದಕ್ಕಾಗಿ ಕಾಲಕ್ಷೇಪ ಮಾಡುವುದು ಒಳ್ಳೆಯದಲ್ಲ, ಆದುದರಿಂದ ಈ ವಿಚಾರವನ್ನು ಆ ಕಡೆಯ ಸದಸ್ಯರಾಗಲಿ ಸರ್ಕಾರವಾಗಲಿ ಸದ್ಯಕ್ಕೆ ಕೈ ಬಿಡಬೇಕು.

ಆ ಮೇಲೆ ಶ್ರೀಮಾನ್ ಗೋಪಾಲ ಗೌಡರು ರಾಜ್ಯದ ಗಡಿಗಳನ್ನು ರಕ್ಷಣೆ ಮಾಡುವುದರಲ್ಲಿ ಸರಕಾರ ವಿಫಲವಾಗಿದೆ ಎಂದು ಹೇಳಿದರು. ಯಾವ ಆಧಾರದ ಮೇಲೆ ಯಾವ ತತ್ವದ ಮೇಲೆ ರಾಜ್ಯಗಳ ಪುನರ್ವಿಂಗಡಣೆಯಾಗಬೇಕು ಎಂಬುದಕ್ಕೆ ರಾಜ್ಯ ಪುನರ್ವಿಂಗಡಣ ಆಯೋಗದವರು ಕೇಂದ್ರ ಸರಕಾರಕ್ಕೆ ಒಂದು ವರದಿ ಕೊಟ್ಟರು. ಆ ವರದಿಯ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆ ಮಾಡಿದ್ದಾರೆ. ಈ ಬಗ್ಗೆ ಎರಡು ಅಭಿಪ್ರಾಯ ಇವೆ. ಒಂದು ಅಭಿಪ್ರಾಯದಲ್ಲಿ ಯಾವ ತೀರ್ಮಾನ ಕೇಂದ್ರ ಸರಕಾರದ ಪಾರ್ಲಿಮೆಂಟಿನಲ್ಲಿ ಆಗಿದೆಯೋ ಆ ತೀರ್ಮಾನವೇ ಕೊನೆಯ ತೀರ್ಮಾನ ಅದನ್ನು ಒಪ್ಪಿಕೊಳ್ಳಬೇಕು ಎಂದು. ಅದರ ಬಗ್ಗೆ ಯಾವ ತಂಟೆ, ಮತ ಭೇದ ಎತ್ತ ಕೂಡದು ಎಂದು ಒಂದು ಅಭಿಪ್ರಾಯ. ಇನ್ನು ಎರಡನೇ ಅಭಿಪ್ರಾಯ ಅಂದರೆ, ರಾಜ್ಯ ಪುನರ್ವಿಂಗಡಣ ಆಯೋಗವು ಸಣ್ಣ ಪುಟ್ಟ ಗಡಿ ಹೊಂದಾಣಿಕೆಯ ಬಗ್ಗೆ ಗಮನಿಸಿಲ್ಲ; ಆದುದರಿಂದ ಅದು ಅವತ್ತು ಆಗದೇ ಇರುವುದರಿಂದ ಈ ವಿಚಾರ ಎತ್ತಬಹುದು ಎಂಬುದು ಎರಡನೇ ಅಭಿಪ್ರಾಯ. ನಮ್ಮ ಸರಕಾರದ ಧೋರಣೆ ಮೊದಲಿನಿಂದಲೂ ಒಂದೇ ಇದೆ. ಇವತ್ತೂ ಅದೇ ಧೋರಣೆಯಾಗಿದೆ. ಅದೇನೆಂದರೆ, ಒಂದು ಸಲ ಗಡಿ ವಿಚಾರದಲ್ಲಿ ಅಂತಿಮ ತೀರ್ಮಾನವಾಗಿದೆ, ಈ ಗಡಿ ತಂಟೆ ಪುನಃ ನಾವು ಎತ್ತಲಿಕ್ಕೆ ಸಾಧ್ಯವಿಲ್ಲ. ಕೆಲವು ಸಣ್ಣ ಪುಟ್ಟ ಹೊಂದಾಣಿಕೆಯ ಬಗ್ಗೆ ಮೈಸೂರು ಸರಕಾರ ಸಿದ್ಧವಿದೆ. ಮೈಸೂರು ರಾಜ್ಯದ ಹೊರಗಡೆ ಕನ್ನಡ ಮಾತನಾಡತಕ್ಕಂಥ ಲಕ್ಷಾಂತರ ಜನ ಇದ್ದಾರೆ. ಅವರ ಮನಸ್ಸಿನಲ್ಲಿ ನಾವೆಲ್ಲರೂ ಕನ್ನಡ ರಾಜ್ಯದಲ್ಲಿ ಸೇರಬೇಕು ಎಂದು ಇದೆ. ಇಲ್ಲಿ ಸಹ ಆ ಜನರನ್ನು ಸ್ವಾಗತಿಸಬೇಕು ಎಂಬ ಅಭಿಲಾಷೆಯಿದೆ. ಇದನ್ನು ಘರ್ಷಣೆಯಿಂದ ಸಾಧನೆ ಮಾಡಬೇಕೆಂದು ನಾವು ಬಯಸಿಲ್ಲ. ನಮ್ಮ ರಾಜ್ಯದ ಗಡಿಯ ಹೊರಗಡೆ ಮುಖ್ಯವಾಗಿ ಮಹಾರಾಷ್ಟ್ರದಲ್ಲಿ ಎಷ್ಟೋ ಘರ್ಷಣೆಯಾದರೂ ಕೂಡ ನಮ್ಮ ಜನತೆ ಅದಕ್ಕೆ ಅವಕಾಶ ಕೊಟ್ಟಿಲ್ಲ. ಇದು ನಮ್ಮ ಸಂಸ್ಕೃತಿ ಎಂದೂ, ಇದು ಗ್ರಾಹ್ಯವೆಂದೂ ಹೇಳುತ್ತೇನೆ. ಕೇಂದ್ರ ಸರಕಾರದವರು ಈ ಗಡಿ ತಂಟೆಯ ವಿಚಾರದಲ್ಲಿ ಒಂದು ಆಯೋಗ ನೇಮಿಸಿದ್ದಾರೆ. ಸಭೆಗೆ ಒಂದು ಮಾತು ಹೇಳ ಬಯಸುತ್ತೇನೆ. ಇದರಿಂದ ನಮ್ಮ ನಾಡಿಗೆ ಅಹಿತವಾಗುತ್ತದೆ ಎಂದು ಭಯ ಪಡಬೇಕಾದ ಅಗತ್ಯವಿಲ್ಲ. ಈ ಆಯೋಗ ರಚನೆಯಾಗುವಾಗ, ರಾಜ್ಯ ಪುನರ್ವಿಂಗಡಣ ಆಯೋಗದವರು ಯಾವ ತತ್ವವನ್ನು ಯಾವ ತತ್ವದ ಮೂಲಭೂತವಾದ ಆಧಾರದ ಮೇಲೆ ಮಾಡಿದ್ದಾರೋ ಅದರಂತೆಯೇ ಈ ಆಯೋಗದವರು ನಡೆಯ ಬೇಕು ಎಂದು ಅವರಿಗೆ ಹೇಳಿದ್ದಾರೆ. ಆದುದರಿಂದ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಕಳವಳ ಪಡತಕ್ಕಂಥ ಅಗತ್ಯವಿಲ್ಲ ಎಂದು ಹೇಳಲು ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಕೇವಲ ಎರಡು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಲು ಬಯಸುತ್ತೇನೆ. ಇಂದಿನ ದಿವಸ ನಮ್ಮ ರಾಜ್ಯದಲ್ಲಿ ಪ್ರಗತಿ ಆಗಲಿಲ್ಲ, ಆಗಲಿಲ್ಲ, ಆಗಲಿಲ್ಲ ಎಂದು ಪುನಃ ಪುನಃ ಪುನಃ ಒಂದೇ ಮಾತನ್ನು ಹೇಳಿದ್ದಾರೆ. ಎಷ್ಟೋ ಪ್ರಗತಿಯಾಗಿದ್ದರೂ ಕೂಡ ಇಂಥ ಮಾತನ್ನು ಕೇಳಿ ಮನಸ್ಸಿನಲ್ಲಿ ಪ್ರಗತಿಯಾಗಲಿಲ್ಲ ಎಂಬ ಭಾವನೆ ಉಳಿಯುತ್ತದೆ. ಈ ರೀತಿ ಹೇಳುವುದು ದೊಡ್ಡ ಗುಣ ಅಲ್ಲ. ಇದು ಸರಿಯಲ್ಲ. ಮಾನ್ಯ ಶಿವಪ್ಪನವರು, ಗೋಪಾಲಗೌಡರು ಅನೇಕ ವಿರೋಧ ಪಕ್ಷದ ಸದಸ್ಯರು ಒಂದು ಮಾತನ್ನು ಹೇಳಿದರು. ಕೇಂದ್ರ ಸರಕಾರದ ಮೇಲೆ ಮೈಸೂರು ರಾಜ್ಯವು ಪ್ರಭಾವ ಬೀರಿ ಹೆಚ್ಚು ಹೆಚ್ಚು ಹಣ ಸಹಾಯ ಪಡೆದು ಹಣ ತರತಕ್ಕಂಥ ಪ್ರಭಾವ ಇಲ್ಲಾ ಎಂದು ಹೇಳಿದರು. ನಾನು ವಿನಯದಿಂದ ಅವರಿಗೆ ಒಂದು ಮಾತು ಕೇಳುತ್ತೇನೆ. ಈ ಪ್ರಭಾವ ಒಂದು ವ್ಯಕ್ತಿಗತವಾದ ಪ್ರಭಾವವಾಗುವುದಿಲ್ಲ. ಈ ರಾಜ್ಯದ ಹೊರಗಡೆ ಇರತಕ್ಕಂಥವರು ಇಲ್ಲಿಗೆ

ಬರುವುದಾದರೆ ಅವರು ಮೆಚ್ಚಿಕೊಂಡು ಬರಬೇಕು. ಅವರಿಗೆ ಅಭಿಮಾನ ಉಂಟಾಗುವಂತೆ ಮಾಡಬೇಕು. ಸದಸ್ಯರು ಪುನಃ ಪುನಃ ಮೈಸೂರು ಆಡಳಿತ ಕೆಟ್ಟು ಹೋಗಿದೆ ಲಂಚ ವಿಪರೀತವಾಗಿದೆ, ಮೈಸೂರು ರಾಜ್ಯದಲ್ಲಿ ಪ್ರಗತಿಯಾಗಿಲ್ಲ ಎಂದು ಪ್ರಚಾರ ಮಾಡಿದರೆ ಹೊರಗಡೆಯಿಂದ ಇಲ್ಲಿಗೆ ಬರತಕ್ಕಂಥ ಉದ್ದಿಮೆದಾರರು ಬರಲು ಅನುಮಾನ ಪಡುತ್ತಾರೆ, ನಿಜವಾಗಿಯೂ ಇಲ್ಲಿ ಏನಾದರೂ ಲೋಪ ದೋಷ ಇದೆಯೇ ಎಂಬ ಭಾವನೆಯುಂಟಾಗುತ್ತದೆ. ಈ ರೀತಿ ಮಾಡುವುದು ಸರಿಯಲ್ಲ. ಪ್ರತಿಯೊಂದಕ್ಕೂ ಮದ್ರಾಸ್, ಮಹಾರಾಷ್ಟ್ರ, ಆಂಧ್ರ ದೇಶದ ಪ್ರಗತಿ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ನೀರಾವರಿ ಬಾವಿಗಳ ವಿಚಾರ ಬರಲಿ, ಯೋಜನೆಯ ವಿಚಾರ ಇರಲಿ, ಪಂಪ್ ಸೆಟ್ ವಿಚಾರ ಬರಲಿ, ಎಲೆಕ್ಟ್ರಿಫಿಕೇಶನ್ ವಿಚಾರ ಇರಲಿ, ಮದ್ರಾಸ್ ನೋಡಿ ಎಂದು ಹೇಳುತ್ತಾರೆ. ಮದ್ರಾಸಿನವರಾಗಲೀ, ಮಹಾರಾಷ್ಟ್ರದಲ್ಲಾಗಲೀ ಆಂಧ್ರದಲ್ಲಾಗಲಿ ಇಂಥ ವಿಚಾರದಲ್ಲಿ ವಿರೋಧ ಪಕ್ಷದವರು ಪದೇ ಪದೇ ಈ ರೀತಿ ಹೇಳುವುದಿಲ್ಲ. ತಮ್ಮ ಲೀಡರ್ ಬಗ್ಗೆ ಆಗಲಿ ಆಡಳಿತ ಯಂತ್ರದ ಬಗ್ಗೆ ಆಗಲಿ ಯಾವುದೇ ರೀತಿಯ ಟೀಕೆ ಟಿಪ್ಪಣಿ ಮಾಡುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಮೈಸೂರು ಪ್ರಭಾವ ಯಾವ ರೀತಿ ಆಗಬಹುದು ಎಂದು ಕೇಳುತ್ತೇನೆ. ಇದು ಸಹಾಯಕವಾಗುವುದಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ಸಾಧಿಸಿದ ಪ್ರಗತಿ ವಿಚಾರ ಹೇಳಬಹುದು. ಎಷ್ಟು ಪ್ರಗತಿಯಾಗಿದೆ ಎಂಬುದಕ್ಕೆ ಅಂಕಿಅಂಶಗಳನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ.

7-30 P. M.

ಪುನಃ ಪುನಃ ಈ ರೀತಿ ಮಾತನಾಡುತ್ತ ಹೋದರೆ ಮೈಸೂರಿನ ಪ್ರಭಾವವನ್ನು ಡೆಲ್ಲಿಯಲ್ಲಿ ಬೀರುವುದಕ್ಕೆ ಸಹಾಯಕವಾಗುವುದಿಲ್ಲ. ಇವತ್ತು ಆ ತರಹ ವಾತಾವರಣ ನಮ್ಮ ರಾಜ್ಯದಲ್ಲಿದ್ದರೂ ಕೂಡ ನಮ್ಮ ಮುಖ್ಯ ಮಂತ್ರಿಗಳು ತಮ್ಮ ಪ್ರಭಾವದಿಂದ, ವೈಯುಕ್ತಿಕ ಪ್ರಭಾವದಿಂದ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಇದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಬೇರೆ ಎಲ್ಲ ರಾಜ್ಯಗಳ ಕರಡು ಯೋಜನೆ ತಯಾರು ಮಾಡಿದ್ದರಲ್ಲಿ ಪೂರ್ಣ ಕಡಿತವಾಗಿರುವಾಗ ನಾವು ಯಾವು ಕರಡು ಕೊಟ್ಟಿದ್ದೇವೆಯೋ ಅದನ್ನೇ ಸ್ವಲ್ಪ ಹೆಚ್ಚು ಕಡಿಮೆ ಒಪ್ಪಿಕೊಂಡಿದ್ದಾರೆ.

ಮಾನ್ಯ ಸದಸ್ಯರು ತೆರಿಗೆಯ ವಿಚಾರವೇನು ಎಂದು ಕೇಳಿದರು. ತೆರಿಗೆ ಮುಂತಾದುವನ್ನು ವಿಧಿಸದೆ, ಮಾರಾಟ ತೆರಿಗೆ ಇಲ್ಲದೆ, ಬೇರೆ ರೀತಿಯ ತೆರಿಗೆಗಳು ಇಲ್ಲದೆ ಸರ್ಕಾರವನ್ನು ನಡೆಸುವಂಥದ್ದು ಸಾಧ್ಯವಿಲ್ಲ. ಅದಕ್ಕಾಗಿಯೇ ನಾನು ಹೇಳಿದೆ, ಆಯಾ ಕಾಲದಲ್ಲಿರತಕ್ಕ ಪರಿಸ್ಥಿತಿಯ ಚೌಕಟ್ಟಿನಲ್ಲಿ ಸರ್ಕಾರ ಕೆಲಸ ಮಾಡಬೇಕಾಗುತ್ತದೆ ಎಂಬುದಾಗಿ. ಮೂರನೆಯ ಯೋಜನೆಯಲ್ಲಿ ನಮ್ಮ ರಿಸೋರ್ಸಸ್ ಒದಗಿಸತಕ್ಕ ಶಕ್ತಿ 110 ಕೋಟಿ ರೂಪಾಯಿ ಇತ್ತು. ಅದೇ ನಾಲ್ಕನೇ ಪಂಚ ವಾರ್ಷಿಕ ಯೋಜನೆಯಲ್ಲಿ 200 ಕೋಟಿ ರೂಪಾಯಿಗಳಷ್ಟು ರಿಸೋರ್ಸಸ್ ನಾವು ಒದಗಿಸುತ್ತೇವೆ ಎನ್ನುವ ನಂಬಿಕೆ, ವಿಶ್ವಾಸ ನಮ್ಮಲ್ಲಿದೆ. ಅದು ಹಾಗೆಯೇ ಆಕಾಶದಿಂದ ಬೀಳಲಿಕ್ಕಿಲ್ಲ. ನಮ್ಮ ರಾಜ್ಯದಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ, ವ್ಯವಸಾಯ ಕ್ಷೇತ್ರದಲ್ಲಿ, ಇತರ ಕ್ಷೇತ್ರಗಳಿಂದ ಅದು ನಮಗೆ ಬರುತ್ತದೆ.

ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರವನ್ನು, ಸಂತಸದ ವಿಚಾರವನ್ನು, ನಾನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಈಗ ಗೊಬ್ಬರದ ವಿಚಾರದಲ್ಲಿ ಬಹಳ ಟೀಕೆಗಳಾದವು. ಗೊಬ್ಬರ ಇಷ್ಟು ವರ್ಷಗಳೂ ಎಷ್ಟು ಪ್ರಮಾಣದಲ್ಲಿ ಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ದೊರಕುತ್ತಿರಲಿಲ್ಲ. ಇದರ ಬಗ್ಗೆ ನಾವು ವಿಶೇಷವಾಗಿ ಪ್ರಯತ್ನ ಮಾಡಿ ಈಗ ಗೊಬ್ಬರದ ಹಡಗುಗಳು ಮಂಗಳೂರು ಮತ್ತು ಕಾರವಾರ ಬಂದರುಗಳಿಗೆ ನೇರವಾಗಿ ಬರತಕ್ಕ ಏರ್ಪಾಡಾಗಿದೆ. ಅದೂ ಅಲ್ಲದೆ ನಮ್ಮಲ್ಲಿ ಸಾವಿರಾರು ಎಕರೆಯಲ್ಲಿ ಹೈಬ್ರಿಡ್ ಜೋಳ ಮತ್ತು ಮೆಕ್ಕೆ ಜೋಳದ ಉತ್ಪತ್ತಿಯಾಗುತ್ತಿದೆ. ಬಹಳ ಕ್ಷಿಪ್ರವಾಗಿ ಎರಡು ಸಾವಿರ ಟನ್ ಹೈಬ್ರಿಡ್ ಜೋಳ ಮತ್ತು ಮೆಕ್ಕೆ ಜೋಳವನ್ನು ಫುಡ್ ಕಾರ್ಪೊರೇಷನ್ನಿಗೆ ಕೊಡಬೇಕೆಂದು ಮಾಡಿದ್ದೇವೆ. ಇದು ಪ್ರಗತಿಯ ಲಕ್ಷಣವಲ್ಲದೆ ಮತ್ತೇನು ಎಂದು ನಾನು ಕೇಳುತ್ತೇನೆ.

ಪುನಃ ಕೇಂದ್ರ ಸರ್ಕಾರ 75 ಲಕ್ಷ ರೂಪಾಯಿಗಳನ್ನು ಚಿಕ್ಕ ನೀರಾವರಿ ಯೋಜನೆಗಳಿಗಾಗಿ ಮಂಜೂರು ಮಾಡಿದೆ. ಮೊನ್ನೆ ತಾನೆ ನಮಗೆ ಆ ವಿಚಾರವನ್ನು ತಿಳಿಸಿದ್ದಾರೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಕೊನೆಯದಾಗಿ, ನಾನು ಒಂದು ಮಾತನ್ನು ಹೇಳಬೇಕಾಗಿದೆ. ಶ್ರೀಮಾನ್ ಲಕ್ಕಪ್ಪನವರು, ನಾನು ಸಭೆಯಲ್ಲಿ ಇಲ್ಲದೆ ಇದ್ದಾಗ, ನನ್ನ ಮೇಲೆ ಕೆಲವು ವೈಯುಕ್ತಿಕವಾದ ಆರೋಪಗಳನ್ನು ಮಾಡಿದರು ಎಂದು ನನಗೆ ಗೊತ್ತಾಯಿತು. ಅವರು ಏನು ಮಾತನಾಡಿದರು ಎನ್ನುವ ವರದಿಯನ್ನು ತರಿಸಿದ್ದೇನೆ. ಅದು ಹೀಗಿದೆ :

"ಅರ್ಥಿಕ ಮಂತ್ರಿಗಳು ರಾಮಕೃಷ್ಣ ಹೆಗಡೆಯವರು ಇದ್ದಾರೆ. ಇವರು ಮಾಡಿದಂಥ ಅಧಿಕಾರಾವಧಿಯಲಿ ಅನ್ಯಾಯಗಳು ಎಷು ಇವೆ ಎಂದು ಹೇಳಬೇಕು ? ಈಗ

(ಶ್ರೀ ರಾಮಕೃಷ್ಣ ಹೆಗಡೆ)

ವಿಕ್ಟೋರಿಯಾ ಕಾಲೋನಿಯಲ್ಲಿ ಒಂದೂವರೆ ಲಕ್ಷ ರೂಪಾಯಿ ಆಸ್ತಿ ಮಾಡಿ ಮನೆ ಕಟ್ಟುತ್ತಾ ಇದ್ದಾರೆ. ಇವರಿಗೆ ಬರತಕ್ಕ ಸಂಬಳ ಎಷ್ಟು? ಇವರು ಹಣವನ್ನು ಹೇಗೆ ಗಳಿಸಿದರು ? ಕೋಡೆ ಈಶ್ವರ ಸಾ ಎಂಬುವರು ವೈನ್, ಬ್ರಾಂದಿ, ಬೀರ್, ಮಾಡುವವರು ಇದ್ದಾರೆ. ಅವರಿಗೆ ನೇರವಾಗಿ ಗೋವಾದಲ್ಲಿ ವೈನ್, ಬೀರ್'' ವಿಸ್ಕಿಗಳನ್ನು ಮಾರತಕ್ಕ ಏಜೆನ್ಸಿಯನ್ನು ಕೊಟ್ಟಿರಬೇಕಾದರೆ ಇವರ ಕೃಪಾ ಕಟಾಕ್ಷ ಎಷ್ಟು ಇರಬೇಕು ? ಅವರು ಎಷ್ಟು ಹಣವನ್ನು ಇವರಿಗೆ ಕೊಟ್ಟಿರಬಹುದು ಎಂದು ಊಹೆಯನ್ನು ತಾವೇ ಮಾಡಬೇಕಾಗಿದೆ ''

ಶ್ರೀಮಾನ್ ಲಕ್ಕಪ್ಪನವರು ನಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಈ ಮಾತನ್ನು ಹೇಳಿರಬೇಕು ಎಂದು ನಾನು ನಿರೀಕ್ಷೆ ಮಾಡುತ್ತೇನೆ. ಈಗತಾನೇ ಮಾನ್ಯ ಗೃಹ ಮಂತ್ರಿಗಳು ಅವರ ವಿಚಾರದಲ್ಲಿ ಒಂದುಮಾತನ್ನು ಹೇಳಿದಾಗ ಅವರು ಸಿಟ್ಟಿನಿಂದ ಇಲ್ಲಿ ಕುಣಿದಾಡಿದರು. ಸುಳ್ಳು ಆರೋಪ ಮಾಡಿದರೆ, Character assassination ಮಾಡಿದರೆ, ಇಲ್ಲದೆ ಇರತಕ್ಕ ಆರೋಪಗಳನ್ನು ಮಾಡಿದರೆ ಏನು ನೋವಾಗುತ್ತದೆ ಎನ್ನುವುದನ್ನು ಸ್ವಲ್ಪ ತಿಳಿದುಕೊಳ್ಳಬೇಕು.

ಶ್ರೀ ಕೆ. ಲಕ್ಕಪ್ಪ —ನನ್ನ ಟೀಕೆಗೆ ಉತ್ತರ ಹೇಳಲಿಲ್ಲ. ನಾನು ಏನು ಆರೋಪ ಮಾಡಿದ್ದೇನೆ ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಉತ್ತರ ಹೇಳುವುದಕ್ಕೆ ನಿಂತಿದ್ದೇನೆ. ಮಾನ್ಯ ಸದಸ್ಯರು ಹೊಂದಿರುವ ಆಸ್ತಿಪಾಸ್ತಿಯನ್ನು ನಾನು ಲೆಕ್ಕ ಹಾಕುವುದಕ್ಕೆ ಹೋಗಿಲ್ಲ. ನನಗೆ ಅದರ ಸಂಬಂಧವಿಲ್ಲ. ನನಗೆ ಅದರ ಆಸ್ಥೆ ಇಲ್ಲ. ನನಗೆ ಆಸ್ತಿಪಾಸ್ತಿ ಎಷ್ಟಿದೆ ಎಂದು ಪ್ರತಿ ವರ್ಷವು ಮುಖ್ಯ ಮಂತ್ರಿಗಳಿಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಹೇಳಿಕೆ ಒಪ್ಪಿಸುತ್ತ ಬಂದಿದ್ದೇನೆ. ಮಾನ್ಯ ಸದಸ್ಯರಿಗೆ ಆಸ್ಥೆ ಇದ್ದರೆ ಅದನ್ನು ಅವರ ಮುಖಾಂತರ ಪಡೆದುಕೊಳ್ಳಬಹುದು. ನಾನು ಅವರಿಗೆ ಇಷ್ಟು ಮಾತ್ರ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಇವತ್ತಿನವರೆಗೂ ನಾನು ಯಾವ ಮನೆಯನ್ನೂ ಕಟ್ಟಿಸಿಲ್ಲ, ಕಟ್ಟಿಸುತ್ತಲೂ ಇಲ್ಲ. ನನ್ನ ಹೆಸರಿನಲ್ಲಾಗಲೀ, ನನ್ನ ಹೆಂಡತಿ ಮಕ್ಕಳ ಹೆಸರಿನಲ್ಲಾಗಲೀ ನನ್ನ ಹತ್ತಿರದ ಸಂಬಂಧೀಕರ ಹೆಸರಿನಲ್ಲಾಗಲಿ ಯಾವ ಮನೆಯನ್ನೂ ಈ ಬೆಂಗಳೂರು ಷಹರಿನಲ್ಲಿ ಕಟ್ಟಿಸುತ್ತಿಲ್ಲ. ನಾನು ಬೆಂಗಳೂರು ಷಹರಿನಲ್ಲಿ ಮನೆಯನ್ನು ಕಟ್ಟಿಸಬೇಕಾದರೆ ಸಾಲ ತರಬೇಕಾದ ಅಗತ್ಯ ಎಷ್ಟರಮಟ್ಟಿಗೂ ನನಗೆ ಇಲ್ಲ. ನಾನು ಮಾನ್ಯ ಸದಸ್ಯರಿಗೆ ಒಂದು ಆಹ್ವಾನವನ್ನು ಕೊಡುತ್ತೇನೆ: ಅವರು ಮಾಡಿರುವ ಆರೋಪಗಳಲ್ಲಿ ಸತ್ಯವೇನಾದರೂ ಇದ್ದರೆ, ಅದನ್ನು ಅವರು ಸ್ಥಿರಪಡಿಸಿದರೆ, ಇವತ್ತು ನಾನು ರಾಜೀನಾಮೇ ಕೊಟ್ಟು ಹೋಗುತ್ತೇನೆ, ಸಾರ್ವಜನಿಕ ಜೀವನವನ್ನು ಬಿಟ್ಟು ಹೋಗುತ್ತೇನೆ. ಅವರು ಮಾಡಿರುವ ಆರೋಪಗಳನ್ನು ಸಿದ್ಧ ಮಾಡದೆ ಹೋದರೆ ಅವರು ರಾಜಿನಾಮೆ ಕೊಡುವುದಕ್ಕೆ ಸಿದ್ಧರಿದ್ದಾರೆಯೇ ಎಂದು ಕೇಳುತ್ತೇನೆ. ಅವರಿಗೆ ಧೈರ್ಯವಿದ್ದರೆ ಎಲ್ಲಿ, ಒಪ್ಪಲಿ. ಮನಸ್ಸಿಗೆ ಬಂದಂತೆ ಮಾತನಾಡುವಂಥದ್ದಲ್ಲ. ಅವರಿಗೆ ನಾನು ಈ ಆಹ್ವಾನವನ್ನು ಕೊಡುತ್ತಿದ್ದೇನೆ. ಅವರಿಗೆ ಗಂಡಸುತನವಿದ್ದರೆ ಒಪ್ಪಿಕೊಳ್ಳಲಿ. (ಕರತಾಡನ)

ಶ್ರೀ ಕೆ. ಲಕ್ಕಪ್ಪ.—ಈ ಬಗ್ಗೆ ವಿಚಾರಣೆಯಾಗಲಿ. ರುಜುವಾತಾಗದೆ ಇದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಈ ರಾಜ್ಯದಲ್ಲಿ ಏನು ಬೇಕಾದರೂ ನೀವು ಮಾಡುತ್ತೀರಿ, ಏನು ಬೇಕಾದರೂ ಮಾಡುವುದಕ್ಕೆ ಶಕ್ತಿ ಇದೆ. ಜನತೆ ನೀವು ಮಾಡುವುದನ್ನು ನೋಡುತ್ತಿದೆ.

Mr. SPEAKER.—Order, order.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಬಹುಶಃ ಈ ಅಸೆಂಬ್ಲಿಯ ಕೋನೆ ದಿವಸವಾದ ಇಂದು, ಇನ್ನು ಒಂದು ದಿವಸ ನಾವು ಕೊಡಬಹುದು, ನಮ್ಮ ಚರ್ಚೆ ವ್ಯಕ್ತಿಗತವಾಗದೆ ವಿಷಯಗತವಾಗುತ್ತದೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಕೆಲವು ಮಾನ್ಯ ಸದಸ್ಯರು ವ್ಯಕ್ತಿಗತವಾದ ಟೀಕೆಗಳನ್ನು ಮಾಡಿದ್ದು ನಿಜವಾಗಿ ವಿಷಾದಕರ. ನಾನು ಸ್ವಲ್ಪಮಟ್ಟಿಗೆ ಕಠಿಣವಾಗಿ ಮಾತನಾಡಿದ್ದೇನೆ. ಇದು ಅನಿವಾರ್ಯವಾದ ಪ್ರಸಂಗ. ನಾವು ಈ ಐದು ವರ್ಷದ ಅವಧಿಯನ್ನು ಮುಗಿಸಿ ಪುನಃ ಜನತೆಯ ಮುಂದೆ ಹೋಗುತ್ತೇವೆ. ಈ ಸರ್ಕಾರದಲ್ಲಿ ಜನತೆಗೆ ನಿಜವಾಗಿ ವಿಶ್ವಾಸವಿದೆಯೇ ಇಲ್ಲವೇ, ಸರ್ಕಾರದ ತನ್ನ ಕಾರ್ಯ ಮಾಡುವುದರಲ್ಲಿ ಜಯಗಳಿಸಿದೆಯೋ ಅಥವಾ ಅಯಶಸ್ವಿಯಾಗಿದೆಯೋ ಎಂದು ನಿರ್ಣಯ ಮಾಡತಕ್ಕ ಅಧಿಕಾರ ಜನತೆಯ ಕೈಯಲ್ಲಿದೆ.

ಶ್ರೀ ಅಣ್ಣಾರಾಯರು ನಿಮಗೆ ನರಕಾರ ನಡೆಸಲು ಅಧಿಕಾರವಿಲ್ಲ, ಕಾರಣ ಸೇಕಡ 49.5 ಕ್ಕಿಂತ ಹೆಚ್ಚುಓಟು ಬಂದಿಲ್ಲ, ಆದುದರಿಂದ ನಿಮ್ಮ ಬಹುಮತು ಕೇವಲ ಕಾಲ್ಪನಿಕ, ನಿಜವಾದ ಜನರ ಬೆಂಬಲವಿಲ್ಲ ಎಂದು ಹೇಳುತ್ತಿದ್ದರು. ಆದರೆ ಎಲ್ಲ ಸದಸ್ಯರಿಗೂ ಒಂದೇ ಒಂದು ಪ್ರಶ್ನೆ ಹಾಕುತ್ತೇನೆ. ಇಲ್ಲಿ ಎಷ್ಟು ಜನರ ಸೇಕಡ 50 ಕ್ಕಿಂತ ಹೆಚ್ಚು ಓಟು ಪಡೆದು ಬಂದಿದ್ದಾರೆ! ಜಿ. ವಿ. ಗೌಡರಿಗೆ 19,133 ಓಟುಗಳು ಬಂದು ಅವರು ಚುನಾಯಿತರಾದರು, ಅವರು ವಿರುದ್ಧವಾಗಿ ನಿಂತಿದ್ದವರಿಗೆ 19,065 ಓಟುಗಳು ಬಂದುವು, ಒಟ್ಟು ಮತದಾರರ ಸಂಖ್ಯೆ 57,000.

ಶ್ರೀ ಎಸ್. ಶಿವಪ್ಪ.—ನಿಮ್ಮ ಕ್ಷೇತ್ರದ ವಿಚಾರ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದೂ ಹೇಳುತ್ತೇನೆ. ಅವರಿಗೆ ಸೇಕಡ ಎಷ್ಟು ದೊರೆತಿದೆ ಎಂದು ಕೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ನೀವೆಲ್ಲಾ ರಾಜೀನಾಮೆ ಕೊಟ್ಟು ಚುನಾವಣೆಗೆ ನಿಲ್ಲಿ, ನಾವು ನಿಲ್ಲುತ್ತೇವೆ ಛಾಲೆಂಜ್ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಕೇಶವಮೂರ್ತಿಯವರಿಗೆ 8,637 ಓಟು ಸಿಕ್ಕಿದೆ, ಅದರಿಂದ ಆರಿಸಿಬಂದಿದ್ದಾರೆ. ಲಕ್ಕಪ್ಪನವರಿಗೆ 21,810 ಓಟುಗಳು ಬಂದಿವೆ, ಕಾಂಗ್ರೆಸ್ಸಿಗೆ 18,076 ಓಟು ಸಿಕ್ಕಿದೆ, ಆ ಕ್ಷೇತ್ರದ ಮತದಾರರ ಸಂಖ್ಯೆ 57,851. ಅವರಿಗೆ ಎಷ್ಟು ಪರ್ಸೆಂಟ್ ಸಿಕ್ಕಿದೆ ಎಂದು ಕೇಳುತ್ತೇನೆ. ಆಮೇಲೆ ರೇವಣಸಿದ್ದಪ್ಪನವರ ವಿಚಾರ ಅವರಿಗೆ ಗೊತ್ತಿದೆ. ನನಗೆ 19,817 ಓಟು ಸಿಕ್ಕಿದೆ.

ಶ್ರೀ ಕೆ. ಲಕ್ಕಪ್ಪ.—ನನಗಿಂತ ಕಡಮೆ.

ಶ್ರೀ ರಾಮಕೃಷ್ಣ ಹೆಗಡೆ.—ಹೌದು, ಹೌದು ? ನನ ಕ್ಷೇತ್ರದಲ್ಲಿ ಪಿ. ಎಸ್. ಪಿ. ಕ್ಯಾಂಡಿಡೇಟಿಗೆ 9, 421, ಸ್ವತಂತ್ರ ಪಕ್ಷದ ಕ್ಯಾಂಡಿಡೇಟಿಗೆ 7, 117, ಜನಸಂಘದ ಕ್ಯಾಂಡಿಡೇಟಿಗೆ 804 ಓಟುಗಳು ಬಂದಿವೆ, ಈ ಮೂರನ್ನೂ ಸೇರಿಸಿದರೆ 17, 342 ಆಗುತ್ತದೆ. ನನಗೆ 19, 817 ಓಟು ಸಿಕ್ಕಿದೆ. ಪ್ರಜಾಪ್ರಭುತ್ವದಲ್ಲಿ ಓಟಿನ ವಿಚಾರದಲ್ಲಿ ಪರ್ಸೆಂಟೇಜ್ ಲೆಕ್ಕಹಾಕಿ ಹೇಳುವುದು ಸಾಧುವಲ್ಲ. ಅನೇಕ ದೇಶಗಳಲ್ಲಿ ಪ್ರಜಾಪ್ರಭುತ್ವವಿರುವ ಕಡೆ ಮೈನಾರಿಟಿ ಸರಕಾರವಿರುತ್ತದೆ. ಇದೇ ಪ್ರಜಾಪ್ರಭುತ್ವದಲ್ಲಿರುವ ವಿಚಿತ್ರ ಸನ್ನಿವೇಶ ಎಂದು ಹೇಳಬಹುದು. ಆದುದರಿಂದ ಮಾನ್ಯ ಅಧ್ಯಕ್ಷರೇ, ಕಾಂಗ್ರೆಸ್ ಪಕ್ಷಕ್ಕೆ ಓಟು ಸೇಕಡಾವಾರು ಬಂದಿದೆ ಎಂದು ಹೇಳುವುದರಮೇಲೆ ನೈತಿಕ ಮಹತ್ವವನ್ನು ಅಳೆಯುವುದಕ್ಕೆ ಸಾಧ್ಯವಿಲ್ಲ. ಯಾವ ಪಕ್ಷವಾದರೂ ಬಹುಮತದಲ್ಲಿ ಚುನಾಯಿ ಸಲ್ಪಟ್ಟು ಬರಬಹುದು. ಇಷ್ಟರಲ್ಲೇ ನಾವು ನೀವು ಜನರ ಮುಂದೆ ಹೋಗುವೆವು ಎಂಬುದನ್ನು ಮರೆಯಬಾರದು. ದೇಶದಲ್ಲಿ ಪ್ರತಿಯೊಬ್ಬರೂ ನಾಗರಿಕರಾಗಿದ್ದಾರೆ. ಪ್ರತಿಯೊಬ್ಬರೂ ಸುಖವಾಗಿ ಜೀವನ ನಡೆಸಬೇಕು, ದೇಶಾಭಿವೃದ್ಧಿಯಾಗಬೇಕು, ಸಾಮಾನ್ಯ ಜನರ ಜೀವನಮಟ್ಟ ಏರಿಸಬೇಕು ಎಂಬುದೇ ನಮ್ಮ ಗುರಿ. ಇದನ್ನು ಸಾಧಿಸುವ ವಿಚಾರದಲ್ಲಿ ಅನುಸರಿಸುವ ನೀತಿ ವಿಚಾರದಲ್ಲಿ ಭಿನ್ನಾಭಿಪ್ರಾಯವಿರಬಹುದು. ಆದರೆ ಗುರಿ ಒಂದೇ ಎಂಬುದನ್ನು ಮರೆಯಬಾರದು. ನಾವು ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಇದಕ್ಕಾಗಿ ಬಹಳವಾಗಿ ಶ್ರಮಿಸಿದ್ದೇವೆ. ಜವಾಬ್ದಾರಿ ವಹಿಸಿ ಕೊಂಡಾಗ ಯಾವ ಕಷ್ಟ ಬರುತ್ತದೆ ಎಂಬುದನ್ನು ನಾವು ನೋಡಿದ್ದೇವೆ. ಬೇರೆ ರಾಜ್ಯಗಳಲ್ಲಿ ಇತರ ಪಕ್ಷದವರಿಗೆ ಅಧಿಕಾರ ದೊರೆತರೂ ಉದ್ದೇಶ ಸಫಲವಾಗಿ. ಈಗ ಈ ಸಭೆ ಮುಕ್ತಾಯವಾಗುವ ಈ ಸಂದರ್ಭದಲ್ಲಿ ಕಳೆದ 5 ವರ್ಷ ಗಳಲ್ಲಿ ಮಾಡಿರುವ ಸಾಧನೆ ವಿಮರ್ಶೆ ಮಾಡಿ ಜನತೆ ತಮಗೆ ಸೂಕ್ತ ಕಂಡವರನ್ನು ಮುಂದೆ ಚುನಾಯಿಸುವುದು. ಆದುದರಿಂದ ಬಹಳಮಟ್ಟಿಗೆ ಆಶೋತ್ತರ ಗಳನ್ನಿಟ್ಟುಕೊಳ್ಳುವುದು ಯೋಗ್ಯ ವಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಸಭಾಪತಿಯವರೇ, ಹಿಂದುಳಿದವರ, ಹರಿಜನರ ಏಳಿಗೆ ಬಗ್ಗೆ ಸರಕಾರದ ನೀತಿ, ಅದು ತೆಗೆದುಕೊಂಡು ಕಾರ್ಯಕ್ರಮಗಳ ಬಗ್ಗೆ ನನ್ನ ಪ್ರತಿಕ್ರಿಯೆ ಏನು ಎಂಬು ದನ್ನು 1952 ನೆಯ ಇಸವಿಯಿಂದ ಕಳೆದ 15 ವರ್ಷಗಳಿಂದ ನಮ್ಮ ಮಿತ್ರರು ಚೆನ್ನಾಗಿ ತಿಳಿದು ಕೊಂಡಿದ್ದಾರೆ. ಈ ದಿವಸ ಉದ್ವೇಗದಿಂದ ಅಥವ ರಾಗದ್ವೇಷದಿಂದ ನಾನೇನೂ ಹೇಳಲಿಲ್ಲ. ನಮ್ಮ ಮಿತ್ರರಿಗೆ ಇನ್ನೂ ಉದ್ವೇಗವಿದೆ, ಅದು ಗೊತ್ತಿರುವ ವಿಚಾರ.

ಕೋ-ಆಪರೇಟಿವ್ ಸೊಸೈಟಿ ವಿಚಾರ ಹೇಳಿದರು, 77 ಲಕ್ಷ ರೂಪಾಯಿಗಳು ಸ್ಯಾಂಕ್ಷನ್ಆಗಿ ಇದೇತಾನೆ ಆರ್ಡರಾಗಿದೆಯೆಂದು ಕೇಳಿದೆ. ಇದು ಕನ್ನಡಿಯಲ್ಲಿರುವ ಗಂಟಿನಂತಿದೆ. ಇಂದು ಕನ್‌ವರ್ಟಾಗಿ ಹೊಸದಾಗಿ ಲಿಂಗಾಯಿತರಾಗಿರುವವರು ಬಹಳವಾಗಿ ಪೂಜೆ ಮಾಡುತ್ತಾರಂತೆ. ಅದೇ ರೀತಿಯಾಗಿ ಹೊಸದಾಗಿ ಕ್ರಿಶ್ಚಿಯನ್ ಆದವರು ಚರ್ಚಿಗೆ ಹೋಗುತ್ತಾರೆ. ನಾನೇನ-

(ಶ್ರೀ ಜಿ. ದುಗ್ಗಪ್ಪ)

ಕನ್‌ವರ್ಟ್ ಆಗಿಲ್ಲ ನನಗೆ ಯಾವ ನಿರ್ಬಂಧವು ಇಲ್ಲ, ಉದ್ವೇಗವು ಇಲ್ಲ. ನನ್ನ ಅಭಿಪ್ರಾಯ ಮಾನ್ಯ ಮಿತ್ರರಿಗೆ ಗೊತ್ತಿದ್ದರೂ ಸಹ ಏಕೆ ಹೇಳಿದರೋ ಗೊತ್ತಾಗಲಿಲ್ಲ. ಇಷ್ಟು ಹೇಳಿದರೆ ಸಾಕು.

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ ಮತ್ತು ಸಾರಿಗೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಶ್ರೀಮಾನ್ ದುಗ್ಗಪ್ಪನವರು ಮಾತನಾಡುವಾಗ ಚಿತ್ರದುರ್ಗದ ಆರ್.ಟಿ.ಎ. ಕಾರ್ಯಕಲಾಪದ ಬಗ್ಗೆ ಒಂದೆರಡು ಮಾತನಾಡಿದ್ದಾರೆ ಮತ್ತು ಆರ್.ಟಿ.ಓ. ಆಫೀಸಿನ ಬಗ್ಗೆ ಆರೋಪ ಮಾಡಿದ್ದಾರೆ, ಸರಕಾರ ಏನೂ ಮಾಡಿಲ್ಲ ಎಂಬ ಮಾತನ್ನು ಹೇಳಿದರು. ಆರ್.ಟಿ.ಎ. ಕಾರ್ಯಕ್ರಮದ ಬಗ್ಗೆ ನಾನೇನೂ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ; ಅದು ಕ್ವಾಸಿ ಜುಡಿಷಿಯಲ್ ಬಾಡಿ, ಸರಕಾರ ತಪ್ಪು ಮಾಡಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಅದಕ್ಕೆ ಬೇರೆ ರೀತಿಯ ಅವಕಾಶವಿದೆ, ಅಪೀಲಿಗೆ ಅವಕಾಶವಿದೆ, ಅವರು ಅಪೀಲು ಹೋಗಬಹುದು.

ಅಧಿಕಾರಿಯ ಬಗ್ಗೆ ಸರ್ಕಾರ ಏನೂ ಮಾಡಿಲ್ಲ ಎಂದು ಅವರು ಒಂದು ಅನುಮಾನವನ್ನು ವ್ಯಕ್ತಪಡಿಸಿದರು ಅದು ಸರಿಯಿಲ್ಲ. ಅವರ ಮೇಲೆ ಬಂದಂಥ ಆರೋಪಗಳನ್ನು ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸಿದ್ದೇವೆ, ಅವರ ಇನ್‌ವೆಸ್ಟಿಗೇಷನ್ ರಿಪೋರ್ಟ್ ಇನ್ನೂ ನಮಗೆ ಬಂದಿಲ್ಲ. ಏತನ್ಮಧ್ಯೆ ಆ ಅಧಿಕಾರಿಯನ್ನು ಗುಲ್ಬರ್ಗಾಕ್ಕೆ ವರ್ಗ ಮಾಡಿರುವುದು ನಿಜ. ವಿಜಿಲೆನ್ಸ್ ಕಮಿಷನ್ ನಿಂದ ಏನು ರಿಪೋರ್ಟ್ ಬರುತ್ತದೆಯೋ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆಯೋ ಹೊರತು ಅದಕ್ಕೆ ಪೂರ್ವಭಾವಿಯಾಗಿ ಏನೂ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಆ ಆರೋಪ ಸರಿಯಿಲ್ಲ ಎನ್ನುವುದು ಒಂದು. ಎರಡನೆಯದು ನಾನು ಇಲ್ಲಿ ಇಲ್ಲದೇ ಇದ್ದಾಗ ಬಳ್ಳಾರಿ ನ್ಯಾಷನಲೈಸೇಷನ್ ಆಫ್ ಬಸ್ ರೂಟ್ಸ್ ವಿಷಯದಲ್ಲಿ ಒಂದೆರಡು ಮಾತು ಬಂದಿದೆ, ಅದನ್ನು ಕ್ಲಾರಿಫೈ ಮಾಡುವುದು ಸೂಕ್ತ ಎಂದು ಕಾಣುತ್ತದೆ. ಅಲ್ಲಿ ಸ್ವಲ್ಪ ನಿಧಾನವಾಯಿತು. ಸರ್ಕಾರದ ಕಡೆಯಿಂದ ಅದು ನಿಧಾನವಾದದ್ದು ಅಲ್ಲ, ಕೋರ್ಟ್ ಮುಂದೆ ಹೋಗಿ ಅನೇಕ ರೀತಿಯಲ್ಲಿ ಲಿಟಿಗೇಷನ್‌ಗೆ ಒಳಪಟ್ಟಿದ್ದರಿಂದ ಆ ರೀತಿ ಆಯಿತು. ಕೋರ್ಟ್ ವ್ಯವಹಾರಕ್ಕೆ ಸಿಕ್ಕಿಹಾಕಿಕೊಂಡು ಅಪೀಲು ಮೇಲೆ ಅಪೀಲು ಹೋಗಿ ನಿಧಾನವಾಯಿತು. ನಮ್ಮ ನೀತಿ ರಾಷ್ಟ್ರೀಕರಣ ಮಾಡಬೇಕು ಎಂದು ಇದೆ ಎಂದು ಅನೇಕ ಸಾರಿ ಹೇಳಿದ್ದೇನೆ. ಇದು ವೈಯುಕ್ತಿಕವಾದ ನೀತಿಯಲ್ಲ, ಸರ್ಕಾರದ ನೀತಿಯಾದ್ದರಿಂದ ಇದನ್ನು ಮುಂದುವರಿಸಬೇಕಾದ್ದು ನಮ್ಮ ಧರ್ಮ. ಇನ್ನೊಂದು ಮಾತನ್ನು ಶ್ರೀಮಾನ್ ಲಕ್ಕಪ್ಪನವರು ಹೇಳಿದರು. ಸ್ವಾಮಿನಾಥನ್ ಅನ್ನುವವರು ಎಂ.ಎಸ್.ಆರ್.ಟಿ.ಸಿ. ವೈಸ್ ಚೇರ್ಮನ್ ಆಗಿದ್ದವರು ಒಂದು ಕಾರನ್ನು ತೆಗೆದುಕೊಂಡಿದ್ದಾರೆ, ಚಾಸೀಸ್ ಆರ್ಡರ್ ಮಾಡಿದ್ದಕ್ಕೆ ಪ್ರತಿಫಲ ತೆಗೆದುಕೊಂಡಿದ್ದಾರೆ ಎನ್ನುವ ರೀತಿಯಲ್ಲಿ ಈ ಆಕ್ಷೇಪಣೆಗಳು ಬಂದಿವೆ. ನಾನು ಅದರ ಚೇರ್ಮನ್ ಆಗಿದ್ದೇನೆ. ಯಾವ ಅಧಿಕಾರಿ ನೇರವಾಗಿ ಇಲ್ಲಿ ತಮ್ಮ ವಿಚಾರದ ಬಗ್ಗೆ ಏನೂ ಹೇಳುವುದಕ್ಕೆ ಸಾಧ್ಯವಿಲ್ಲವೋ ಅಂತಹ ಒಂದು ಸಂದರ್ಭದಲ್ಲಿ ನನಗೆ ತಿಳಿದಂತಹ ವಿಷಯವನ್ನು ಹೇಳಿ ಇದನ್ನು ಕ್ಲಾರಿಫೈ ಮಾಡುವುದು ಸೂಕ್ತ, ಯೋಗ್ಯವಾದದ್ದು ಎಂದು ತಿಳಿದು ಒಂದು ಮಾತನ್ನು ಹೇಳುತ್ತಾ ಇದ್ದೇನೆ. ಅವರು ಕಾರನ್ನು ತಗೆದುಕೊಂಡಿರುವುದು ನಿಜ, ಆದರೆ ಚಾಸಿಸ್ ಆರ್ಡರ್ ಮಾಡಿದ್ದಕ್ಕೆ ಪ್ರತಿಫಲವಾಗಿ ಅಲ್ಲ. ಸರ್ಕಾರದವರಿಗೆ ಅವರು ತಿಳಿಸಿ ದುಡ್ಡು ಕೊಟ್ಟು ಕಂಪೆನಿಯಿಂದ ಕಾರನ್ನು ತೆಗೆದುಕೊಂಡಿದ್ದಾರೆ. ಅದನ್ನು ಪೂರ್ವಭಾವಿಯಾಗಿ ಬರೆದು ಚೀಫ್ ಸೆಕ್ರೆಟರಿಯವರಿಗೂ ನನಗೂ ತಿಳಿಸಿದ್ದಾರೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ.

†ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ ಸುಮಾರು ಏಳು ಗಂಟೆಗಳ ಕಾಲ ಈ ಅವಿಶ್ವಾಸ ನಿರ್ಣಯ ಈ ಸಭೆಯಲ್ಲಿ ಚರ್ಚೆಯಾಗಿದೆ. ಚರ್ಚೆ ನಡೆದಂತಹ ಕಾಲದಲ್ಲಿ ಈ ನಿರ್ಣಯಕ್ಕೆ ಬೆಂಬಲವಾಗಿ ಮಾತನಾಡಿದಂತಹ ಸದಸ್ಯರು ಬಹಳ ಉತ್ತಮ ದರ್ಜೆಯ ಭಾಷಣವನ್ನು ಮಾಡಿದ್ದಾರೆ. ಈ ಅವಿಶ್ವಾಸ ನಿರ್ಣಯವನ್ನು ವರ್ಷೇ ವರ್ಷೇ ತೆಗೆದುಕೊಂಡು ಬರತಕ್ಕ ಹವ್ಯಾಸವನ್ನು ಮಾಡುತ್ತಾ ಇದ್ದೀರಿ, ಇದು ಒಳ್ಳೆಯ ವರ್ತನೆಯೇ ಎನ್ನತಕ್ಕ ಮಾತುಗಳನ್ನು ಈ ಶಾಸನಸಭೆಯಲ್ಲಿ ಅದರಲ್ಲೂ ಕೂಡ ಪಾರ್ಲಿಮೆಂಟರಿ ಪದ್ಧತಿಯಲ್ಲಿ ಅನೇಕ ವರ್ಷಗಳ ಕಾಲ ಕೆಲಸ ಮಾಡಿದಂತಹ ಮಾನ್ಯ ಮಂತ್ರಿಗಳು ಆಡಿದ್ದನ್ನು ಕೇಳಿ ಬಹಳ ಸಂಕಟವಾಯಿತು. ಪ್ರಜಾಪ್ರಭುತ್ವದಲ್ಲಿ ಅದರಲ್ಲೂ ಕೂಡ ಶಾಸನ ಸಭೆಗಳಲ್ಲಿ ನಮಗೆ ರಾಜ್ಯಾಂಗ ದತ್ತವಾಗಿ ಬಂದಿರತಕ್ಕ ಹಕ್ಕು ಎಂದರೆ, ಈ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವುದು. ನಮಗೆ ಕೊಟ್ಟಂಥ ಈ ವರಪ್ರಸಾದವನ್ನು ತಾವು ಇವತ್ತು ಬೆಲೆ ಕೊಡಬಾರದು ಎಂತಲೋ ಅಥವಾ ಅವಹೇಳನ ಮಾಡಬೇಕೆಂತಲೋ ಇದನ್ನು ತಂದದ್ದು ಅವಿವೇಕ ಅನ್ನತಕ್ಕ ರೀತಿಯಲ್ಲಿ ಮಾತನಾಡಿದ್ದು ಉಚಿತವಲ್ಲ. ಮೈಸೂರು ಶಾಸನ ಸಭೆ ಇಡೀ

ಭಾರತದಲ್ಲೇ ಬಹಳ ಪುರಾತನವಾದದ್ದು. ಈ ಶಾಸನ ಸಭೆ ಮೈಸೂರು ಸಂಸ್ಥಾನದಲ್ಲಿ ಪ್ರಾರಂಭವಾದದ್ದು 1880ರಲ್ಲಿ. ಇದು ಇವತ್ತು ಯಾವ ಮಟ್ಟದಲ್ಲಿ ಹೋಗುತ್ತಾ ಇದೆ ಎಂಬು ದನ್ನು ನೋಡಿದ್ದೇ ಆದರೆ ಇಡೀ ಭಾರತಕ್ಕೆ ಮಾದರಿಯಾಗಿರತಕ್ಕ ರೀತಿಯಲ್ಲಿ ನಡೆದುಕೊಂಡು ಬಂದಿದೆ. ವಿರೋಧಪಕ್ಷದವರು ಕೂಡ ಬಹಳ ಉತ್ತಮರೀತಿಯಲ್ಲಿ ನಡೆದುಕೊಂಡು ಬಂದಿ ದ್ದಾರೆ ಎಂಬುದನ್ನು ಬಹಳ ಸಂತೋಷದಿಂದ ಹೇಳುತ್ತಾ ಇದ್ದೇನೆ. ಸಭಾಪತಿಯವರೇ, ಈ ಅವಿಶ್ವಾಸ ನಿರ್ಣಯವನ್ನು ತಂದಿರುವುದು ನಾಲ್ಕನೆಯ ಸಾರಿ, ನಿಜ. ಇವತ್ತು ಈ ಅವಿಶ್ವಾಸ ನಿರ್ಣಯದಲ್ಲಿ ಅನೇಕ ವಿಷಯಗಳು—ಹಿಂದೆ ಹೇಳಿದಂತಹ ಕೆಲವು ವಿಷಯಗಳೂ ಕೂಡ ಬಂದಿರು ವುದು ನಿಜ. ಮತ್ತು ಅಷ್ಟೇ ಅಲ್ಲ ಹಿಂದಿನ ಎರಡನೆ ಅವಿಶ್ವಾಸ ನಿರ್ಣಯದಲ್ಲಿ ಈ ಶಾಸನ ಸಭೆಯು ಮುಖಾಂತರ ಸರ್ಕಾರಕ್ಕೆ 16 ಅಪಾದನೆಗಳ ಪಟ್ಟಿಯನ್ನು ಕೊಟ್ಟು ಅವನ್ನು ಪರಿಶೀಲನೆ ಮಾಡ ಬೇಕು ಎಂದು ತಮ್ಮ ಮೂಲಕ ಸರ್ಕಾರದವರಿಗೆ ನಿವೇದನೆ ಮಾಡಿದ್ದು ನಿಜ. ಇದು ಚುನಾವಣೆಯ ಕಾಲ. ಈ ಒಂದು ಸನ್ನಿವೇಶದಲ್ಲಿ ನಮ್ಮ ಹಣಕಾಸಿನ ಸಚಿವರು ಯುವಕರು ಅತ್ಯಂತ ಉದ್ವೇಗ ದಿಂದ ಮಾತನಾಡಿದ್ದಾರೆ. ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಆದರೆ ಒಂದು ವಿಷಯ ವೇನೆಂದರೆ, ಇವತ್ತು ಅವರು ಸ್ವಲ್ಪ ಸಹನೆಯ ಎಲ್ಲೆಯನ್ನು ಮೀರಿ ಕೋಪದಿಂದ ಮಾತನಾಡಿದ್ದಾರೆ. ಕಂಡದ್ದನ್ನು ಹೇಳಿದರೆ ಕೆಂಡದಂಥ ಕೋಪ ಅಂತ ಹೇಳಿ ಒಂದು ಗಾದೆ ಇದೆ, ಆ ರೀತಿ ಅವರು ಇವತ್ತು ಕಂಡದ್ದನ್ನು ಹೇಳಿದರೆ ಕೆಂಡದಂಥ ಕೋಪವನ್ನು ಮಾಡಿಕೊಂಡು ಏಕೆ ಮಾತಾಡಿದರು ಎಂದು ನನಗೆ ಆಶ್ಚರ್ಯವನ್ನು ಉಂಟುಮಾಡಿದೆ. ಶಾಸನ ಸಭೆಯ ಈ ಕಡೆಯ ಅಧಿವೇಶನದಲ್ಲಿ ಈ ಅವಿಶ್ವಾಸ ನಿರ್ಣಯವನ್ನು ತಂದಂಥ ಕಾಲದಲ್ಲಿ ಕ್ಯಾರೆಕ್ಟರ್ ಅಸ್ಯಾಸಿನೇಷನ್ ಮಾಡುವುದು ಬೇಡ ಅಂತ ಹೇಳಿ ತೀರ್ಮಾನಕ್ಕೆ ಬಂದು ಉತ್ತಮ ಮಟ್ಟದಲ್ಲಿ ಚರ್ಚೆಯನ್ನು ಮುಂದುವರಿಸಿಕೊಂಡು ಬಂದಿದ್ದೇವೆ, ಯಾವ ಕಾಲದಲ್ಲೂ ಕೂಡ ವಿರೋಧ ಪಕ್ಷದವರು ಮಾತನಾಡುವಾಗ :

We have always tried to plead. I have never used the stick in my parliamentary career. ಆದ್ದರಿಂದ ಈ ಒಂದು ತತ್ವವನ್ನು ಮುಂದೆ ಇಟ್ಟು ಕೊಂಡು ದೇಶದಲ್ಲಿ ಈಗ ವ್ಯಕ್ತಿಗಳ ಹಿತವಲ್ಲ, ಮೈಸೂರು ದೇಶದ ಹಿತ ಮುಖ್ಯವಾದದ್ದು ಎಂದು ಭಾವಿಸಿ ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕ ಇಲಾಖೆಗಳ ಮೇಲೆ ಅಪಾದನೆಯ ಪಟ್ಟಿಯನ್ನು ಹೊರಿಸುತ್ತಿಲ್ಲವೇ ಹೊರತು ಮತ್ತೇನೂ ಇಲ್ಲ. ರಾಮಕೃಷ್ಣ ಹೆಗ್ಗಡೆಯವರು, ಜತ್ತಿಯವರು ಅವರ ಮೇಲೆ ವೈಯಕ್ತಿಕ ದ್ವೇಷವಾಗಲಿ, ವ್ಯವಹಾರವಾಗಲಿ ಖಂಡಿತವಾಗಿಯೂ ಕೂಡ ನಮಗೆ ಇಲ್ಲ. ಅವರ ಮೇಲೆ ಏನು ಒಂದು ಅಪಾದನೆ ಮಾಡಿದರೂ ಕೂಡ ಮೈಸೂರು ದೇಶದ ರಾಜಕೀಯ ಸೂತ್ರಧಾರಿಗಳಾದ ಮಂತ್ರಿಮಂಡ ಲದ ಮೇಲೆ ಇವತ್ತು ಹೊರಿಸುತ್ತಾ ಇದ್ದೇವೆ. ಇವತ್ತು ಉತ್ತರ ಕೊಡತಕ್ಕ ಕಾಲದಲ್ಲಿ ಒಂದು ಸಂತೋಷವಾಯಿತು. ಈ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡತಕ್ಕ ಕಾಲದಲ್ಲಿ ಸರ್ಕಾರದ ಮೇಲೆ ಏನೊಂದು ಚಾರ್ಜ್ ಮಾಡಿದ್ದೇವೆ ಅದರಲ್ಲಿ ಸರ್ವೇ ಸಾಧಾರಣವಾಗಿ ನೂರಕ್ಕೆ ನೂರನ್ನೂ ಅವರು ನಿರಾಕರಿಸಿಲ್ಲ. ಏಕೆಂದರೆ, ಮೇಜರ್ ಇರಿಗೇಷನ್‌ನಲ್ಲಿ ಸಾಕಾದಷ್ಟು ಪ್ರಗತಿಯನ್ನು ಸಾಧನೆ ಮಾಡಿಲ್ಲ ಎಂದರೆ ಅದಕ್ಕೆ ಹಣಕಾಸಿನ ಕೊರತೆ ಇತ್ಯಾದಿಗಳನ್ನು ಸಚಿವರು ಮನಮುಟ್ಟಿ ಹೇಳಿದ್ದಾರೆ ; ಒಪ್ಪಿಕೊಂಡಿದ್ದಾರೆ. ಆದ್ದರಿಂದ ಆ ಚಾರ್ಜನ್ನು ಒಪ್ಪಿಕೊಂಡ ಹಾಗೆ ಆಗಿದೆ. ಅದೇ ರೀತಿ ಶ್ರೀ ಪುಟ್ಟಸ್ವಾಮಿಯವರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ಮತ್ತು ಇತರ ಸಹಕಾರ ಸಂಘಗಳಲ್ಲಿ ಆಗಿರತಕ್ಕ ಅನೀತಿಯನ್ನು ಕಂಡೂ ಕಾಣದವರಂತೆ ಪರಿಶೀಲನೆ ಮಾಡುತ್ತಾ ಇದ್ದೇವೆ ಎಂದು ಹೇಳಿ ಅರ್ಥಮರ್ಥ ನಾವು ಮಾಡಿದಂತಹ ಅಪಾದನೆಗಳನ್ನು ಒಪ್ಪಿ ಕೊಂಡಿದ್ದಾರೆ. ಅದೇ ರೀತಿಯಲ್ಲಿ ಶ್ರೀಮಾನ್ ರಾಮರಾಯರು ಲಕ್ಕಪ್ಪನವರು ಹೇಳಿದ ವಿಚಾರದ ಬಗ್ಗೆ ಹೇಳಿದರು. ಪ್ರಸಾದ್ ಅಂಡ್ ಕಂಪೆನಿ ಅಂತ ತುಮಕೂರಿನಲ್ಲಿ ಇದೆ, ಅವರಿಗೆ ಲೈಸೆನ್ಸ್ ಕೊಡಿಸಿದ್ದೀರಿ ಅವರಿಗೆ ಈ ವ್ಯಾಪಾರದ ಅನುಭವ ಇದೆಯೋ ಅನ್ನತಕ್ಕ ಪ್ರಶ್ನೆ ಬಂತು. ಸ್ಯಾಂಡಲ್ ಸೋಪ್ ಏಜೆನ್ಸಿ ಕೊಡ ವುದನ್ನು ಅನುಭವಸ್ಥರಿಗೆ ಕೊಡತಕ್ಕ ಪದ್ಧತಿಯನ್ನು ಅನುಸರಿಸುತ್ತಾ ಇದ್ದೇವೆ ಎಂದು ಮೊನ್ನೆ ಹೇಳಿದರು, ಇವತ್ತು ಅವರ ಬಾಯಿಂದ ತಪ್ಪು ಉತ್ತರ ಬಂದು ಬಿಟ್ಟಿತು. ಇದುವರೆಗೂ ಒಳ್ಳೆಯ ವ್ಯಾಪಾರಸ್ಥ ಮಟ್ಟದಲ್ಲಿರತಕ್ಕ ಆ ಸಂಸ್ಥೆ ಎಷ್ಟುಮಟ್ಟಿಗೆ ಈ ಮೈಸೂರು ಸ್ಯಾಂಡಲ್ ಸೋಪ್‌ನ್ನು ವ್ಯಾಪಾರಮಾಡಿ ಮೈಸೂರು ದೇಶದ ಈ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಿದ್ದಾರೆ ಎಂದರೆ ಇದುವರೆಗೂ ಅವರು ಸಂಪಾದನೆ ಮಾಡಿರುವುದು 123 ರೂಪಾಯಿ ಕಮಿಷನ್ ಎಂದರೆ, ಈ ವ್ಯಾಪಾರ ಮಾರ್ಗದಲ್ಲಿ ಅವರು ಎಂತಹ ಅನನುಭವಿಗಳು ಎಂಬುದು ವ್ಯಕ್ತ ವಾಗುತ್ತದೆ. ಅವರು ಹೇಳಿದ್ದು ತಪ್ಪು ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಲಕ್ಕಪ್ಪನವರ ವಾದದಲ್ಲಿ ನಿಜ ಇದೆ ಒಬ್ಬ ಹುಡುಗ, ಅನನುಭವಿಗೆ ಇದನ್ನು ಕೊಟ್ಟಿದ್ದಾರೆ.

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಲಕ್ಕಪ್ಪನವರು ಹೇಳಿದ್ದು ನನ್ನ ಸಂಬಂಧೀಕರಿಗೆ ಕೊಟ್ಟಿದ್ದಾರೆ ಎಂದು ; ಆ ರೀತಿ ಅವರು ಭಾಷಣ ಮಾಡಿರುವುದು.

8-00 A. M.

ಶ್ರೀ ಎಸ್. ಶಿವಪ್ಪ.—ಆದ್ದರಿಂದ ಇದರಲ್ಲಿ ಆ ಒಂದು ವಿಚಾರವನ್ನು ಅನನುಭವಿಗಳು, ಕೇವಲ ಹುಡುಗರು ಆ ವ್ಯಾಪಾರದ ವಹಿವಾಟನ್ನು ನೋಡಿದರೆ, ಮತ್ತು ಅದರ ಮೊತ್ತವನ್ನು ನೋಡಿದರೆ ಅದು ನಿಜವಾಗಿಯೂ ಕೂಡ ಗೊತ್ತಾಗುತ್ತದೆ. ಅದರಲ್ಲಿ ಸತ್ಯಾಂಶವಿದೆ ಎಂಬುದನ್ನು ಒಪ್ಪಿಕೊಳ್ಳ ಬೇಕಾಗುತ್ತದೆ. ಮತ್ತು ಶ್ರೀಮಾನ್ ದುಗ್ಗಪ್ಪನವರು ಹೇಳಿದಹಾಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಒಬ್ಬ ಪ್ರತಿಭಾನ್ವಿತ ವ್ಯಕ್ತಿಗೆ ಬಸ್ ರೂಟು ಇತ್ಯಾದಿ ಸವಲತ್ತುಗಳನ್ನು ಒದಗಿಸಿಕೊಟ್ಟು ಸರ್ಕಾರದ ಅಧಿ ಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ಹೇಳಿದ್ದಕ್ಕೆ ಸರ್ಕಾರದ ಪತಿಯಿಂದ ಒಂದಕ್ಕೂ ಉತ್ತರ ಬರಲಿಲ್ಲ. ಆಮೇಲೆ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಯವರಿಗೆ ಸರ್ಕಾರದವರು ಅನೇಕ ಸವಲತ್ತುಗಳನ್ನು ಒದಗಿಸಿ ಕೊಟ್ಟ ವಿಚಾರದಲ್ಲಿ ಶ್ರೀಮಾನ್ ಗೋಪಾಲಗೌಡರು ಕೆಲವು ವಿಚಾರ ಗಳನ್ನು ಹೇಳಿದರು. ಅದಕ್ಕೆ ಸಂಬಂಧಪಟ್ಟ ವಿಚಾರ ಬರಲಿಲ್ಲ. ಇನ್ನೂ ನಾವು ಮಾಡಿದ ಅನೇಕ ಅಪಾದನೆಗಳಿಗೆ ಅವರು ಉತ್ತರವನ್ನು ಹೇಳದೆ ಇರುವುದನ್ನು ನೋಡಿದರೆ ಅವುಗಳನ್ನು ಸರ್ಕಾರ ದವರು ಒಪ್ಪಿಕೊಂಡಿದ್ದಾರೆಂದು ಗೊತ್ತಾಗುತ್ತಿದೆ. ಒಬ್ಬ ವ್ಯಕ್ತಿ ಅನೇಕ ಬಸ್ ರೂಟುಗಳ ಪರ್ಮಿಟ್ ತೆಗೆದುಕೊಂಡಿದ್ದಾರೆಂದು ಶ್ರೀಮಾನ್ ದುಗ್ಗಪ್ಪನವರು ಹೇಳಿದರು. ಅದಕ್ಕೆ ಏನೂ ಹೇಳಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ಎನ್‌ಕ್ವೈರಿ ಮಾಡಿಸಬೇಕೆಂದು ಹೇಳಿದ್ದೇನೆ.

ಶ್ರೀ ಎಸ್. ಶಿವಪ್ಪ.—ಡೆಪ್ಯುಟೀ ಕಮಿಷನರು ಇನ್‌ಫ್ಲೂಯೆನ್ಸ್ ಮಾಡಿದ್ದಾರೆ. ತಮ್ಮ ಮಾತಿಗೆ ಎಲ್ಲಿ ಬೆಲೆ ಕೊಡುತ್ತಾರೆ. ಚಿತ್ರದುರ್ಗದಲ್ಲಿ ದೊಡ್ಡವರು ಇದ್ದಾರೆ. ಅದು ಅವರ ಮುಖಾಂತರ ನಡೆದಿದೆ. ಶ್ರೀಮಾನ್ ದುಗ್ಗಪ್ಪನವರು ಹೇಳಿದರು, ಅದು ನಿಮ್ಮ ಮೇಲೆ ಬಂದಿರತಕ್ಕ ವಿಚಾರವಲ್ಲ. ನೀರಾವರಿಬಾವಿಗಳನ್ನು ಎಷ್ಟು ಕೊಟ್ಟಿವೆ, ಎಷ್ಟು ಬಾವಿಗಳಿಗೆ ಎಲೆಕ್ಟ್ರಿಸಿಟಿ ವೈರನ್ನು ಹಾಕಿಸಿದೆ ಮತ್ತು ಚಿತ್ರದುರ್ಗದಲ್ಲಿ ಆದಂತಹ ಇನ್ನೂ ಕೆಲವು ಕೆಲಸಗಳನ್ನು ಶ್ರೀಮಾನ್ ದುಗ್ಗಪ್ಪನವರು ಹೇಳಿದ್ದಾರೆ. ಆ ಅಪಾದನೆಗಳಿಗೆ ಉತ್ತರವನ್ನು ಕೊಡದೆ ಇದ್ದುದನ್ನು ನೋಡಿದರೆ ಖಂಡಿತ ಗೊತ್ತಾ ಗಿದೆ, ಆ ಅಪಾದನೆಗಳನ್ನು ನೀವು ಒಪ್ಪಿಕೊಂಡಿರಿ ಎಂದು. ಇನ್‌ಡೈರೆಕ್ಟಾಗಿ ಇವೊತ್ತಿನದಿವಸ ನೀವು ಸಭೆಯಮುಂದೆ ಒಪ್ಪಿಕೊಂಡಿದ್ದೀರಿ. ರೈಪೇರಿಯನ್ ರೈಟ್ಸ್ ಬಗ್ಗೆ ನಮ್ಮ ಲೋಕೋಪಯೋಗಿ ಶಾಖೆಯ ಸಚಿವರು ಹೇಳಿದರು. ಇದರ ಬಗ್ಗೆ ಆಂಧ್ರ ಮತ್ತು ಮೈಸೂರಿಗೆ ವಿವಾದ ಇರತಕ್ಕದ್ದು ನಿಜ, ಈ ಬಗ್ಗೆ ನಮ್ಮ ಹಕ್ಕನ್ನು ಸಾಧನೆ ಮಾಡಿದ್ದೇವೆ, ಎಲ್ಲಾ ಕೆಲಸಗಳನ್ನೂ ಕೂಡ ಮಾಡಿದ್ದೇವೆ, ಆದರೆ ಕೇಂದ್ರ ಸರ್ಕಾರದವರು ನಮ್ಮ ಮಾತಿಗೆ ಒಪ್ಪಲಿಲ್ಲ ಎಂದು ಅವರ ಅಸಮರ್ಥತೆಯನ್ನು ಒಪ್ಪಿಕೊಂಡಿ ದ್ದಾರೆ. ನಾನು ಹೇಳುವುದು ಇಷ್ಟೇ ಕೇಂದ್ರದಲ್ಲಿ ನೀವು ಎಷ್ಟೇ ಹೊಣೆಗಾರಿಕೆಯಿಂದ, ಸಾಮರ್ಥ್ಯ ದಿಂದ, ದರ್ಪವಾಣಿಯಿಂದ ಏನು ಸಾಧನೆಗಳನ್ನು ಮಾಡಬೇಕೋ ಆ ಸಾಧನೆ ಆಗಿಲ್ಲ. ಆ ವಿಷಯದಲ್ಲಿ ನಾವು ಮಾಡಿದಂತಹ ಅಪಾದನೆಗಳನ್ನು ಒಪ್ಪಿಕೊಂಡರು ಸಂತೋಷ. ಇದೇ ರೀತಿಯಲ್ಲಿ ಹೊಸಪೇಟೆ ಉಕ್ಕಿನಕಾರ್ಖಾನೆಯ ವಿಷಯದಲ್ಲಿಯೂ ಇವರು ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡಲಿಲ್ಲ. ಅದನ್ನೂ ಸಹ ಒಪ್ಪಿಕೊಂಡಿದ್ದಾರೆ. ನಾವು ಮಾಡಿದಂತಹ ಪ್ರಮುಖವಾದ ಅಪಾದನೆ ಏನೆಂದರೆ ಏಕಸದಸ್ಯ ಆಯೋಗದ ಬಗ್ಗೆ ಮಂತ್ರಿಮಂಡಲ ಮಾಡಿರುವ ತೀರ್ಮಾನ. ಟರ್ಮ್ಸ್ ರೆಫರೆನ್ಸ್ ಒಪ್ಪದೆ ಮಹಾರಾಷ್ಟ್ರ ಮತ್ತು ಮೈಸೂರು ಗಡಿಯ ಬಗ್ಗೆ ಆಯೋಗವನ್ನು ಒಪ್ಪುವುದಿಲ್ಲ ಎಂದು ತೀರ್ಮಾನ ಮಾಡಿದ್ದಕ್ಕೆ ವಿರುದ್ಧವಾಗಿ ಏಕಸದಸ್ಯ ಆಯೋಗವನ್ನು ಒಪ್ಪಿಕೊಂಡಿದ್ದೀರಿ ; ಇವೊತ್ತಿನ ದಿವಸ ಹಿಂದೆ ಏನು ತೀರ್ಮಾನ ಆಗಿತ್ತೊ, ಮುಖ್ಯ ಮಂತ್ರಿಗಳು ಏನು ಅಶ್ವಾಸನೆಯನ್ನು ಕೊಟ್ಟಿ ದ್ದರೋ ಆ ತೀರ್ಮಾನ ಮತ್ತು ಆಶ್ವಾಸನೆಗಳಿಗೆ ವಿರುದ್ಧವಾಗಿ ವರ್ತಿಸುವುದರಿಂದ ಈ ಸಭೆಯ ವಿಶ್ವಾಸವನ್ನು ಕಳೆದುಕೊಂಡಿದ್ದಾರೆಂದು ನಾನು ಹೇಳಿದ್ದೆ. ಅದನ್ನು ಸರ್ಕಾರದವರು ಏತಕ್ಕೆ ಹಾಗೆ ಮಾಡಿದರು ಎಂಬುದನ್ನು ಸಮರ್ಥನೆ ಮಾಡಲಿಲ್ಲ.

ಇನ್ನು ಕೊನೆಯದಾಗಿ ಅಧ್ಯಕ್ಷರೇ, ಏಕಸದಸ್ಯ ಆಯೋಗವನ್ನು ಬಹಿಷ್ಕರಿಸಬೇಕು ಎಂದು ರಾಜೀನಾಮೆಯನ್ನು ಕೊಡುತ್ತೇವೆಂದು ಹೇಳಿದಂತಹ ಶ್ರೀಮಾನ್ ಜತ್ತಿಯವರನ್ನು ಸೇರಿಸಿಕೊಂಡು 47 ಜನ ಶಾಸನಸಭಾ ಸದಸ್ಯರೂ ಕೂಡ ಮಂತ್ರಿಮಂಡಲದಲ್ಲಿ ಈ ಸಭೆಗೆ ವಿಶ್ವಾಸವಿಲ್ಲ ಎಂಬ ನಿರ್ಣ ಯಕ್ಕೆ ಬೆಂಬಲ ಕೊಡುವುದರಿಂದ ಈ ಗಡಿ ಸಮಸ್ಯೆಯ ಬಗ್ಗೆ ನೇಮಕವಾದ ಏಕ ಸದಸ್ಯ ಆಯೋಗ ವನ್ನು ಸ್ವೀಕಾರ ಮಾಡುವುದಕ್ಕೆ ವಿರುದ್ಧವಾಗಿ ಮತ ಕೊಟ್ಟಂತಾಗಿ ಮೈಸೂರು ದೇಶದ ಕನ್ನಡ ಜನತೆಯು ನಿಮ್ಮಲ್ಲಿ ಏನು ವಿಶ್ವಾಸವನ್ನು ಇಟ್ಟಿದೆಯೋ ಆ ವಿಶ್ವಾಸವನ್ನು ಉಳಿಸಿಕೊಳ್ಳಲು ಈ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಟ್ಟು ಕನ್ನಡ ಮಾತೆಯ ಸೇವೆ ಮಾಡಿ ಎಂದು ಮನವಿ ಮಾಡಿ ಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I will put the Motion to the vote of the House. The question is:

"That this house has no confidence in the Council of Ministers"

Those who are in favour of the Motion will say 'Aye'

Those who are against the motion will say 'Nay'

I think will have it.

(*At this stage Sri S. M. Gureddy and others get up and demanded poll*)

Sri G. V. GOWDA.—I rise to a point of order. After taking the sense of the House, you were pleased to upheld the voice that "Noes" are in majority. Where is the question of taking a poll ?

Sri RAMAKRISHNA HEGDE.—I want to submit that day before yesterday when poll was being taken on the Land Reforms Bill, actually you declared 'Ayes' have it.

Sri Lakkappa stood up at that time after you declared and you concede his request. To-day, at least half-a-dozen members got up but unfortunately, they were not able to catch your eye.

Mr. SPEAKER.—Now, let me read the rule for the benefit of those who do not remember the details precisely in their mind.

RULE 307 "On the conclusion of a debate, the Speaker shall put the question and invite those who are in favour of the motion to say "Aye" and those a gainst the motion to say "No".

(2) The Speaker shall then say : "I think the Ayes (or the Noes, as the case may be) have it". If the opinion of the Speaker as to the decision of a question is not challenged, he shall say twice : "The Ayes (or the Noes, as the case may be) have it" and the question before the Assembly be determined accordingly".

Did I say twice ?

(*Interruption.*)

I will put it to the vote of the House again. The question is :

"That this House has no confidence in the council of Ministers".

Sri C. M. DESAI (Sindgi).—I press for a division Sir.

Mr. SPEAKER.—Yes.

(*The Division Bell rang for two minutes.*)

The result of the division is as follows:—

Mr. SPEAKER.—The question is :

"That this House has no confidence to the council of Ministers".

(MR. SPEAKER)

(The division was taken by requesting the members for and against the motion to stand in their seats).

Ayes 33 and Noes 123.

The motion was negatived.

MR. SPEAKER.—The house will now stand adjourned to reassemble tomorrow at 8-30 A. M.

The House adjourned at Twenty minutes past Eight of the clock to meet again at Thirty minutes past Eight of the clock on Saturday the 26th November 1966.

WD 7784—GPB—500—21-1-67